ಶ್ರೀ ಶ್ಯಾಮಕೃಷ್ಣ ವಾಗ್ಗೇಯ ವ್ಯಾಖ್ಯಾನ

ಪ್ರೊ. ರಾ. ವಿಶ್ವೇಶ್ವರನ್



ಪ್ರಸಾರಾಂಗ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು

BVP-1308
11/4/17
G-1501
1/8.

ಶ್ರೀ ಶ್ಯಾಮಕೃಷ್ಣ ವಾಗ್ಗೇಯ ವ್ಯಾಖ್ಯಾನ

ಗ್ರಂಥಕರ್ತ
ಪ್ರೊ. ರಾ. ವಿಶ್ವೇಶ್ವರನ್

ಪ್ರಕಾಶನ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಮೈಸೂರು-570004
ದೂರವಾಣಿ : 0821-2402141, ಫ್ಯಾಕ್ಸ್: 2402114
ಇ-ಮೇಲ್ : musicuniversitymys@gmail.com ವೆಬ್‌ಸೈಟ್: www.musicuniversity.gc.in

SRI SHYAMA KRISHNA VAGGEYA VYAKYANA

by

Prof. Ra. Visweswaran

Published by

PRASARANGA

Karnataka State Dr. Gangubai Hanagal
Music and Performing Arts University
JLB Road, Lakshmipuram, Mysore-570 004

ಪುಟ : ೧೭೨

Pages : 172

ಮೊದಲ ಮುದ್ರಣ : ೨೦೧೫

First Edition - 2015


Price : ₹ 200/-

ಬೆಲೆ : ಎರಡೂ ನೂರು ರೂಪಾಯಿಗಳು

ಮುದ್ರಣ :

ಕಮಲ್ ಇಂಪ್ರೆಷನ್ಸ್

ಶ್ರೀ ಬಸವೇಶ್ವರ ಟ್ರಸ್ಟ್ ಕಾಂಪ್ಲೆಕ್ಸ್,
ಎಸ್.ಜೆ.ಸಿ.ಇ. ರಸ್ತೆ, ಟಿ.ಕೆ. ಲೇಔಟ್, ಮೈಸೂರು - 570 023



ಕಾಂಚೀಪುರದ ಶ್ರೀ ಕಾಮಾಕ್ಷೀ ಅಮ್ಮನವರು

ಅರ್ಪಣೆ



ಪೂಜ್ಯರಾದ ಶ್ರೀ ಶ್ಯಾಮಶಾಸ್ತ್ರಿಗಳ

ಅಡಿದಾವರೆಗಳಿಗೆ ಭಕ್ತಿಯಿಂದ

ಈ ಗ್ರಂಥವನ್ನು ಸಮರ್ಪಿಸಲಾಗಿದೆ

ಕುಲಪತಿಗಳ ಮಾತು

ಸಾಂಸ್ಕೃತಿಕ ಲೋಕವನ್ನು ಬೆಳಗಿಸುವ ಕಲಾ ಕುಸುಮಗಳು

ಭರತಭೂಮಿಯು ಅನಾದಿಕಾಲದಿಂದ ಕಲೆ ಮತ್ತು ಸಂಸ್ಕೃತಿಗಳ ತಾಣವಾಗಿ ಹಂತಹಂತವಾಗಿ ತನ್ನ ಬೆಳವಣಿಗೆಯು ದೃಷ್ಟಿಕೋನವನ್ನು ಹೊಸನಟ್ಟಿನಲ್ಲಿ ಚಿಂತಿಸುತ್ತ, **'ಹೊಸ ಚಿಗುರು – ಹಳೆಬೇರು'** ಎಂಬ ಮಾತಿನಂತೆ ಸೃಜಿಸುತ್ತಾ ಬಂದಿದೆ. ಈ ನಟ್ಟಿನಲ್ಲಿ ಅನೇಕ ಮಹಾನ್ ಚಿಂತಕರು, ಸಾಹಿತಿಗಳು, ಕಲಾವಿದರು ತಮ್ಮದೇ ಆದ ಛಾಪನ್ನು ಮೂಡಿಸಿ ಭಾರತದ ಪ್ರಗತಿಯ ಮುನ್ನಡೆಗೆ ಕಾರಣವಾಗಿದ್ದಾರೆ.

ಅಂತೆಯೇ ಕರ್ನಾಟಕ ರಾಜ್ಯವು ಶತಶತಮಾನಗಳಿಂದ ಕಲೆಯ ಆಗರ ಸ್ಥಾನವಾಗಿ ಮಹಾನ್ ಲಾಕ್ಷಣಿಕರ, ವಚನಕಾರರ, ಶಿವಶರಣರ, ಹರಿದಾಸರ ಅನೇಕ ವಾಗ್ಗೇಯಕಾರರ ಕ್ರಿಯಾಶಕ್ತಿಯ ಕಾರಣದಿಂದಾಗಿ ಹಾಗೂ ಇತಿಹಾಸದ ಕಾಲಘಟ್ಟದಲ್ಲಿ ನಡೆದು ಬಂದ ರಾಜ ಮಹಾರಾಜರುಗಳ ಕಲಾಭಿಮಾನ, ಕಲಾರಸಿಕತೆ, ಕಲಾಪ್ರಗತಿ, ಪ್ರೋತ್ಸಾಹಗಳ ಕಾರಣಗಳಿಂದಾಗಿ ಇಂದಿಗೂ ಕಲಾಪ್ರಪಂಚದ ಪ್ರಮುಖ ನಾಡೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂದುವರೆದ ಭಾಗವಾಗಿ ಇಂತಹ ಪ್ರಬುದ್ಧ ಕಲೆಯ ಪ್ರಗತಿ ಏಳಿಗೆಗಾಗಿ ಮತ್ತು ಬೆಳವಣಿಗೆಗಾಗಿ ಕರ್ನಾಟಕ ಘನ ಸರ್ಕಾರ ಮೈಸೂರನ್ನು ಕೇಂದ್ರವಾಗಿರಿಸಿಕೊಂಡು 2009 ರಲ್ಲಿ ಪ್ರಖ್ಯಾತ ಹಿಂದೂಸ್ತಾನ ಗಾಯಕಿ ಪದ್ಮಭೂಷಣ ಡಾ. ಗಂಗೂಬಾಯಿ ಹಾನಗಲ್ ಅವರ ಹೆಸರಿನಲ್ಲಿ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ಇದರ ಉದ್ದೇಶವಾದರೂ ಭಾರತೀಯ ಸಂಗೀತ ಪರಂಪರೆಯ ಎರಡು ಕಣ್ಣುಗಳಂತಿರುವ ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನ ಸಂಗೀತ, ಈ ನಟ್ಟಿನ ಎಲ್ಲಾ ವಾದ್ಯಪ್ರಕಾರಗಳು ಹಾಗೂ ಎಲ್ಲಾ ನೃತ್ಯ ಪ್ರಕಾರಗಳು, ಗಮಕ, ಯಕ್ಷಗಾನ, ನಾಟಕ, ಜನಪದ ಸಂಗೀತ, ಕಥಾಕೀರ್ತನೆ ಈ ಎಲ್ಲಾ ಆಯಾಮಗಳನ್ನು ಸರ್ವಾಂಗೀಣ ಸುಂದರವಾಗಿಸುವ ಅಂತೆಯೇ ಈ ಕಲೆಗಳ ಉಳಿವು, ಬೆಳವಣಿಗೆ ಮತ್ತು ಪ್ರಗತಿಗೆ ತನ್ನನ್ನು ಒಡ್ಡಿಕೊಂಡು ಕಾರ್ಯೋನ್ಮುಖವಾಗಿ ಉತ್ತಮ ಫಲಿತಾಂಶ ನೀಡುವ ಸದುದ್ದೇಶದಿಂದ ಸ್ಥಾಪಿತಗೊಂಡು ಮುನ್ನಡೆದಿದೆ.

ಈ ಎಲ್ಲಾ ವಿಚಾರವನ್ನು ಮನಗಂಡು, ಅಂತೆಯೇ ವಿಶ್ವದ ಜಾಗತೀಕರಣದ ಸಂದರ್ಭದಲ್ಲಿ ಪಾಶ್ಚಾತ್ಯ ಅನುಕರಣೆಗಳೇ ಹಿರಿದಾಗುತ್ತಿರುವಂತಹ ಸಂಕೀರ್ಣ ಸಂದರ್ಭದಲ್ಲಿ ಪ್ರಸ್ತುತ ವಿಶ್ವವಿದ್ಯಾಲಯವು ತನ್ನ ಬಾಲ್ಯಾವಸ್ಥೆಯ ಸಂದರ್ಭದಲ್ಲಿಯೂ ಒಂದು ಹೊಸ ದೃಷ್ಟಿಕೋನವನ್ನು ಹರಿಸಿ ನಾಡಿನ ಶ್ರೇಷ್ಠ ಕಲಾಪ್ರಕಾರಗಳ (ಎಲ್ಲಾ ಪ್ರದರ್ಶಕ ಕಲೆಗಳ) ಪ್ರಗತಿಯ ಮುನ್ನಡೆಗೆ ಅಂತೆಯೇ ಕಲಾಸಕ್ತ ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ಪ್ರಸ್ತುತ ಮತ್ತು ಪಾರಂಪರಿಕ ಕಲಾಜಗತ್ತಿನ ಜ್ಞಾನಭಂಡಾರದ ಜ್ಞಾನದೀಕ್ಷೆಯನ್ನು ನೀಡುವ ನಟ್ಟಿನಲ್ಲಿ ತನ್ನನ್ನು

ತೊಡಗಿಸಿಕೊಂಡಿದೆ. ಅಲ್ಲದೆ ಪ್ರಸಿದ್ಧ ವಿದ್ವಾಂಸರು– ಅವರು ಸಾಧಿಸಿದ ಸಾಧನೆ ಮತ್ತು ಪ್ರಗತಿಗಳ ಬಗೆಗೆ ವಿಸ್ತೃತವಾದ ಅಧ್ಯಯನ ಕೈಗೊಂಡು ಕಲಾಪ್ರೇಮಿಗಳಲ್ಲಿ, ಜನಸಾಮಾನ್ಯರಲ್ಲಿ, ಕಲಾಪ್ರಕಾರಗಳ ಜ್ಞಾನವನ್ನು ಪಸರಿಸಲು ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಇನ್ನು ಪುಸ್ತಕ ಪ್ರಕಟಣೆಯ ನಟ್ಟಿನಲ್ಲಿಯೂ ವಿಶ್ವವಿದ್ಯಾಲಯ ಹಿಂದೆ ಸರಿದಿಲ್ಲ. ಈಗಾಗಲೇ ಕಳೆದ ಏಳು ತಿಂಗಳಲ್ಲಿ ನಾಲ್ಕು ಗ್ರಂಥಗಳು ಲೋಕಾರ್ಪಣೆಗೊಂಡಿದ್ದು, ಪ್ರಸ್ತುತ ಮತ್ತಷ್ಟು ಗ್ರಂಥಗಳು ವಿಶ್ವವಿದ್ಯಾಲಯದಿಂದ ಲೋಕಾರ್ಪಣೆಗೆ ಅಣಿಗೊಳ್ಳುತ್ತಿರುವುದು ಅತ್ಯಂತ ಸಂತಸದ ಸಂಗತಿ. ವಿಶ್ವವಿದ್ಯಾಲಯದ ಪ್ರಕಟಣೆಯಲ್ಲಿ ಹಿರಿಯ ವೀಣಾ ವಿದ್ವಾಂಸರು ಹಾಗೂ ನನ್ನ ಪೂಜ್ಯ ಗುರುಗಳೂ ಆದ ಸಂಗೀತ ಕಲಾರತ್ನ ಪ್ರೊ. ರಾ. ವಿಶ್ವೇಶ್ವರನ್ ಅವರು ರಚಿಸಿಕೊಟ್ಟಿರುವ **'ಶ್ರೀ ಶ್ಯಾಮಕೃಷ್ಣ ವಾಗ್ಗೇಯ – ವ್ಯಾಖ್ಯಾನ'** ಎಂಬ ವಿಶೇಷ ಗ್ರಂಥವು ನಮ್ಮ ವಿಶ್ವವಿದ್ಯಾಲಯದ ಮೂಲಕ ಪ್ರಕಟಗೊಳ್ಳುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ. ಅತ್ಯುತ್ತಮ ವೀಣಾವಾದಕರೂ, ಸಂಗೀತಶಾಸ್ತ್ರಜ್ಞರೂ, ಉತ್ತಮ ವಾಗ್ಮಿಗಳೂ, ವಾಗ್ಗೇಯಕಾರರೂ ಆಗಿರುವ ಪ್ರೊ. ರಾ. ವಿಶ್ವೇಶ್ವರನ್ ಅವರು ಈ ಗ್ರಂಥವನ್ನು ವಿಶ್ವವಿದ್ಯಾಲಯದಿಂದ ಪ್ರಕಟಿಸಲು ಅನುವು ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಪ್ರಣಾಮಗಳು. ಶ್ರೀ ಶ್ಯಾಮಾಶಾಸ್ತ್ರಿಗಳ ರಚನೆಗಳಿಗೆ ವ್ಯಾಖ್ಯಾನ ಇದುವರೆಗೆ ಎಲ್ಲಿಯೂ ಆದಂತೆ ಕಂಡುಬಂದಿಲ್ಲ. ಈ ಚಿಂತನೆ ಮುಂದಿನ ಕಲಾಪೀಳಿಗೆಗೆ ಹೊಸ ಬೆಳಕಾಗಿ ಪರಿಣಮಿಸುತ್ತದೆ ಎಂದು ಭಾವಿಸಿದ್ದೇನೆ. ಸದರಿ ಗ್ರಂಥವನ್ನು ಅಂದವಾಗಿ ಮುದ್ರಿಸಿರುವ ಶ್ರೀ ಕಮಲ್ ಕ್ರಿಯೇಷನ್ಸ್, ಮೈಸೂರು ಅವರಿಗೆ ನನ್ನ ಧನ್ಯವಾದಗಳು.

ಸಂಗೀತ ಮತ್ತು ಪ್ರದರ್ಶಕ ಕಲೆಗಳ ಪ್ರಸಾರ ಮತ್ತು ಬೆಳವಣಿಗೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಾಯೋಗಿಕ ನೆಲೆಯನ್ನೂ ಮತ್ತು ಲಕ್ಷಣದ ನೆಲೆಯನ್ನೂ ಗಮನದಲ್ಲಿರಿಸಿಕೊಂಡು, ಕಾರ್ಯಕ್ರಮಗಳ ಆಯೋಜನೆ, ಗ್ರಂಥಗಳ ಪ್ರಕಟಣೆಗಳಂತಹ ಯೋಜನೆಗಳನ್ನು ಹಮ್ಮಿಕೊಂಡು ಮುನ್ನಡೆದಿರುವುದು ಸ್ತುತ್ಯಾರ್ಹ. ಅಂತೆಯೇ ನಮ್ಮ ವಿಶ್ವವಿದ್ಯಾಲಯದ ಕೆಲವು ಗ್ರಂಥಗಳು ಸೇರಿದಂತೆ ಸದರಿ ಗ್ರಂಥವೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಸಹಾಯದಿಂದ ಲೋಕಾರ್ಪಣೆಗೊಳ್ಳುತ್ತಿದ್ದು, ಈ ಸಹಕಾರಕ್ಕಾಗಿ ಇಲಾಖೆಯ ನಿರ್ದೇಶಕರಿಗೂ, ಎಲ್ಲಾ ಅಧಿಕಾರಿ ವರ್ಗದವರಿಗೂ, ಸರ್ವರಿಗೂ ನನ್ನ ವಿಶೇಷ ವಂದನೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ.

ಕರ್ನಾಟಕ ಕಲಾಶ್ರೀ
ಡಾ. ಸರ್ವಮಂಗಳಾ ಶಂಕರ್
ಕುಲಪತಿಗಳು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು

ನಿವೇದನೆ

ಭಾರತೀಯ ಸಂಗೀತ ಬೆಳೆದು ವಿಕಸಿತವಾದುದೇ ಗಾಯನ ಪ್ರಧಾನವಾಗಿ. ಈ ಹೈಂದವ ಸಂಗೀತ ಸಂಸ್ಕೃತಿಯ ಶುದ್ಧ, ಅಪ್ರಭಾವಿತ ರೂಪ, ಪದ್ಧತಿ, ಸಂಪ್ರದಾಯಗಳೇ ಕರ್ಣಾಟಕ ಸಂಗೀತ ಎಂಬ ಹೆಸರನ್ನು ತಳೆದು ಈ ಹಲವು ತಲೆಮಾರುಗಳಲ್ಲಿ ನಮ್ಮನ್ನು ಶ್ರೀಮಂತಗೊಳಿಸುತ್ತಿರುವುದು. ಪ್ರಾಚೀನ ಪ್ರಬಂಧಗಳ ಕಾಲದಿಂದಲೂ ನಮ್ಮ ಕಾಲದವರೆಗೂ ಗಾಯನ ಪ್ರಧಾನವಾಗಿಯೇ ಬೆಳೆದು ಸಮೃದ್ಧವಾಗಿರುವ ಕರ್ಣಾಟಕ ಸಂಗೀತದ ಕಲ್ಪಿತ ಸಂಗೀತ ವಲಯದ ರಚನೆಗಳಲ್ಲಿನ ಮಾತು ಧಾತುಗಳೆರಡಕ್ಕೂ-ಅಂದರೆ, ವಾಕ್ಕಿಗೂ ಗೇಯಕ್ಕೂ ಸಮಾನ ಪ್ರಾಧಾನ್ಯವಿದೆ. ಮಹಾವಾಗ್ಗೇಯಕಾರರ ಆಧ್ಯಾತ್ಮಿಕ ಭಾವನೆಗಳೇ, ಮೌಲ್ಯಗಳೇ ಅವರ ಮತಿಮನಸ್ಸುಗಳಿಂದ ಚಿಮ್ಮಿ ಅವರ ರಚನೆಗಳಲ್ಲಿ ಅಭಿವ್ಯಕ್ತಿಗೊಂಡುದರಿಂದಲೇ ಅವರ ರಚನೆಗಳಲ್ಲಿನ ಸಾಹಿತ್ಯಕ್ಕೆ ಒತ್ತು, ಪ್ರಾಧಾನ್ಯ. ಅವರ ಕಲೆಗಾರಿಕೆಯ ಪರಮ ಲಕ್ಷ್ಯವೇ ಆಧ್ಯಾತ್ಮಿಕತೆ ಎಂಬುದೇ ಅವರಿಂದ ನಮಗೆ ದೊರೆತಿರುವ ಅತಿದೊಡ್ಡ, ಅನುಕರಣೀಯವಾದ ಸಂದೇಶ.

ನಮ್ಮ ಕೈಗೆ ಬಂದಿರುವಷ್ಟು ಎತ್ತರಕ್ಕೆ, ಕಾಂತಿಗೆ ನಮ್ಮ ಸಂಗೀತವನ್ನು ಬೆಳೆಸಿರುವ ಆ ಮಹಾನುಭಾವರ ಮೌಲ್ಯಗಳನ್ನೂ, ಮಾರ್ಗದರ್ಶನವನ್ನೂ ಸಂಗೀತಾಭ್ಯಾಸಿಗಳಾದ ನಾವು ಗೌರವಿಸುತ್ತಿದ್ದೇವೆ, ಅನುಸರಿಸ ಬಯಸುತ್ತೇವೆ ಎಂದು ಭಾವಿಸಿದರೆ, ಅವರ ರಚನೆಗಳ ಸಾಹಿತ್ಯ ವಸ್ತುವನ್ನೂ, ಅದರ ಅಂತರಂಗವನ್ನೂ ಅರಿತು ಆಸ್ವಾದಿಸಿ ಅಭಿವ್ಯಕ್ತಪಡಿಸಬೇಕು, ಬೋಧಿಸಬೇಕು ಎಂಬುದು ಅತ್ಯಾವಶ್ಯಕ ಅಂಶ.

ದಾಸಸಾಹಿತ್ಯದ ಹೇರಳವಾದ ರಚನಾ ವಸ್ತುವಿನಲ್ಲಿನ ಕನ್ನಡ ಭಾಷೆಯ ವೈಭವ-ವಿಲಾಸಗಳ ನಂತರದ, ವೇಂಕಟಮಖಿಯವರ ನಂತರದ ನಮ್ಮ ಸಂಗೀತದ

'ಆಧುನಿಕ ಯುಗದ' ರಚನೆಗಳೆಲ್ಲ ಸಂಸ್ಕೃತ, ತೆಲುಗು, ಮಲಯಾಳಂ ಮತ್ತು ಕನ್ನಡ ಭಾಷೆಗಳಲ್ಲಿ ರಚಿತವಾಗಿರುವವಾದರೂ ಸಂಗೀತ ರಚನೆಗಳಿಗಾಗಿ ಸಂಸ್ಕೃತ ಮತ್ತು ತೆಲುಗು ಭಾಷೆಗಳ ಸಾರ್ವಭೌಮತ್ವವೇ ಪ್ರಕಟಗೊಳ್ಳುವುದು.

ಸಂಗೀತಾಭ್ಯಾಸಿಗಳು ತಮ್ಮ ಮಾತೃಭಾಷೆಯಾಗಿಲ್ಲದ ಸಂಗೀತ ರಚನೆಗಳ ಭಾಷೆಗಳಲ್ಲಿನ ಸಾಹಿತ್ಯದ ಭಾವವನ್ನರಿತು ಆಸ್ವಾದಿಸಿ ಅಭಿವ್ಯಕ್ತಗೊಳಿಸಿ ಕೊಳ್ಳಬೇಕಾದರೆ, ತಮ್ಮ ಮಾತೃಭಾಷೆಯ ತರ್ಜುಮೆಯಿಂದ ಸಾಧಿಸುವುದು ಅನಿವಾರ್ಯ. ಏಕೆಂದರೆ, ಎಲ್ಲ ರಚನೆಗಳ ಸಾಹಿತ್ಯ ಭಾಷೆಗಳನ್ನೂ ಸಾಹಿತ್ಯಮಟ್ಟ ದಲ್ಲಿ ಅಧ್ಯಯನ ಮಾಡಿರಲು 'ಎಲ್ಲರಿಗೂ' ಸಾಧ್ಯವಾಗಿರುವುದಿಲ್ಲ.

ಸಂಗೀತ ರಚನೆಗಳ ಸಾಹಿತ್ಯಗಳಿಗೆ ಇತರ ಭಾಷೆಗಳ ಅನುವಾದ-ಭಾವಾರ್ಥ-ವ್ಯಾಖ್ಯಾನಗಳು ಹೀಗೆ ಮುಖ್ಯವೂ, ಅರ್ಥಪೂರ್ಣವೂ ಆಗುತ್ತವೆ, ಮಹತ್ವಪೂರ್ಣವೂ ಪ್ರಯೋಜನಕರವೂ ಆಗುತ್ತವೆ. ತಮಗೂ, ತಮ್ಮ ಶ್ರೋತೃಗಳಿಗಾಗಿಯೂ ತಮ್ಮ ಕಲೆಗಾರಿಕೆಯ ಮೌಲ್ಯವರ್ಧನವಾಗಬೇಕಾದರೆ ಈ ವಿಷಯದಲ್ಲಿ ಸಂಗೀತಾಭ್ಯಾಸಿಗಳು ಶ್ರದ್ಧಾಸಕ್ತಿಗಳನ್ನು ಹೆಚ್ಚಿಸಿಕೊಳ್ಳುವುದು ಅತ್ಯವಶ್ಯಕವಾದುದು.

ಈ ದಿಕ್ಕಿನಲ್ಲಿ ಪ್ರಸಕ್ತ ಗ್ರಂಥವು ಒಂದು ನಮ್ರ ಪ್ರಯತ್ನ.

ಬಾನುಲಿಯ ವಿಸ್ತೃತವಾದೊಂದು ವಿಶೇಷ ಪ್ರಸಾರಕ್ಕೆಂದು ಶ್ರೀ ಶ್ಯಾಮಶಾಸ್ತ್ರಿಗಳ ಸಮಗ್ರ ರಚನಾ ವಸ್ತುವಿನ ಸರಣಿ ಕಾರ್ಯಕ್ರಮವನ್ನು ನಾನು ಸಮರ್ಪಿಸುವ ಸಂದರ್ಭದಲ್ಲಿ ಪೂಜ್ಯರ ಕೃತಿ ಸಾಹಿತ್ಯದ ನಿಕಟ ಅಧ್ಯಯನದ ಅವಕಾಶವನ್ನೊದಗಿಸಿದ್ದ ಬೆಂಗಳೂರು ಆಕಾಶವಾಣಿ ಸಂಸ್ಥೆಗೆ ಈ ಸಂದರ್ಭದಲ್ಲಿ ನನ್ನ ಕೃತಜ್ಞತೆಯನ್ನು ಹೇಳಬಯಸುತ್ತೇನೆ.

ಕರ್ಣಾಟಕ ಸಂಗೀತ ತ್ರಿಮೂರ್ತಿಗಳಲ್ಲಿ ಜ್ಯೇಷ್ಠರಾದ ಶ್ರೀ ಶ್ಯಾಮಶಾಸ್ತ್ರಿಗಳ ಬಹುತೇಕ ರಚನೆಗಳು ಸ್ವರಲಿಪಿಯೊಂದಿಗೆ ಹಲವು ಭಾಷೆಗಳಲ್ಲೂ, ಹಲವು ಗ್ರಂಥಗಳಲ್ಲೂ, ಕನ್ನಡ ಲಿಪಿಯಲ್ಲೂ ಲಭ್ಯವಿವೆಯಾದರೂ, ಶ್ರೀ ಶ್ಯಾಮಶಾಸ್ತ್ರಿಗಳ ಚಿಂತನೆಯ ಮತ್ತು ಅಂತರಂಗದ ಭಾವನೆಗಳ ಸಂಪದವನ್ನು ನನ್ನ ಕನ್ನಡಿಗ ಬಂಧುಗಳಿಗಾಗೆಂದೇ, ಲಭ್ಯವಿರುವ ಅವರ ಎಲ್ಲ ರಚನೆಗಳ ಸಾಹಿತ್ಯದ

ಭಾವಾರ್ಥವನ್ನೂ, ವಿಶ್ಲೇಷಣೆ-ವ್ಯಾಖ್ಯಾನಗಳನ್ನೂ, ಸಂದರ್ಭೋಚಿತ ರಾಗ ಟಿಪ್ಪಣಿಗಳನ್ನೂ ಕನ್ನಡ ಭಾಷೆಯಲ್ಲಿ, ಸಂಗೀತಾಭ್ಯಾಸಿಗಳಿಗೂ, ಬೋಧಕರಿಗೂ, ಸ್ವಲ್ಪ ನೆರವನ್ನಿತ್ತು ಯಥಾಮತಿಯಾಗಿ ಸಮರ್ಪಿಸಿ, ಸಾಹಿತ್ಯಪ್ರಜ್ಞೆಯನ್ನು ವರ್ಧಿಸುವುದು ಈ ಗ್ರಂಥದ ನಮ್ರ ಬಯಕೆ. ಈ ಉದ್ದೇಶ ಫಲಪ್ರದವಾದರೆ ನಾನು ಧನ್ಯ.

ಮೈಸೂರಿನ ಕರ್ಣಾಟಕ ರಾಜ್ಯ ಡಾ|| ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿ, ಸಂಗೀತ ವಿದುಷಿ, ಸಂಶೋಧಕಿ, ಉತ್ತಮ ಲೇಖಕಿ ಡಾಕ್ಟರ್ ಶ್ರೀಮತಿ ಸರ್ವಮಂಗಳಾ ಶಂಕರ್ ಅವರು ಈ ವಿಶ್ವವಿದ್ಯಾಲಯದ ಸರ್ವತೋಮುಖ ಪ್ರಗತಿಗಾಗಿ ಟೊಂಕ ಕಟ್ಟಿ ಎಲ್ಲರ ಮೆಚ್ಚುಗೆ ಗೌರವಗಳನ್ನು ಪಡೆಯುತ್ತಿರುವ ನಿಟ್ಟಿನಲ್ಲಿ, ಸಂಗೀತ ಕಲೆಯ ಪ್ರಯೋಗ ಪಟುಗಳಿಗೂ, ವಿದ್ಯಾರ್ಥಿಗಳಿಗೂ ಬೋಧಕರಿಗೂ ಲಕ್ಷ್ಯ ಕ್ಷೇತ್ರದಲ್ಲಿ ಹೆಚ್ಚು ಪ್ರಯೋಜನ ಲಭ್ಯವಾಗುವ ಒತ್ತು ಸೂಚಿಸುವುದೀ ಗ್ರಂಥವೆಂಬ ಸಮುಚಿತ ದೃಷ್ಟಿಯನ್ನು ತಳೆದು ತಮ್ಮ ಸಂಸ್ಥೆಯಿಂದ ಈ ಗ್ರಂಥವನ್ನು ಪ್ರಕಾಶನಗೊಳಿಸುವ ಉತ್ಸಾಹ ಶ್ರದ್ಧೆ ಕಳಕಳಿಗಳನ್ನು ತೋರಿ ಕಾರ್ಯೋನ್ಮುಖರಾಗಿರುವುದಕ್ಕಾಗಿ ಅವರಿಗೆ ನನ್ನ ಮೆಚ್ಚುಗೆ, ಕೃತಜ್ಞತೆ, ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ. ಸಂಬಂಧಿಸಿದ ಇತರ ಅಧಿಕಾರಿಗಳಿಗೂ ನನ್ನ ಧನ್ಯವಾದಗಳು ಸಲ್ಲುತ್ತವೆ.

ಈ ಗ್ರಂಥಕ್ಕಾಗಿ ಗ್ರಂಥದ ವಸ್ತುವಿನ ಕರಡು ತಿದ್ದುವ ಕಾರ್ಯದಲ್ಲಿ ನೆರವು ನೀಡಿದುದಕ್ಕಾಗಿಯೂ, ಈ ಗ್ರಂಥಕ್ಕಾಗಿ ಶ್ರೀ ಶ್ಯಾಮಶಾಸ್ತ್ರಿಗಳ ಭಾವಚಿತ್ರವನ್ನು ಬರೆದುಕೊಟ್ಟುದಕ್ಕಾಗಿಯೂ ನನ್ನ ಧರ್ಮಪತ್ನಿ ಶ್ರೀಮತಿ ಉಷಾ ವಿಶ್ವೇಶ್ವರನ್ ಅವರಿಗೆ ಧನ್ಯವಾದಗಳು ಸಲ್ಲುತ್ತವೆ.

ರಾ. ವಿಶ್ವೇಶ್ವರನ್

ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳ ವ್ಯಾಖ್ಯಾನ

ಭೂಮಿಕೆ

ವಿಶ್ವ ಸಂಗೀತ ಸಂಸ್ಕೃತಿಗಳಲ್ಲಿ ಭಾರತೀಯ ಸಂಗೀತ ಸಂಸ್ಕೃತಿ ಅತಿ ವಿಶಿಷ್ಟವಾದುದು, ಸಾಟಿ ಇಲ್ಲದ ಸೌಂದರ್ಯ ಭರಿತವಾದುದು. ಈ ಮಾತಿಗೆ ಪುಷ್ಟಿ ದೊರೆಯುವ ಮೂಲವೇ (source) ಈ ಸಂಗೀತದ ಆಧಾರವಾದ ಅಥವಾ ಬುನಾದಿಯಾದ ರಾಗ ಪರಿಕಲ್ಪನೆ ಮತ್ತು ಅದರ ಆವಿಷ್ಕಾರ, ಅಭಿವ್ಯಕ್ತಿ, ಪರಿಣಾಮಗಳು. ಶತಮಾನಗಳಷ್ಟರ ಕಾಲವ್ಯಾಪ್ತಿಯಲ್ಲಿ ಹಂತ ಹಂತವಾಗಿ, ಕ್ರಮವಾಗಿ ವಿಕಸನಗೊಂಡ 'ರಾಗ' ಪರಿಕಲ್ಪನೆಯ ಅತ್ಯಂತ ಸುಂದರವಾದ, ಆಕರ್ಷಕವಾದ ಹಂತವನ್ನು, ಕರ್ಣಾಟಕ ಸಂಗೀತ ಪದ್ಧತಿಗೆ ಮಾತ್ರ ಪ್ರಸಕ್ತಿಯಿಂದ ಕೇಂದ್ರೀಕರಿಸಿಕೊಂಡಾಗ, ನಮ್ಮ ಸಂಗೀತ ಪದ್ಧತಿಯ ಸೌಂದರ್ಯಾನುಭೂತಿಗೆ ಸ್ಪಷ್ಟವಾದ ದಿಕ್ಕನ್ನೂ, ನೆಲೆಯನ್ನೂ ತೋರಿದ ಸಂಗೀತ ತ್ರಿಮೂರ್ತಿಗಳ ತಪಃ ಫಲ ಸದೃಶ್ಯವಾದ ಕೊಡುಗೆಯಲ್ಲಿ ಕಾಣುತ್ತೇವೆ. ಈ ಅದ್ಭುತ ಸುಂದರ ಸಂಗೀತ ಪದ್ಧತಿಯ ಸೌಂದರ್ಯದ ಸಂಕೀರ್ಣತೆ ಮತ್ತು ಸಂಕೀರ್ಣತೆಯಲ್ಲಿನ ಸೌಂದರ್ಯ ಈ ಹಲವಾರು ಪೀಳಿಗೆಗಳ ಕಲೆಗಾರರನ್ನೂ ಶ್ರೋತೃ ವರ್ಗಗಳನ್ನೂ ಆನಂದಗೊಳಿಸಿವೆ. ಈ ತೃಪ್ತಿ ಹೆಮ್ಮೆಗಳನ್ನು ನಮ್ಮಲ್ಲಿ ಮೂಡಿಸಿರುವವರೇ ಈ ಮೂವರು ಮಹಾನುಭಾವರಾದ, ಶ್ರೀ ತ್ಯಾಗರಾಜಸ್ವಾಮಿಗಳು, ಶ್ರೀ ಮುದ್ದುಸ್ವಾಮಿ ದೀಕ್ಷಿತರು ಮತ್ತು ಶ್ರೀ ಶ್ಯಾಮಶಾಸ್ತ್ರಿಗಳು. ಇವರೆಲ್ಲರ ಜನ್ಮಸ್ಥಳ ತಂಜಾವೂರಿನ ಜಿಲ್ಲೆಯಲ್ಲಿಯ ತಿರುವಾರೂರೆಂಬ ಸಣ್ಣ ಊರು ಎಂಬುದು ಗಹನವಾದ ಕಾಕತಾಳೀಯ ಘಟನೆ. ಶ್ರೀ ತ್ಯಾಗರಾಜರನ್ನು ಅವರ ತಾಯಿ ಹಡೆದುದು ತಿರೂವಾರುರಿನಲ್ಲಿ ಎಂಬ ಅಂಶ ಸ್ವಲ್ಪ ವಿವಾದಕ್ಕೆ ಗ್ರಾಸವಾದುದು ಎಂಬುದನ್ನು (ಈ ಸಮರ್ಪಣೆಯ ವ್ಯಾಪ್ತಿಗೆ ಬರಬೇಕಿಲ್ಲವಾಗಿ) ಪಕ್ಕಕ್ಕಿಡಬಹುದು. ಈ ಮೂವರೂ ಪೂಜ್ಯರೂ ಕರ್ಣಾಟಕ ಸಂಗೀತದ ಆಧುನಿಕ

ಯುಗದ ರೂಪು ರೇಷೆಗಳಿಗೆ ಹೇಗೆ ಕಾರಣರಾದರು, ಇದರ ಸಂಪ್ರದಾಯದ ಉಚ್ಚ ಮೌಲ್ಯಗಳನ್ನು ತಮ್ಮ ಸಂಗೀತ ರಚನೆಗಳ ಸೃಷ್ಟಿಯಿಂದ ಹೇಗೆ ವರ್ಧಿಸಿದರು ಎಂಬುದೇ ಅತ್ಯಂತ ಗಹನವಾದ, ಚಿಂತ್ಯವಾದ, ಅಧ್ಯಯನಕ್ಕೆ ವಸ್ತುವಾದ ವಿಷಯ.

ಈ ನಮ್ರ ಸಮರ್ಪಣೆಗೆ ಕೇಂದ್ರ ಬಿಂದುವಾಗಿ, ಪರಮಪೂಜ್ಯರಾಗಿ, ನಮ್ಮ ಸನಾತನ ಸಂಸ್ಕೃತಿಯ ಹಾಗೂ ಸಂಗೀತದ ಉಚ್ಚ ಕಲಾಮೌಲ್ಯಗಳಿಗಾಗಿ ಅಭೂತಪೂರ್ವ ಮಾರ್ಗದರ್ಶನ ಮಾಡಿದ ಸಂಗೀತ ತ್ರಿಮೂರ್ತಿಗಳಲ್ಲಿ ಜ್ಯೇಷ್ಠರಾದ ಶ್ರೀಶ್ಯಾಮಶಾಸ್ತ್ರಿಯವರಿಗೆ ಇದೊಂದು ನುಡಿನಮನ.

ಶ್ರೀ ಶ್ಯಾಮಶಾಸ್ತ್ರಿಯವರ ವಂಶಪೂರ್ವಜರು ಮೂಲವಾಗಿ ಆಂಧ್ರಪ್ರದೇಶದ ಕರ್ನೂಲ್ ವಾಸಿಗಳಾಗಿದ್ದು ತಮಿಳುನಾಡಿನ ಕಂಚೀಪುರಕ್ಕೆ ವಲಸೆ ಬಂದವರು ಎನ್ನುತ್ತಾರೆ. ವಲಸೆ ಬಂದ ಮೇಲೆ, ಗೌತಮ ಗೋತ್ರದ ಈ ವಂಶೀಯರು, ಬ್ರಹ್ಮನೇ ನಿರ್ಮಾಣ ಮಾಡಿ ಕಂಚಿಯಲ್ಲಿ ಪ್ರತಿಷ್ಠಾಪನೆ ಮಾಡಿದನೆಂಬ ದಂತಕತೆಯೂ ಐತಿಹ್ಯವೂ ಇರುವ ಶ್ರೀ ಕಾಮಾಕ್ಷೀ ಅಮ್ಮನವರ ಬಂಗಾರದ ಮೂರ್ತಿಯೇ ಉತ್ಸವಮೂರ್ತಿಯಾಗಿದ್ದ ಅಮ್ಮನವರ ಪೂಜಾ ಕೈಂಕರ್ಯದಲ್ಲಿ ನಿರತರಾಗಿದ್ದವರು. ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣವಾದ ಮುಸ್ಲಿಮರ ವಿಧ್ವಂಸಕ ಕೃತ್ಯಗಳ ಭಯ ಭೀತಿಗಳ ಹಿನ್ನೆಲೆಯಲ್ಲಿ ಈ ವಂಶೀಯರು ಅಮ್ಮನವರ ಬಂಗಾರು ಕಾಮಾಕ್ಷಿ ಉತ್ಸವಮೂರ್ತಿಯೊಂದಿಗೆ ಕೆಲಕಾಲ ಸ್ಥಳಾಂತರಗೊಂಡು, ಉದಯರ್ ಪಾಳ್ಯದಲ್ಲೂ, ನಂತರ ಅನ್ನಾಕುಡಿಯಲ್ಲೂ ಇದ್ದು, ಕಂಚಿಗೆ ವಾಪಸಾಗಿ, ಬಂಗಾರು ಕಾಮಾಕ್ಷಿಯ ಪೂಜಾಕೈಂಕರ್ಯವನ್ನು ಮುಂದುವರಿಸುತ್ತಿದ್ದರು. ವೇಂಕಟಾದ್ರಿ ಅಯ್ಯರ್ ಅವರೂ, ಅವರ ಪುತ್ರ ವಿಶ್ವನಾಥ ಅಯ್ಯರ್ ಅವರೂ ತಮ್ಮ ಅಗ್ರಹಾರದ ಎದುರು ಬೀದಿಯಲ್ಲಿ ತಿರುಪತಿ ಶ್ರೀ ವೇಂಕಟೇಶ್ವರನ ಪ್ರೀತ್ಯರ್ಥವಾಗಿ ದೇವರ ಹೆಸರಿನಲ್ಲಿ ಅನ್ನದಾನದಿಂದ ಬ್ರಾಹ್ಮಣ ಸಂತರ್ಪಣೆಯನ್ನು ಪ್ರತಿಶನಿವಾರವೂ ನಡೆಸುತ್ತಿದ್ದರು. ಅಂಥ ಒಂದು ಶನಿವಾರದಂದು ಸಂತರ್ಪಣೆ ನಡೆಯುತ್ತಿದ್ದಾಗ ಒಬ್ಬ ವೃದ್ಧ ಬ್ರಾಹ್ಮಣರ ಮೈಮೇಲೆ ಶ್ರೀನಿವಾಸದೇವರ ಆವಾಹನೆಯಾಗಿ ವಿಶ್ವನಾಥ ಅಯ್ಯರ್ ದಂಪತಿಗಳನ್ನು ಕುರಿತು, "ನಿಮಗೆ ಮುಂದಿನ ಚೈತ್ರಮಾಸದಲ್ಲಿ, ಕೃತ್ತಿಕಾ

ನಕ್ಷತ್ರದಲ್ಲಿ ಮಹಾಯಶೋವಂತನಾದ ಸುಪುತ್ರ ಜನಿಸುವನು" ಎಂದು ಹೇಳಿದ ದೈವೋಕ್ತಿಯಂತೆಯೇ ಜನನವಾದ ಮುಗುವಿಗೆ ಸಹಜವಾಗಿಯೇ "ವೇಂಕಟ ಸುಬ್ರಹ್ಮಣ್ಯ" ಎಂದು ನಾಮಕರಣವಾಯಿತು. ಶ್ರೀ ವೇಂಕಟೇಶ್ವರನ ಭಕ್ತರಾಗಿ ಪ್ರತಿ ಶನಿವಾರ ಶ್ರೀನಿವಾಸ ದೇವರ ಹೆಸರಿನಲ್ಲಿ ಬ್ರಾಹ್ಮಣ ಸಂತರ್ಪಣೆ ಮಾಡುತ್ತಿದ್ದ ಭಕ್ತಿಯಿಂದಲೂ, ವೇಂಕಟಾದ್ರಿ ಎಂದು ತಾತನ ಹೆಸರಾಗಿದ್ದುದರಿಂದಲೂ ಈ ಮಗುವಿಗೆ 'ವೇಂಕಟ' ಎಂಬ ಹೆಸರೂ, 'ಕಂದ ಕೃತ್ತಿಕೈ' ದಿನದಂದು ಜನಿಸಿದ ಕಾರಣ ಸ್ಕಂದನ -ಅರ್ಥಾತ್ ಸುಬ್ರಹ್ಮಣ್ಯ ಸ್ವಾಮಿಯ ಹೆಸರು - ಎರಡೂ ಸೇರಿ 'ವೇಂಕಟಸುಬ್ರಹ್ಮಣ್ಯ' ಎಂದಾಯಿತು. ನಾಮಕರಣ ಹೀಗಾದರೂ ಮನೆಯವರೆಲ್ಲ 'ಶ್ಯಾಮಕೃಷ್ಣ' ಎಂದು ಪ್ರೀತಿಯಿಂದ ಕರೆಯುತ್ತಿದ್ದ ಹೆಸರೇ ಸ್ಥಿರವಾಗಿ, ಅದೇ, ಶ್ಯಾಮಶಾಸ್ತ್ರಿಗಳೆಂಬ ಖ್ಯಾತನಾಮವಾಗಿ, ಆ ಖ್ಯಾತ ವಾಗ್ಗೇಯಕಾರರ ವಾಗ್ಗೇಯಕಾರ ಮುದ್ರೆಯೇ ಆಯಿತು.

ಹೀಗೆ, ಚಿತ್ರಭಾನು ಸಂವತ್ಸರದ ಚೈತ್ರ ಮಾಸದಲ್ಲಿ ಮೇಷ ರವಿ ಕೃತ್ತಿಕಾ ನಕ್ಷತ್ರದಲ್ಲಿ ತಮಿಳರಿಗೆ ಶ್ರೇಷ್ಠವಾದ ಕಂದ ಕೃತ್ತಿಕೈ ದಿನದಂದು ಅಂದರೆ, 1763ರ ಏಪ್ರಿಲ್ 26ರ ಶನಿವಾರ ಈ ಮಹಾನುಭಾವರ ಜನನದಿಂದಾಗಿ ಕರ್ಣಾಟಕ ಸಂಗೀತ ಕ್ಷೇತ್ರವಾಸಿಗಳಿಗೆ ಆ ದಿನ ಅತ್ಯಂತ ಮಹತ್ವಪೂರ್ಣವಾದ ದಿನವಾಗಿ ಸ್ಮರಣೆಯಲ್ಲಿ ಉಳಿಯುವಂತಾಯಿತು.

ವೇದಾಧ್ಯಯನ ಸಂಪನ್ನರ ವಂಶದಲ್ಲಿ ಜನಿಸಿದ ಶ್ರೀ ಶ್ಯಾಮಶಾಸ್ತ್ರಿಗಳಿಗೆ ಬಾಲ್ಯದಲ್ಲೇ ವೇದಾಧ್ಯಯನವೂ ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ಪ್ರೌಢಿಮೆಯೂ ಅತ್ಯಂತ ಸಹಜವಾದುವು. ಸೋದರ ಮಾವನಿಂದ ಸಂಗೀತದಲ್ಲಿ ಬಾಲ ಪಾಠಗಳು ದೊರೆತುವು. ಸ್ವರಜ್ಞಾನ ವರ್ಧಿಸಿದ್ದ ಹಂತದಲ್ಲಿ-ಸುಮಾರು 18 ನೇ ವರ್ಷದಲ್ಲಿ - ಶ್ರೀವಿದ್ಯಾರಹಸ್ಯವನ್ನೂ ಸಿದ್ಧಿಸಿಕೊಂಡು ಮಾತಾಪಿತೃಗಳೊಡನೆ ಬಂಗಾರು ಕಾಮಾಕ್ಷಿಯ ಸಮೇತವಾಗಿ ತಂಜಾವೂರಿಗೆ ಬಂದು, ತಂಜಾವೂರಿನ ಅಂದಿನ ದೊರೆಯು ಭಕ್ತಿಯಿಂದ ಕಾಮಾಕ್ಷೀ ಅಮ್ಮನವರಿಗೆಂದು ನಿರ್ಮಿಸಿದ ದೇವಾಲಯದಲ್ಲಿ ದೇವಿಯ ಸೇವೆಯಲ್ಲೇ ನಿರತರಾದರು. ಶ್ರೀ ಕಾಮಾಕ್ಷೀ ದೇವಿಯ ಅನುಗ್ರಹದಿಂದಲೇ ಎಂಬಂತೆ, ಇದೇ ಸಮಯದಲ್ಲಿ, ಕಾಶಿಯ ಶ್ರೀ ವಿಶ್ವನಾಥನ ಭಕ್ತ, ಸಂಗೀತ ನರ್ತನಗಳಲ್ಲಿ

ವೈದುಷ್ಯವನ್ನು ಪಡೆದು ಶ್ರೀ ವಿಶ್ವನಾಥನಿಗೆ ಸಂಗೀತ ನರ್ತನಗಳ ಸೇವೆಯನ್ನು ಪ್ರತಿದಿನವೂ ಸಲ್ಲಿಸುತ್ತಿದ್ದ "ಸಂಗೀತ ಸ್ವಾಮಿ" ಹೆಸರಿನ ಆಂಧ್ರ ಬ್ರಾಹ್ಮಣ ಯತಿ ಶ್ರೇಷ್ಠರು ತಂಜಾವೂರಿಗೆ ಬಂದು ಚಾತುರ್ಮಾಸ್ಯ ವ್ರತವನ್ನು ತಂಜಾವೂರಿನಲ್ಲೇ ಆಚರಿಸಲು ನಿರ್ಧರಿಸಿದಾಗ ಪಾದ ಪೂಜೆಗಾಗಿ ಅವರನ್ನು ಶ್ರೀ ವಿಶ್ವನಾಥ ಶಾಸ್ತ್ರಿಗಳು ಮನೆಗೆ ಆಹ್ವಾನಿಸಿದುದು ತುಂಬ ಮಹತ್ವಪೂರ್ಣವಾಯಿತು. ಈ ಸಂಗೀತಸ್ವಾಮಿ ಯತೀಂದ್ರರು ಬಾಲ ಶ್ಯಾಮಶಾಸ್ತ್ರಿಯವರ ಸೂಕ್ಷ್ಮ ಸಂಗೀತ ಪ್ರತಿಭೆಯನ್ನು ಗುರ್ತಿಸಿ ತಾವು ತಂಜಾವೂರಿನಲ್ಲೇ ಮೂರು ವರ್ಷ ಕಾಲ ನೆಲೆಸಿ ಶ್ಯಾಮಕೃಷ್ಣರನ್ನು ತಮ್ಮ ಅಂತೇವಾಸಿಯಾಗಿ ಸ್ವೀಕರಿಸಿ ಸಂಗೀತ ಮರ್ಮಾತಿಶಯವನ್ನು ನೈಕಟ್ಯದಿಂದ ಬೋಧಿಸಿ ಶಿಷ್ಯರ ಪ್ರತಿಭೆ ಪಾಂಡಿತ್ಯಗಳನ್ನು ಬೆಳೆಸಿದರು, 'ಯಶೋವಂತನಾಗುವೆ' ಎಂದು ಶಿಷ್ಯನನ್ನು ಆಶೀರ್ವದಿಸಿದರು. ತಾವು ಕಾಶಿಗೆ ವಾಪಸಾಗಬೇಕಾಗಿ ಬಂದಾಗ, ಅಂದು ಅತಿ ಪ್ರಸಿದ್ಧರೂ ಪಾಂಡಿತ್ಯಕ್ಕೆ ಪರ್ಯಾಯ ನಾಮಕರೂ ಆಗಿದ್ದ, ಭೈರವಿ ರಾಗದ ವಿರಿಬೋಣಿ ವರ್ಣದಿಂದ ಪ್ರಸಿದ್ಧರಾಗಿದ್ದ ಪಚ್ಚಿಮಿರಿಯಂ ಆದಿಪ್ಪಯ್ಯನವರ ಮಾರ್ಗದರ್ಶನವನ್ನು ಸಂಗೀತದಲ್ಲಿ ನಂತರದ ಕಾಲದಲ್ಲಿ ಪಡೆಯುವಂತೆ ಉಪದೇಶಿಸಿ ಕಾಶಿಗೆ ತೆರಳಿದರು. ಗುರುಗಳ ಉಪದೇಶದಂತೆಯೇ ನಂತರದ ದಿನಗಳಲ್ಲಿ ಆದಿಪ್ಪಯ್ಯನವರ ಮಾರ್ಗದರ್ಶನ ವನ್ನು ಶ್ಯಾಮಕೃಷ್ಣರು ಪಡೆದು, ಸಂಗೀತದಲ್ಲಿ ಘನವಿದ್ವಾಂಸ ರೆಂದೂ, ಪಾಂಡಿತ್ಯಪೂರ್ಣರೆಂದೂ, ಮಹಾ ವಾಗ್ಗೇಯಕಾರರೆಂದೂ ಪ್ರಸಿದ್ಧಿ ಅಧಿಕವಾಯಿತು. ಆದಿಪ್ಪಯ್ಯನವರು ಶಿಷ್ಯ ಶ್ಯಾಮಕೃಷ್ಣರನ್ನು ಪ್ರೀತಿಯಿಂದ 'ಕಾಮಾಕ್ಷಿ' ಎಂದೇ ಸಂಬೋಧಿಸುತ್ತಿದ್ದರಂತೆ. ತಂದೆ ವಿಶ್ವನಾಥ ಅಯ್ಯರ್ ಅವರಿಗೆ ತಂಜಾವೂರಿನ ದೊರೆಯ ಪೋಷಣೆ, ಉತ್ತೇಜನಗಳಿದ್ದು ಪ್ರಾಪಂಚಿಕಗಳ ಕೊರತೆ ಇಲ್ಲದವರಾಗಿದ್ದುದಷ್ಟೇ ಅಲ್ಲ, ಶ್ಯಾಮಶಾಸ್ತ್ರಿಗಳು ಸ್ವಭಾದಲ್ಲೇ ಪ್ರಾಪಂಚಿಕ ವಿಷಯಗಳಿಗೆ ಸ್ವಲ್ಪವೂ ಅಂಟಿಕೊಳ್ಳದೆ ಸದಾ ಶ್ರೀ ಕಾಮಾಕ್ಷೀ ದೇವಿಯ ನೈಕಟ್ಯದಲ್ಲೇ, ಧ್ಯಾನಾರ್ಚನೆಗಳಲ್ಲೇ, ಸ್ತುತಿಗಳಲ್ಲೇ ನಿರತರಾಗಿರುತ್ತಿದ್ದರು. ಯಾವುದೇ ಕಾರಣದಿಂದಾಗಲಿ ನರಸ್ತುತಿ ಮಾಡದಿದ್ದವರು ಶ್ರೀ ಶಾಸ್ತ್ರಿಗಳು.

ಸಂಗೀತ ತ್ರಿಮೂರ್ತಿಗಳೆಂದು ನಾವು ಆರಾಧಿಸುವ ಶ್ರೀ ಶ್ಯಾಮಶಾಸ್ತ್ರಿಗಳು, ಶ್ರೀ ತ್ಯಾಗರಾಜರು ಮತ್ತು ಶ್ರೀ ಮುದ್ದುಸ್ವಾಮಿ ದೀಕ್ಷಿತರ ಜೀವಿತಗಳನ್ನು

ಗಮನಿಸಿದಾಗ ಎದ್ದು ಕಾಣುವು ಕೆಲವು ಸಾಧಾರಣಾಂಶಗಳಲ್ಲಿ, ಮೂವರೂ, ಮಹಾಮಹಿಮರಾದ ಯತಿ ಶ್ರೇಷ್ಠರ ಸಂಪರ್ಕ ಮತ್ತು ಆಶೀರ್ವಾದಾನುಗ್ರಹ ಗಳನ್ನು ಪಡೆದುದು, ಪ್ರಾಪಂಚಿಕಗಳ ವಿಷಯಗಳಿಗೆ, ರಾಜಮರ್ಯಾದೆ, ಸನ್ಮಾನಗಳಿಗೆ ಮನಸೋಲದೆ ನಿರಾಳವಾಗಿ ಅದನ್ನೆಲ್ಲಾ ನಿರಾಕರಿಸಿ, ಭಗವದ್ ಭಕ್ತಿ, ಚಿಂತನ, ಅರ್ಚನ, ಕೀರ್ತನಗಳನ್ನು ಎಲ್ಲಕ್ಕೂ ಮೇಲಿನ ಸ್ಥಾನದಲ್ಲಿಟ್ಟು ಗೌರವಿಸಿದುದು, ಮುಂತಾದವು ಪ್ರಧಾನವಾದವು. ಶ್ರೀ ತ್ಯಾಗರಾಜರಿಗೆ ಉಪನಿಷದ್ ಬ್ರಹ್ಮ ಯತೀಂದ್ರರ, ಮುದ್ದುಸ್ವಾಮಿ ದೀಕ್ಷಿತರಿಗೆ ಶ್ರೀ ಚಿದಂಬರನಾಥ ಯೋಗಿಗಳ ಮತ್ತು ಶ್ರೀ ಶ್ಯಾಮಶಾಸ್ತ್ರಿಯವರಿಗೆ ಮಹಾಯತೀಂದ್ರ ಸಂಗೀತ ಸ್ವಾಮಿಗಳ ಅಯಾಚಿತ ಸಾನ್ನಿಧ್ಯ ಉಪದೇಶಗಳು ಲಭ್ಯವಾದುದು ಅದ್ಭುತವಾದ ಘಟನಾವಳಿ.

ಅಠಾಣಾ ರಾಗದಲ್ಲಿ 'ಏಲನೀದಯರಾದು' ಕೃತಿಯಿಂದ ಶ್ರೀ ತ್ಯಾಗರಾಜರ ವಾಗ್ಗೇಯಕಾರ ಪ್ರತಿಭೆಯೂ, ಮಾಯಾಮಾಳವಗೌಳದಲ್ಲಿ 'ಶ್ರೀನಾಥಾದಿ ಗುರುಗುಹೋ ಜಯತಿ' ಕೃತಿಯಿಂದ ಶ್ರೀ ಮುದ್ದುಸ್ವಾಮಿ ದೀಕ್ಷಿತರ ವಾಗ್ಗೇಯಕಾರ ಪ್ರತಿಭೆಯೂ ಅರಳಿದಂತೆ, ಸಾವೇರಿ ರಾಗದಲ್ಲಿ 'ಜನನೀ ನತಜನ ಪರಿಪಾಲಿನಿ' ಕೃತಿಯಿಂದ ಮೊದಲಿಟ್ಟು ಶ್ರೀ ಶ್ಯಾಮಶಾಸ್ತ್ರಿಗಳ ವಾಗ್ಗೇಯ ಪ್ರತಿಭೆ ಅರಳಿದುದೆಂದು ತಿಳಿಯುತ್ತದೆ.

ಇವರು ಮೂವರೂ ರಾಜಾಧಿರಾಜರ ಆಹ್ವಾನಗಳನ್ನು ದೊಡ್ಡದೆಂದು ಭಾವಿಸಲಿಲ್ಲ, ಸನ್ಮಾನಗಳನ್ನು, ಖಿಲ್ಲತ್ತುಗಳನ್ನು ಸ್ವೀಕರಿಸಿದವರಲ್ಲ, ಶ್ಲಾಘನೆಗಳಿಗೆ ಮಣಿದವರಲ್ಲ. ಸ್ತುತಿ, ಕೀರ್ತನ ಎಂಬುದು ದೈವಕ್ಕೆ ಮಾತ್ರವೇ ಸಲ್ಲುವಂಥದು, ನರರಿಗಲ್ಲ ಎಂದು ದೃಢವಾಗಿ ಆಚರಣೆಯಲ್ಲಿ ತೋರಿದವರಿವರು.

ಜೀವಿತದಲ್ಲಿ ಸವಾಲು ಎದುರಾದಾಗ ಇತರರಿಗಾಗಿ ಸವಾಲನ್ನು ಸಮರ್ಥವಾಗಿ ಎದುರಿಸಿ ಸವಾಲೆಸೆದವರನ್ನು ಸಾತ್ವಿಕವಾಗಿಯೇ ಸೋಲಿಸಿ ಲಜ್ಜೆಗೇಡುಮಾಡಿ ಕಲೆಗಾರಿಕೆಯ ಸಾತ್ವಿಕ ಬಳಕೆಯ ಮಹತ್ವವನ್ನು ಎತ್ತಿಹಿಡಿದು ಸಾರಿದವರಿವರು.

ಈ ದಿಕ್ಕಿನಲ್ಲಿ, ಪಾಂಡಿತ್ಯ ಪ್ರಕಾಂಡತೆಯ ಅಟ್ಟಹಾಸ ಮಾಡಿದ, 'ಭೂಲೋಕಚಾಪಚುಟ್ಟಿ' ಎಂದು ಮೆರೆದ, ಬೊಬ್ಬಲಿ ಕೇಶವಯ್ಯನಿಗೆ ಪ್ರೌಢಿಮೆಯ ಮತ್ತು ಸಾತ್ತ್ವಿಕತೆಯ ಮೇಲ್ಮೆಯ ಸಂದೇಶ ಗುರ್ತಿಸುವಂತೆ ಶ್ರೀ ಶ್ಯಾಮಶಾಸ್ತ್ರಿಗಳು ಮಾಡಿದುದು ಪ್ರಸಿದ್ಧವಾದ ಸಂಗತಿ.

ಶಾಪಾನುಗ್ರಹ ಶಕ್ತಿಗಳನ್ನು ತಪೋಬಲ, ನಿರಾಡಂಬರ ದೈವಭಕ್ತಿ-ದೈವಾನುಗ್ರಹಗಳಿಂದ ಪಡೆದಿದ್ದವರಾದರೂ, ಈ ಮೂವರು ಮಹಾನುಭಾವರೂ ಸಂಯಮದ ಪ್ರತೀಕಗಳೇ ಆಗಿದ್ದವರು. ತಮ್ಮ ದೇಹಾಂತದ ಸಮಯದ ಬಗ್ಗೆ ಮೂವರೂ ಅರಿತಿದ್ದವರು, ಅಪರೋಕ್ಷ ಜ್ಞಾನಿಗಳು.

ಪತ್ನಿಯ ನಿಧನದ ಆರನೇ ದಿನವೇ, ವ್ಯಯ ಸಂವತ್ಸರದ ಮಕರ ರವಿ ಶುಕ್ಲ ದಶಮಿಯಂದು ಅಂದರೆ 1827ರ ಫೆಬ್ರವರಿ ಒಂದರಂದು ಶ್ರೀ ಕಾಮಾಕ್ಷೀ ದೇವಿಯ ಪಾದಾರವಿಂದಗಳಲ್ಲಿ ಶ್ಯಾಮಶಾಸ್ತ್ರಿಗಳ ಆತ್ಮಲೀನವಾದುದು ಅವರ ಜೀವಿತದ, ದೇಹಾಂತ್ಯದ ವಿಶೇಷ ಸಂಗತಿ. ಶ್ಯಾಮಶಾಸ್ತ್ರಿಗಳ ಇಬ್ಬರು ಪುತ್ರರಲ್ಲಿ ಶ್ರೀ ಪಂಜುಶಾಸ್ತ್ರಿಗಳ ಸಂತತಿಯ ಬಗ್ಗೆ ಸಂಗೀತ ಕ್ಷೇತ್ರದಲ್ಲಿ ಕೇಳಿಬರುವುದಿಲ್ಲ. ಉತ್ತಮ ವಾಗ್ಗೇಯಕಾರರಾಗಿ ಶ್ರೀ ಸುಬ್ಬರಾಯಶಾಸ್ತ್ರಿಗಳ 12 ರಚನೆಗಳು ತಂದೆಯ ರಚನೆಗಳನ್ನು ಹೋಲುವುದಾಗಿ ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿವೆ. ಪಂಜುಶಾಸ್ತ್ರಿಗಳ 3ನೇ ಮಗನೂ ಸುಬ್ಬರಾಯ ಶಾಸ್ತ್ರಿಗಳ ದತ್ತುಪುತ್ರನೂ ಆದ ಅಣ್ಣಾಸ್ವಾಮಿ ಶಾಸ್ತ್ರಿಗಳ 13 ರಚನೆಗಳು ಲಭ್ಯವಿವೆ.

ಶ್ರೀ ಶ್ಯಾಮಶಾಸ್ತ್ರಿಯವರ ಶಿಷ್ಯರೂ ಆದ ಇವರಲ್ಲದೆ, ಪೆರಂಬೂರು ಕೃಷ್ಣ ಅಯ್ಯರ್ ಅಲಸೂರು ಕೃಷ್ಣ ಅಯ್ಯರ್, ದಾಸರಿ ಅಥವಾ ಸಂಗೀತಸ್ವಾಮಿ, ಕಾಮಾಕ್ಷಿ ಅಮ್ಮಾಳ್ ಮತ್ತು ಪಂಚನದ ಅಯ್ಯರ್ ಅವರುಗಳು ಶ್ರೀ ಶಾಸ್ತ್ರಿಗಳ ಶಿಷ್ಯರಾಗಿ ಉಲ್ಲೇಖನೀಯರು. ಸುಬ್ಬರಾಯಶಾಸ್ತ್ರಿಗಳ ಹೊರತು, ಉಳಿದವರನ್ನು, ಶ್ರೀ ಶಾಸ್ತ್ರಿಗಳ ವ್ಯಕ್ತಿತ್ವದ ಮೌಲ್ಯಗಳ, ಸಂಗೀತ ಶೈಲಿಯ, ಅವರ ವಾಗ್ಗೇಯಗಳ ಗಾಢ ಪ್ರಭಾವಕ್ಕೊಳಗಾದವರು, ಪರೋಕ್ಷ ಶಿಷ್ಯರು ಎಂದರೆ ತಪ್ಪಾಗಲಾರದು.

ಶ್ಯಾಮಶಾಸ್ತ್ರಿಯವರ ಪರಂಪರಾ ವಸ್ತು

ಶ್ರೀ ಶ್ಯಾಮಶಾಸ್ತ್ರಿಯವರು ಸಂಗೀತ ಸ್ವಾಮಿ ಯತೀಂದ್ರರ ನೇರ ಶಿಷ್ಯರೂ,

ಪಚ್ಚಿಮಿರಿಯಂ ಆದಿಪ್ಪಯ್ಯನವರ ಪರೋಕ್ಷ ಶಿಷ್ಯರೂ ಆಗಿ ಅವರಿಬ್ಬರ ಪರಂಪರೆಯ ಪ್ರತಿನಿಧಿ ಎಂದಾಯಿತು. ಸಂಗೀತ ಸ್ವಾಮಿಗಳ ಪರಂಪರೆಯ ವಿವರ ಲಭ್ಯವಿಲ್ಲ. ಆದಿಪ್ಪಯ್ಯನವರು ವೀರಭದ್ರಯ್ಯನವರ ಸಂಗೀತ ಲಕ್ಷ್ಯ ಮಾರ್ಗಾನುವರ್ತಿಯೆಂದೂ, ವೀರಭದ್ರಯ್ಯನವರು ಸಂಗೀತದ ಲಕ್ಷ್ಯ ಕ್ಷೇತ್ರದಲ್ಲಿ ಬಹಳ ದೊಡ್ಡ ಚಿಂತಕ -ವಿದ್ವಾಂಸರಾಗಿ, ನಂತರದ ಕರ್ಣಾಟಕ ಸಂಗೀತದ ಲಕ್ಷ್ಯದ ರೂಪುರೇಷೆಗಳ ನಿರ್ಮಾತೃವೂ, ತೆಲುಗು ಭಾಷೆಯ ಅದ್ವಿತೀಯ ಪಂಡಿತರೂ ವಾಗ್ಗೇಯಕಾರರೂ ಆದ ಅವರ ಹೆಚ್ಚಿನ ಖ್ಯಾತಿಗೆ ತಲೆಬಾಗಿ, ಅಂದಿನ ತಂಜಾವೂರಿನ ಮರಾಠ ದೊರೆ ಪ್ರತಾಪಸಿಂಹ ತಾನೇ ಅವರನ್ನು ಸಮೀಪಿಸಿ ತನ್ನ ಆಸ್ಥಾನ ವಿದ್ವಾಂಸರಾಗಿರುವಂತೆ ಪ್ರಾರ್ಥಿಸಿಕೊಂಡು ಅಂತೇ ಗೌರವಿಸಲ್ಪಟ್ಟಮಹಾವ್ಯಕ್ತಿ. ಹೀಗೆ, ವೀರಭದ್ರಯ್ಯನವರ ಸಂಗೀತ ಪರಂಪರೆಗೆ ಪರೋಕ್ಷವಾಗಿ ಸೇರಿದವರು ಶ್ಯಾಮಶಾಸ್ತ್ರಿಗಳು. ಆದರೂ, ಲಭ್ಯವಿರುವ ಶ್ರೀ ಶ್ಯಾಮಶಾಸ್ತ್ರಿಯವರ ವಾಗ್ಗೇಯಗಳ ಲಕ್ಷ್ಯ ವಸ್ತುವನ್ನು ಗಮನಿಸಿದಾಗ, ಅವರು ಮಾತ್ರವೇ ಕೃತಿ ರಚನೆ ಮಾಡಿರುವ ಚಿಂತಾಮಣಿ ರಾಗವನ್ನು ಬಿಟ್ಟರೆ, ಉಳಿದೆಲ್ಲ ರಾಗಗಳ ಸ್ವರೂಪ ದರ್ಶನ ಮತ್ತು ಕೃತಿ ರಚನಾ ಶೈಲಿ ಬಹುತೇಕ ತ್ಯಾಗರಾಜ ರೀತಿಯದೆ ಎಂದು ಹೇಳಬಹುದು. ಕಲ್ಗಡಾ ಇಂಥ ಮತ್ತೊಂದು ರಾಗವಾಗಿ, 'ಪಾರ್ವತಿ ನಿನ್ನುನೇ' ಎಂಬ ಇವರ ಕೃತಿಯಲ್ಲಿ 13ನೇ ಮೇಳಕರ್ತ ಗಾಯಕ ಪ್ರಿಯದ ಜನ್ಯವಾಗಿ 'ಪದ' ಸಾ' ಸಂಚಾರವೇ ಸ್ಪಷ್ಟವಾದರೆ ಶ್ರೀ ತ್ಯಾಗರಾಜರ 'ಸಮಯಮು ಏಮರಕೇ' ಕೃತಿಯಲ್ಲಿ 'ದನಿ' ಸಾ' ಸಂಚಾರದ ಬಳಕೆ ರೂಢಿಯಲ್ಲಿದೆ. ಅಷ್ಟೇ ಅಲ್ಲ, ನಮ್ಮ ಪರಂಪರೆಯಲ್ಲಿ ಹೀಗೆಯೇ' ಎಂಬ ವಾದವನ್ನು ಮುಂದಿಟ್ಟು, ಶ್ಯಾಮಶಾಸ್ತ್ರಿಗಳ 'ಪಾರ್ವತಿ ನಿನ್ನು' ಕೃತಿಯನ್ನು ಚತುಃ ಶ್ರುತಿಧೈವತ ಕೈಶಿಕಿ ನಿಷಾದಗಳ ಬಳಕೆಯೊಂದಿಗೆ ಹಾಡುವ ತಪ್ಪೂ ಸಹ ಲಕ್ಷ್ಯ ಕ್ಷೇತ್ರದಲ್ಲಿ ಜರುಗುತ್ತಿದೆ. 'ಸಮಯಮು' ಕೃತಿಯನ್ನಂತೂ ಮಲಯಮಾರುತ ರಾಗದಲ್ಲೇ ಹಾಡಿ ಬಿಡುತ್ತಾರೆ. ಶಾಸ್ತ್ರಿಗಳು ರಚನೆಗೆ ಆಯ್ಕೆ ಮಾಡಿರುವ ಮತ್ತೊಂದು ಅಪರೂಪದ ರಾಗ ಕರ್ಣಾಟಕ ಕಾಫಿ, ಕೃತಿ ಅಖಿಲಾಂಡೇಶ್ವರಿ. ಇವು ಮಾತ್ರವೇ ಅಪವಾದಗಳಾಗಿ, ಅವರು ಕೃತಿ ರಚನೆಗಾಗಿ ಬಳಸಿರುವ ಸುಮಾರು 34 ರಾಗಗಳಲ್ಲಿ, 71 ರಚನೆಗಳಲ್ಲಿ, ರಾಗಗಳನ್ನು ಬಳಸಿರುವ ರೀತಿ, ಅವುಗಳ ರೂಪಗಳು ತ್ಯಾಗರಾಜರು ಬಳಸಿರುವ ರೀತಿಯ ರೂಪಗಳಿಂದ ವಿಭಿನ್ನವಾಗೇನೂ

ಇಲ್ಲ ಎಂದೇ ಹೇಳಬಹುದು. ಹೀಗೆ, ರಾಗಗಳ ವಿಷಯದಲ್ಲಂತೂ ಪರಂಪರೆಗಳಿಂದಾದ ವಿಭಿನ್ನತೆಗಳು ಕಾಣುವುದಿಲ್ಲ.

ಶ್ರೀ ತ್ಯಾಗರಾಜರ ರಚನಾ ವಸ್ತುವನ್ನೂ ಶ್ರೀ ಶ್ಯಾಮಶಾಸ್ತ್ರಿಯವರ ರಚನಾ ವಸ್ತುವನ್ನೂ ಹೋಲಿಸಿದಾಗ, ವಸ್ತುವಿನ, ಶೈಲಿಯ ವಿಭಿನ್ನತೆ ಪ್ರಧಾನವಾಗಿ ವ್ಯಕ್ತವಾಗುವುದು ಸಾಹಿತ್ಯದ ಓಟದಲ್ಲೇ ಎಂದು ಹೇಳಬಹುದು.

ಶ್ರೀ ಮುದ್ದುಸ್ವಾಮಿ ದೀಕ್ಷಿತರ ವಾಕ್ ಮತ್ತು ಗೇಯಗಳೆರಡರ ಶೈಲಿಯೂ ವಿಭಿನ್ನವಾಗಿ, ಸ್ವತಂತ್ರವಾಗಿ ಎದ್ದು ಕಾಣುವಂಥದು. ಗೇಯದಲ್ಲಿ-ಅಂದರೆ, ರಾಗ ವಸ್ತುವಿನಲ್ಲಿ ಹಾಗೂ ರಾಗಾಭಿವ್ಯಕ್ತಿಯಲ್ಲಿ ಶ್ರೀ ವೇಂಕಟಮಖಿಯವರ ಲಕ್ಷ್ಯ ಮತ್ತು ಲಕ್ಷಣ ಪರಂಪರೆಯ ಮೂಲ ಕಲಾ ಮೌಲ್ಯಗಳ (art values) ನಿಷ್ಠಾಪೂರ್ಣ ಪ್ರತಿಪಾದನೆ ಎಂದೇ ಪ್ರಕಟವಾಗುವಂಥದು ಶ್ರೀ ದೀಕ್ಷಿತರ ರಾಗಗಳ ವಸ್ತು, ಉಪಯೋಗ ಮತ್ತು ಅಭಿವ್ಯಕ್ತಿಗಳು.

ಶ್ರೀ ಶ್ಯಾಮಶಾಸ್ತ್ರಿಗಳ ಲಯ ಪ್ರಾವೀಣ್ಯ

ಶಾಸ್ತ್ರಿಗಳ ವಾಗ್ಗೇಯ ವಸ್ತು, ನಮಗೆ ಲಭ್ಯವಾಗುವಂತೆ, 71 ರಚನೆಗಳಿಗೆ ಮಾತ್ರ ಸೀಮಿತಗೊಂಡರೂ, ರಚನೆಗಳ ವಸ್ತುವಿನ ಗಾತ್ರಚಿಕ್ಕದಾದರೂ, ಗುಣ ದೊಡ್ಡದಾದುದರಿಂದಲೇ, ಗಾತ್ರಗುಣಗಳೆರಡರಲ್ಲೂ ಎಲ್ಲ ಕಾಲಕ್ಕೂ ಹಿರಿತನವನ್ನು ಕೃತಿಯಿಂದ ಸ್ಥಾಪಿಸಿದ ಶ್ರೀ ತ್ಯಾಗರಾಜರ ಮತ್ತು ಶ್ರೀಮುದ್ದುಸ್ವಾಮಿ ದೀಕ್ಷಿತರ ಜತೆಯಲ್ಲೇ ಉಲ್ಲೇಖಿಸಿ, ಇವರಿಬ್ಬರಿಗೂ ಗೌರವಾಸ್ಪದವಾದ ವ್ಯಕ್ತಿತ್ವವಾಗಿದ್ದು, ಮೂವರನ್ನೂ ಸಂಗೀತ ತ್ರಿಮೂರ್ತಿಗಳೆಂಬ ವಿಶಿಷ್ಟ ಸ್ಥಾನದಲ್ಲಿ ನಾವು ಉಲ್ಲೇಖಿಸಿ ಆರಾಧಿಸುವ ಸ್ಥಾನ ಶ್ರೀ ಶ್ಯಾಮಶಾಸ್ತ್ರಿಯವರಿಗೆ.

ಸಂಗೀತ ಸಂಪ್ರದಾಯ ಪ್ರದರ್ಶಿನಿಯಲ್ಲಿ ಶ್ರೀ ಶ್ಯಾಮಶಾಸ್ತ್ರಿಗಳ ಮಹಿಮೆಯನ್ನು ವರ್ಣಿಸಿ ಬರೆಯುವಾಗ ಬ್ರಹ್ಮಶ್ರೀ ಸುಬ್ಬರಾಮದೀಕ್ಷಿತರು, "ನೂಟಿಕಿಪೈನುಂಡುನಿತನಿ ಕೀರ್ತನ ಮುಲನಚ್ಚೊತ್ತುನಪುಡು ಇತನಿಯದ್ಭುತ ಚರಿತ್ರಮುನೆಲ್ಲ ವಿರಿವಿಗಾ ವ್ರಾಸೆದ"-ಎನ್ನುತ್ತಾರೆ. ಅರ್ಥಾತ್ "ನೂರಕ್ಕೆ ಮೇಲಿರುವ ಇವರ ಕೀರ್ತನೆಗಳನ್ನು ಮುದ್ರಿಸುವಾಗ ಇವರ ಅದ್ಭುತ

ಚರಿತ್ರೆಯನ್ನೆಲ್ಲ ವಿವರವಾಗಿ ಬರೆಯುವೆನು" ಎಂಬ ಮಾತಿನಿಂದ ಶ್ರೀ ಶ್ಯಾಮಶಾಸ್ತ್ರಿಗಳು ನೂರಕ್ಕಿಂತ ಹೆಚ್ಚಿನ ರಚನೆಗಳನ್ನು ಮಾಡಿದ್ದುದೂ, ಅವನ್ನೆಲ್ಲಾ ಶ್ರೀ ಮುದ್ದುಸ್ವಾಮಿ ದೀಕ್ಷಿತರ ದತ್ತುಪುತ್ರರಾದ ಶ್ರೀ ಸುಬ್ಬರಾಮದೀಕ್ಷಿತರು ಮುದ್ರಿಸಿ ಪ್ರಕಟಿಸುವ ಉದ್ದೇಶವನ್ನು ಹೊಂದಿದ್ದುದೂ ತಿಳಿದುಬರುತ್ತದೆ. ಅಷ್ಟೇ ಅಲ್ಲ, ಶ್ರೀ ಶ್ಯಾಮಶಾಸ್ತ್ರಿಗಳ ಪಾಂಡಿತ್ಯವನ್ನು ಕೊಂಡಾಡುವ ಸಂದರ್ಭದಲ್ಲಿ "ಇವರ ಗೇಯ ಬಂಧಗಳು ಅತೀತಾನಾಗತಗ್ರಹ ಚಮತ್ಕಾರಗಳೊಂದಿಗೆ ನಾರಿಕೇಳಪಾಕ ರೀತಿಯಲ್ಲಿರುವುದರಿಂದ, ಗಾಯಕರಲ್ಲಿ ಕೆಲವು ಸೋಮಾರಿಗಳು ರಂಜನೆಯನ್ನು (ಇಂಥ ಕೃತಿಗಳಿಂದ) ತರಲು ಸಾಮರ್ಥ್ಯವಿಲ್ಲದೆ, ಈ ಕೃತಿಗಳು ಕ್ಲಿಷ್ಟವಾದವೆಂದು ಹೇಳುತ್ತಿದ್ದಾರೆ" ಎಂಬ ವ್ಯಥೆ, ನಿರಾಶೆಗಳನ್ನೂ, ಶ್ರೀ ಶಾಸ್ತ್ರಿಗಳ ವಾಗ್ಗೇಯ ವಸ್ತುವಿನ ಬಗ್ಗೆ ಹೆಚ್ಚಿನ ಗೌರವವನ್ನೂ ವ್ಯಕ್ತಪಡಿಸುತ್ತಾರೆ.

ಶ್ಯಾಮಶಾಸ್ತ್ರಿಗಳು ಲಯಪಟು, ಅಸಾಮಾನ್ಯ ಲಯಪ್ರಭುತ್ವ ಸಾಧಿಸಿದ್ದವರು, ಅವರ ಆ ವಿಶೇಷ ಪ್ರತಿಭೆ ಅವರ ರಚನೆಗಳಲ್ಲಿ ಎದ್ದು ಕಾಣುತ್ತವೆ ಎಂಬಂಥ, ತ್ರಿಮೂರ್ತಿಗಳಲ್ಲಿ ಉಳಿದಿಬ್ಬರಲ್ಲಿ ಗುರ್ತಿಸದ, ಅಭಿಪ್ರಾಯಗಳಿಗೆ, ಅವರ ರಚನೆಗಳಲ್ಲಿ ಲಭ್ಯವಿರುವ ವಸ್ತುವಿಗಿಂತಲೂ, ಶರಭನಂದನ ಸಿಂಹನಂದನಗಳಂಥ ಸಂಕೀರ್ಣವಾದ ದೇಶೀ ತಾಳಗಳಲ್ಲಿ ಪ್ರೌಢವಾಗಿ ಪಲ್ಲವಿ ಗಾಯನ ಮಾಡಿ ಬೊಬ್ಬಿಲಿಕೇಶವಯ್ಯನಂಥ ಅಸಮಾನ ಪಾಂಡಿತ್ಯಕ್ಕೇಂದೇ ಖ್ಯಾತನಾಮನನ್ನು ಅನಪೇಕ್ಷಿತ ಸ್ಪರ್ಧೆಯಲ್ಲಿ ಸೋಲಿಸಿ ತಂಜಾವೂರಿನ ಮತ್ತು ರಾಜರ ಆಸ್ಥಾನದ ಗೌರವವನ್ನು ಕಾಪಾಡಿದ ಪಾಂಡಿತ್ಯದ ಉಲ್ಲೇಖಗಳ ಒತ್ತೇ ಹೆಚ್ಚಿನ ಮಹತ್ವವನ್ನು ತಳೆದು ಕಾರಣವಾಗಿದೆ ಎನಿಸುತ್ತದೆ, ಚಿಂತನ - ವಿಶ್ಲೇಷಣಗಳಿಂದ ಗಮನಿಸಿದಾಗ, ಮತ್ತು ಅದೇ ಅವರ ಪಾಂಡಿತ್ಯವನ್ನು ಕೊಂಡಾಡುವುದಕ್ಕೆ ನ್ಯಾಯವಾದ ವಸ್ತುವೂ ಸಹ.

ಹಲವೊಮ್ಮೆ, ದೊಡ್ಡವರ ವ್ಯಕ್ತಿತ್ವ ವರ್ಣನೆಯ ಅಥವಾ ಸಾಧನೆಗಳ ಬಗ್ಗೆ ಅತಿ ಪ್ರಸಿದ್ಧಿ ಪಡೆದವರೊಬ್ಬರು ಅವರಿಗೆ ತೋರಿದ ಒಂದು ಶ್ಲಾಘನೆಯ ಮಾತು, ಅವರು ಅತಿ ಪ್ರಸಿದ್ಧರೆಂಬುದೇ ಕಾರಣವಾಗಿಬಿಟ್ಟು, ಎಲ್ಲರಿಗೂ ಉಲ್ಲೇಖನೀಯವಾಗಿಬಿಟ್ಟು ಒಂದು (Cliche) 'ಕ್ಲೀಶೇ' ಆಗಿಬಿಡುತ್ತದೆ. ಸಂಗೀತ ತ್ರಿಮೂರ್ತಿಗಳಲ್ಲಿ ಪ್ರತಿಯೊಬ್ಬರ ವಿಷಯದಲ್ಲೂ ಇಂಥ ಹಲವು 'ಕ್ಲೀಶೇ'ಗಳು

ಚಲಾವಣೆಗೆ ಬಂದುಬಿಟ್ಟಿವೆ. ಶ್ರೀ ಶ್ಯಾಮಶಾಸ್ತ್ರಿಗಳ ವಾಗ್ಗೇಯ ವಸ್ತುವೂ ಇಂಥ ಕ್ಲೀಶ್ಲೇಗಳಿಗೆ ಹೊರತಾದುದಲ್ಲ.

ಶ್ರೀ ಶ್ಯಾಮಶಾಸ್ತ್ರಿಗಳ ಲಯದಲ್ಲಿನ-ತಾಳದಲ್ಲಿನ ಪಾಂಡಿತ್ಯವನ್ನು ಗೌರವದಿಂದ ವರ್ಣಿಸುವಾಗ, ವಿಳಂಬ ಗತಿಯಲ್ಲಿ ಅವರಿಗಿದ್ದ ಒಲವು-ಪ್ರಭುತ್ವ, ಕೃತಿಗಳ ಸಾಹಿತ್ಯದ ನಡುವೆ ತ್ರಿಶ್ರ, ಖಂಡ, ಮಿಶ್ರ ಜತಿಗಳ ಬಂಧದಲ್ಲೇ ಪದಪುಂಜಗಳ ರಚನೆ, ಹೆಚ್ಚು ಬಳಕೆಯಲ್ಲಿದ್ದು ಸೌಲಭ್ಯದ ಆಕರ್ಷಣೆಯನ್ನೊದಗಿಸುವ ಆದಿ, ರೂಪಕ, ಮಿಶ್ರ ಛಾಪು, ತಾಳಗಳಲ್ಲದೆ, ಮಿಶ್ರಝಂಪೆ, ತ್ರಿಶ್ರ ಮಠ್ಯ, ಖಂಡಮಠ್ಯ, ಖಂಡ ಅಟ್ಟ, ಖಂಡ ಝಂಪೆ, ಚತುರಶ್ರ ಅಟ್ಟ, ತ್ರಿಶ್ರಗತಿಯ ಆದಿತಾಳ-ಈ ತಾಳಗಳಲ್ಲೂ ರಚನೆಗಳನ್ನು ನೀಡಿದ್ದಾರೆಂಬುದೂ, ಮಿಶ್ರಛಾಪಿನಲ್ಲಿ ತಕಿಟ-ತಕಧಿನ ರೂಪದ ಜತೆಗೆ ತಕಧಿನ-ತಕಟ ಎಂಬ ವಿಲೋಮಛಾಪು ತಾಳದಲ್ಲಿ ನಾಲ್ಕು ಕೃತಿಗಳನ್ನು ನೀಡಿದ್ದಾರೆಂಬುದೂ ಈ ಕ್ಲೀಶೆಗಳು.

ಮಹಾತೇಜಸ್ವಿಗಳೂ, ಭವ್ಯವಾದ ಎತ್ತರವಾದ ನಿಲುವಿನ, ಮಡಿ ಮಡಿಯಾದ ಜರಿವಸ್ತ್ರಗಳ ವೈದಿಕ ಶ್ರೋತ್ರಿಯರ ಉಡುಪಿನ ಆಕರ್ಷಕ ವ್ಯಕ್ತಿಯಾಗಿದ್ದರೆಂಬ ವರ್ಣನೆಗೆ ಪಾತ್ರರೂ ಆದ ಶ್ರೀ ಶ್ಯಾಮಶಾಸ್ತ್ರಿಗಳ ವ್ಯಕ್ತಿತ್ವದ ಎತ್ತರವನ್ನೂ, ಅದರ ಮಹತ್ವ-ಗಾಢತೆ-ಗಹನತೆಗಳಿಗೆ ಮೂಲ ಪ್ರೇರಣೆಯಾದ ಆಧ್ಯಾತ್ಮಿಕತೆಯ, ಮತ್ತು ಕಂಚೀಪುರದ ಶ್ರೀ ಕಾಮಾಕ್ಷೀದೇವಿಯಲ್ಲಿ ಅವರು ತಳೆದಿದ್ದ ಅನನ್ಯ ಭಕ್ತಿಪಾರಮ್ಯ ನೈಕಟ್ಯಗಳ, ವಿಶೇಷವಾಗಿ ಶ್ರೀಮಾತೆ ಕಾಮಾಕ್ಷೀ ದೇವಿಯಲ್ಲಿ ನಿಜವಾದ ತಾಯಿಯ-ಮಗುವಿನ ಅತ್ಯಂತ ಅವಿನಾ ಸಂಬಂಧದ ಹಿನ್ನೆಲೆಯಲ್ಲಿ ಶ್ಯಾಮಶಾಸ್ತ್ರಿಗಳ ಉಲ್ಲೇಖಿತ ರಚನಾ ವೈಶಿಷ್ಟ್ಯಗಳೆಂಬ ಅಂಶಗಳು ಮಸುಕಾಗುತ್ತವೆ.

ಹಲವು ಜನರು ಸಾಧಿಸಲಾಗದುದನ್ನು ಅಥವಾ ಶೈಲಿಯನ್ನು, ವಿವರಣೆಯ ಅವಶ್ಯಕತೆ ಇಲ್ಲದೆ ಅದು ಇಂಥವರದೇ ಎಂದು ತಕ್ಷಣದಲ್ಲಿ ಗುರ್ತಿಸಲು ಆಸ್ಪದವಿದ್ದರೆ ಅಂಥ ಸಾಧನೆಗಳನ್ನು "ವಿಶಿಷ್ಟ" ಎಂದು ವರ್ಣಿಸಲು ಬರುತ್ತದೆ. ಸಿಂಹನಂದನ-ಶರಭನಂದನಗಳಂಥ ಸಂಕೀರ್ಣತಮ ಮತ್ತು ಜಟಿಲ ದೇಶೀ ತಾಳಗಳಲ್ಲಿ ಪಲ್ಲವಿಗಳನ್ನು ರಚಿಸಿ, ಅದೊಂದು ಬೌದ್ಧಿಕ ಕಸರತ್ತಾಗಿ ಮಾತ್ರ

ಉಳಿಯದೆ ಆಹ್ಲಾದದಾಯಕವಾಗಿಯೂ ಇರುವಂತೆ ಹಾಡುವುದು ಎಂಬುದು ವಿಶಿಷ್ಟ ಸಾಧನೆಯಾಗಿ ಉಲ್ಲೇಖಿಸಲು ಬರುವಂಥ ಸಾಧನೆ. ಏಕೆ ಎಂದರೆ, ಇಂಥ ವಸ್ತುವಿನ ನಿರೂಪಕರ ಬುದ್ಧಿಯಲ್ಲಿ ಅಸಾಧಾರಣವಾದ ಸ್ಮರಣ, ಧಾರಣ, ಅವಧಾನಗಳ ಸಾಮರ್ಥ್ಯವೂ, ಜತೆಯಲ್ಲೇ ಕಲಾತ್ಮಕತೆಯೂ ಅಪೇಕ್ಷಿತವಾಗಿರುತ್ತದೆ. ನೂರಾರು ಗಾಯಕರಲ್ಲೊಬ್ಬರಲ್ಲಿ ಹುದುಗಿದ್ದು ಅಭಿವ್ಯಕ್ತವಾಗುವಂಥದು ಇಂಥ ಸಾಮರ್ಥ್ಯ.

ಶ್ರೀ ಶ್ಯಾಮಶಾಸ್ತ್ರಿಯವರಲ್ಲಿ ಇಂಥ ಅಸಾಧರಣ ಸಾಮರ್ಥ್ಯವಿದ್ದುದರಿಂದ ಲಯದಲ್ಲಿ, ತಾಳದಲ್ಲಿ ಅವರದು ಅಸಾಧಾರಣ ಪ್ರತಿಭೆ ಎಂದು ವಿಶೇಷ ಉಲ್ಲೇಖ-ಗೌರವಗಳ ಸಮರ್ಪಣೆಗಳಿಗೆ ಅರ್ಥವಿದೆ. ಕೃತಿಯ ಸಾಹಿತ್ಯ ಪ್ರಾರಂಭವಾದೊಡನೆಯೇ ಇದು ಶ್ಯಾಮಶಾಸ್ತ್ರಿಗಳ ಕೃತಿ ಎಂದುಗುರ್ತಿಸಬಹುದಾದ ವಿಶಿಷ್ಟ, ಭಾವುಕ ಶೈಲಿ ಮತ್ತು ಶ್ರೀ ಕಾಮಾಕ್ಷೀ ದೇವಿಯಲ್ಲಿನ ಅನನ್ಯ ನೈಕಟ್ಯದ ಅಭಿವ್ಯಕ್ತಿ ಇವುಗಳೂ, ಶ್ರೀ ಶ್ಯಾಮಶಾಸ್ತ್ರಿಗಳದೇ ಆದ ವಿಶಿಷ್ಟತೆಗಳೆಂದು ಅವರನ್ನು ಪ್ರತ್ಯೇಕಿಸಿ ಗೌರವಿಸುವ, ಭಕ್ತಿ ತೋರುವ ಪ್ರೇರಣೆಯ ಅಂಶಗಳೇ, ಅರ್ಥಪೂರ್ಣವಾದವೇ.

ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳ ಸಾಹಿತ್ಯದಲ್ಲಿ ತ್ರಿಶ್ರ, ಖಂಡ, ಮಿಶ್ರಾದಿ ಜತಿಗಳ ಬಂಧದಲ್ಲೇ ಅನುದಿನಮು, ಗತಿಯನುಚು, ದುರುಸುಗನು, ಕೃಪಸಲುಪು ಎಂಬಂಥ ಪದಪುಂಜಗಳು ಬಹಳಷ್ಟು ದೊರೆಯುತ್ತವೆ. ಇವು ಅವರ ಲಯ ಪ್ರತಿಭೆಯನ್ನು ಪ್ರದರ್ಶಿಸುವ ಅಂಶಗಳು ಎಂಬ ಕ್ಲೀಶೆಯ ಬಗ್ಗೆ ಒಂದು ಮಾತು.

ಜತಿಗಳ ಬಂಧದಲ್ಲಿ ಸಾಹಿತ್ಯದಲ್ಲಿನ ಪದಪುಂಜಗಳು, ಸಂದರ್ಭ ಬಂದಾಗ ಯಾವುದೇ ಮಹಾವಾಗ್ಗೇಯಕಾರರಿಗೆ ಸಾಹಿತ್ಯವು ಮನೋಧರ್ಮದಲ್ಲಿ ಪ್ರಕೃತ ವಾಗ್ಗೇಯದಲ್ಲಿ ಓಡುವಾಗ ಜತಿಗಳ ಲಯಗಳಲ್ಲಿ ಪದಜೋಡಣೆ ಒಂದು ಆಕರ್ಷಣೆಯೇ ಎಂದು, ಸಣ್ಣವನಾದ ನಾನೇ ವಾಗ್ಗೇಯಕಾರನ ಅನುಭವವಾಗಿ ಹೇಳಬಲ್ಲೆನೆಂದ ಮೇಲೆ, ಸಂಗೀತ ತ್ರಿಮೂರ್ತಿಗಳ ಮೂವರ ರಚನೆಗಳ ಸಾಹಿತ್ಯ ಬಂಧಗಳಲ್ಲೂ ಇಂಥ ಜತಿ ಲಯದ ಹತ್ತು ಹಲವು ಪದಪುಂಜಗಳು ನಮ್ಮನ್ನು ಆಕರ್ಷಿಸುವಂತೆಯೇ, ಶ್ಯಾಮಶಾಸ್ತ್ರಿಯವರಿಗೇ ವಿಶಿಷ್ಟವಾದ ಸಾಹಿತ್ಯದ ಲಯದಲ್ಲಿ ಜತಿಗಳ ಲಯ ಅಲ್ಲಲ್ಲಿ ಇರುವುದು ಸ್ವಾಭಾವಿಕ ಮಾತ್ರವೇ.

ಇನ್ನು, ರಚನಾ ಸೌಲಭ್ಯವನ್ನೂ, ಅದಕ್ಕಿಂತಲೂ, ತಮ್ಮ ಕೃತಿಗಳ ನಿರೂಪಕರ ಸಾಮರ್ಥ್ಯಗಳನ್ನೂ, ಅವಲಂಬಿಸಿ, ತ್ರಿಮೂರ್ತಿಗಳೂ ಸೇರಿದಂತೆ ಎಲ್ಲ ವಾಗ್ಗೇಯಕಾರರ ರಚನೆಗಳಲ್ಲಿನ ರಚನಾ ಮನೋಧರ್ಮವೂ ಬಹುತೇಕ ಆದಿ, ರೂಪಕ, ಏಕ, ತ್ರಿಪುಟ, ಮಿಶ್ರ ಛಾಪು, ಖಂಡ ಛಾಪು, ಝಂಪೆ ತಾಳಗಳಲ್ಲಿ ಲೀಲಾಜಾಲವಾಗಿ ಓಡಿದೆಯೆಂಬುದು, ಪುರಂದರ ದಾಸರ ಕಾಲದಿಂದ ತ್ರಿಮೂರ್ತಿಗಳ ಕಾಲಕ್ಕೆ, ಅವರ ನಂತರದ ಕಾಲದ ವಾಗ್ಗೇಯಕಾರರವರೆಗೂ ಮೇಲೆದ್ದು ಕಾಣುವ ಅಂಶ. ಎಲ್ಲರೂ ಉಳಿದ ಕೆಲವು ಸೂಳಾದಿ ತಾಳಗಳಲ್ಲೂ ರಚನೆಗಳನ್ನು ನೀಡಿರುವುದು ಗಮನಕ್ಕೆ ಬರುವ ಅಂಶವೇ. ಶ್ಯಾಮಶಾಸ್ತ್ರಿಗಳ ಈ ಚಿಂತನೆ ಸಹಜವಾದುದೇ, ತ್ರಿಮೂರ್ತಿಗಳೆಲ್ಲರಿಗೂ (in common to others) ಸಾಧಾರಣವಾದುದೇ.

ವಿಳಂಬಕಾಲದ ಕೃತಿ ರಚನೆಯ ವಿಷಯವನ್ನು ಚರ್ಚಿಸಿದರೆ, ಕರ್ಣಾಟಕ ಸಂಗೀತವು ಪಂಚದಶಗಮಕಗಳ ಸ್ವರಾಲಂಕರಣ ಪ್ರಕ್ರಿಯೆಯಿಂದಲೇ ರಾಗಗಳು ತಮ್ಮ ತಮ್ಮ ಸೌಂದರ್ಯಾತಿಶಯವನ್ನು ವ್ಯಕ್ತಪಡಿಸುವುದರಿಂದ, ಇದಕ್ಕಾಗಿ ಕೃತಿಗಳ ಗತಿ ವಿಳಂಬವಾಗಿ ಇರುವುದು ಸ್ವಾಭಾವಿಕವೂ ಅವಶ್ಯಕವೂ ಆದುದರಿಂದ, ಎಲ್ಲ ವಾಗ್ಗೇಯಕಾರರ ಕೃತಿಗಳಲ್ಲೂ ವಿಳಂಬ ಕಾಲದ ಕೃತಿಗಳ ಪ್ರಾಬಲ್ಯ ಪ್ರಾಧಾನ್ಯಗಳು ಸಹಜವಾದುದು. ಸಂಗೀತದಲ್ಲಿನ ಸುಖ ದೊರೆಯುವುದು ವಿಳಂಬದಲ್ಲಿ, ಮಧ್ಯ ಗತಿಯಲ್ಲಿ. ದ್ರುತಗತಿಯಲ್ಲಿ ಹೆಚ್ಚು ಕೃತಿಗಳು ಲಭ್ಯವಿಲ್ಲವೆಂಬುದೇ ಮಹಾ ವಾಗ್ಗೇಯಕಾರರೆಲ್ಲರೂ ನಮ್ಮ ಸಂಗೀತದಲ್ಲಿನ ಸುಖ ಎಲ್ಲಿಂದ, ಹೇಗೆ ದೊರೆಯುತ್ತದೆ ಎಂಬುದನ್ನು ಅರಿತು ಅಭಿವ್ಯಕ್ತಿಗೊಳಿಸಿರುವುದಕ್ಕೆ ಸಾಕ್ಷಿ. ಸಂಗೀತದಲ್ಲಿನ ದ್ರುತಗತಿಯ ಓಟ, ಉದ್ವೇಗ ಪ್ರಚೋದಕವಾದುದಾಗಬಹುದಲ್ಲದೆ (Thrilling, Exciting) ಸುಖಪ್ರದವಾಗಲಾರದಲ್ಲವೆ? ತಮ್ಮ ಸಮಕಾಲೀನರಾದ ಮಹಾ ವಾಗ್ಗೇಯಕಾರಂತೆಯೇ ಇದೆ ಶ್ಯಾಮಶಾಸ್ತ್ರಿಗಳ ವಿಳಂಬದ ಸಹಜವಾದ ಒಲವೂ ಮತ್ತು ಅದರ ಮದಗಜಗಮನಗಾಂಭೀರ್ಯವೂ.

ನಂತರ, ಮಿಕ್ಕೆಲ್ಲಕ್ಕಿಂತಲೂ ಬಹೂಕ್ತಿಯಾಗಿರುವ ವಿಲೋಮಛಾಪು ತಾಳಬಂಧದಲ್ಲಿ ನಾಲ್ಕು ಕೃತಿಗಳನ್ನು ರಚಿಸಿರುವುದರಿಂದ ತಾಳದಲ್ಲಿ ಅಪ್ರತಿಮ

ಪಾಂಡಿತ್ಯವನ್ನು ಪ್ರದರ್ಶಿಸಿದ್ದಾರೆ ಶ್ಯಾಮಶಾಸ್ತ್ರಿಗಳು ಎನ್ನುವ, ಕ್ಲೀಶೆಯ ವಿಶ್ಲೇಷಣೆ ಮಾಡುವುದು ಪ್ರಸಕ್ತವೆನಿಸುತ್ತದೆ. ಮಿಶ್ರಛಾಪೆಂಬುದೇ ತ್ರಿಶ್ರ ತ್ರಿಪುಟ ತಾಳದ ಛಾಪು ರೂಪಾಂತರ. ವಾಸ್ತವವಾಗಿ ಲಯಾಂತರ. ತ್ರಿಶ್ರ ತ್ರಿಪುಟ ತಾಳವಾಗಿ ಬಳಸುವಾಗ ತ್ರಿಶ್ರ ಲಘುವಿನ ಮೂರು ಎಣಿಕೆಗಳನ್ನು ಬೆರಳುಗಳಲ್ಲಿ ಸೂಚಿಸಿ ನಂತರದ ಎರಡು ದ್ರುತಗಳನ್ನು ಹಾಕಿ ಅಗಲವಾದ ಹಂದರದಲ್ಲಿ ಈ ತಾಳದಲ್ಲಿ ರಚನೆಯ ಸಮರ್ಪಣೆ ಆವರ್ತಕ್ಕೆ ಏಳು ಎಣಿಕೆಗಳಲ್ಲಿ ನಡೆದಿರುತ್ತದೆ. ಇಂಥದು ಬಹುತೇಕ ವಿಳಂಬ ಕಾಲದ ರಚನೆಯಾಗಿರುತ್ತದೆ. ಇದೇ ಏಳು ಎಣಿಕೆಗಳ ಅಗಲವನ್ನು ಹ್ರಸ್ವಗೊಳಿಸಿ, ಪುರಂದರದಾಸಾದಿ ಹರಿದಾಸರು ಸಾಹಿತ್ಯ ಸಂವಹನದ ಮುಖ್ಯತೆಯನ್ನು ಗಮನದಲ್ಲಿಟ್ಟು ಈ ತಾಳದ ಲಘುವಿಗೆ ಒಂದು ಘಾತ, ಎರಡು ದ್ರುತಗಳಿಗೂ ಒಂದೊಂದು ಘಾತದ ಲೆಕ್ಕದಲ್ಲಿ ಏಳು ಎಣಿಕೆಗಳ ಈ ತಾಳವನ್ನು 3 ಘಾತಗಳಲ್ಲಿ ನಿರೂಪಿಸುವ ಪದ್ಧತಿಯಲ್ಲಿನ ಈ ತಾಳದ ಹೆಸರೇ ಮಿಶ್ರ ಛಾಪು. ಸಾಹಿತ್ಯಬಂಧವನ್ನು ಅವಲಂಬಿಸಿ, ದಾಸರ ಪದಗಳಲ್ಲೇ ಮಿಶ್ರಛಾಪು ಬಳಕೆಯ ಲಯದಲ್ಲಿ ವೈವಿಧ್ಯವಿದೆ. ಇನ್ನು ವಾಕ್ಕಿಗೂ ಗೇಯಕ್ಕೂ ಸಮಾನ ಮೌಲ್ಯ, ಮುಖ್ಯತೆ, ಸ್ಥಾನಗಳು ದೊರೆತ ಕೃತಿ ಇತ್ಯಾದಿ ರಚನೆಗಳಲ್ಲಂತೂ ಮತ್ತಷ್ಟು ಲಯ ವೈವಿಧ್ಯವನ್ನು ಕಾಣುತ್ತೇವೆ. ಹ್ರಸ್ವವಾಗಿ ಕೆಲವು ಉದಾಹರಣೆಗಳನ್ನು ಪರಿಶೀಲಿಸೋಣ:

ತ್ರಿಪುಟ ತಾಳ : ಬೃಹಸ್ಪತೇ (ದೀ) ಅವ್ಯಾಜ ಕರುಣಾಕಟಾಕ್ಷಿ,(ದೀ) ಲಲಿತೇ ಸುರಮಹಿತೇ.(ರಾವಿ) ನೀಲಾಯತಾಕ್ಷಿ (ಶ್ಯಾ).

ಮಿಶ್ರಛಾಪು : ನಂಬಿ ಕೆಟ್ಟವರಿಲ್ಲವೋ (ಪು.ದಾ) ಕೆರೆಯ ನೀರನು ಕೆರೆಗೆ ಚೆಲ್ಲಿ(ಪು.ದಾ). ಅಂತ ರಂಗದಲಿ (ವ್ಯಾ).

ಮಿಶ್ರಛಾಪು ಕೃತಿಗಳು : ಸರಸ್ವತ್ಯಾಭಗವತ್ಯಾ, (ದೀ), ಮಾಮವಪಟ್ಟಾಭಿರಾಮ (ದೀ) ಅಕ್ಷಯಲಿಂಗ ವಿಭೋ (ದೀ) ನಿಧಿಚಾಲಾಸುಖಮಾ (ತ್ಯಾ), ಮರಿವೇರೆಗತಿ ಎವರಮ್ಮಾ (ಶ್ಯಾ) ಮೀನಲೋಚನ (ಧನ್ಯಾಸಿ), 'ಕಾಮಾಕ್ಷಿ' ಸ್ವರಜತಿಗಳು, ನಿನ್ನೇನಮ್ಮಿನಾನು (ತೋಡಿ) (ಶ್ಯಾ).....

ವಿಲೋಮ ಛಾಪು ಎಂಬುದು ಈಗ ನಿರೂಪಿಸಿದ ಛಾಪುರೂಪದ ಹಿಂದೆ ಮುಂದಾದ ರೂಪಾಂತರ. ಅಂದರೆ 3 + 2 + 2 ಅಥವಾ 3 + 4 ಎಂಬ

ಘಾತದ ಅನುಕ್ರಮದ ಬದಲು 4 ಅಥವಾ 2 + 2 ಎಣಿಕೆಗಳ ಘಾತದಿಂದಲೇ ತಾಳ ಪ್ರಾರಂಭವಾಗಿ ಮೂರು ಎಣಿಕೆಗಳ ಲಘುವಿನ ಘಾತ ನಂತರ ಹಾಕುವುದು, ಒಟ್ಟಿನಲ್ಲಿ ತಾಳದ ಎಣಿಕೆಗಳು ಏಳೇ ಇರುವುದು. ಈ ರೂಪಾಂತರದಲ್ಲಿ ಶ್ಯಾಮಶಾಸ್ತ್ರಿಗಳು ನಾಲ್ಕು ಕೃತಿಗಳನ್ನು ರಚಿಸಿದ್ದಾರೆ ಎನ್ನುವದು ಪ್ರಸಕ್ತ ವಿಶ್ಲೇಷಣಾ ವಸ್ತು. ಇವೇ ಪೂರ್ವಿಕಲ್ಯಾಣಿ ರಾಗದಲ್ಲಿನ 'ನಿನ್ನು ವಿನಾಗಾ ಮರಿ ದಿಕ್ಕೆವರು ನ್ನಾರು' ಮತ್ತು ಕಲ್ಯಾಣಿ ರಾಗದಲ್ಲಿನ 'ತಲ್ಲಿ ನಿನ್ನು ನೆರನಮ್ಮಿನಾನು ವಿನವೇ' ಎಂದಾರಂಭಿಸುವ ಕೃತಿಗಳು. 3. 'ನನ್ನುಬ್ರೋವು ಲಲಿತಾ-ರಾಗ ಲಲಿತಾ. 4. ಪುರಹರಜಾಯೆ-ಗೌಳೀಪಂತು.

ಝೋಂಪಟಛಾಪು, ರೂಪಕ ಛಾಪು ಮತ್ತು ಖಂಡಛಾಪುಗಳು ಬಳಕೆಯಲ್ಲಿರುವ ಹಿನ್ನೆಲೆಯಲ್ಲಿ ಮಿಶ್ರಛಾಪಿನ ಈ ರೂಪಾಂತರವನ್ನು 'ವಿಲೋಮ ಛಾಪು' ಎಂದಷ್ಟೇ ಹೆಸರಿಸಿದೆ. 'ವಿಲೋಮ ಮಿಶ್ರಛಾಪು' ಎಂದು ಉಲ್ಲೇಖಿಸುವುದು ತಾರ್ಕಿಕವಾಗಿ ಸರಿ ಎಂದು ನನ್ನ ಅನಿಸಿಕೆ.

ತ್ರಿಶ್ರತ್ರಿಪುಟ ರೂಪವುಳ್ಳ ತಾಳದಲ್ಲಿ ಹನ್ನೆರಡು (12) ಮತ್ತು ಮಿಶ್ರಛಾಪು ರೂಪವುಳ್ಳ ತಾಳದಲ್ಲಿ ಹದಿನಾರು (16) ಸುಂದರ, ವಿದ್ವಜ್ಜನ ಮಾನ್ಯವಾದ ಕೃತಿಗಳನ್ನು ನೀಡಿದ ಶ್ಯಾಮಶಾಸ್ತ್ರಿಗಳು ಏಳು ಎಣಿಕೆಗಳದೇ ಆದ ಈ ವಿಲೋಮ ಮಿಶ್ರಛಾಪು ತಾಳದಲ್ಲಿ ನಾಲ್ಕೇ (4) ರಚನೆಗಳನ್ನು ಒಂದು ಪ್ರಯೋಗದ ಮನೋವಿಜ್ಞಾನದಲ್ಲಿ ರಚಿಸಿದ್ದಾರೆ, ಲಯ ಪ್ರಭುತ್ವ ಪ್ರಕಾಶಕವಾಗಿ ಅಲ್ಲ ಎಂಬುದು ಮೇಲೇ ಕಾಣುವ ಸಂಗತಿಗೆ ಸಾಕ್ಷಿ. ಸಂಗೀತ ಕಲೆಯ ಸಂಪ್ರದಾಯದಲ್ಲಿ ದತ್ತವಾದ ಸೂಳಾದಿ ತಾಳಗಳಲ್ಲಿ ದ್ರುತದಿಂದ ಆರಂಭಿಸುವುದು ರೂಪಕ ತಾಳವೊಂದೇ. ಅವಕಾಶವಿರುವ ಮತ್ತೊಂದು ತಾಳವನ್ನೂ ದ್ರುತದಿಂದಲೇ ಆರಂಭಿಸಿದರೆ ಅಂಥ ಮಿಶ್ರಛಾಪು ತಾಳದಲ್ಲಿ ರಚಿತವಾದ ಕೃತಿಯ ಹಂದರ, ಲಯ ಸೌಂದರ್ಯ, ಕೃತಿಯ ಒಟ್ಟಾರೆ ಸೌಂದರ್ಯ ಹೇಗಿರಬಹುದು ಎಂಬ ಕುತೂಹಲ ಪ್ರೇರಿತವಾಗಿರಬಹುದಾದುದು ಈ ಪ್ರಯೋಗ.

ಮೇಲಾಗಿ, 3 + 4 ಎನ್ನುವುದು ಏಳು ಎಣಿಕೆಗಳ, ಶತಮಾನಗಳ ಕಾಲದಷ್ಟು ಬುದ್ಧಿಗೆ ರೂಢಿಯಾಗಿರುವ, ಹಂದರ, ಇದು ಅದಲು ಬದಲಾದರೆ ಬುದ್ಧಿ ತಕ್ಷಣವೇ ಗ್ರಹಿಸಲಾರದಷ್ಟು ಜಟಿಲವಲ್ಲದ ವಿಷಯವಿದು. ಮಾನ್ಯ ಓದುಗರಲ್ಲಿ

ತಮ್ಮಲ್ಲಿ ಹಲವಾರು ಮಂದಿ ಸಂಗೀತ ಬೋಧಕರಾಗಿದ್ದೀರಿ, ವಿದ್ವಾಂಸ, ವಿದುಷಿಯರಿದ್ದೀರಿ. ತಮ್ಮಲ್ಲಿ ಕಲಿಯುವವರಿಗೆ ಅಲಂಕಾರಗಳ ಅಭ್ಯಾಸ ಗಾನದಲ್ಲಿ ತ್ರಿಪುಟ ತಾಳದ ಅಲಂಕಾರವನ್ನು 'ಸರಿಗ ಸರಿ ಗಮ' ಎನ್ನುವ ಬದಲು 'ಸರಿ | ಗಮ | ರಿಗಮ || etc' ಎಂಬಂತೆ ಬೋಧಿಸಿ ನೋಡಿ. ಆ ಹಂದರವನ್ನೂ ವಿದ್ಯಾರ್ಥಿಗಳು ತಕ್ಷಣವೇ ಗ್ರಹಿಸಿ ಹಾಡಬಲ್ಲರೆಂಬುದು ನಿಮ್ಮ ಅನುಭವಕ್ಕೆ ಬರುವಷ್ಟು ಸರಳವಾದುದು ಈ ವಿಷಯ. ಅಭ್ಯಾಸಾನುಸಾರಿಣೀ ವಿದ್ಯಾ ಅಲ್ಲವೇ?

ಶ್ರೀ ಶ್ಯಾಮಶಾಸ್ತ್ರಿಗಳ, ತಾಳದಲ್ಲಿನ, ವಾಗ್ಗೇಯಗಳಲ್ಲಿನ, ಸಾಹಿತ್ಯದಲ್ಲಿನ ವೈಶಿಷ್ಟ್ಯಗಳ ಬಗೆಗೆ ಹಲವರ ದೃಷ್ಟಿ ವಿಷಯ ಮಂಡನೆಗಳಲ್ಲಿ ಬಹೂಕ್ತಿ, ಪುನರುಕ್ತಿಗಳ, ಅಂದರೆ ಕ್ಲೀಶೇಗಳ ಕುರಿತ ಈ ವಿಶ್ಲೇಷಣೆಯಲ್ಲಿ ಉದ್ದೇಶ ವಾದರೂ, ಪೂಜ್ಯರಲ್ಲಿ ಭಕ್ತಿಪೂರ್ಣವಾದುದೇ. ಹಿಂದೆ ಹೇಳಿರುವಂತೆ, ಸಂಗೀತ ಕಲೆಯಲ್ಲೂ ಅವರ ವಿಶಿಷ್ಟ ಸಾಧನೆಯೆಂದು ನಾವು ಅರ್ಥಮಾಡಿಕೊಂಡು ಅವರಿಗೆ ಆರೋಪಿಸುವ ಅಂಥ ಸಾಧನೆಗಳೆಲ್ಲವನ್ನೂ ಮೀರಿ, ಮೇಲೆದ್ದು ನಿಂತು, ಪ್ರಕಾಶಿಸುವವರಾದ ಸಂಗೀತ ತ್ರಿಮೂರ್ತಿಗಳ-ಪ್ರಕೃತ ಅವರಲ್ಲೊಬ್ಬರಾದ ಶ್ರೀ ಶ್ಯಾಮಶಾಸ್ತ್ರಿಗಳ-ವ್ಯಕ್ತಿತ್ವವನ್ನು ನಾವು ಅವರ ಎತ್ತರದಲ್ಲೇ ಅರ್ಥಮಾಡಿಕೊಂಡು ನಮ್ಮ ನಮನಗಳನ್ನು ಸಲ್ಲಿಸಬೇಕು, 'ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಂ' ಎಂದು ವಿರಾಟ್ ಪುರುಷನನ್ನು ಋಗ್ವೇದದ ಪುರುಷಸೂಕ್ತ ವರ್ಣಿಸಿರುವ ಅತ್ಯುನ್ನತ ಸ್ಥಾನದಲ್ಲಿ ಅರ್ಥಮಾಡಿಕೊಂಡು ಭಕ್ತಿಯಿಂದ ಅವರನ್ನು ಆರಾಧಿಸಬೇಕೆಂಬುದೇ, ಎಂದು ನಿವೇದಿಸಿಕೊಳ್ಳುತ್ತಿದ್ದೇನೆ.

ಶ್ರೀ ಶ್ಯಾಮಶಾಸ್ತ್ರಿಗಳ ಅಂತರಂಗದ, ಅಲ್ಲಿಯ ಭಾವನಾತ್ಮಕತೆಯ, ದೇವಿ ಶ್ರೀ ಕಾಮಾಕ್ಷೀ ಅಮ್ಮನವರಲ್ಲಿ ಅವರು ತಳೆದಿದ್ದ ಮಾತೃಕಿಶೋರ ಸಂಬಂಧದ-ಇವೆಲ್ಲದರ ನಿಕಟ ದರ್ಶನ ನಮಗಾಗಬೇಕಾದಲ್ಲಿ ಈ ಪೂಜ್ಯರ, ಕೃತಿಗಳ ಸಾಹಿತ್ಯದ ಆಳಕ್ಕಿಳಿಯಬೇಕು, ಅದಕ್ಕಾಗಿ ಶ್ರೀ ಶಾಸ್ತ್ರಿಗಳ ಹೃದಯ ದೇಗುಲಕ್ಕೆ ನಾವು ಹೋಗಬೇಕು. ಏಕಂದರೆ, ವಾಗ್ಗೇಯ ರಚನೆಗಳು ವಾಗ್ಗೇಯಕಾರರ ಅಂತರಂಗ ಭಾವನೆಗಳನ್ನು ಶ್ರೋತೃಗಳಿಗೆ ಸಮರ್ಥವಾಗಿ ಸಂವಹನ ಮಾಡಿ ಅಂಥ ಭಾವನೆಗಳ ಪ್ರತಿಬಿಂಬವಾಗಿ ಪ್ರಕಾಶಪಡುವಂಥವು.

ಮಹಾವಾಗ್ಗೇಯಕಾರರ ವಾಗ್ಗೇಯ ರಚನೆಗಳಲ್ಲಿನ ಮಾರ್ಗದರ್ಶಕ ವಿಶೇಷವೆಂದರೆ, ಅವರ ಸಾಹಿತ್ಯದಲ್ಲಡಗಿದ ಇಂಥ ಉತ್ಕಟ ಭಕ್ತಿ-ಪ್ರೇಮ-ಗಾಢತೆ-ಗೂಢತೆಗಳನ್ನೆಲ್ಲ ಮಧುರವಾಗಿ ಪ್ರಕಟಪಡಿಸುವ ಅವುಗಳ ಗೇಯಗಳಲ್ಲಿನ ಶಕ್ತಿ. ಎಂದೇ ಅಲ್ಲವೇ, ಭಾವನಾತ್ಮಕವಾಗಿ ಚಿಮ್ಮಿದ ಸಾಹಿತ್ಯವು ಅದರ ವಾಹಕವಾದ ಗೇಯದೊಂದಿಗೇ ಚಿಮ್ಮಿ ಹೊರಬರುವುದು! ಆದ್ದರಿಂದಲೇ ಅಂಥವರು ಮಹಾವಾಗ್ಗೇಯಕಾರರೆಂಬ ಪೂಜ್ಯ, ಉಚ್ಚ ಸ್ಥಾನ ಪಡೆಯುವುದು!

ಅಂಥ ಮಹಾವಾಗ್ಗೇಯಕಾರರಾದ ಶ್ರೀ ಶ್ಯಾಮಶಾಸ್ತ್ರಿಗಳ ವ್ಯಕ್ತಿತ್ವದ, ಅಂತರಂಗದ, ಭಾವನೆಗಳ ದರ್ಶನವನ್ನು ಅವರ ಹೃದಯಸ್ಪರ್ಶಿ ಕೃತಿಗಳಿಂದ ಮಾಡುವ ಅವಕಾಶ ಮಹಾಸೌಭಾಗ್ಯವೇ.

ಶ್ರೀ ಶಾಸ್ತ್ರಿಗಳು ತೆಲುಗು, ಸಂಸ್ಕೃತ, ತಮಿಳು ಮತ್ತು ಮಣಿಪ್ರವಾಳ ಭಾಷೆಗಳಲ್ಲಿನ ತಮ್ಮ ರಚನೆಗಳಲ್ಲಿ, ಭಾವನಾಭಿವ್ಯಕ್ತಿ,-ಚಿಂತನಾಭಿವ್ಯಕ್ತಿಗಳನ್ನು ಮಾಡಿಕೊಂಡಿದ್ದಾರೆ. ನರಸ್ತುತಿ ಮಾಡದೆ ತಮ್ಮ ಮತಿಮನಸ್ಸುಗಳನ್ನು ಸಂಪೂರ್ಣವಾಗಿ ದೈವಧ್ಯಾನ ಚಿಂತನ ಭಾವನಗಳಿಗೇ ಮೀಸಲಾಗಿಟ್ಟು, ತಾವೇ ದೈವಾಂಶಪುರುಷರಲ್ಲೊಬ್ಬರಾಗಿ, ಅಂಥ ಪ್ರಾತಃ-ಸ್ಮರಣೀಯರನ್ನೇ ಸ್ತುತಿ ಮಾಡುವುದು-ಮಾಡುವವರಿಗೂ ಕೇಳುಗರಿಗೂ ಶ್ರೇಯಸ್ಸಕರವೆಂದು, ಗಾಢವಾದ ನಂಬಿಕೆಯಿಂದ ಶ್ರೀ ಶ್ಯಾಮಶಾಸ್ತ್ರಿಗಳ ಸ್ತುತಿಯನ್ನು ಮೊದಲು ಅವರ ಪಾದಗಳಿಗೆ ಭಕ್ತಿಯಿಂದ ಸಮರ್ಪಿಸುತ್ತೇನೆ:

ಆದಿತಾಳದಲ್ಲಿ, ಪೂರ್ವಿಕಲ್ಯಾಣಿ ರಾಗದಲ್ಲಿ ತೆಲುಗು ಭಾಷೆಯಲ್ಲಿ ಆವಿಷ್ಕರಿಸಿದ ಕೃತಿಯಿದು:

ಕಂಚಿಕಾಮಾಕ್ಷಿವರಸುತುಡೈ ಭವಮುನು
ದ್ರುಂಚಿನ ಶ್ರೀ ಶ್ಯಾಮಕೃಷ್ಣುಡೇ ಧನ್ಯುಡು ||ಪಲ್ಲವಿ||
ಪಂಚೀಕೃತಮೌ ಮಂಚಿಮಂಚಮುಪೈ ವೆಲಸಿ ಪಾ|
ಲಿಂಚಿನ ಏಕಾಮ್ರೇಶ್ವರಿಯೇ ಸರ್ವಮನಿ ಎಂಚಿಸ ||ಅನುಪಲ್ಲವಿ||
ರಾಗತಾಳಮುಲಲೋ ವಿನೂತನಮೈನವಿಧಮುಲೋ ಕೃತುಲ ರಚಿಂಚಿ|
ಸಂಗೀತ ಸ್ವಾಮಿ ಆದಿಪ್ಪಯ್ಯ ಗುರುವುಲ ಮಹಿಮ ದೆಲಿಯ ಜೇಸಿ |

ಆಗಮವಿಧಮುಲಲೋ ನೆನರುನ ಪೂಜಿಂಚುಚು ವಿಶ್ವೇಶ್ವರಿಲೋ ಮನಸುನು !

ಬಾಗುಗ ಲೀನಮು ಜೇಸಿ ವಿಮುಕ್ತಿಕಿ ಸುಲಭಮ್ಮೈನ ಮಾರ್ಗಮುನು ಜೂಪಿನ ||ಚರಣ||

ವಾಗ್ಗೇಯ ವೈಭವಮುಲ ವರ ಪ್ರತೀಕಂಬ್ಯೆನ ಸ್ವರಜತುಲ ಗೂರ್ಚಿ, ಸ್ವರ |

ಸಾಹಿತ್ಯಮೂಲತೊ ಕೀರ್ತಿನಂದಿನ ಸಂಗೀತ ಸಾಮ್ರಾಜ್ಯರಾಜ್ಞಿ ||ಸ್ವರಸಾಹಿತ್ಯ||

||ಕಂಚಿಕಾಮಾಕ್ಷಿ ವರಸುತುಡ್ಯೆ||

ಸೂಚನೆ : ಈ ಕೃತಿಯ ಸ್ವರಪಿಲಿ ಈ ಗ್ರಂಥಕರ್ತ ವಾಗ್ಗೇಯಕಾರರ ಸ್ವಂತ ಕೃತಿಗಳ ಸಂಕಲನವನ್ನೂ ವ್ಯಾಖ್ಯಾನವನ್ನೂ ಹೊತ್ತ "ವಾಗ್ಗೇಯ ವಿಶ್ವೇಶ್ವರೀ" ಗ್ರಂಥದ **59-66** ಪುಟಗಳಲ್ಲಿ ಲಭ್ಯವಿದೆ. ಅದೇ ಗ್ರಂಥದಲ್ಲಿ **13-58** ಪುಟಗಳಲ್ಲಿ 'ಗುರುಸ್ತುತಿ' ಗುಚ್ಛದ ಉಳಿದ ಕೃತಿಗಳಾದ ಶ್ರೀ ಶಂಕರಾಚಾರ್ಯಸ್ತುತಿ, ಶ್ರೀ ತ್ಯಾಗರಾಜಸ್ತುತಿಗಳೆರಡು, ಶ್ರೀ ಮುದ್ದುಸ್ವಾಮಿ ದೀಕ್ಷಿತ ಸ್ತುತಿ ಹಾಗೂ ಶ್ರೀ ಪುರಂದರ ದಾಸರ ಸ್ತುತಿಗಳು ಲಭ್ಯವಿವೆ.

ಪ್ರಕೃತ, ಶ್ರೀ ಶ್ಯಾಮಶಾಸ್ತ್ರಿ ಸ್ತುತಿ ಕೃತಿಯ ಸಾಹಿತ್ಯದ ಕನ್ನಾಡಾನುವಾದ ಹೀಗಿದೆ:

ಕಂಚಿ ಕಾಮಾಕ್ಷಿ ವರಸುತನಾಗಿ ಭವಬಂಧನವನು ಮುರಿದ ಶ್ರೀ ಶ್ಯಾಮಕೃಷ್ಣನೇ ಧನ್ಯನು. ಪಂಚೀಕೃತವಾದ ಶ್ರೇಷ್ಠಮಂಚದ ಮೇಲೆ ನೆಲೆಸಿ ಪಾಲಿಸಿದ ಆ ಏಕಾಮ್ರೇಶ್ವರಿಯೇ (ಕಾಮಾಕ್ಷಿಯೇ) ಸರ್ವಸ್ವವೆಂದೆಣಿಸಿದ- ಶ್ಯಾಮಕೃಷ್ಣನೇ ಧನ್ಯನು. ರಾಗತಾಳಗಳಲಿ ವಿನೂತನವಿಧದಂದದಲಿ ಕೃತಿಗಳ ರಚಿಸಿ, ಸಂಗೀತ ಸ್ವಾಮಿ, ಆದಿಪ್ಪಯ್ಯ ಗುರುಗಳ ಮಹಿಮೆಯ ಸಾರಿ ಪೇಳಿ, ಆಗಮವಿಧದಲಿ ಪ್ರೀತಿಯಿಂ ಪೂಜಿಸುತ ವಿಶ್ವೇಶ್ವರಿಯಲಿ ಮನಸನು ಲಯಿಸಿ, ವಿಮುಕ್ತಿಗೆ ಸುಲಭಮಾರ್ಗವಂ ತೋರಿದ -ಶ್ಯಾಮಕೃಷ್ಣನೇ ಧನ್ಯನು. ಮುಂದಿನ ಸ್ವರಸಾಹಿತ್ಯ ಹೀಗೆ:

ವಾಗ್ಗೇಯ ವೈಭವಗಳ ವರಪ್ರತೀಕವಾದ ಸ್ವರಜತಿಗಳಂ ರಚಿಸಿ, ಸ್ವರಸಾಹಿತ್ಯ ಕಲ್ಪನೆಯಿಂ ಕೀರ್ತಿ ಪಡೆದು ಸಂಗೀತ ಸಾಮ್ರಾಜ್ಞಿ ಕಂಚಿ ಕಾಮಾಕ್ಷಿ ವರಸುತನಾದ ಶ್ಯಾಮಕೃಷ್ಣನೇ ಧನ್ಯನು.

ಈ ಕೃತಿಯಲ್ಲಿ ಹೇಳಿರುವಂತೆ ಸ್ವರಸಾಹಿತ್ಯದ ಪರಿಕಲ್ಪನೆ, ರಚನೆಗಳಿಗಾಗಿ ಶ್ರೀ ಶ್ಯಾಮಶಾಸ್ತ್ರಿಗಳನ್ನು ಉಲ್ಲೇಖಿಸಿ ಗೌರವ ತೋರುವುದು ತಿಳಿದ ವಿಷಯ. ಈ ಪರಿಕಲ್ಪನೆಯನ್ನು ಪರೀಕ್ಷಿಸಿದರೆ, ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಚರಣಗಳೆಲ್ಲವೂ ಸ್ವರಸಾಹಿತ್ಯಗಳೇ ಚಿಟ್ಟೆಸ್ವರ, ಅದಕ್ಕೆ ಸಾಹಿತ್ಯ ಎಂಬ ಹಣೆಪಟ್ಟಿ ಇಲ್ಲದಿರಬಹದು ಆದರೆ ವಸ್ತುವಿನ ಸ್ವಭಾವವದೇ. ಸ್ವರವನ್ನು ಹಾಡದೆ ನಿರೂಪಿಸಲಾಗುವ ತ್ಯಾಗರಾಜರ ಉಳಿದ ಹಲವು ಕೃತಿಗಳ ಚರಣಗಳ ಸ್ವಭಾವವು ಇದೇ. ಶ್ರೀ ಮುದ್ದುಸ್ವಾಮಿ ದೀಕ್ಷಿತರ ಚತುರ್ದಶ ರಾಗಮಾಲಿಕೆ 'ಶ್ರೀ ವಿಶ್ವನಾಥಂ ಭಜೇಽಹಂ' ರಚನೆಯಲ್ಲಿರುವ ವಿಭಾಗಗಳೆಲ್ಲವೂ ಸಹ ಸ್ವರಸಾಹಿತ್ಯಗಳ ಸ್ವಭಾವದವೇ ಎಂಬುದು ಅಧ್ಯಯನ ಮಾಡುವವರಿಗೆಲ್ಲ ಗಮನ ಸೆಳೆಯುವ ಅಂಶವೆಂದು ಪ್ರಾಸಂಗಿಕವಾಗಿ ಉಲ್ಲೇಖಿಸಿದರೆ ತಪ್ಪಾಗಲಾರದು.

ಇನ್ನು ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳ ರಸಾಸ್ವಾದನೆಗೆ ತೊಡಗಬಹುದೆನಿಸುತ್ತದೆ.

❖ ❖ ❖ ❖

• ಶ್ರೀ ಶ್ಯಾಮಕೃಷ್ಣ ವಾಗ್ಗೇಯ ವ್ಯಾಖ್ಯಾನ

ರಚನೆಗಳ ಪರಿವಿಡಿ

❖ ❖ ❖ ❖

ಶ್ರೀ ಶ್ಯಾಮಶಾಸ್ತ್ರಿಗಳ ವಿಶೇಷ ಕೊಡುಗೆಗಳಾದ ಅವರ ಸ್ವರಜತಿತ್ರಯ

ಸ್ವರಜತಿ ಎನ್ನುವ ವರ್ಗದ ರಚನಾ ವಿಶೇಷ, ಅದರ ಸಾಮಾನ್ಯಾರ್ಥ-ಬಳಕೆಗಳಲ್ಲಿ, ಅಭ್ಯಾಸಗಾನದ ವಲಯಕ್ಕೆ ಸೇರಿದುದು, ಕರ್ಣಾಟಕ ಸಂಗೀತದ ಬೋಧನ ಪದ್ಧತಿ- ಸಂಪ್ರದಾಯಗಳಲ್ಲಿ. ನಮ್ಮ ಸಂಗೀತದ ಕಲಿಕೆಯ-ಬೋಧನದ ಪ್ರಕ್ರಿಯೆಯಲ್ಲಿ, ವರಸೆಗಳು, ತಾಳಗಳ ಪರಿಚಯಾತ್ಮಕವಾದ ಅಲಂಕಾರಗಳು, ಹಾಡಿನ ಸರಳ ರೂಪದ ಪರಿಚಯಕ್ಕಾಗಿ ಪಿಳ್ಳಾರಿ ಮತ್ತು ಸಂಚಾರೀ ಗೀತಗಳೆಂಬ ಹಂತದ ನಂತರವೇ ಬೋಧಿಸುವ ವಸ್ತುವೇ ಲಯದ ಮಾದರಿಗಳಲ್ಲಿನ ವೈವಿಧ್ಯ ಪರಚಯಿಸುವ ರಚನಾ ವಿಶೇಷವೇ 'ಸ್ವರಜತಿ' ಎಂಬುದು. ಹೆಸರು ಸೂಚಿಸುವಂತೆಯೇ ಸ್ವರಗಳಲ್ಲೇ ಜತಿಗಳಲ್ಲಿನ ವೈವಿಧ್ಯವನ್ನೂ, ಅದರಿಂದ ಲಯದ ಪರಿಕಲ್ಪನೆಯಲ್ಲಿನ ಸೌಂದರ್ಯವನ್ನೂ ವ್ಯಾಪ್ತಿಯನ್ನೂ ಪರಿಚಯಸುವುದು ಈ ಪ್ರಕಾರದ ಉದ್ದೇಶ. ಈ ರಚನಾ ಪ್ರಕಾರದಲ್ಲಿ, ಹಲವಾರು ಸ್ವರಜತಿಗಳು ಸಾಹಿತ್ಯವನ್ನೂ ಉಳ್ಳವು, ಹಲವಕ್ಕೆ ನಂತರದವರು, ಸಾಹಿತ್ಯವನ್ನು ರಚಿಸಿರುವುದೂ ಉಂಟು. ಸ್ವರಜತಿಗಳಲ್ಲಿನ ಸಾಹಿತ್ಯದಲ್ಲಿನ ವಿಶಿಷ್ಟತೆಯೆಂದರೆ, ತ್ರಿಶ್ರ, ಚತುರಶ್ರ, ಖಂಡ, ಮಿಶ್ರ, ಸಂಕೀರ್ಣ ಜಾತಿಗಳಲ್ಲಿನ ಜತಿಗಳ ಬಂಧದಲ್ಲೇ ಸ್ವರ ರಚನೆಯಂತೆಯೇ ಅದೇ ಜತಿಬಂಧಗಳಲ್ಲೇ ಸಾಹಿತ್ಯ ರಚನೆಯೂ ಆಗಿರುವುದು: ಉದಾಹರಣೆ :

1. ಬಿಲಹರಿ - ರಾರ ವೇಣು ಗೋಪಬಾಲ
2. ಹಂಸಧ್ವನಿ - ಶ್ರೀರಮಣ ಪರಿಪಾಹಿ... ಶ್ರಿತಲೋಕಪಾವನ
3. ಹರಿಕಾಂಭೋಜಿ - ರಾಮನಾಮೊರಾಲಿಂಚರಾ.

ಶ್ರೀ ಶ್ಯಾಮಶಾಸ್ತ್ರಿಗಳ ರತ್ನತ್ರಯವಾದ ಸ್ವರಜತಿಗಳು, ಸ್ವರಜತಿಗಳ ಈಗ

ಹೇಳಿದ ಎಲ್ಲ ಗುಣಗಳನ್ನೂ ಲಕ್ಷಣಗಳನ್ನೂ ಹೊಂದಿದ್ದರೂ, ಪೂಜ್ಯರ ಸಂಕೀರ್ಣತಮವಾದ ಸಂಗೀತ ಮೌಲ್ಯಗಳ, ಸಾಹಿತ್ಯ ಮೌಲ್ಯಗಳ, ಆಧ್ಯಾತ್ಮಿಕ ಮೌಲ್ಯಗಳ, ಲಯಾಭಿಜ್ಞತೆಯ ಮೌಲ್ಯಗಳ, ಅತೀತನಾಗತ ಸಮ ಗ್ರಹಸೌಂದರ್ಯಾಭಿವ್ಯಕ್ತಿಯ, ರಾಗತ್ವದ ಅತ್ಯುಚ್ಚ ಮೌಲ್ಯಗಳ, ಸೌಂದರ್ಯಾನು ಭೂತಿಗೆ ಬೃಹತ್ ಜಲಾಶಯಗಳ (Reservoiers) ಪ್ರತೀಕಗಳೇ ಆದವು. 'ಸ್ವರಜತಿ'ಗಳೆಂಬ ನಾಮಕರಣದಿಂದಾಗಲಿ ವರ್ಗೀಕರಣದಿಂದಾಗಲಿ ಬಾಲಪಾಠದ ಕ್ಷೇತ್ರದ ವಸ್ತು ಇದಲ್ಲ ಎಂಬುದಷ್ಟೇ ಅಲ್ಲ, ಅವುಗಳ 'ಪೂರ್ಣ ಸೌಂದರ್ಯಾಭಿವ್ಯಕ್ತಿಯ' ಸಾಧ್ಯತೆ ಎಂಬುದು ಅತ್ಯಂತ ಅನುಭವಿಗಳಾದ, ಪ್ರಗಲ್ಭರಾದ ವಿದ್ವಾಂಸರಿಗೂ ದೊಡ್ಡ ಸವಾಲೇ ಆದುದು.

ಈ ಸ್ವರಜತಿಗಳು ಅತ್ಯಾಕರ್ಷಕ ಪದಪುಂಜ ಪರಿಪ್ಲುತವಾಗಿ ಸಾಹಿತ್ಯ ಸೌಂದರ್ಯದ ಪರಾಕಾಷ್ಠೆಯಾಗಿ, ಸಮ ವಿಷಮಗ್ರಹಗಳು ಸಾಹಿತ್ಯದ ಅರ್ಥಪೂರ್ಣ ಲಯಸೌಂದರ್ಯ ವಾಹಕಗಳಾಗಿ ಗಾಯಕರೂ ಶ್ರೋತೃಗಳೂ ಇವುಗಳನ್ನಾಲಿಸಿ ಆನಂದ ಸರೋವರದಲ್ಲಿ ಮಿಂದೆದ್ದ ಅನುಭೂತಿಯಾಗುತ್ತದೆ.

ಸಾಂಪ್ರದಾಯಿಕ ಭಾರತೀಯ ಸಂಗೀತದ , ವಿಶ್ವದಲ್ಲೇ ಸಾಟಿ ಇಲ್ಲದ, ರಾಗಪರಿಕಲ್ಪನೆಯ ಆಲಾಪನ ಕ್ರಮದಲ್ಲಿ ಏಕಸ್ವರವೃದ್ಧಿ ಪದ್ಧತಿಯ ರಾಗವರ್ಧನ ವಿಧಾನದ ತಾತ್ಪರ್ಯವನ್ನೂ ಸಾರವನ್ನೂ ಈ ಸ್ವರಜತಿಗಳ ಧ್ರುವಪದವಾದ ಪಲ್ಲವಿಯಿಂದ ಕಡೆಯ ಜತಿ ಅಥವಾ ಚರಣದವರೆಗೂ ಪ್ರತಿ ವಿಭಾಗದಲ್ಲೂ ಪ್ರತಿ ಹಂತದಲ್ಲೂ ಕಾಣಬಹುದು.

ಶ್ರೀ ಶ್ಯಾಮಶಾಸ್ತ್ರಿಗಳ ಮಾರ್ಗದರ್ಶಿಗಳೂ, ಸ್ಫೂರ್ತಿಯ ಆಕರವೂ, ಪರೋಕ್ಷ ಗುರುಗಳೂ ಆದ ಪಚ್ಚಿಮಿರಿಯಂ ಆದಿಪ್ಪಯ್ಯನವರು, ಎಲ್ಲ ಕಾಲಕ್ಕೂ ಮಾದರಿಯೂ ದಾಖಲೆಯೂ ಆಗಿ ಸಂಗೀತ ಕ್ಷೇತ್ರದಲ್ಲಿ ಆದರ್ಶವಾಗಿ ಎದ್ದು ನಿಲ್ಲುವ ಭೈರವಿ ರಾಗದಲ್ಲಿನ ಒಂದೇ 'ವಿರಿ ಬೋಣಿ' ವರ್ಣ ರತ್ನದ ಕೊಡುಗೆಯಿಂದ ಚಿರಸ್ಥಾಯಿಯಾಗಿ ನೆನಪಿನಲ್ಲಿ ಉಳಿದಿರುವಂತೆಯೇ, ಶ್ಯಾಮಶಾಸ್ತ್ರಿಗಳೂ ಸಹ ಅವರ ಉಳಿದಾವ ರಚನೆಗಳನ್ನು ನೀಡಿರದಿದ್ದರೂ, ಭೈರವಿ, ಯದುಕುಲ ಕಾಂಭೋಜಿ ಮತ್ತು ತೋಡಿ ರಾಗಗಳ ಸಾರಸರ್ವಸ್ವಗಳಾದ ಈ ಮೂರು ಸ್ವರಜತಿಗಳಿಂದಲೇ ಸಂಗೀತ ತ್ರಿಮೂರ್ತಿಗಳಲ್ಲೊಬ್ಬರೆಂಬ ಸ್ಥಾನಕ್ಕೆ

ಅವರನ್ನು ಏರಿಸುವಂಥ ಅಮೂಲ್ಯ ವಸ್ತು ಈ ಸ್ವರಜತಿಗಳು. ಈ ಸ್ವರಜತಿಗಳ ವಾಕ್ ಮತ್ತು ಗೇಯಗಳ ಅಧ್ಯಯನ ಆಸ್ವಾದನಗಳಿಂದಲೇ ಪ್ರಾತಃ ಸ್ಮರಣೀಯರಾದ ಈ ಪೂಜ್ಯರ ಸ್ಮರಣ ನಮನಗಳನ್ನು ಆರಂಭಿಸಬಹುದು.

1. ಸ್ವರಜತಿ 'ಕಾಮಾಕ್ಷಿ'-ಭೈರವಿ ರಾಗ - ಮಿಶ್ರಛಾಪು ತಾಳ

ತಮ್ಮ ನಿತ್ಯಾರಾಧ್ಯ ಕಂಚಿ ಶ್ರೀ ಕಾಮಾಕ್ಷೀ ದೇವಿಯ ಸ್ತುತಿಯಿದು.

ತ್ರಿಶ್ರತ್ರಿಪುಟ, ಮಿಶ್ರಛಾಪು ಮತ್ತು ವಿಲೋಮ ಮಿಶ್ರಛಾಪು- ಈ ಹಂದರದ ಮಾದರಿ ಯಾವುದೇ ಆದರೂ ಶ್ರೀ ಶ್ಯಾಮಶಾಸ್ತ್ರಿಗಳಿಗೆ ಈ ಏಳು ಎಣಿಕೆಗಳ ತಾಳದ ಹಂದರದಲ್ಲಿ ವಾಗ್ಗೇಯಗಳನ್ನು ರಚಿಸಲು ವಿಶೇಷ ಸುಖ. ಅದರಲ್ಲಿ ಒಲವು ಇತ್ತೆಂಬುದು ಏಳು ಎಣಿಕೆಗಳ ಈ ತಾಳದ ಹಂದರದಲ್ಲೇ 30 ರಚನೆಗಳು ಲಭ್ಯವಿದೆ ಎಂಬ ಸಂಗತಿಯಿಂದ ನಮ್ಮ ಅನುಭವಕ್ಕೆ ಬರುತ್ತದೆ, ಅದರಲ್ಲೂ ಮಧ್ಯ ಲಯದ ಮತ್ತು ವಿಳಂಬ ಲಯದ ಮಿಶ್ರ ಛಾಪು ಹಂದರದಲ್ಲಿ ಮತ್ತೂ ವಿಶೇಷ. ಶ್ರೀ ಶಾಸ್ತ್ರಿಗಳ ರಚನೆಯ ತಾಳ ಯಾವುದೇ ಆದರೂ, ರಚನೆಯ ನಡೆಯಂತೂ ಗಜಗಮನವೇ, ವಿಳಂಬ ಕಾಲ ಕೃತಿಗಳಾದರೆ ಮದಗಜಗಮನವೇ.

ಭೈರವಿರಾಗದ ಸ್ವರಜತಿಯ ಸಾಹಿತ್ಯದ ಮೂಲ ಪಾಠ

ಕಾಮಾಕ್ಷಿ ! ಅನುದಿನಮು ಮರವಕನೇ, ನೀ ಪಾದಮುಲ (ಲೆ)ದಿಕ್ಕನುಚು
ನಮ್ಮಿತಿನಿ ಶ್ರೀ ಕಂಚಿ || ಕಾಮಾಕ್ಷಿ ||
ಜತಿಗಳು -ಸ್ವರ ಸಾಹಿತ್ಯ

1. ಕುಂದರದನಾ, ಕುವಲಯ ನಯನಾ, ತಲ್ಲಿ, ರಕ್ಷಿಂಚು || ಕಾಮಾಕ್ಷಿ ||
2. ಕಂಬುಗಳ, ನೀರದ ಚಿಕುರಾ, ವಿಧುವದನಾ, ಮಾಯಮ್ಮಾ!|| ಕಾಮಾಕ್ಷಿ||
3. ಕುಂಭಕುಚ, ಮದ ಮತ್ತ ಗಜಗಮ, ಪದ್ಮಭವ-ಹರಿ-ಶಂಭುನುತ ಪದ |
   ಶಂಕರಿ ! ನೀವು ನಾ ಚಿಂತಲ ವೇವೇಗ ದೀರ್ಚಮ್ಮಾ ಇಪುಡು|| ಕಾಮಾಕ್ಷಿ ||
4. ಭಕ್ತ ಜನ ಕಲ್ಪಲತಿಕಾ ! ಕರುಣಾಲಯ ! ಸದಯಾ ! ಗಿರಿತನಯ!
   ಕಾವವೇ, ಶರಣಾಗತುಡು ಗದಾ ? ತಾಮಸಮು ಸೇಯಕ ವರಮೊಸಗು
   || ಕಾಮಾಕ್ಷಿ ||

5. ಪಾತಕಮುಲನು ದೀರ್ಚಿ ನೀ ಪದಭಕ್ತಿ ಸಂತತಮೀಯವೇ |
ಪಾವನಿಗದಾ? ಮೊರವಿನದಾ ? ಪರಾಕೇಲನಮ್ಮಾ ? ವಿನಮ್ಮಾ !
|| ಕಾಮಾಕ್ಷಿ ||
6. ಕಲುಷಹಾರಿಣಿ ! ಸದಾ ನತಫಲದಾಯಕಿಯನಿ ಬಿರುದು ಭುವಿಲೋ |
ಗಲಿಗಿನ ದೊರಯನುಚು ವೇದಮು ಮೊರಲಿಡಗಾ ವಿನಿ || ಕಾಮಾಕ್ಷಿ ||
7. ನೀಪವನ ನಿಲಯಾ! ಸುರಸಮುದಯಾ, ಕರವಿಧೃತ ಕುವಲಯಾ !
ಮದದನುಜವಾರಣಮೃಗೇಂದ್ರಾ ! ಅರ್ಚಿತ, ಕಲುಷ ದಹನ ಘನಾ !
ಅಪರಿಮಿತ ವೈಭವಮುಗಲ, ನೀ ಸ್ಮರಣ ಮದಿಲೋ ದಲಚಿನ, ಜನಾ- |
ದುಲಕು, ಬಹು ಸಂಪದಲನಿಚ್ಚೇವಿಪ್ಪುಡು ಮಾಕಭಯಮಿಯ್ಯವೇ || ಕಾಮಾಕ್ಷಿ ||
8. ಶ್ಯಾಮಕೃಷ್ಣ ಸಹೋದರಿ ! ಶಿವಶಂಕರಿ, ಪರಮೇಶ್ವರಿ !
ಹರಿಹರಾದುಲಕು ನೀ ಮಹಿಮಲು ಗಣಿಂಪ ತರಮಾ ? ಸುತುಡಮ್ಮಾ !
ಅಭಿಮಾನಮು ಲೇದಾ ನಾ ಪೈ ದೇವಿ ? ಪರಾಕೇಲನೆ ?
ಬೋವವೇ ಇಪುಡು ಶ್ರೀ ಭೈರವಿ || ಕಾಮಾಕ್ಷಿ ||

ವ್ಯಾಖ್ಯಾನ

ಮೊದಲು ಭೈರವಿಯಲ್ಲಿನ ಸ್ವರಜತಿಯ ಸಾಹಿತ್ಯದ ಭಾವುಕತೆಯನ್ನು ಆಸ್ವಾದಿಸೋಣ :

ಹೇ ಕಾಂಚೀಪುರಾಧೀಶ್ವರಿ ಶ್ರೀ ಕಾಮಾಕ್ಷೀ ದೇವಿಯೇ, ತಾಯೆ, ಎಂದೆಂದಿಗೂ, ಮರೆಯದೆ, ನಾನು ನಿನ್ನ ಪಾದಗಳೇ ನನಗೆ ಗತಿಯೆಂದು ನಂಬಿದೆ.

ಮಂದ್ರ ನಿಷಾದದಲ್ಲಿ ಗಂಭೀರವಾಗಿ ಅವರೋಹಣ ಸಂಚಾರದೊಂದಿಗೆ ಆರಂಭಿಸಿ ಪಲ್ಲವಿಯಲ್ಲೇ ಪೂರ್ಣ ಸಂಚಾರದೊಂದಿಗೆ ಭೈರವಿ ರಾಗದ ಆಕ್ಷಿಪ್ತಿಕೆಯನ್ನೊದಗಿಸಿ ರಾಗಾಲಾಪನ ಪದ್ಧತಿಯ ವಿಧಾನವನ್ನೇ ಸೂಚಿಸುತ್ತಾರೆ.

ಧ್ರುವಪದವಾದ ಪಲ್ಲವಿಯಲ್ಲಿ ಹೀಗೆ ಶ್ರೀಮಾತೆಯಲ್ಲಿ ನಿವೇದಿಸಿಕೊಂಡು, ಮುಂದೆ, ಭೈರವಿ ರಾಗದ ಸ್ವರಶ್ರೇಣಿಯ ಆಧಾರ ಸ್ವರವಾದ ಷಡ್ಜದಿಂದ ಮೊದಲ ಜತಿಯನ್ನು ಆರಂಭಿಸಿ ಆ ಸ್ವರದ ಸುತ್ತ ಭ್ರಮಿಸುವ ಭೈರವಿ ರಾಗಭಾವಗಳನ್ನು ಹೆಣೆಯುತ್ತಾರೆ.

ಷಡ್ಜದಿಂದ ಆರಂಭಿಸುವ ಮೊದಲ ಜತಿಯಲ್ಲಿ, ಮಾತೆಯು ಮಲ್ಲಿಗೆ ಹೂವಿನ ಧವಳ ಕಾಂತಿಯುಕ್ತವಾದ ದಂತ ಪಂಕ್ತಿಯುಳ್ಳವಳೆಂದೂ, ಕಮಲದ ಸೌಂದರ್ಯವುಳ್ಳ ಕಣ್ಗಳುಳ್ಳವಳೆಂದೂ ವರ್ಣಿಸಿ, ಭೈರವಿಯಲ್ಲಿ ಮಂದ್ರ ಮಧ್ಯಮಕ್ಕೆ ಸಂಚಾರ ತೋರಿಸಿ, ತಾಯಿ ರಕ್ಷಿಸು ಎನ್ನುತ್ತಾರೆ.

ರಿಷಭದಿಂದ ಆರಂಭಿಸುವ ಎರಡನೇ ಜತಿಯಲ್ಲಿ ಶಂಖದ ಅಂದವಿರುವ ಕತ್ತುಳ್ಳವಳು ಎಂದೂ, ಮೋಡದ ಕಾಂತಿಯ ಕೇಶರಾಶಿಯುಳ್ಳವಳು ಎಂದೂ, ಇಂದುಮುಖಿ ಎಂದೂ ಅಮ್ಮನವರನ್ನು ವರ್ಣಿಸಿ, ಅಂಥ ನಮ್ಮಮ್ಮ ಎಂದು ಪ್ರೀತಿಯಿಂದ ಸಂಬೋಧಿಸುತ್ತಾರೆ.

ಗಾಂಧಾರದಿಂದ ಆರಂಭಿಸುವ 3ನೇ ಜತಿಯಲ್ಲಿ ದೇವಿಯ ಕತ್ತಿನ ಕೆಳಗಿನ ಸೌಂದರ್ಯವನ್ನು ವರ್ಣಿಸಿ, ಲಲಿತಾ ತ್ರಿಶತಿಯ 114ನೇ ನಾಮದಲ್ಲಿನ 'ಹಸ್ತಿಕುಂಭೋತ್ತುಂಗ ಕುಚಾ' ಎಂಬ ಭಾವವನ್ನು 'ಕುಂಭಕುಚ' ಎಂಬ ಮಾತಿನಲ್ಲಿ ಪ್ರತಿಧ್ವನಿಸಿ, ಆನೆಯನ್ನೇ ಮತ್ತೊಂದು ಉಪಮೆಗೆ ಬಳಸಿ, ದೇವಿ 'ಮತ್ತೇರಿದ ಆನೆಯ ನಿಧಾನ ಗಂಭೀರ ಗಮನೆ'-'ಮತ್ತಗಜಗಮ' ಎಂದು ಬಣ್ಣಿಸಿ, ಬ್ರಹ್ಮ ವಿಷ್ಣು, ಮಹೇಶ್ವರರೆಲ್ಲರಿಂದಲೂ ಕೊಂಡಾಡಲ್ಪಟ್ಟವಳು ದೇವಿ, ಮಂಗಳಕರಳು 'ಶಂ-ಕರಿ'-ಎಂದು ವರ್ಣಿಸಿ, ಅಂಥ ತಾಯಿ, ನನ್ನ ಚಿಂತೆಗಳನ್ನು ತ್ವರಿತವಾಗಿ ನಿವಾರಿಸಮ್ಮಾ, ಎಂದು ಮೊರೆಯಿಡುತ್ತಾರೆ. ಜತಿಯ ಕಡೆಯಲ್ಲಿ 'ವಿನುಮಾ ವಿನಮ್ಮಾ'- ಎಂದರೆ ಕೇಳಮ್ಮಾ, ಆಲಿಸಮ್ಮಾ ಎನ್ನುವ ಪಾಠಕ್ಕೆ, 'ಇಪುಡು' (ಈಗಲೇ) ಎನ್ನುವ ಪಾಠಾಂತರವೊಂದಿದೆ. ದೇವಿಯೇ ನಿವಾರಿಸಬೇಕಾದ ಚಿಂತೆ ಏನೋ ಆಗ ಇದ್ದಿರಬೇಕೆನಿಸುತ್ತದೆ.

ಮಧ್ಯಮದಿಂದ ಆರಂಭಿಸುವ ಜತಿಯಲ್ಲಿ ಮೊರೆಯ ಭಾವನೆ ಮತ್ತಷ್ಟು ಉತ್ಕಟಗೊಳ್ಳುತ್ತದೆ. ಪ್ರಾರಂಭದಲ್ಲೇ 'ಭಕ್ತರ ಕಲ್ಪಲತೆ' ಎಂದು ದೇವಿಗೆ ನೆನಪಿಸಿ, ಕರುಣಾಗುಣದ ನಿವಾಸವೇ, ದಯಾಪೂರ್ಣಳು ದೇವಿ ಎಂದು ಸ್ತುತಿಸಿ, ಪರ್ವತರಾಜಕುಮಾರಿ (ಗಿರಿತನಯ), ಅಮ್ಮಾ, ನಾನು ನಿನಗೇ ಸಂಪೂರ್ಣ ಶರಣಾಗಿರುವಾಗ ನಿನ್ನ ಪಾಲನೆಯ ರಕ್ಷಣೆಯ ವರವನ್ನೀಯಲು ಇನ್ನೂ ತಡವಾಗಲೊಲ್ಲೆನಮ್ಮಾ ಎಂದು ಬೇಡುತ್ತಾರೆ. ಇಲ್ಲಿ, ಭೈರವಿಗೆ ಮಧ್ಯಮದ ವೈಶಿಷ್ಟ್ಯ ತೋರುತ್ತಾರೆ.

ಪಂಚಮದಿಂದ ಆರಂಭಿಸುವ ಜತಿಯಲ್ಲಿ ಶಾಸ್ತ್ರಿಗಳು "ಪಾಪಗಳನ್ನು ಪರಿಹರಿಸಿ ಎಂಥವರನ್ನೂ ಪಾವನಗೊಳಿಸುವ ಪಾವನಿ ನೀನಲ್ಲವೇ. ಆದ್ದರಿಂದಲೇ ನಿನ್ನನ್ನು ಬೇಡುವುದಾದರೂ, ನಿನಗೆ ಪ್ರಯಾಸವಿಲ್ಲದ ಪಾಪಪರಿಹಾರ ಮತ್ತು ನಿನ್ನಲ್ಲಿ ಅವ್ಯಾಜವಾದ ಭಕ್ತಿ ಎಂಬ ಆ ಸಂಪದವನ್ನು ಮಾತ್ರವೇ ಬೇಡುತ್ತಿದ್ದೇನೆ. ನನ್ನ ಮೊರೆ ಕೇಳಿಸದೇಕೆ ತಾಯೆ, ನನ್ನನ್ನು ಉಪೇಕ್ಷೆ ಮಾಡಲು ಕಾರಣವಾದರೂ ಏನು ತಾಯೆ, ಮೊರೆ ಕೇಳಮ್ಮಾ" ಎಂದು ಹಲುಬುತ್ತಾರೆ. 'ಪರಾಕೇಲನಮ್ಮಾ' ಎಂದು ತಾರಸ್ವರದಲ್ಲಿ ಮೊರೆಯಿಟ್ಟು, ಬೇಡಲು ಆಧಾರ ಷಡ್ಜಕ್ಕಿಳಿಯುವ 'ಗರಿಸ'- 'ವಿನಮ್ಮಾ' ಗಹನವಾದುದು.

ಈ ಜತಿಯಲ್ಲಿನ 'ಭಕ್ತಿ ಸಂತತ ಮೀಯುವೇ' ಎಂಬ ಮಾತಿಗೆ 'ಭಕ್ತಿಸಂಪದಮೀಯವೇ ಎಂಬ ಪಾಠಾಂತರವಿದೆ.

ನಂತರದ ಚರಣವನ್ನು ಅಥವಾ ಜತಿಯನ್ನು ಶುದ್ಧ ಧೈವತದಲ್ಲೇ ಆರಂಭಿಸಿ ವಿವೇಚನೆಗಾಗಿ ಮಾರ್ಗದರ್ಶನ ಮಾಡುತ್ತಾರೆ. ಪಾಪಗಳನ್ನು ಅಥವಾ ಪಾತಕಗಳನ್ನು ಪರಿಹರಿಸುತ್ತಾ ಪಾವನಿ ಎಂಬ ಬಿರುದಿಗೆ ಪಾತ್ರಳಾದ ದೇವಿ ಎಂದು ಹಿಂದಿನ ಜತಿಯಲ್ಲಿ ಸ್ತುತಿಸಿದರೆ ಈ ಜತಿಯಲ್ಲಿ 'ಕಲುಷಹಾರಿಣಿ' ಎಂದು ಕಲಿಯ ಕಾರಣ ಮೂಲವಾದ ಕಲ್ಮಷಗಳನ್ನು ನಿವಾರಿಸುವವಳು ದೇವಿ ಎನ್ನುತ್ತಾರೆ. ಆಶ್ರಯಿಸಿದವರಿಗೆ, ಭಕ್ತರಿಗೆ ಎಂದೂ ಫಲಗಳನ್ನೂ, ವರಗಳನ್ನೂ ನೀಡುವ ಮುಕ್ತ ಹಸ್ತಳು ದೇವಿ. ಲಲಿತಾ ತ್ರಿಶತಿಯಲ್ಲಿನ 'ಈಪ್ಸಿತಾರ್ಥಪ್ರದಾಯಿನಿ' ನಾಮದ ಪ್ರತಿಧ್ವನಿ. ಇಳೆಯಲ್ಲಿ 'ನತಫಲದಾಯಕಿ' ಎಂದು ಖ್ಯಾತಳಾದ 'ಔದಾರ್ಯ ಸಾಮ್ರಾಜ್ಞಿ ದೇವಿ' ಎಂದು ವೇದಗಳೇ ಘೋಷಿಸಿವೆ. ಅವೆಲ್ಲವನ್ನು ಕೇಳಿಯೇ ನನ್ನ ಮೊರೆ ತಾಯಿ'! ಎನ್ನುತ್ತಾರೆ.

ಈ ಜತಿಯ ಆರಂಭದಲ್ಲಿನ 'ಕಲುಷಹಾರಿಣಿ' ಎಂಬ ಪದಕ್ಕೇ' ದುರಿತಹಾರಿಣಿ' ಎಂಬ ಪಾಠಾಂತರವಿದೆ.

ಈ ಜತಿಗಳ ಸರಣಿಯಲ್ಲೇ ಅತ್ಯಂತ ರಂಜನಾಸ್ಪದವಾದುದು ನಿಷಾದದಿಂದ ಆರಂಭವಾಗುವ ಜತಿ. ಇದು ಬಹಳ ಪ್ರೌಢ ಗೇಯ ವಸ್ತುವಾದುದರಿಂದ , ಸ್ವರಜತಿ ಎಂಬ ವರ್ಗವಾದರೂ ಕಲ್ಪನ ಕ್ಷೇತ್ರದ ಮುಖ್ಯ ಅಂಗವಾದ ನೆರವಲ್ ಮತ್ತು ಸ್ವರ ಕಲ್ಪನೆಗಳಿಗೆ ಅತ್ಯಂತ ಪ್ರಶಸ್ತವಾದ ಭಾಗವಿದು. ಮಾತೆ ಕಂದಬವನ

ಅಥವಾ ನೀಪವನದಲ್ಲಿ ವಾಸಿಸುವವಳು, ವಿಹರಿಸುವವಳು ಎಂದೇ, ನೀಪ ವನ ನಿಲಯಾ, ದೇವ ದೇವತೆಗಳದೇ ದೇವಿಯ ಸಮುದಾಯ (ಸುರಸಮುದಯಾ) ಕರಕಮಲೆಯಾಗಿ ಲಕ್ಷ್ಮೀರೂಪಳು (ಕರವಿಧೃತ ಕುವಲಯಾ).

ಮದವೇರಿದ ಆನೆಗೆ ಸಿಂಹದೋಪಾದಿಯಲ್ಲಿ ದುಷ್ಟ ದಾನವರಿಗೆ ಸಿಂಹಸ್ವರೂಪವಾದವಳು ದೇವಿ (ಮದದನುಜ ವಾರಣಮೃಗೇಂದ್ರಾ).

ಕಲ್ಮಷವೆಂಬ ಬೆಂಕಿಗೆ ನೀರು ಸುರಿದು ನಿರ್ಬಲಗೊಳಿಸುವ ಮೋಡಗಳಂತೆ ದೇವಿ (ಕಲುಷದಹನಘನಾ) ಅಪರಿಮಿತವಾದ ವೈಭವದೊಂದಿಗಿರುವ ನಿನ್ನ ಧ್ಯಾನದಲ್ಲೇ ನಿರತರಾದ ಭಕ್ತರಿಗೆ ಅಷ್ಟೈಶ್ವರ್ಯಗಳನ್ನೇ ಅನುಗ್ರಹಿಸುವ ದೇವಿ ನೀನಾಗಿರುವಾಗ, ಅದೆಲ್ಲವನ್ನೂ ಅಪೇಕ್ಷಿಸದ ನಮಗೆ ಈಗ ಅಭಯವನ್ನು ಅನುಗ್ರಹಿಸು ತಾಯಿ ಎನ್ನುತ್ತಾರೆ ಈ ಜತಿಯಲ್ಲಿ.

ತಾರಷಡ್ಜದಲ್ಲಿ ಆರಂಭಿಸುವ ಕಡೆಯ ಮತ್ತು ವಾಗ್ಗೇಯ ಕಾರಮುದ್ರೆಯನ್ನು ಹೊಂದಿದ ಜತಿ ನಿಜಕ್ಕೂ ಈ ಸ್ವರಜತಿಯ ಕಲಶಪ್ರಾಯ ಉಪಸಂಹಾರವೇ ಸರಿ. ಇದನ್ನು ರಚಿಸಿ ಹಾಡುವಾಗ ಶ್ರೀ ಶಾಸ್ತ್ರಿಗಳು ಭಾವಾವೇಶದಿಂದ, ಆಧ್ಯಾತ್ಮಿಕ ಅನುಭವದ ಪರಾಕಾಷ್ಠೆಯನ್ನು ತಲುಪಿ, ಆನಂದ ಬಾಷ್ಪ ಭಕ್ತಿಬಾಷ್ಪಗಳೊಡನೆ ಗದ್ಗದರಾಗಿ ಈ ಜತಿಯನ್ನು ಹಾಡಿ ಪಲ್ಲವಿ ಹಾಡಿ ಮುಗಿಸಿದ ನಂತರ ಅದೆಷ್ಟೋ ಸಮಯ ಮುಚ್ಚಿದ ಕಣ್ಣುಗಳೊಡನೆ ದೇವಿಯ ಸಾನ್ನಿಧ್ಯದಲ್ಲೇ ಇದ್ದುಬಿಟ್ಟ ಅಲೌಕಿಕ ಅನುಭವ ನಮಗೆ ಊಹೆಯ ಆನಂದ ಮಾತ್ರ. ಈ ಜತಿ ಭೈರವಿ ರಾಗ ಭಾವಗಳ ಸುಂದರ ಸಂಕೀರ್ಣ ಉಪಸಂಹಾರವೂ ಆಗಿ ಕೇಳುಗರನ್ನು ವಿಭಿನ್ನವಾದ ಡಂಗುಬಡಿದಂಥ ಅನುಭವದಲ್ಲಿ ಮುಳುಗಿಸುತ್ತದೆ.

ಶ್ರೀಮನ್ನಾರಾಯಣನ ತಂಗಿಯಲ್ಲವೆ ದೇವಿ ಕಾಮಾಕ್ಷಿ ? ಎಂದೇ ಶ್ಯಾಮಕೃಷ್ಣ ಸಹೋದರಿ. ದೇವಿಯು ಶಿವೆ, ಶಂಕರಿ, ಸರ್ವೋಚ್ಛ ಸ್ಥಾನದಲ್ಲಿರುವವಳಾಗಿ ಪರಮೇಶ್ವರಿ. ಶಾಸ್ತ್ರಿಗಳು ದೇವಿಯನ್ನೇ ಕೇಳುತ್ತಾರೆ, 'ಹರಿಹರಾದಿಗಳಿಗೆ ನಿನ್ನ ಮಹಿಮೆಗಳನ್ನು ಎಣಿಸಲು ಸಾಧ್ಯವೇ ತಾಯಿ? ಮಾತೆ, ನಿನ್ನ ಮಗ ನಾನು, ನನ್ನ ಮೇಲೇ ನಿನಗಭಿಮಾನವಿಲ್ಲವೇ ತಾಯಿ, ಏಕೆ ಈ ಉಪೇಕ್ಷೆ?, ಈಗಲೇ ನನ್ನನ್ನು ಕಾಯಿ ತಾಯಿ' ಎಂದು ಭೈರವಿ

ರಾಗಮುದ್ರೆಯೊಂದಿಗೆ ಮಾತೆಯನ್ನು 'ಶ್ರೀ ಭೈರವಿ' ಎಂದು ಸಂಬೋಧಿಸಿ ಸ್ವರಜತಿಯನ್ನು ಮುಗಿಸುತ್ತಾರೆ.

ಭೈರವಿರಾಗದ ವಿವರವಾದ ಸೌಂದರ್ಯವನ್ನು ತೆರೆದಿಟ್ಟು ಭೈರವಿಯು ಅತ್ಯಂತ ಸಂಕೀರ್ಣವಾದ ಗಮಕ ಭೂಯಿಷ್ಠವಾದ ಕರ್ಣಾಟಕ ಸಂಗೀತದ ರಾಗ ಪರಿಕಲ್ಪನೆಯ ಮೌಲ್ಯಗಳ ಸಮರ್ಥ ಪ್ರತಿನಿಧಿ ರಕ್ತಿರಾಗ ಎಂಬುದನ್ನು ಸ್ಥಾಪಿಸುತ್ತದೆ ಶ್ರೀ ಶ್ಯಾಮಶಾಸ್ತ್ರಿಗಳ ಈ ಸ್ವರಜತಿ.

2. ಸ್ವರಜತಿ - 'ಕಾಮಾಕ್ಷಿ' - ಯದುಕುಲಕಾಂಭೋಜಿ ರಾಗ - ಮಿಶ್ರ ಛಾಪು ತಾಳ

ಸಾಹಿತ್ಯದ ಮೂಲ ಪಾಠ

ಕಾಮಾಕ್ಷಿ ! ನೀ ಪದಯುಗಮೆ ಸ್ಥಿರಮನಿ ನೇ |
ನಮ್ಮಿಯುನ್ನಾನು ನಾ ಚಿಂತಲೆಲ್ಲನು ದೀರ್ಚಮ್ಮಾ |

ಜತಿಗಳು - ಸ್ವರಸಾಹಿತ್ಯ

1. ಅಂಬ ನನ್ನು ಬ್ರೋವ ಸಮಯಮು ವಿನುಮಾ, ಪತಿತಪಾವನಿಗಾ !
||ಕಾಮಾಕ್ಷಿ||
2. ಅನುದಿನಮು ಶರಣಮನಿ ನಿನ್ನು ವೇಡುಕೊನಿಯುನ್ನ ಸುತುಡಮ್ಮಾ ಸದಯ|
||ಕಾಮಾಕ್ಷಿ||
3. ಸರಸಿಜಾಸನ ಹರೀಶವಿನುತ ಪಾದಾ! ನಾತೋ ವಾದಾ ? ||ಕಾಮಾಕ್ಷಿ||
4. ಕಮಲದಳ ಸಮ ನಯನ ! ಕಚಜಿತ ಘನಾ ! ಶಶಧರ ನಿಭವದನ||ಕಾಮಾಕ್ಷಿ||
5. ಮಾನವತಿ ! ನಿನ್ನು ಸದಾ ದಲಚಿನ ಮಾನವುಲಕೆಲ್ಲ ಫಲಮೊಸಗೇ |
ಬಿರುದುಗಲ ದೇವತಯನಿ ನೇ ವಿನಬಡಿ ನೀವೇ ಗತಿಯನುಚು!||ಕಾಮಾಕ್ಷಿ||
6. ಪಾವನಿ ! ಪುರಹರುನಿ ರಾಣಿ ! ಪಾರ್ವತಿ ! ಸಕಲ ಜನನೀ !
ಪಾತಕಮುಲನು ವಡಿಗಾ ದೀರ್ಚಿ ವರಮೊಸಗುಮು ! ||ಕಾಮಾಕ್ಷಿ||
7. ಕನಕಗಿರಿಸದನ ನಿನ್ನು ಗೊಲಿಚಿನ ಜನಮುಲಕು ದಿನದಿನಮು ಶುಭಮೊಸಗೇ-
ವನಿ ಶ್ರುತುಲು ಮೊರಲಿಡಗಾ ಮೊರಲು ವಿನಿ ವಿನಿ ವಿನಿ ||ಕಾಮಾಕ್ಷಿ||
8. ಬಾಲಕಿಸಲಯ ಚರಣ ನಿಮಿಷಮು ತಾಳನಿಕ, ವಿನಿ, ಮದಗಜಗಮನ !
ತಾಮಸಮು ಸೇಯಕನೆ ನನ್ನಿಪುಡು ಬ್ರೋವುಮು ಪರಾತ್ಪರಿ ||ಕಾಮಾಕ್ಷಿ||

9. ಕುಂದಮುಕುಳರದಾ, ಸುರಬೃಂದವಿನುತಪದಾ, ಭೂವಿಲೊ ವರದಾ-
ಯಕಿಗದಾ ನಾ ಮೊರಲು ಚೆವುಲಕು ವಿನದಾ ಗಿರಿಸುತ? ||ಕಾಮಾಕ್ಷಿ||
10. ನೀವಲನೇ ಗಲದಾ ನೆರದಾತವು ಈ ಜಗತಿಲೋ ? ನೀದು
ಪದಸಾರಸಮುಲು ಈ ಭವಜಲಧಿಕಿ ತರಿಯನುಚು ಮಿಗುಲ ||ಕಾಮಾಕ್ಷಿ||
11. ಕಮಲಸಂಭವ ಸುರಮುನೀಂದ್ರುಲ ಚೇತನು ನಿನ್ನು ಪೊಗಡುಟಕು
ತರಮಾಮ್ಮಾ? ಶುಭಮಿಮ್ಮಾ! ನಿನ್ನು ನಮ್ಮಿತಿನಿ ಶ್ಯಾಮಕೃಷ್ಣಸೋದರಿ
ದುರಮುಗನು ಕರುಣಸಲುಪುಮಿಕನು ||ಕಾಮಾಕ್ಷಿ||

ವ್ಯಾಖ್ಯಾನ

ಕರ್ಣಾಟಕ ಸಂಗೀತದ ಸೌಂದರ್ಯದ ಸಂಕೀರ್ಣತೆಯನ್ನೂ ಸಂಕೀರ್ಣತೆಯ ಸೌಂದರ್ಯವನ್ನೂ ಪ್ರತಿಬಿಂಬಿಸಿ ಪ್ರತಿನಿಧಿಸುವ ಅದ್ಭುತ ರಾಗ ಸೃಷ್ಟಿಗಳಲ್ಲಿ ಯದುಕುಲಕಾಂಭೋಜಿ ಶ್ರೇಷ್ಠ. ಇದು ಜಾನಪದ ಮಟ್ಟುಗಳ ಮೂಲ ಹೊಂದಿ ಶಾಸ್ತ್ರೀಯ ಸಂಗೀತ ಪದ್ಧತಿಯೊಳ್ಳಕ್ಕೆ ಪ್ರವೇಶಿಸಿ ಸಂಕೀರ್ಣತೆಯನ್ನು ಬೆಳೆಸಿಕೊಂಡು, ಹುಟ್ಟಿದ ಮನೆಗಿಂತ ಮೆಟ್ಟಿದ ಮನೆಯನ್ನು ಸಮರ್ಥವಾಗಿಯೂ ಎಲ್ಲರ ಪ್ರೀತಿ ಗೌರವಗಳನ್ನು ಪಡೆದೂ, ಬೆಳಗಿಸುತ್ತಿರುವ ಹೃದಯಸ್ಪರ್ಶಿ ರಕ್ತಿರಾಗ. ಸಂಗೀತ ತ್ರಿಮೂರ್ತಿಗಳಲ್ಲಿ ಎಲ್ಲರೂ ತಮ್ಮ ತಮ್ಮ ಅದ್ಭುತ ಕೃತಿ ರತ್ನಗಳನ್ನು ಈ ರಾಗದಲ್ಲಿ ನೀಡಿರುವ ನಿಟ್ಟಿನಲ್ಲೇ ಶ್ಯಾಮಶಾಸ್ತ್ರಿಗಳ ಕಲ್ಪನಾ ಮನೋಧರ್ಮದ ಬಾಗಿಲನ್ನು ತೆಗೆದು ಭೈರವಿ ಸ್ವರಜತಿಯ ಹಂದರದಲ್ಲೇ ಮತ್ತೊಂದು ರತ್ನವನ್ನು ಸಂಗೀತ ಕ್ಷೇತ್ರಕ್ಕೆ ನೀಡುವ ಸ್ಫೂರ್ತಿ ನೀಡಿದ ರಾಗವಿದು. ಎಲ್ಲ ರಾಗಗಳಿಗಿರುವಂತೆಯೇ ಆರೋಹಣ ಅವರೋಹಣ ಕ್ರಮದಲ್ಲಿ ಒಂದು ಸ್ವರ ಶ್ರೇಣಿಯೆಂಬುದಿದ್ದರೂ, ರಾಗಭಾವ ಪ್ರಾಧಾನ್ಯದಿಂದ ಆ ಕಟ್ಟುಪಾಡಿಗೆ ಸೀಮಿತಗೊಳ್ಳದೆ ಸ್ವರ ಸಂಚಾರ ಕ್ರಮದಾಚೆ ಚಲಿಸಿ ಮೇಲ್ನೋಟಕ್ಕೆ ಸಂಚಾರೊಲ್ಲಂಘನವೆಂದು ಕಂಡರೂ ರಾಗತ್ವ ಪ್ರತಿಪಾದನೆಗೆ ಬಹಳ ಅವಶ್ಯವಾದ ಸಂಚಾರೊಲ್ಲಂಘನವೇ ಈ ರಾಗಕ್ಕೆ ಸೌಂದರ್ಯ ನಿಯಮವೆಂದಾದ ರೀತಿಯ ಮಹಾರಾಗ ಯದುಕುಲ ಕಾಂಭೋಜಿ. ಹಿಂದೆ ಹೇಳಿದಂತೆ, ಶಾಸ್ತ್ರೋಕ್ತ ರಾಗಲಾಪನ ಪದ್ಧತಿಯ ವಿಧಾನದಲ್ಲೇ ರಾಗವು ಎಳೆಎಳೆಯಾಗಿ ಆವಿಷ್ಕಾರ

ಗೊಳ್ಳುತ್ತದೆ. ಅಂತೇ, ಸ್ವರಜತಿಯ ಪಲ್ಲವಿಯ ಗೇಯ ಯದುಕುಲ ಕಾಂಭೋಜಿಯ ಆಕ್ಷಿಪ್ತಿಕೆಯೇ ಆಗಿದೆ.

ಕಾಮಾಕ್ಷೀದೇವಿಯಲ್ಲಿ ತಮ್ಮ ಎಂದಿನ ಪೂರ್ಣ ನಂಬಿಕೆ-ಅನನ್ಯ ಭಕ್ತಿ ಮತ್ತು ದೇವಿಯ ಅನುಗ್ರಹದ ಬಗ್ಗೆ ಭರವಸೆಗಳ ಭಾವನೆಗಳು ರಚನೆಯುದ್ದಕ್ಕೂ ಕಾಣುತ್ತವೆ. ಭೈರವಿ ರಾಗದ ಸ್ವರಜತಿಯಲ್ಲಿ ವ್ಯಕ್ತವಾದ ಹಲವು ಸ್ತುತಿಯ, ಬಿನ್ನಹದ ಇತ್ಯಾದಿ ಭಾವನೆಗಳು- ಮಾತುಗಳು ಈ ಸ್ವರಜತಿಯಲ್ಲೂ, ಪುನರಾವರ್ತಿಸಿವೆ. ನಮ್ಮ ದೇವ ದೇವತೆಗಳ ಸಂಬಂಧವಾದ ಪೌರಾಣಿಕ ವರ್ಣನೆ, ಕತೆಗಳು, ವಿವರಗಳಲ್ಲಿ ವಾಗ್ಗೇಯ ರಚನೆಗಳಲ್ಲಿ ಆಯ್ಕೆಮಾಡಿ ಬಳಸಬಹುದಾದ ವಸ್ತುವಿಗೆ ಉಪಮೆಗಳಿಗೆ ಸನಾತನ ಸಂಸ್ಕೃತಿ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಒಂದು ಸೀಮಿತತೆ ಕಾಣುತ್ತದೆ. ಎಂದೇ, ಅವೇ ಆವೇ ಪರಿಕಲ್ಪನೆಗಳನ್ನು ಎಲ್ಲ ವಾಗ್ಗೇಯಕಾರರೂ ವಿಫುಲವಾಗಿ ಬಳಸಿರುವುದು ವ್ಯಕ್ತವಾಗುತ್ತದೆ. ಒಬ್ಬರೇ ವಾಗ್ಗೇಯಕಾರರ ರಚನೆಗಳಲ್ಲೇ ಪರಿಕಲ್ಪನೆಗಳು, ಭಾವನೆಗಳು, ಪುನರಾವರ್ತಿಸಲು ಇದು ಮುಖ್ಯವಾದ ಕಾರಣ. ಭಕ್ತರ ಭಾವನೆಗಳು, ಭಕ್ತರ ಭಾವನೆಗಳು, ಭಕ್ತಿಯ ಮಾರ್ಗವೆಂಬವೂ ಎಲ್ಲರಿಗೂ ಸಾಧಾರಣವಾದವೇ (common to all) ಆಗಿ ಅವವೇ ವ್ಯಕ್ತಪಟ್ಟಿರುತ್ತವೆ.

ಭೈರವಿ ರಾಗದ ಸ್ವರ ಜತಿಯಲ್ಲಿ ಸ್ವರಶ್ರೇಣಿಯ ಪ್ರತಿ ಸ್ವರದಿಂದಲೂ ಆರಂಭಿಸುವ 8 ಜತಿಗಳು ಪಲ್ಲವಿಯನ್ನು ಸೇರಿಕೊಂಡರೆ, ಯದುಕುಲಕಾಂಭೋಜಿ ರಾಗದ ಸ್ವರಜತಿಯಲ್ಲಿ 11 ಜತಿಗಳಿವೆ. ಈ ರಾಗದ ಆರೋಹಣದ ಸ್ವರಗಳಿಂದ ಆರಂಭಿಸುವಂತೆ :

ಷಡ್ಜದಿಂದ 2, ರಿಷಭದಿಂದ ಎರಡು, ಮಧ್ಯಮದಿಂದ 1, ಪಂಚಮದಿಂದ ಮೂರು, ಧೈವತದಿಂದ ಎರಡು, ತಾರ ಷಡ್ಜದಿಂದ ಒಂದು, ಹೀಗೆ ಜತಿಗಳು ಆರಂಭಗೊಳ್ಳುವಂತೆ ರಚಿತವಾಗಿ ಒಟ್ಟು 11 ಜತಿಗಳಿವೆ.

ಈ ಸ್ವರಜತಿಯ ಸಾಹಿತ್ಯ ಭಾವವನ್ನು ಸವಿಯೋಣ :

ಮಾತೆ ಕಾಮಾಕ್ಷಿ, ನಿನ್ನ ಪಾದದ್ವಯವೇ ನನಗೆ ಶಾಶ್ವತವಾದ ನೆಲೆಯೆಂದು ನಾ ನಂಬಿದ್ದೇನೆ ತಾಯೆ, ನನ್ನ ಚಿಂತೆಗಳನ್ನೆಲ್ಲ ನಿವಾರಿಸಮ್ಮಾ! ಇನ್ನು, ಜತಿಗಳಲ್ಲಿ,

1. ಹೇ ಅಂಬೆ, ನನ್ನನ್ನು ಕಾಯುವುದಕ್ಕೆ ಅವಶ್ಯಕತೆ ಇರುವ ಸಮಯವಿದು. ಪತಿತರನ್ನೂ ಪಾವನಗೊಳಿಸಿ ಮೇಲೆತ್ತುವವಳು ನೀನೇ ಅಲ್ಲವೆ ತಾಯಿ !? ||ಕಾಮಾಕ್ಷಿ||

2. ಎಂದೆಂದಿಗೂ ನಿನಗೆ ಪೂರ್ಣ ಶರಣು ಹೋಗಿಯೇ ನಿನ್ನನ್ನೇ ಬೇಡಿಕೊಳ್ಳುತ್ತಿರುವ ನಿನ್ನ ಮಗ ನಾನು. ದಯಾ ಸಹಿತಳಾದ ಕಾಮಾಕ್ಷೀ ದೇವಿಯೇ! ||ಕಾಮಾಕ್ಷಿ||

3. ಬ್ರಹ್ಮ ವಿಷ್ಣು ಮಹೇಶ್ವರರೆಲ್ಲ ಕೊಂಡಾಡಿದ ಭವತಾರಕ ಪದದ್ವಯ ನಿನ್ನದು. ನಿನ್ನ ಮಗನಾದ ನನ್ನೊಂದಿಗೇಕೆ ಈ ಸೆಣಸಾಟ ? ||ಕಾಮಾಕ್ಷಿ||

4. ಕಮಲದ ದಳದಂತೆಯೇ ಸುಂದರವಾದುದು ನಿನ್ನ ಕಣ್ಣುಗಳು, ನಿನ್ನ ಕೇಶರಾಶಿಯೋ ಮಳೆ ಮೋಡಗಳ ಕಾಂತಿಯನ್ನೇ ಕಾಂತಿಯಲ್ಲಿ ಗೆಲ್ಲುವಂಥದು, ನಿನ್ನ ಮುಖವಂತೂ ಪೂರ್ಣ ಚಂದ್ರನ ಕಾಂತಿಯುತವಾಗಿ ಸುಂದರವಾದುದು. ||ಕಾಮಾಕ್ಷಿ||

5. ನೀ ಮಾನವತಿ-ಅರ್ಥಾತ್, ದೇವ ದೇವತೆಗಳಿಗೇ, ತ್ರಿಮೂರ್ತಿಗಳಿಗೇ ಮಾನ್ಯಳಾದವರು. ನಿನ್ನನ್ನು, ಸದಾ ಕಾಲವೂ ಮನಸಿಟ್ಟು, ಧ್ಯಾನಿಸಿದ ಮಾನವ ಭಕ್ತರಿಗೆಲ್ಲ ಫಲಗಳನ್ನು ನೀಡುವುದೇ ಸತ್ಯವೆಂಬ ವಿಶಾಲ ಖ್ಯಾತಿ ಬಿರುದುಗಳು ನಿನ್ನವು, ಅಂಥ ದೇವತೆ ಎಂದು ಕೇಳಿದ್ದೇನಲ್ಲ! ಎಂದೇ, ನೀನೇ ಗತಿಯೆಂದು ಮೊರೆಯಿಡುತ್ತಿದ್ದೇನೆ ||ಕಾಮಾಕ್ಷಿ||

6. ಪಾಪನಾಶಿನಿಯಾಗಿ ನೀನು ಪಾವನಿ, ಶಿವನ ಅರ್ಧಾಂಗಿನಿಯೂ ಪರ್ವತರಾಜನ ಪುತ್ರಿಯಾಗಿ ಪಾರ್ವತಿಯೂ, ತ್ರಿಲೋಕ ಜನನಿ ನೀನೇ ಆಗಿದ್ದೀಯೆ! ಪಾತಕಗಳನ್ನು ತೊಡೆದುಹಾಕಿ ನಿನ್ನ ಅನುಗ್ರಹವೆಂಬ ವರ ನೀಡು ತಾಯೆ!||ಕಾಮಾಕ್ಷಿ||

7. ಹೇ ಕನಕದುರ್ಗಾಂಬಾ (ಇದು ವಿಜಯವಾಡಾ ಊರಾಚೆ ಇರುವ ಪ್ರಸಿದ್ಧವಾದ ಬೆಟ್ಟದ ಮೇಲಿನ ಕನಕದುರ್ಗಾದೇವಿಯ ಸನ್ನಿಧಿ), ನಿನ್ನ ಸೇವೆ ಮಾಡಿದ ಜನರಿಗೆ-ಭಕ್ತರಿಗೆ ವರದಾಯಿನಿ ಎಂದು ವೇದಗಳೇ ಸಾರುವುದನ್ನು ಕೇಳಿ ಕೇಳಿಯೇ ನಿನ್ನಲ್ಲಿ ಈ ಮೊರೆ ತಾಯೆ! ||ಕಾಮಾಕ್ಷಿ||

ಈ ಮೂರೂ ಜತಿಗಳ ಭಾವನೆಗಳು ಭೈರವಿ ಸ್ವರಜತಿಯಲ್ಲಿ ನಿವೇದಿಸಿಕೊಂಡವೇ.

8. ಈ ಜತಿಯಲ್ಲಿ, ದೇವಿಯ ಪದದ್ವಯವನ್ನು ಹೊಸ ಚಿಗುರಿನ ಮದುತ್ವ ಸೌಂದರ್ಯಗಳಿಗೆ ಹೋಲಿಸಿ, ಮದಗಜಗಮನ ಎಂದು ದೇವಿಯ ನಡಿಗೆಯ ಘನತೆ ಗಾಂಭೀರ್ಯಗಳನ್ನು ಕೊಂಡಾಡಿ, ತಾಯಿ, ನಾನಿನ್ನೊಂದು ನಿಮಿಷದಷ್ಟೂ ತಾಳಲಾರೆ, ಕಾಯಲಾರೆ, ಹೇ ಪರಾತ್ಪರಿ, ತಡಮಾಡದೆ ನನ್ನನ್ನು ಈಗಲೇ ಕಾಯಬೇಕು ತಾಯಿ, ಎನ್ನುತ್ತಾರೆ.||ಕಾಮಾಕ್ಷಿ||

9. ಮಲ್ಲಿಗೆಯ ಬಿಳುಪಿನ ಕಾಂತಿಮಯ ಹಲ್ಲುಗಳ ಸೌಂದರ್ಯವನ್ನೂ, ದೇವತೆಗಳ ಸಮೂಹವೇ ಮಾತೆಯ ಪಾದಮಹಿಮೆಯನ್ನು ಕೊಂಡಾಡುವುದಾಗಿಯೂ ದೇವಿಯನ್ನು ವರ್ಣಿಸಿ, ವರಪ್ರದೆ ಎಂದರೆ ನೀನೇ ಅಲ್ಲವೇ, ಹೀಗಿರುವಾಗ, ನನ್ನ ಮೊರೆ ನಿನಗೆ ಕೇಳಿಸದೆ ತಾಯಿ, ಹೇ, ಗಿರಿಜೇ ಎಂದು ಈ ಜತಿಯಲ್ಲಿ ಮೊರೆಯಿಡುತ್ತಾರೆ ಶ್ರೀ ಶಾಸ್ತ್ರಿಗಳು.

10. ತಾಯಿ, ಈ ಲೋಕದಲ್ಲಿ ಆಲಂಬನವೆಂದರೆ ನಿನ್ನಂಥ ಆಲಂಬನ ಮತ್ಯಾರಲ್ಲಾದರೂ ಸಾಧ್ಯವೇ? ನಿನ್ನ ಅಡಿದಾವರೆಗಳು ಮೋಕ್ಷದಾಯಕವಾದವು, ಭವಜಲಧಿಯನ್ನು-ಅಂದರೆ ಈ ಸಂಸಾರ ಸಾಗರವನ್ನು, ದಾಟಲು ದೋಣಿಯಾಗಿ ಏಕೈಕ ಸಾಧನ. ಇದನ್ನು ನಿಶ್ಚಲವಾಗಿ ನಂಬಿರುವುದರಿಂದಲೇ ನಿನ್ನ ಅನುಗ್ರಹಕ್ಕಾಗಿ ಕಾಯುತ್ತಿದ್ದೇನೆ. ||ಕಾಮಾಕ್ಷಿ||

11. ಅತ್ಯುನ್ನತವಾದ ನಿನ್ನ ಮಹಿಮೆಯನ್ನು ವರ್ಣಿಸಲು, ಕೊಂಡಾಡಲು ಬ್ರಹ್ಮೇಂದ್ರಾದಿಗಳಿಗೂ ಮುನಿ ಶ್ರೇಷ್ಠರಿಗೂ ಅತೀತವಾದುದೇ ಅಲ್ಲವೇ ತಾಯಿ? ಹೇ ನಾರಾಯಣಿ, ಶ್ಯಾಮಕೃಷ್ಣ ಸೋದರಿ, ಶುಭವನ್ನನುಗ್ರಹಿಸು, ನಿನ್ನೇ ನಂಬಿದ್ದೇನೆ, ಇನ್ನಾದರೂ ಬೇಗನೆ ನಿನ್ನ ಕರುಣೆ ತೋರು ದೇವಿ! ||ಕಾಮಾಕ್ಷಿ||

ಹೀಗೆಂದು ಯದುಕುಲಕಾಂಭೋಜಿಯ ಭಾವಗಳಿಗೆ ಸೂಕ್ತ ಉಪಸಂಹಾರವಾಗಿ ಈ ಚರಣವನ್ನು ಹಾಡಿ ಈ ಸ್ವರಜತಿಯನ್ನು ಸಮಾಪ್ತಿಗೊಳಿಸುತ್ತಾರೆ.

3. ಸ್ವರಜತಿ -''ರಾವೇ ಹಿಮಗಿರಿ ಕುಮಾರಿ'' ತೋಡಿ ರಾಗ, ಆದಿತಾಳ :

ಸಾಹಿತ್ಯದ ಮೂಲ ಪಾಠ

ರಾವೇ, ಹಿಮಗಿರಿ ಕುಮಾರಿ, ಕಂಚಿ ಕಾಮಾಕ್ಷಿ, ವರದಾ |
ಮನವಿ ವಿನವಮ್ಮ ಶುಭಮಿಮ್ಮ, ಮಾಯಮ್ಮಾ ! ||ರಾವೇ||

ಜತಿಗಳು-ಸ್ವರ ಸಾಹಿತ್ಯ

1. ನತಜನ ಪರಿಪಾಲಿನಿವನುಚು ನಮ್ಮಿತಿನಿ ಸದಾ ಬ್ರೋವ ||ರಾವೇ||
2. ಮದಮತ್ತ ಮಹಿಷದಾನವ ಮರ್ದಿನಿ ! ವೆತ ದೀರ್ಚವೇ ದುರಮುಗನು ||ರಾವೇ||
3. ಕಾಮಪಾಲಿನಿ ನೀವೆ ಗತಿಯನಿ ಕೋರಿತಿ, ಕೊನಿಯಾಡಿತಿ, ವೇಡಿತಿ ||ರಾವೇ||
4. ಕಮಲಮುಖಿ, ದರಗಳ, ಘನನೀಲಕಚಭರಾ, ಮೃಗವಿಲೋಚನ, ಮಣಿರದನಾ, ಗಜಗಮನಾ, ಮದಿಲೋ ನಿನ್ನು ಸದಾ ದಲಚುಕೊನಿ ಧ್ಯಾನಿಂತುನೇ ತಲ್ಲಿ
('ನೀ ಧ್ಯಾನಮೇ ತಲ್ಲಿ' ಎಂಬ ಪಾಠಾಂತರವಿದೆ) ||ರಾವೇ||
5. ಶ್ಯಾಮಕೃಷ್ಣನುತಾ ವಿನು ! ನಾ ಚಿಂತನು ವೇವೇಗ ದೀರ್ಚಿ ಅಭಯಮಿಯ್ಯವೇ, ಕಲ್ಯಾಣಿ, ಕಂಚಿಕಾಮಾಕ್ಷಿ ನೀ ಪಾದಮೇ ದಿಕ್ಕು ||ರಾವೇ||

ವ್ಯಾಖ್ಯಾನ

ಈ ಸ್ವರಜತಿ ಶ್ರೀ ಶ್ಯಾಮಶಾಸ್ತ್ರಿಗಳ ವಿಶೇಷ ವಿಳಂಬ ನಡೆಯಲ್ಲಿನ ಪ್ರಭುತ್ವಕ್ಕೊಂದು ನಿದರ್ಶನ. ರಚನೆಯ ವರ್ಗ ಸ್ವರಜತಿಯಾದರೂ, ಸ್ವರಜತಿಯದೇ ಹಂದರವಾದರೂ, ಪರಿಣಾಮದಲ್ಲಿ, ಅಚ್ಚುಕಟ್ಟಾದ, ಪ್ರೌಢವಾದ, ಲಯದ ಉಚ್ಚ ನಿಯಂತ್ರಣ ಶಕ್ತಿಯನ್ನಪೇಕ್ಷಿಸುವ ವಿಶೇಷ ವಿಳಂಬ ಕೃತಿಯೊಂದನ್ನು ಸುಂದರ ಸಾಹಿತ್ಯವನ್ನಾಸ್ವಾದಿಸಿಕೊಂಡು ಹಾಡಿದ ಅಥವಾ ಆಲಿಸಿದ ಆನಂದಪ್ರದವಿದು. ಉಳಿದೆರಡು ಸ್ವರಜತಿಗಳು ವಿಳಂಬ ಮಿಶ್ರಛಾಪು

ತಾಳದ ಗಾಂಭೀರ್ಯದ ನಡೆಯಾದರೆ, ಈ ಸ್ವರಜತಿಯದು ಆದಿತಾಳದ ವಿಶೇಷ ವಿಳಂಬ ಮತ್ತೇಭಗಮನದ ನಡೆ, ಆಯ್ಕೆಯಾದ ರಾಗವೋ, ತೋಡಿ. ಭೈರವಿ-ಯದುಕುಲಕಾಂಭೋಜಿಗಳಿಗಿಂತಲೂ, ಸರ್ವಸ್ವರ ಗಮಕಾಲಂಕರಣ ವೈಭವವನ್ನು ಪ್ರಕಾಶಪಡಿಸಿಕೊಂಡು ಕರ್ಣಾಟಕ ಸಂಗೀತ ಪದ್ಧತಿಯ, ಶೈಲಿಯ ಸಮರ್ಥ ಸರ್ವೋಚ್ಚಪ್ರತಿನಿಧಿಯಾದ ಮಹಾರಾಗ. ರಾಗಗಳಲ್ಲಿ ರಾಜ. ಇದನ್ನು ರಚಿಸುವಾಗಲೂ ಉಳಿದೆರಡು ಸ್ವರಜತಿಗಳಲ್ಲಿರುವಂತೆ, ಶ್ರೀ ಶಾಸ್ತ್ರಿಗಳ ಆಧ್ಯಾತ್ಮಿಕ ಭಾವನಾ ಮನೋವಿಜ್ಞಾನ - Spiritually oriented emotional psychology- ಒಂದು Quadratic graph... ನಂತೆ, ಮಂದ್ರಸ್ಥಾಯಿಯ ಧೀರ್ಘಸ್ವರಗಳ ರಾಗವಿಲಾಸದಿಂದ ಆರಂಭಗೊಂಡು ಕ್ರಮಶಃ ಸ್ಥಾಯಿಯ ಎಲ್ಲ ಹಂತಗಳಲ್ಲೂ ವಿಲಾಸವಾಡುತ್ತ, ವಿಹರಿಸುತ್ತಾ, ಕಡೆಯ ಜತಿ ಅಥವಾ ಚರಣದಲ್ಲಿ ಭಾವನಾತ್ಮಕತೆಯ, ಭಾವಪರವಶತೆಯ ಪರಾಕಾಷ್ಠವನ್ನು ತಾರಸ್ಥಾಯಿಯ ರಾಗ ಸಂಚಾರಗಳಲ್ಲಿ ತಲುಪಿ ಆರಂಭಿಸಿದ ಪಲ್ಲವಿಯ ಸ್ಥಾಯಿಯಲ್ಲಿಗಿಳಿದು ಆಧಾರ ಷಡ್ಜದಲ್ಲಿ ಶಾಂತರಸವನ್ನು ವಿತರಿಸುವುದೇ ಆಗಿದೆ. ಇನ್ನು

ಇದರ ಸಾಹಿತ್ಯದಲ್ಲಿನ ಭಾವನಾತ್ಮಕತೆಯ ದರ್ಶನ ಮಾಡೋಣ :

'ರಾವೇ, ಹಿಮಗಿರಿ ಕುಮಾರಿ, ಕಂಚಿ ಕಾಮಾಕ್ಷಿ, ವರದಾ' ಎಂದು ದೇವಿಯಲ್ಲಿ ಶಾಸ್ತ್ರಿಗಳಿಗಿದ್ದ ನೈಕಟ್ಯ ಭಾವನೆಯನ್ನು ವ್ಯಕ್ತಪಡಿಸುತ್ತಾರೆ.

'ರಾವೇ' ಎಂದರೆ 'ಬಾರೇ' ಎಂದರ್ಥ. ಇಷ್ಟು ಸಲಿಗೆಯ ಸಂಬೋಧನೆಯೇ? ದೇವರಿಗೇ?! ನಮ್ಮ ಸಂಸ್ಕೃತಿಯ ಭಕ್ತಿಪಂಥದ ಮೇಲ್ಮೆಯೂ ಸ್ವಾರಸ್ಯವೂ ಇರುವುದು ಅಲ್ಲೇ. ಭಕ್ತಿ ಎಂಬುದೇನು? ಪ್ರೇಮದ-ಎಲ್ಲೆ ಇಲ್ಲದ ಅಳತೆಯ-ನೈಕಟ್ಯ-ಭಾವನೆಯೇ ಅಲ್ಲವೆ ? ಅಂಥ ಪ್ರೇಮವಿರುವ ವಲಯಗಳಲ್ಲಿ ಔಪಚಾರಿಕತೆಗೆ ಪ್ರಸಕ್ತಿ ಇಲ್ಲ. ಎಂದೇ ಆ ಸಲಿಗೆ. ಹರಿದಾಸರುಗಳು ಕೃಷ್ಣ ಬಾರೋ, ರಂಗ ಬಾರೋ, ದೇವರ ದೇವ ಶಿಖಾಮಣಿ ಬಾರೋ ಇತ್ಯಾದಿಯಾಗಿಯಾಗಲಿ, ಶ್ರೀ ತ್ಯಾಗರಾಜರು, 'ರಾಮ, ನಮ್ಮ ಮನೆಯವರಿಗೆ ಬಾರೋ'-'ರಾರಾ, ಮಾ ಇಂಟಿದಾಕ ರಘುವೀರ' ಎಂದುದಾಗಲೀ, ಶ್ರೀ ಶ್ಯಾಮಶಾಸ್ತ್ರಿಗಳು 'ರಾವೇ, ಹಿಮಗಿರಿ ಕುಮಾರಿ, ಕಾಮಾಕ್ಷಿ' ಎಂದುದಾಗಲಿ ಎಲ್ಲವೂ ಭಗವಂತನಿಗೆ ತಾನೂ, ತನಗೆ ಭಗವಂತನೂ ಇರುವುದು ಅತ್ಯಂತ

ಪ್ರೇಮದ, ನೈಕಟ್ಯದ ಅವಿನಾ ಸಂಬಂಧದಲ್ಲಿ, ಅಂಥ ಸಂಬಂಧದಲ್ಲಿ ಔಪಚಾರಿಕತೆಗೆ ಜಾಗವೆಲ್ಲಿ? ಭದ್ರಾಚಲ ರಾಮದಾಸರಂತೂ ಇಂಥ ಸಲಿಗೆಯ ಶಿಖರವನ್ನೇ ಏರಿಬಿಡುತ್ತಾರೆ. ಶ್ರೀ ರಾಮನಿಗಾಗಿ ರಾಜ್ಯದ ಬೊಕ್ಕಸ ಬರಿದು ಮಾಡಿ, ಅದನ್ನು ಅಪರಾಧವೆಂದು ಗಣಿಸಿ ರಾಮದಾಸರನ್ನು ಕಾರಾಗೃಹಕ್ಕೆ ತಳ್ಳಿದಾಗ, ಕಾರಾಗೃಹದಲ್ಲೇ ತನ್ನ ಭಕ್ತಿ ಸಂಪದವನ್ನು ಸಮರ್ಥಿಸಿಕೊಳ್ಳುವ ರಾಮದಾಸರು ಶ್ರೀ ರಾಮನನ್ನೇ ತರಾಟೆಗೆ ತೆಗೆದುಕೊಂಡು, ಗದರಿಸುತ್ತಾರೆ: 'ಏನಯ್ಯ ರಾಮ'!, ಬೊಕ್ಕಸದಿಂದಲೇ ಆಗಲಿ, ನಿನಗಾಗಿ ಎಂದೇ ಅಲ್ಲವೇ ಆ ಸಂಪತ್ತನ್ನು ಆಭರಣಗಳನ್ನು ಸಮರ್ಪಿಸಿದುದು? ಅದೆಲ್ಲವೂ ನಿಮ್ಮಪ್ಪನ ಗಂಟೆಂದು ಕೊಂಡೆಯಾ ?'ಇದು ಭಗವಂತನಲ್ಲಿ ಭಕ್ತನ ಸಲಿಗೆಯ ಪರಮಪದ. ಈ ವಲಯಲ್ಲಿ ಇದಕ್ಕೆ ನ್ಯಾಯವಿದೆ.

ಶ್ರೀ ಶ್ಯಾಮಶಾಸ್ತ್ರಿಗಳದು ದೇವಿಯಲ್ಲಿ, ಕಂದನು ಅಮ್ಮನ ಸೀರೆಯ ಸೆರಗನ್ನು ಬಿಡದೆ ತನ್ನ ಮೇಲೆ ತಾಯಿಯ ಗಮನ ಬರುವವರೆಗೂ ಪೀಡಿಸುವಂಥ ಸಲಿಗೆ. ಎಂದೇ, 'ರಾವೇ, ಹಿಮಗಿರಿ ಕುಮಾರಿ' ಎಂದು ಸ್ವರಜತಿಯ ಆರಂಭ ಮುಂದುವರಿದು, ಕಂಚಿ ಕಾಮಾಕ್ಷಿ, ವರದಾ, ನನ್ನ ಮನವಿಯನ್ನಾಲಿಸಮ್ಮಾ, ಶುಭಕೊಡಮ್ಮಾ, ನಮ್ಮಮ್ಮಾ ಬಾರೇ! ನಂತರ ಈ ಸ್ವರಜತಿಯಲ್ಲಿನ ಆರು ಜತಿಗಳಲ್ಲಿ ಇದೇ ಕಂದನ-ತಾಯಿಯ ಸಂಬಂಧ ಪ್ರಕಟವಾಗುತ್ತದೆ.

1. ಆಶ್ರಿತ ಜನ ಪರಿಪಾಲಿನಿ ನೀನು ಎಂದರಿತೇ, ನಂಬಿದೆ, ಸದಾ ಕಾಯಲು, ತಾಯೆ, ಬಾರೇ, ಕಾಮಾಕ್ಷಿ.
2. ಮದೋನ್ಮತ್ತನಾದ ಮಹಿಷಾಸುರನನ್ನು ಸಂಹರಿಸಿದ ತಾಯೆ, ನನ್ನ ಕಷ್ಟವನ್ನು ಬೇಗ ಪರಿಹರಿಸೇ!
3. ಕಾಮನಿಗೆ ಪುನರ್ಜನ್ಮ ಕೊಟ್ಟ ರಕ್ಷಕಿಯೇ ನೀನೇ ನನ್ನ ಏಕೈಕ ಆಶ್ರಯವೆಂದು ಕೋರಿದೆ. ಕೊಂಡಾಡಿದೆ, ಬೇಡಿದೆ ದೇವಿ.
4. ಅಪೇಕ್ಷಿಸಿದ್ದನೆಲ್ಲವನ್ನೂ ವರವಾಗಿ ನೀಡುವ 'ಈಪ್ಸಿತಾರ್ಥ ಪ್ರದಾಯಿನಿ' ಎಂಬುದು ನಿನ್ನ ಬಿರುದೇ ಅಲ್ಲದೇ ತಾಯಿ. ಲೋಕದಲ್ಲಿ ನಿನಗೆ ಸಾಟಿಯುಂಟೇ?

5. ಹೇ. ಕಮಲಮುಖಿ, ಸುಗ್ರೀವಳೇ, ಮೋಡದ ನೀಲದ ಕಾಂತಿಯ ಕೇಶರಾಶಿಯ ಸುಂದರತಾಯೇ, ಜಿಂಕೆಯ ಕಣ್ಣಿನವಳೆ, ಮಣಿ ಪಜ್ತೆಯಂತಿರುವ ದಂತಪಂಕ್ತಿಯವಳೇ, ಗಜಗಮನೆಯೇ, ನಿನ್ನನ್ನೇ ಮತಿಯಲ್ಲಿ ಸದಾ ನೆನೆನೆನೆದು ಧ್ಯಾನಿಸುತ್ತಲೇ ಇರುವೆ ತಾಯಿ ಕಾಮಾಕ್ಷಿ.

6. ಶ್ಯಾಮಕೃಷ್ಣ ನುತೇ ಕೇಳಮ್ಮಾ, ನನ್ನ ಚಿಂತೆಗಳನ್ನು ಬಿರ್‍ರನೆ ತರಿದು ಅಭಯನೀಡಮ್ಮಾ, ಹೇ ಕಲ್ಯಾಣಿ, ಕಂಚಿಕಾಮಾಕ್ಷಿ, ನಿನ್ನ ಪಾದವೇ ನನಗೆ ದಿಕ್ಕು ತಾಯಿ.

ಉಪಲಬ್ಧವಿರುವ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳ ಸಂಖ್ಯೆ ಚಿಕ್ಕದಾದರೂ, ಅಷ್ಟರಲ್ಲೇ ರಚನಾವೈವಿಧ್ಯವಿದ್ದು ಕೃತಿ, ವರ್ಣ, ಸ್ವರಜತಿ ಮತ್ತು ಗೀತ ಇಷ್ಟು ರಚನಾ ಪ್ರಕಾರಗಳು ಲಭ್ಯವಿವೆ. 'ಕೃತಿ' ರಚನಾ ವಿಶೇಷವು ಎಲ್ಲ ವಾಗ್ಗೇಯಕಾರರನ್ನೂ ಅತ್ಯಧಿಕವಾಗಿ ಆಕರ್ಷಿಸಿದ ಪ್ರಕಾರವಾಗಿ, ಎಲ್ಲರ ಕೊಡುಗೆಗಳಲ್ಲೂ ಕೃತಿ ಪ್ರಕಾರವೇ ಅತ್ಯಧಿಕ ಸಂಖ್ಯೆಯಲ್ಲಿ ಲಭ್ಯವಾದುದು. ಶ್ಯಾಮಶಾಸ್ತ್ರಿಯವರದೂ ಇದಕ್ಕೆ ಅಪವಾದವೇನಲ್ಲ. ಪೂಜ್ಯರಿಗೆ ಅತಿ ಹೆಚ್ಚಿನ ಖ್ಯಾತಿಯನ್ನು ತಂದ ಅವರ ಅದ್ಭುತ ಸುಂದರವಾದ ಮೂರು ಸ್ವರಜತಿಗಳಲ್ಲದೆ, ಐದು ಗೀತಗಳನ್ನೂ, ನಾಲ್ಕು ವರ್ಣಗಳನ್ನೂ, ಶ್ರೀ ಶಾಸ್ತ್ರಿಗಳು ರಚಿಸಿದ್ದಾರೆ. ಉಳಿದವುಗಳೆಲ್ಲ ಸಂಸ್ಕೃತ, ತೆಲುಗು, ತಮಿಳು ಭಾಷೆಗಳ ಕೃತಿಗಳೇ. ಕೃತಿಗಳ ಹಂದರವನ್ನು ಗಮನಿಸಿದರೆ ಶ್ರೀ ತ್ಯಾಗರಾಜರ ಕೃತಿಗಳ ಹಂದರ ಮತ್ತು ಶೈಲಿಗಳಿಂದ ವಿಭಿನ್ನವಾಗೇನೂ ಇಲ್ಲ. ಕೆಲವು ಕೃತಿಗಳಿಗೆ ರಚಿಸಿರುವ ಸ್ವರ ಸಾಹಿತ್ಯಗಳನ್ನು ಬಿಟ್ಟರೆ, ಕೃತಿಗಳಿಗೆ ಒಂದೇ ಧಾತುವಿಗೆ ಬಹು ಚರಣಗಳನ್ನು ರಚಿಸಿರುವುದೂ ಇಬ್ಬರ ಶೈಲಿಗಳಲ್ಲೂ ಸಮಾನಧರ್ಮವೇ. ಶಾಸ್ತ್ರಿಗಳ ಗೀತಗಳಲ್ಲೂ ಅಲ್ಪಭಿನ್ನತೆಯ ಒಂದೇ ಧಾತುವಿಗೆ ಬಹುಚರಣ ರಚನ ಧರ್ಮ ಕಾಣುತ್ತದೆ. ಇದು ಶ್ರೀ ಪುರಂದರ ದಾಸರ ಪಿಳ್ಳಾರಿ ಗೀತಗಳಲ್ಲಿ ಕಾಣುವ ಸಂಗತಿ.

❖ ❖ ❖ ❖

ಶ್ರೀ ಶ್ಯಾಮಶಾಸ್ತ್ರಿಗಳ ಗೀತಗಳು

ಶ್ಯಾಮಶಾಸ್ತ್ರಿಗಳ ಗೀತಗಳ ಸಾಹಿತ್ಯದ ಓಟ ಹೇಗಿದೆ? ಕೃತಿಗಳಿಗೂ ಸ್ವರಜತಿಗಳಿಗೂ ಗೀತಗಳಿಗೂ ಕರ್ತೃವಿನ ಭಾವನೆಗಳಾಗಲಿ ಪದಬಂಧಗಳಾಗಲಿ ಹೆಚ್ಚೇನೂ ವಿಭಿನ್ನವಾದದು ಅಲ್ಲದಿದ್ದರೂ ಸಂಪ್ರದಾಯದಲ್ಲಿ ಇಳಿದು ಬಂದ ಒಂದು ಸಣ್ಣ ಧಾರೆಯ ಸ್ವರೂಪದಲ್ಲಿ ಸಂಬೋಧನ ರೂಪದಲ್ಲಿರುವ ದೈವ ಸ್ತುತಿಗಳಾಗಿರುವುದು ಕಂಡುಬರುತ್ತದೆ. ಗೀತಗಳಿಗೆ ಸಹಜವಾದಂತೆ, ಸಾಹಿತ್ಯವು ಯಥಾಕ್ಷರ ಸಾಹಿತ್ಯವಾಗಿ (ಅಂದರೆ ಸ್ವರಕ್ಕೊಂದು ಸಾಹಿತ್ಯಾಕ್ಷರವೆಂಬಂತೆ) ರಚಿತವಾಗಿದೆ.

ಗೀತದ ಗೇಯ ಅಥವಾ ಧಾತುವು ಸಾಂಪ್ರದಾಯಿಕ ಸಂಚಾರೀಗೀತದ ಸರಳ ಧಾತುವೇ ಆಗಿದೆ. ಈ ಗೀತಗಳ ರೂಪ ಹೀಗಿದೆ : ಮೊದಲಿಗೆ

1. **'ಸಾರಸಾಕ್ಷಿ' - ರಾಗ : 'ಸಾವೇರಿ', ತಾಳ : ತ್ರಿಶ್ರತ್ರಿಪುಟ**

ಪಾದ 1 : ಸಾರಸಾಕ್ಷಿ, ಕುಮಾರ ಜನನಿ, ಸರಸಹೃದಯೇ, ಪರಾಶಕ್ತಿ, ಬಾಲೇ, ಸುಶೀಲೇ, ಅಪಾರ ಮಹಿಮಳೇ ಸ್ಫೂರ್ತಿರೂಪಳೇ, ಮಂಗಳೇ - ನನ್ನನ್ನು ಕಾಪಾಡು.

ಪಾದ 2 : ಕೋಟಿ ಸೂರ್ಯ ಪ್ರಭೆ, ಕೋಮಳೇ, ಬಿಂದು ತ್ರಿಕೋಣ ನಿಲಯಳೇ, ಬಂಗಾರದಂತೆ ಹೊಳೆಯುವವಳೇ, ಮೇಖಲಧರೇ (ಡಾಬು), ಸೃಷ್ಟಿಯೇ ಒಂದು ಲೀಲೆಯಾಗಿರುವವಳೇ, ಸುಗುಣಗಳಿಂದ ಕೀರ್ತಿತಳಾಗಿ ಪ್ರಕಾಶಿಸುವವಳೇ, ಉಮೇ-

ಪಾದ 3 : ಶ್ಯಾಮಕೃಷ್ಣ ನುತೇ, ಶ್ಯಾಮಳೇ, ಶ್ರೀ ಕಾಮಕೋಟಿ ಪೀಠವೇ ಮನೆಯಾಗಿ ಉಳ್ಳವಳೇ, ಸಾಮಗಾನಲೋಲೇ, ಸುಶೋಭಿತಳೇ,

ವಿಶಾಲ ಹೃದಯದ ಪ್ರತಿಮೂರ್ತಿಯೇ, ಶುಭಳೇ, ಹೇ ಪಾರ್ವತಿ, ನನ್ನನ್ನು ಕಾಪಾಡು.

2. 'ಕಾಮಾಕ್ಷಿ ಕರುಣಾಕಟಾಕ್ಷಿ' – ರಾಗ : ಫರಜು, ತಾಳ : ತ್ರಿಶ್ರ ತ್ರಿಪುಟ

ಪಾದ 1 : ಕಾಮಾಕ್ಷಿ, ಕರುಣಾ ಕಟಾಕ್ಷಿ, ಕಾಮಾಕ್ಷಿ, ಲೋಕಸಾಕ್ಷಿಣಿ, ಕಾಮಾಕ್ಷಿ, ಕರುಣಾಕಟಾಕ್ಷಿ ಕಾಮಾಕ್ಷಿ ಮಾಂ ಪಾಹಿ ಬಂಗಾರು ಕಾಮಾಕ್ಷಿ.

ಪಾದ 2 : ಕಾಮಕೋಟಿ ಪೀಠಗತೇ, ಕಾಮಿತ ಫಲದಾಯಿಕೇ, ಕಾಮಾಕ್ಷಿ ಮಾಂ ಪಾಹಿ ಕಂಚಿ ಕಾಮಾಕ್ಷಿ ಮಾಂ ಪಾಹಿ.

ಪಾದ 3 : ಪಂಕಜದಳಲೋಚನೇ, ಸಂಕಟಭಯಮೋಚನೇ, ಶಂಕರಿ ಮಾಂ ಪಾಹಿ ಶಿವಶಂಕರಿ ಮಾಂ ಪಾಹಿ.

ಪಾದ 4 : ಶ್ಯಾಮಕೃಷ್ಣ ಪಾಲಿತ ಜನನಿ ಸಾಮಗಾನ ವಿನೋದಿನಿ, ಶ್ಯಾಮಳೇ. ಮಾಂ ಪಾಹಿ, ಶುಕ ಶ್ಯಾಮಲೇ ಮಾಂ ಪಾಹಿ.

ಗೀತಕ್ಕೆ ಸಹಜವಾದುದು ಇದರ ಸಾಹಿತ್ಯದ ಸರಳತೆ, ವ್ಯಾಖ್ಯಾನದ ಅವಶ್ಯಕತೆ ಇಲ್ಲದೆ ಸರಳವಾದ ಪದ ಸರಣಿಯಲ್ಲಿ ಅರ್ಥ ಸ್ವಯಂ ಪ್ರಕಟಗೊಳ್ಳುವಂಥದು.

ಗೀತ 3. 'ಪಾರ್ವತಿ ಜನನಿ' – ರಾಗ : ಭೈರವಿ, ತಾಳ : ಖಂಡಜಾತಿ ಮಠ್ಯ

ಪಾದ 1 : ಪಾರ್ವತಿ ಜನನಿ ಭವಾನಿ ಶ್ರೀ ರಾಜರಾಜೇಶ್ವರಿ | ಸರ್ವಲೋಕ ಪಾಲಿನಿ ಮಾನಿನಿದೇವಿ |

ನೀರಜಾಕ್ಷಿ ಪರಮಪಾವನಿ ಕಾಮಾಕ್ಷಿ | ನಿರಂಜನಿ ಮಾಮವ ಅಂಬ||

ಪಾದ 2 : ಶ್ರೀಕರಿ ಜನನಿ ಮೃಡಾನಿ ಶ್ರೀ ರಾಜರಾಜೇಶ್ವರಿ | ಹ್ರೀಂಕಾರರೂಪಿಣಿ ಹರಿಣಾಕ್ಷಿ ದೇವಿ |

ಶ್ರೀ ಕಾಂಚಿಪುರವಾಸಿನಿ ಕಾಮಾಕ್ಷಿ | ಶ್ರೀ ಕಾಮೇಶ್ವರಿ ಮಾಮವ ಅಂಬ ||

ಪಾದ 3 : ಶಾಂಭವಿ ಜನನಿ ಪುರಾಣಿ ಶ್ರೀ ರಾಜರಾಜೇಶ್ವರಿ| ಶರ್ವರೀಶ ಧಾರಿಣಿ ಶಂಕರಿ ದೇವಿ|

ಶ್ಯಾಮಕೃಷ್ಣ ಪರಿಪಾಲಿನಿ ಕಾಮಾಕ್ಷಿ | ಶ್ಯಾಮಲಾಂಬಿಕೇ ಮಾಮವ
ಅಂಬ ||

ಈ ಗೀತದಲ್ಲಿ ಗಮನಾರ್ಹವಾದ ಅಂಶವೆಂದರೆ ಪ್ರತಿಪಾದದಲ್ಲೂ ಶ್ರೀ ರಾಜರಾಜೇಶ್ವರಿ ದೇವಿಯ ನಾಮೋಚ್ಚಾರಣ ಮೊದಲ ಪಾದಾಂತದಲ್ಲಿಯೂ, ದೇವಿ ಎಂಬ ಪದ ಎರಡನೇ ಪಾದಾಂತದಲ್ಲಿಯೂ, ಕಾಮಾಕ್ಷಿ ಎಂಬ ಪದ ಮೂರನೇ ಪಾದಾಂತದಲ್ಲಿಯೂ ಮತ್ತು ಮಾಮವ ಅಂಬ ಎಂಬ ಪ್ರಾರ್ಥನೆ ನಾಲ್ಕನೇ ಪಾದಾಂತದಲ್ಲಿಯೂ ಗೀತದ ಮೂರೂ ಖಂಡಗಳಲ್ಲಿ ಕಾಣುವ ಪದ ಪುನರಾವರ್ತನೆ. ಎರಡನೇ ಖಂಡದಲ್ಲಿನ ಎರಡನೇ ಪಾದದಲ್ಲಿನ ಹ್ರೀಂಕಾರ ರೂಪಿಣಿ, ಹರಿಣಾಕ್ಷಿ ಎಂಬ ಪದಗಳೂ, ನಾಲ್ಕನೇ ಪಾದದಲ್ಲಿನ 'ಕಾಮೇಶ್ವರಿ' ಶಬ್ದವೂ ಲಲಿತಾ ತ್ರಿಶತಿಯಲ್ಲಿನ ಕ್ರಮವಾಗಿ 81ನೇ 103ನೇ ಮತ್ತು 258ನೇ ನಾಮಗಳನ್ನೇ ನೇರವಾಗಿ ಬಳಸಿದ್ದಾರೆ. ಪ್ರತಿ ಖಂಡದಲ್ಲೂ ಮೂರನೇ ಪಾದದಲ್ಲಿ ಕಾಮಾಕ್ಷಿ ಅಮ್ಮನವರ ಸಾನ್ನಿಧ್ಯದ ಸ್ಮರಣೆ ಹೃದಯಸ್ಪರ್ಶಿಯಾದುದು.

ಗೀತ 4. 'ಕಾಮಾಕ್ಷಿ ಲೋಸಾಕ್ಷಿಣಿ' - ರಾಗ : ಮಧ್ಯಮಾವತಿ, ತಾಳ :ತ್ರಿಶ್ರ ತ್ರಿಪುಟ

ಪಾದ 1 : ಕಾಮಾಕ್ಷಿ ಲೋಕಸಾಕ್ಷಿಣಿ ಕೌಮಾರಿ ಮನೋಹಾರಿಣಿ | ಕಾಮಾಕ್ಷಿ,
ಕಂಚಿ ಕಾಮಾಕ್ಷಿ ಪಾಹಿಮಾಂ ಪಾಹಿಮಾಂ ಪಾಹಿ ಬಂಗಾರು
|| ಕಾಮಾಕ್ಷಿ ||

ಪಾದ 2 : ಪಂಕಜದಳಲೋಚನೇ ಉಮೇ | ಸಂಕಟ ಭಯ ಮೋಚನೇ ಶಿವೇ|
ಕುಂಜರಸಮಗಮನೇ ರಮಣೇ ಮಂಜುಳತಮ ನಯನೇ ಹರಿಣೇ |

ಪಾದ 3 : ಭಂಢದೈತ್ಯಖಂಡನ ಪಂಡಿತೇ ಅಂಡಜ ಹರಿ ಗಿರೀಶ ಮಂಡಿತೇ |
ಪುಂಡರೀಕ ಮೃದುಪದ ಯುಗಳೇ ಮಂಡಲ ಸ್ಥಿತೇ ಲಲಿತೇ ವರದೇ|

ಪಾದ 4 : ಕಾಮಕೋಟಿ ಪೀಠಸುವಾಸಿನಿ ಕಾಮಿತಾರ್ಥ ಶುಭಫಲದಾಯಿಕೇ |
ಸಾಮಗಾನ ಶ್ರುತಿ ಸಮ್ಮೋದಿನಿ ಶ್ಯಾಮಕೃಷ್ಣಪಾಲಿತ ಜನನಿ ||

ಈ ಗೀತದಲ್ಲಿ ಕೆಲವು ಶಬ್ದಗಳ ಬಗ್ಗೆ ಹೇಳಬಹುದೆನಿಸುತ್ತದೆ:

'ಕಾಮಾರಿ ಮನೋಹಾರಿಣಿ' ಎಂಬ ಮಾತಿನಲ್ಲಿ 'ಕುಮಾರ ಸಂಭವ'ದ ಗಾಥೆಯನ್ನೇ ಹೇಳಿದಂತಿದೆ. ಉಳಿದ ರಚನೆಗಳಲ್ಲಿ 'ಮದಗಜಗಮನ' ಎಂಬ ವಿಶೇಷಣವನ್ನು ಇಲ್ಲಿ 'ಕುಂಜರ ಸಮಗಮನ' ಎಂದು ವಿಭಿನ್ನವಾಗಿ ಹೇಳಿದ್ದಾರೆ.

3ನೇ ಖಂಡದಲ್ಲಿನ ಆದಿಯಲ್ಲಿ 'ಭಂಡ ದೈತ್ಯ ಖಂಡನ ಪಂಡಿತೇ ಎಂಬ ಮಾತು ಶ್ರೀ ಲಲಿತಾ ಸಹಸ್ರನಾಮದ 'ಭಂಡಾಸುರವಧೋದ್ಯುಕ್ತ ಶಕ್ತಿ ವಿಕ್ರಮ ಹರ್ಷಿತಾ' ಎಂಬ 65ನೇ ನಾಮದ ಪ್ರತಿಧ್ವನಿಯೇ ಆಗಿದೆ. ಬ್ರಹ್ಮನನ್ನು 3ನೇ ಪಾದಲ್ಲಿ 'ಅಂಡಜ' ಎಂದು ಹೇಳಿರುವುದು ವಿಶೇಷ. ಅವರ 'ಕನಕ ಶೈಲ ವಿಹಾರಿಣಿ' ಕೃತಿಯ ಚರಣದಲ್ಲಿ 'ರಾಜೀವಲೋಚನ'ನೆಂದು ಖ್ಯಾತನಾದ ಶ್ರೀ ಹರಿಯನ್ನು 'ಪುಂಡರೀಕ ನಯನಾರ್ಚಿತಪದಾ' ಎಂಬ ದೇವಿಯ ವಿಶೇಷಣದಲ್ಲಿ ವರ್ಣಿಸಿದ ಶ್ರೀ ಶಾಸ್ತ್ರಿಗಳು ಪಾದಗಳ ಸೌಂದರ್ಯಕ್ಕಾಗಿ ಬಳಸಿ 'ಪುಂಡರೀಕ ಮೃದುಪದಯುಗಳೇ' ಎಂಬ ಸುಂದರ ವರ್ಣನೆಯನ್ನು ನೀಡುತ್ತಾರೆ. ಉಳಿದೆಡೆಗಳಲ್ಲಿ ಸಾಮಗಾನ ವಿನೋದಿನಿ ಸಾಮಗಾನಪ್ರಿಯೇ ಮುಂತಾದ, ಎಲ್ಲ ವಾಗ್ಗೇಯಕಾರರೂ ದೇವ-ದೇವತೆಗಳಿಗೆ ಅನ್ವಯಿಸುವ ವಿಶೇಷಣವನ್ನು ಶ್ರೀ ಶಾಸ್ತ್ರಿಗಳು ಈ ರಚನೆಯಲ್ಲಿ 'ಸಾಮಗಾನ ಶ್ರುತಿ ಸಮ್ಮೋದಿನಿ' ಎಂದು ವಿಭಿನ್ನವಾಗಿ ಹೇಳುವ ಮನೋಧರ್ಮ ತೋರಿದ್ದಾರೆ.

ಗೀತ 5. 'ಸಂತತಂ ಎನ್ನೈ ರಕ್ಷಿಪ್ಪಾಯ್' - ರಾಗ : ಫರಜು, ತಾಳ : ಆದಿ

ಶ್ರೀ ಶಾಸ್ತ್ರಿಗಳ ಉಳಿದ ಗೀತಗಳೆಲ್ಲ ಸಂಸ್ಕೃತ ಭಾಷೆಯಲ್ಲಿವೆ. ಈ ಪ್ರಸಕ್ತ ಗೀತವು ತಮಿಳು ಭಾಷೆಯಲ್ಲಿ -ಅಂದರೆ ಶಾಸ್ತ್ರಿಗಳ ಮಾತೃಭಾಷೆಯಲ್ಲಿ ರಚಿತವಾಗಿದೆ. 'ಸಂತತಂ', 'ಸಾರಸಾಕ್ಷಿ', 'ಪಾದಾರವಿಂದ', 'ವೀಣಾ ವಿನೋದಿನಿ'- ಈ ಸಂಸ್ಕೃತ ಪದಗಳನ್ನು ತಮಿಳು ಸಾಹಿತ್ಯದ ಮಧ್ಯೆ ನೇರವಾಗಿ ಬಳಸಿರುವುದರಿಂದ, ಇದನ್ನು 'ಮಣಿ ಪ್ರವಾಳ ರಚನೆ' ಎನ್ನಬೇಕಾಗುತ್ತದೆ. ಸಂಗೀತ ತ್ರಿಮೂರ್ತಿಗಳಲ್ಲಿ ಶ್ರೀ ಶ್ಯಾಮಶಾಸ್ತ್ರಿಗಳು ಮತ್ತು ಶ್ರೀ ಮುದ್ದು ಸ್ವಾಮಿ ದೀಕ್ಷಿತರು ಮಾತ್ರವೇ ಮಣಿಪ್ರವಾಳದಲ್ಲಿ ಕೃತಿಗಳನ್ನು ರಚಿಸಿರುವುದು. ಸಂಸ್ಕೃತ, ತೆಲುಗು, ತಮಿಳ್ ಭಾಷೆಗಳಲ್ಲಿ, ಒಂದು ಭಾಷೆ ಪ್ರಧಾನವಾಗಿದ್ದು ಉಳಿದೆರಡು ಭಾಷೆಗಳ ಕೆಲವು ಪದಗಳನ್ನು ಬಳಸಿ ರಚಿಸಿರುವುದು ಸಾಹಿತ್ಯವುಳ್ಳ ರಚನೆಗಳೇ ಮಣಿಪ್ರವಾಳ ರಚನೆಗಳು.

ಶ್ರೀ ಮುದ್ದುಸ್ವಾಮಿ ದೀಕ್ಷಿತರ ಕಾಪಿಗಾರದ 'ವೇಂಕಟಾಚಲಪತೇ' ಈ ಮೂರೂ ಭಾಷೆಗಳನ್ನು ಬಳಸಿ, ಪ್ರಧಾನವಾಗಿ ತೆಲುಗಿನ ಓಟದ ಸಾಹಿತ್ಯವುಳ್ಳ ಕೃತಿ ರತ್ನ 'ಮಣಿಪ್ರವಾಳ' ರಚನೆಗೆ ಸುಂದರ ಉದಾಹರಣೆ.

ಇನ್ನು ಈ ಗೀತದ ಸಾಹಿತ್ಯ ಭಾವ ಹೀಗೆ :

ಪಾದ 1: ಸಂತತಂ ಎನ್ನೈ ರಕ್ಷಿಪ್ಪಾಯ್ ಉಂದನ್ ಪಾದಾರವಿಂದತ್ತೈ | ವಂದಿಪ್ಪೇನ್ ಅನುದಿನಮುಂ ಚಿಂತಿಪ್ಪೇನ್. -ಅಂದರೆ, ನೀನು ನನ್ನನ್ನು ಯಾವಾಗಲೂ ರಕ್ಷಿಸುವೆ, ನಿನ್ನ ಪಾದ ಕಮಲಗಳನ್ನು ನಾ ವಂದಿಸುವೆ, ಅನುದಿನವೂ ಚಿಂತಿಸುವೆ.

ಪಾದ 2: ಸಾರಸಾಕ್ಷಿ, ಎನ್ ಮನೋ ವಿಚಾರತ್ತೈ ತೀರ್ಕ್ಕ ಮಿಗವುಂ ಭಾರಮಾ ? ಉನ್ ಕಡೈಕ್ಕಣ್ ಪಾರಮ್ಮಾ | ಅಂದರೆ, ಸಾರಸಾಕ್ಷಿಯೇ ನನ್ನ ಮನೋರಥವನ್ನು ಈಡೇರಿಸಲು ಅಷ್ಟು ಕಷ್ಟವೇ ಅಥವಾ ಬಹಳ ಭಾರವೇ ? ನಿನ್ನ ಕಡೆಗಣ್ಣಿನಿಂದ ನೋಡಮ್ಮಾ |

ಪಾದ 3: ಮೇದಿನಿಯಿಲ್ ಉನ್ನೈಪ್ಪೋಲ್ ವೇರು ದೈವಂ ಉಂಡೋ ಶೊಲ್, ಪರಂಜ್ಯೋತಿಯೇ

ಎವರ್ಕುಂ ಅನಾದಿಯೇ | ಅಂದರೆ, ಭುವಿಯಲ್ಲಿ ನಿನ್ನಂಥ ಬೇರಾವದೈವವಾದರೂ ಉಂಟೇ ಹೇಳು ಪರಂಜ್ಯೋತಿಯೇ ಎಲ್ಲರಿಗೂ ಮೊದಲಿನವಳೇ! ಹುಟ್ಟಿಲ್ಲದವಳೇ!

ಪಾದ 4: ಏನನ್ನೂ ಅರಿಯದ ಮೂಢರು ಕೂಡ ನಿನ್ನನ್ನು ಸ್ತುತಿಸುವ ಕಾರಣವಾದರೂ ಏನು? ಅದು ನಿನ್ನ ಮಹತ್ವವೇ !

ಪಾದ 5: ನಾದರೂಪಿಣಿಯೇ, ವೀಣಾವಿನೋದಿನಿಯೇ, ಕಾಮಾಕ್ಷಿ, ಎನ್ನೈ ಆದರಿ. ನನ್ನನ್ನು ಅನುಗ್ರಹಿಸು -ಹೇ ಶ್ಯಾಮಕೃಷ್ಣ ಸೋದರಿ!

ಶ್ರೀ ಶಾಸ್ತ್ರಿಗಳ ತೆಲುಗು ಭಾಷೆಯ ಕೃತಿಗಳಲ್ಲೆಲ್ಲಾ ವ್ಯಕ್ತಪಡಿಸಿರುವ ಭಾವನೆಗಳಲ್ಲದೆ ಈ ಗೀತದ ಸಾಹಿತ್ಯದಲ್ಲಿ ಶ್ಯಾಮಶಾಸ್ತ್ರಿಗಳ ವ್ಯಕ್ತಿತ್ವ ಪ್ರಕಾಶಕವಾದ ವಿಶೇಷವೇನೂ ಇಲ್ಲ.

❖ ❖ ❖ ❖

ಶ್ರೀ ಶ್ಯಾಮಶಾಸ್ತ್ರಿಗಳ ವರ್ಣಗಳು

ಈಗ, ಶ್ಯಾಮಶಾಸ್ತ್ರಿಗಳು ರಚಿಸಿರುವ 4 ವರ್ಣಗಳನ್ನು ವಿಶ್ಲೇಷಿಸಬಹುದು:

ಬೇಗಡೆ ರಾಗದಲ್ಲಿನ ದಯಾನಿಧೇ ಆದಿತಾಳದಲ್ಲೂ, ಸೌರಾಷ್ಟ್ರ ರಾಗದಲ್ಲಿನ 'ನಾಮನವಿನಿ' ಚತುರಶ್ರ ಜಾತಿ ಅಟ್ಟತಾಳದಲ್ಲೂ, ಕಲ್ಯಾಣಿ ರಾಗದಲ್ಲಿನ 'ನೀವೇ ಗತಿಯನಿ ನೆರನಮ್ಮಿನಾನು' ತ್ರಿಶ್ರಜಾತಿ ಮಠ್ಯತಾಳದಲ್ಲೂ, ಆನಂದ ಭೈರವಿ ರಾಗದಲ್ಲಿನ 'ಸಾಮಿನಿ ರಮ್ಮನವೇ' ಖಂಡ ಜಾತಿ ಅಟ್ಟತಾಳದಲ್ಲೂ ರಚಿತವಾಗಿವೆ.

ವರ್ಣಗಳೆಂದರೆ ಶೃಂಗಾರರಸ ಪರವಾದ ರಚನೆಗಳೇ ಎಂದು ಬಹುತೇಕ ರಚಿತವಾಗುತ್ತಿದ್ದ ರೂಢಿಯನ್ನು ಆನಂದ ಭೈರವಿ ರಾಗದ ವರ್ಣದಲ್ಲಿ ಅನುಸರಿಸಿ, ಉಳಿದ ಮೂರು ವರ್ಣಗಳನ್ನು ಶ್ರೀ ರಾಜೇಶ್ವರಿಯ ಸ್ತುತಿಗಳಾಗಿಯೇ ರಚಿಸಿ ಚಿಂತನಾ ವಿಭಿನ್ನತೆಯನ್ನು ಶಾಸ್ತ್ರಿಗಳು ಪ್ರದರ್ಶಿಸಿದ್ದಾರೆ. ಬೇಗಡೆ ರಾಗದ ವರ್ಣ ಸಂಸ್ಕೃತ ಭಾಷೆಯಲ್ಲೂ, ಉಳಿದವು ತೆಲುಗು ಭಾಷೆಯಲ್ಲೂ ರಚಿತವಾಗಿವೆ.

1. **ಸಂಸ್ಕೃತ ಭಾಷೆಯಲ್ಲಿನ 'ದಯಾನಿಧೇ' ಬೇಗಡೆ ರಾಗದ ಆದಿತಾಳದ ವರ್ಣದ ಸಾಹಿತ್ಯ ಭಾವ ಹೀಗಿದೆ:**

ದಯಾನಿಧೆ, ಮಾಮವ (ನನ್ನನ್ನು ಸದಾ ರಕ್ಷಿಸು ಪಾಲಿಸು) ಸದಾ, ಶ್ಯಾಮಕೃಷ್ಣ ಪೂಜಿತೇ|

ಭಯಾಪಹಾರಿಣಿ (ಭಯನಿವಾರಕಳೇ) ಶ್ರೀ ರಾಜ ರಾಜೇಶ್ವರಿ. - ಪಲ್ಲವಿ ಅನುಪಲ್ಲವಿಗಳ ಸಾಹಿತ್ಯವಿದು. ಪರಮಪಾವನಿ ಭವಾನಿ ಪರಾತ್ಪರಿ ಶಿವಶಂಕರಿ - ಇದು ಒಂದೇ ಆವರ್ತದ ಚರಣದ ಸಾಹಿತ್ಯ.

ಚಿಟ್ಟೆಸ್ವರವು ಸ್ವರಸಾಹಿತ್ಯವಾದುದು. ಸಾಹಿತ್ಯ ಯಥಾಕ್ಷರ ಸ್ವಭಾವದ್ದಾಗಿ ಹೀಗಿದೆ :

ಪಾಲಿತ ಜನ ಮುನಿಗಣ ಸುರಸಮುದಯೇ (ಭೈರವಿ ಸ್ವರಜತಿಯಲ್ಲಿ ಹೀಗೇ ಹಾಡಿದ್ದಾರೆ) ಲಲಿತ ಪದಯುಗಳೇ (ಮೃದು ಸುಂದರ ಪದದ್ವಯಗಳು), ಕಮನೀಯ ಕಂಧರೇ (ಸುಂದರವಾದ ಕತ್ತು ಉಳ್ಳವಳು) ಪಾಪಶಮನಿ, ಸುಹೃದಯ ಸಮ್ಮೋದಿತ (ಸಜ್ಜನರಿಂದ ಸಂತೋಷಪಡಿಸಲ್ಪಟ್ಟವಳು) ಮಹನೀಯ ಸುಗುಣಾಲಯೇ (ಗೌರವಾರ್ಹವಾದ ಸುಗುಣಗಳ ಆಗರ)- ಅಂಥ ತಾಯೆ, ವಿತರ ಭಕ್ತಿಂ ಮೇ-(ನನಗೆ ಭಕ್ತಿಯನ್ನು ನೀಡು.)

2. ತೆಲುಗು ಭಾಷೆಯಲ್ಲಿನ ಸೌರಾಷ್ಟ್ರ ರಾಗದ ಚತುರಶ್ರ ಅಟ್ಟತಾಳದ ವರ್ಣವು ಕಾಮಾಕ್ಷಿ ದೇವಿಯ ಸ್ತುತಿಯೇ.

ಈ ವರ್ಣದಲ್ಲೂ ಚಿಟ್ಟೆಸ್ವರವು ಸ್ವರ ಸಾಹಿತ್ಯವೇ. ವರ್ಣದ ಸಾಹಿತ್ಯ ಭಾವ ಹೀಗಿದೆ :

ನಾ ಮನವಿನಿ ವಿನು ಈ ವೇಳ ಬ್ರೋವು ಕಂಚಿಕಾಮಾಕ್ಷಮ್ಮಾ |
ಪಾಮರಪಾಲಿನ ಓ ಜನನೀ ಕೃಪಜೂಡವಮ್ಮಾ | ಅರ್ಥಾತ್,

ನನ್ನ ಮೊರೆಯನಾಲಿಸಮ್ಮಾ ಇಂದು, ಕಾಯೆ ಅಮ್ಮಾ ಕಂಚಿ ಕಾಮಾಕ್ಷಮ್ಮಾ ಕೃಪೆ ಕಾಣಮ್ಮಾ, ನೆಮ್ಮದಿನಿ ನೀ ನಾಮಮೇ ದಿಕ್ಕನಿ ನಿನ್ನೇ ನಮ್ಮಿತಿ ನಮ್ಮಿತಿ ನಮ್ಮಿತಿನಮ್ಮಾ ಮಾಯಮ್ಮಾ.

ಅರ್ಥಾತ್, ನೆಮ್ಮದಿಯಿಂದ ನಿನ್ನ ನಾಮವೇ ನನ್ನ ಗುರಿ ದಾರಿ, ನಿನ್ನನ್ನೇ ನಂಬಿದೆ, ನಂಬಿದೆ ನಂಬಿದೆನಮ್ಮಾ ನಮ್ಮಮ್ಮಾ | ಇಷ್ಟು ಪಲ್ಲವಿ ಅನುಪಲ್ಲವಿಗಳಿಗೆ.

ಒಂದೇ ಸಾಲಿನ ಚರಣದಲ್ಲಿ 'ಭಕ್ತುಡೈನ ನಾಪೈ ಇಂತವಾದಾ ಮಾಯಾಮ್ಮಾ, ಮುಕ್ತಿನೀಯವೇ ಶ್ಯಾಮಕೃಷ್ಣನುತಾ ಅಂಬಾ.'

ಅಂದರೆ, ಭಕ್ತನಾದ ನನ್ನ ಮೇಲೆ, ನಮ್ಮಮ್ಮಾ, ಇಷ್ಟು ಅಸಡ್ಡೆಯೇ ? ಶ್ಯಾಮಕೃಷ್ಣನುತೇ, ತಾಯೆ, ಮುಕ್ತಿ ಕೊಡಮ್ಮಾ !

ಸ್ವರ ಸಾಹಿತ್ಯ ಹೀಗಿದೆ :

ಪಾದಕಮಲಯುಗಮುಲಪೈ ಗತಿಯನಿ ನೀ ಸನ್ನಿಧಿನಿ ವಚ್ಚಿನ ದಾಸುನಿ

ನನ್ನು ಚನುವುನ ರಕ್ಷಿಂಚುಟಕು ಬರುವಾ ? ಈ ಧರಲೋ ದೆಲಿಸಿ ದೆಲಿಯಕ ಜೇಸಿನ ಅಪರಾಧಮುಲನು ಮನ್ನಿಂಚಿ ನೀವು ಮಾ ದುರಿತಮು ದೀರ್ಚಿ ದಯಜೂಪಿಪುಡು

ಅರ್ಥಾತ್, ಪಾದಕಮಲದ್ವಯದ ಮೇಲೆ, ನಿನ್ನ ಸನ್ನಿಧಿ ಶರಣು ಬಂದ ದಾಸನಾದ ನನ್ನನ್ನು ಸಲಿಗೆಯಿಂದ (ಆತ್ಮೀಯವಾಗಿ) ಪ್ರೀತಿಯಿಂದ ರಕ್ಷಿಸಲು ಭಾರವಾಯಿತೇ ? ಈ ಭುವಿಯಲ್ಲಿ, ಅರಿತು, ಅರಿಯದೆ, ಮಾಡಿದ ಅಪರಾಧಗಳ ಮನ್ನಿಸಿ ನೀನು ನಮ್ಮ ಕಷ್ಟಗಳನ್ನು ನಿವಾರಿಸಿ ದಯೆ ತೋರೀಗ.

3. ವರ್ಣ 'ನೀವೇ ಗತಿಯನಿ ನೆರನಮ್ಮಿನಾನು' - ರಾಗ : ಕಲ್ಯಾಣಿ, ತಾಳ : ತ್ರಿಶ್ರ ಮಠ್ಯ

ಇದೂ ಸಹ ತೆಲುಗು ಭಾಷೆಯಲ್ಲಿನ ಶ್ರೀ ರಾಜರಾಜೇಶ್ವರಿಯಲ್ಲಿ ನಿವೇದಿಸಿದ ಪ್ರಾರ್ಥನೆಯೇ.

ಈ ವರ್ಣದ ಸಾಹಿತ್ಯಭಾವ ಹೀಗಿದೆ :

ಹೇ ಜಗದಂಬೆ, ನೀನೇ ಗತಿಯೆಂದು ನಿನ್ನನ್ನೇ ಗಾಢವಾಗಿ ನಂಬಿದೆ ನಮ್ಮಮ್ಮಾ, ನೀನು ಅನಾಥ ರಕ್ಷಕಿ. ಹೇ ರಾಜರಾಜೇಶ್ವರಿ ದೇವಿ, ಬೇಗನೆ ಬಾರೇ, ಮೊರೆ ಕೇಳಮ್ಮಾ !

ಕಾಮಕೋಟಿ ಪೀಠ ನಿವಾಸಿನಿ, ಕಲ್ಯಾಣಿ, ಶ್ಯಾಮಕೃಷ್ಣ ಸೋದರಿ, ದೇವಿ, ನಿನ್ನ ಚರಿತೆಯನ್ನು ಕೇಳಿ ಕೇಳಿ ಸದಾ ಆಶ್ರಯವೆಂದು ನಿನ್ನ ಪಾದಕಮಲಗಳನ್ನು ಕೋರಿಕೊಂಡೆನು. ಹಾಗೆಯೇ ಕೊಂಡಾಡಿ ಕೊಂಡಾಡಿ ಸೇವಿಸುತ್ತೇನಮ್ಮಾ ಹೇ ಬಂಗಾರು ಕಾಮಾಕ್ಷಿ ! ಆಶ್ರಯಿಸುವೆನಮ್ಮಾ!

4. ಪದ ವರ್ಣ 'ಸಾಮಿನಿ ರಮ್ಮನವೇ ಸಾರಸಾಕ್ಷಿ' -ರಾಗ : ಆನಂದ ಭೈರವಿ, ತಾಳ : ಖಂಡ ಅಟ್ಟ

ಪ, ಅ.ಪ. : ಎಲೆ ಸಾರಸಾಕ್ಷಿ ಸಖಿ, ನನ್ನ ಸ್ವಾಮಿಯನ್ನು ಈಗಲೇ ಬರಹೇಳೆ! ಮನ್ಮಥ ಜನಕನಾದ ನಮ್ಮ ಕಾಂಚೀಪುರವಾಸಿಯಾದ ಶ್ರೀ ವರದರಾಜ ಸ್ವಾಮಿಯನ್ನು ಈಗಲೇ ಬರಹೇಳೆ. ಮುಂದೆ, ಚಿಟ್ಟೆಸ್ವರ ಸಾಹಿತ್ಯ ಚರಣ ಎತ್ತುಗಡೆ

ಸ್ವರ ಸಾಹಿತ್ಯವೆಲ್ಲವೂ ಶೃಂಗಾರ ರಸಯುತವಾದವೇ, ಹೀಗೆ :

ಚಿ. ಸ್ವ. ಸಾಹಿತ್ಯ : ಸರಸ ಜೇರಿ ಸಮರತುಲ ಮೇಟಿಯುಪರತುಲಚೇನೆನಗ ಗರಿಮ ಮೀರಗನು ಘನಯುಜೇಯುಚು, ಸು ತಳಿರುಬೋಣಿ ಭಳ ಮಾನಿನಿ ವಿನವೇ ಸಾರಸನಯನ ಶಭಾಸು ವರನು ಗುಣ ಸಾಮಜಗಮನ. ವಿಶಾಲ ಜಘನ ಸಾಟೆವರು ಧರನು ನೀ ಸರಿಗನೆನಡು ಗಾರವುಗಲ

| ಸಾಮಿನಿ ರಮ್ಮನವೇ

| ಚ | ಮಾರುನಿ ಬಾಣಮುಲು ಪಗ

ಎತ್ತುಗಡೆ ಸ್ವರ ಸಾಹಿತ್ಯ

1. ಪಾಟಿಯುನಿ ಮದಿಚಲಮುಗೊನಿ ಸರೋಜಶರಮುಲ ಸಾರೆಕು ಘನಕುಚಮುಲ ದರವರಾಳಿ ಗಮುಲು ವಿರಾಳಿಂಗಲಗ ನೀ ಸೊಗಸುಗೊನುನಲ | ಮಾರುನಿ ಬಾಣಮುಲು |
2. 3 - ಎತ್ತುಗಡೆ ಸ್ವರಗಳಿಗೆ ಸಾಹಿತ್ಯ ಲಭ್ಯವಿಲ್ಲ.
4. ನೆಲತಲಗುಮುಲು ನೀಟುನಲರಿ ಗೊಲುವಗ ಸದಾ ಮದಾಳುಲಗಮುಲ್‌ಕರ ಕರಿವ್ರೋಯಗನು ಈ ರಸಮುಗಾ ಮದಿನಿ ದಲಚಿ ||ಮಾರುನಿ ಬಾಣಮುಲು||
5. ಮಾಮಗುನಲ ಸೋಮುನಿ ಕಾಕಲ ಕವರಿ ಸಾಮಿನ್ ದಲಚಿ ನಿರತಮುನು ನೇ ವಿರಹವೇದನನ್ ವೇಸರಿಂಚ ನೀ ತರಿನಿ ಈಲಾಗುನನು ||ಮಾರುನಿ ಬಾಮುಲು||

❖ ❖ ❖ ❖

ಶ್ರೀ ಶ್ಯಾಮಶಾಸ್ತ್ರಿಗಳ ಕೃತಿಭಾವ ದರ್ಶನ

1. 'ಕರುಣಜೂಡು ನಿನ್ನು ನಮ್ಮಿನವಾಡುಗದಾ' - ಶ್ರೀರಾಗ, ಆದಿ ತಾಳ

ಸಾಹಿತ್ಯದ ಮೂಲ ಪಾಠ

|| ಪ. || ಕರುಣಜೂಡು ನಿನ್ನು ನಮ್ಮಿನವಾಡುಗದಾ ! ಇಂತ ಪರಾಕೇಲನಮ್ಮಾ ?

||ಅ. ಪ. || ಸರಸಿಜಾಸನ ಮಾಧವ ಸನ್ನುತ ಚರಣಾ !ಬೃಹನ್ನಾಯಕಿ ! ವೇಗಮೇ
||ಕರುಣಜೂಡು||

|| ಚ. 1. || ದೀನಜನಾವನ ಮೂರ್ತಿವಿ ನೀವನಿ ನೇನು ನಿನ್ನು ನೆರನಮ್ಮಿತಿನಿ |
ಗಾನವಿನೋದಿನಿ ಘನ ನಿಭವೇಣಿ ! ಕಾಮಿತ ಫಲದಾ ! ಸಮಯಮಿದೇ
||ಕರುಣಜೂಡು||

|| ಚ. 2. || ನೀಮಹಿಮಾತಿಶಯಂಬುಲನೆಂತನಿ ನೇ ಜೆಪ್ಪುದುನೋ ಲಲಿತಾ |
ಹೇಮಪಾಂಗಿ ಹಿಮಗಿರಿಪುತ್ರಿ ಮಹೇಶ್ವರಿ ಗಿರೀಶ ರಮಣಿ !
||ಕರುಣಜೂಡು||

|| ಚ. 3. || ಶ್ಯಾಮಕೃಷ್ಣ ಪರಿಪಾಲಿನಿ ಶೂಲಿನಿ ಸಾಮಜಗಮನಾ ಕುಂದರದನಾ|
ತಾಮಸಂಬಿಟು ಸೇಯಕ ನಾ ಪರಿತಾಪಮುಲನು ಪರಿಹರಿಂಚಿ ನೀವು
||ಕರುಣಜೂಡು||

('ಪರಿಹರಿಂಚಿನ' ಎಂಬ ಪಾಠಾಂತರವಿದೆ)

ವ್ಯಾಖ್ಯಾನ

ಶ್ರೀ ಶ್ಯಾಮಶಾಸ್ತ್ರಿಗಳ ಬಹುತೇಕ ಎಲ್ಲ ಕೃತಿಗಳಲ್ಲೂ ಸಹಜವೇ ಆಗಿ ಕಾಣುವ ಭಾವವೆಂದರೆ ಆರ್ತತೆ. ಅರ್ಥಾತ್ ದೇವಿ ಕಾಮಾಕ್ಷಿಯ ಕರುಣೆ

ಒಮ್ಮೆಲೇ, ತಕ್ಷಣವೇ, ದ್ರವಿಸಿ ಭಕ್ತನಿಗಾಗಿ ಸುರಿದು ಒದ್ದೆಮಾಡುವಷ್ಟು ಪರಿಣಾಕಾರಿಯಾದ ಕೋರಿಕೆ, ಅಹವಾಲು, ಪ್ರಾರ್ಥನೆ, ಭಕ್ತಿಪೂರ್ಣ ಒತ್ತಾಯ. ಭಕ್ತನ ಜಾಡು ಇದೇ ಎಂಬ ಸಾಮಾನ್ಯಾಂಶ ಎಲ್ಲ ಭಕ್ತರೂ ವಾಗ್ಗೇಯಕಾರರೂ ದೈವದಲ್ಲಿ ತಳೆದ ಗಾಢವಾದ ಸಂಬಂಧಕ್ಕೆ ಉಲ್ಲೇಖಿಸಬಹುದಾದರೂ ಅತ್ಯಂತ ಗಾಢವಾದ ಮಾತೃ-ಕಿಶೋರರ ನೈಕಟ್ಯ ಪ್ರಕಾಶಕವಾದ ಇಂಥ ಮನಮುಟ್ಟುವ ಸಂಬಂಧ ಶ್ರೀ ಶ್ಯಾಮಶಾಸ್ತ್ರಿಗಳಿಗೇ ಸಹಜವಾದುದು. ಈ ಕೃತಿಯಲ್ಲಿ ಇದು ಅರ್ಥಪೂರ್ಣವಾಗಿ ವ್ಯಕ್ತವಾಗುತ್ತದೆ.

ಶ್ರೀರಾಗವು ಕರ್ಣಾಟಕ ಸಂಗೀತ ಸಂಪ್ರದಾಯದಲ್ಲಿ, ಪ್ರಯೋಗದಲ್ಲಿ ಅಥವಾ ಲಕ್ಷ್ಯದಲ್ಲಿ ಉಲ್ಲೇಖವಾಗುತ್ತಲೂ ಬಳಕೆಯಾಗುತ್ತಲೂ ಇರುವುದು ಒಂದು ಘನರಾಗವಾಗಿ, ಆದುವೆ ಮಿತಿಮೀರಿದ ಪ್ರಸಿದ್ಧಿ ಚಲಾವಣೆಗಳನ್ನು ಪಡೆದ 'ಘನರಾಗ ಪಂಚಕ' ಎಂಬ ರಾಗಗಳಲ್ಲೊಂದಾಗಿ. ಬೇರೆ ಸಂದರ್ಭದಲ್ಲಿನ ನನ್ನ ಪ್ರತಿಪಾದನೆಯಂತೆ, ಅತ್ಯಂತ ಪ್ರಭಾವ ಪೂರ್ಣ ರಕ್ತಿರಾಗವಾಗಿಯೇ ತನ್ನ ಸೌಂದರ್ಯವನ್ನು ಪ್ರಕಾಶಪಡಿಸಿಕೊಳ್ಳುತ್ತದೆ ಎಂಬಂಶವನ್ನು ಶ್ರೀ ಮುದ್ದುಸ್ವಾಮಿ ದೀಕ್ಷಿತರ 'ಶ್ರೀ ಕಮಲಾಂಬಿಕೇ' ಕೃತಿಯಲ್ಲಿ, ಶ್ರೀ ಶ್ಯಾಮಶಾಸ್ತ್ರಿಗಳ ಈ 'ಕರುಣಜೂಡು' ಕೃತಿಯಲ್ಲೂ ಕಾಣಬಹುದು. 'ನಿಸೆ ನಿಪಮರೀರೀಗಾರೀ'ಎಂದು ಶ್ರೀರಾಗದಲ್ಲಿ 'ಕರುಣಜೂಡು' ಎಂಬ ಮಾತಿನೊಂದಿಗೆ , ಭಾವದೊಂದಿಗೆ ತಾರಸ್ಥಾಯಿಯ ನೆಲೆಯಿಂದ ದೇವಿಯ ನೆಲೆಯನ್ನು ಸೂಚಿಸಿ ಅವರೋಹಣದಲ್ಲಿ ಬಂದು ರಿಷಭದಲ್ಲಿ ನಿಂತು ಭಕ್ತನ ನೆಲೆಯನ್ನು ಸೂಚಿಸಿ ಭಾವ ತುಂಬುವ ಇಂಥ ಅರ್ಥಪೂರ್ಣ ವಾಕ್-ಗೇಯಗಳ ಬೆಸೆಯುವಿಕೆ ಸಂಗೀತ ತ್ರಿಮೂರ್ತಿಗಳಂಥ ಮಹಾವಾಗ್ಗೇಯಕಾರರಲ್ಲಿ ಒಲಿದು ಮನೆಮಾಡಿದ ಕಲಾ ಕೌಶಲ.

ಇನ್ನು, 'ಇಂತ ಪರಾಕೇಲನಮ್ಮಾ' ಎಂಬಲ್ಲಿ 'ಇಷ್ಟು ಅಸಡ್ಡೆ ಏಕೆ ತಾಯಿ' ಎನ್ನುವ ಮಾತನ್ನು ತಾರಸ್ಥಾಯಿಯ ರಿಷಭದಲ್ಲಿ ನಿಲ್ಲಿಸಿದಾಗ, ಮಾತೆಯ ಕಡೆಗೆ ಮೇಲೆತ್ತಿ ಚಾಚಿದ ಆರ್ತಭಕ್ತನ ಕೈಗಳು ಭಾವನೆಯನ್ನು, ಈ ಕೃತಿಯನ್ನು ಹಾಡುವವರ ಮತ್ತು ಕೇಳುವವರ ಮನಸ್ಸಿನ ಕಣ್ಣೆದುರು ಚಿತ್ರಿಸುತ್ತವೆ. ಕೃತಿಯುದ್ದಕ್ಕೂ ಇದೇ ರೀತಿ ವಾಕ್ ಮತ್ತು ಗೇಯಗಳು ವಿಲಾಸವಾಡುತ್ತ ಸಾಗುತ್ತವೆ.

ಶ್ರೀ ಶಾಸ್ತ್ರಿಗಳ ಬಹುಚರಣ ರಚಿತ ಕೃತಿಗಳಲ್ಲಿ ಈ ಕೃತಿಯೂ ಒಂದು. ಇನ್ನು ಸಾಹಿತ್ಯದ ಭಾವದ ಸೊಗಸೋ, ಇದೋ, ಇಲ್ಲಿದೆ.

ಕರುಣಜೂಡು, ನಿನ್ನು ನಮ್ಮಿನವಾಡುಗದಾ (ನಮ್ಮಿನವಾಡನುಗದಾ ಎಂಬ ಪಾಠಾಂತರವಿದೆ, ಆದರೆ ಕಷ್ಟಪಡದೆ, ಕಷ್ಟ ಕೊಡದೆ ತಾಳ-ಯತಿಗಳಿಗೆ ಸುಂದರವಾಗಿ ಹೊಂದುವುದು 'ವಾಡುಗದಾ' ಎಂಬ ಮಾತು.

ತಾಯೆ, ನಿನ್ನನ್ನು -ನಿನ್ನನ್ನೇ-ನಂಬಿದವನಲ್ಲವೆ ನಾನು, ಕರುಣೆಯಿಂದ ನೋಡಮ್ಮಾ (ಕೃಪೆ ತೋರಮ್ಮಾ!), ನನ್ನಲ್ಲಿ ಇಷ್ಟು ಅಸಡ್ಡೆ ಏಕೆ ತಾಯಿ? 'ಇಂತ ಪರಾಕೇಲನಮ್ಮಾ?'

ಚ 1 'ಸರಸಿಜಾಸನ ಮಾಧವ ಶಂಭುನತ ಚರಣಾ'-ನಿನ್ನ ಅಡಿದಾವರೆಗಳು ಬ್ರಹ್ಮ-ವಿಷ್ಣು-ಮಹೇಶ್ವರರಿಂದಲೇ ನಮಿಸಲ್ಪಟ್ಟವು ಹೇ ಬೃಹನ್ನಾಯಕಿ! ಬೇಗ ಕರುಣೆ ತೋರಮ್ಮಾ!

'ದೀನ ಜನಾವನ ಮೂರ್ತಿವಿ ನೀವನಿ ನೇನು ನಿನ್ನು ನೆರನಮ್ಮಿತಿನಿ.' ಆರ್ತರಾದವರನ್ನು ಪಾಲಿಸಿ ಆರ್ತಿಯನ್ನು ನಿವಾರಿಸುವವಳು ನೀನು. ಆರ್ತಪಾಲನ ಪ್ರತಿಮೂರ್ತಿ ನೀನು ಎಂದೇ ನಿನ್ನನ್ನು ಭದ್ರವಾಗಿ ನಂಬಿದೆನು. 'ಗಾನವಿನೋದಿನಿ'-ಗಾನವೆಂದರೆ ನಿನಗೆ ಅಷ್ಟುಪ್ರಿಯ!- 'ಘನ ನಿಭವೇಣಿ' ಮಳೆ ಮೋಡಗಳ ನೀಲದ ಕಾಂತಿ ನಿನ್ನ ಕೂದಲಿನದು, ಕಾಮಿತಫಲದಾ 'ಈಪ್ಸಿತಾರ್ಥ ಪ್ರದಾಯಿನಿ' ಎಂದು ಲಲಿತಾ ತ್ರಿಶತಿ ಸ್ತೋತ್ರ ಕೊಂಡಾಡುತ್ತದೆ, ತಾಯೆ, ಸಮಯಮಿದೇ, ನೀನು ಕಾಯಬೇಕಾದ ಸಮಯವಿದೇ ಅಮ್ಮಾ! ಕರುಣೆ ತೋರು.

2. 'ನೀ ಮಹಿಮ ಅತಿಶಯಂಬುಲ ಎಂತನಿ ನೇ ಚೆಪ್ಪುದುನು ಓ ಲಲಿತಾ!' ನಿನ್ನ ಮಹಿಮಾತಿಶಯಗಳನ್ನು ಅದೆಷ್ಟೆಂದು ವರ್ಣಿಸಲಿ ಓ ಲಲಿತಾಂಬೆ!

'ಹೇಮಪಾಂಗಿಹಿಮಗಿರಿಪುತ್ರಿ ಮಹೇಶ್ವರಿ ಗಿರೀಶರಮಣಿ' ಬಂಗಾರದಂತೆ ಒಡಲುಳ್ಳ ಮಹೇಶ್ವರಿಯೆ, ಹಿಮಪರ್ವತರಾಜನ ಪುತ್ರಿಯೆ, ಕೈಲಾಸ ಪರ್ವತವಾಸಿ ಮಹಾದೇವನ ಒಡತಿಯೇ, ನಿನ್ನ ಕರುಣೆ ತೋರಮ್ಮ!

3. 'ಶ್ಯಾಮ ಕೃಷ್ಣ ಪರಿಪಾಲಿನಿ, ಹೇ ಶೂಲಿನಿ (ಶೂಲವನ್ನು ತಾನೇ ಧರಿಸಿರುವವಳೂ ಹೌದು, ಶೂಲಾಯುಧನಾದ ಶಿವನ ಪತ್ನಿಯೂ ಹೌದು), 'ಸಾಮಜಗಮನ' ಗಜಗಮನೆ, 'ಕುಂದರದನ' ಮಲ್ಲಿಗೆಯ ಬಿಳುಪಿನ ಕಾಂತಿಯ ಹಲ್ಲುಗಳನ್ನುಳ್ಳವಳು. ಹೀಗೆಲ್ಲ ಸ್ತುತ್ಯಳಾದ ತಾಯೆ, ಹೀಗೆ 'ತಾಮಸಂಬು ಇಟು ಸೇಯಕ ನಾ ಪರಿತಾಪಮುಲನು ಪರಿಹರಿಂಚಿ'- ತಡಮಾಡದೆ ನನ್ನ ವ್ಯಾಕುಲಗಳನ್ನು ಪರಿಹರಿಸಿ ಕರುಣೆತೋರು ತಾಯಿ!

ಈ ವಾಗ್ಗೇಯಕಾರರ ಹಲವಾರು ಉಪಮೆಗಳೂ, ಭಾವನೆಗಳೂ, ಮಾತುಗಳೂ, ಸಂಭೋಧನೆಗಳೂ ಹಲವಾರು ಸಲ ಪುನರಾವರ್ತಿಸುತ್ತವೆ ಎಂದು ಗಮನಿಸದೆ ಇರಲಾರೆವು.

2. 'ತಲ್ಲಿ ನಿನ್ನು ನೆರನಮ್ಮಿನಾನು ವಿನವೇ' - ಕಲ್ಯಾಣಿರಾಗ, ವಿಲೋಮ ಮಿಶ್ರಛಾಪು ತಾಳ

ಸಾಹಿತ್ಯದ ಮೂಲಪಾಠ

||ಪ|| ತಲ್ಲಿ ನಿನ್ನು ನೆರನಮ್ಮಿನಾನು ವಿನವೇ ||ತಲ್ಲಿ||

||ಅ.ಪ.|| ಎಲ್ಲ ಲೋಕಮುಲಕಾಧಾರಮ್ಮೈಯುನ್ನ ನಾ ||ತಲ್ಲಿ||

||ಚ|| ಆದಿಶಕ್ತಿ ನೀವು ಪರಾಕುಸೇಯಕ | ಆದರಿಂಚುಟಕಿದೇ ಮಂಚಿ ಸಮಯಮು ಗಾದಾ? ಸರೋಜಭವಾಚ್ಯುತ ಶಂಭುನುತ| ಪಾದಾ! ನೀದು ದಾಸಾನುದಾಸುಡೇ ||ತಲ್ಲಿ||

||ಚ.2|| ದೇವಿ ನೀದು ಸರಿಸಮಾನಮೆವರನಿ | ದೇವರಾಜು ಮುನುಲು ನಿನ್ನು ಪೊಗಡಗ ನಾ ವೆತದೀರ್ಚಿಬಿರಾನವರಾಲೊಸಗಿ| ನನ್ನು ಬ್ರೋವ ನೀಜಾಲಮೇಲನೇ ||ತಲ್ಲಿ||

||ಚ.3|| ಶ್ಯಾಮಕೃಷ್ಣ ಪರಿಪಾಲಿನಿ ಜನನಿ| ಕಾಮಿತಾರ್ಥಪ್ರದಾ ಪಂಕಜಲೋಚನಿ ಕೌಮಾರಿ ರಾಣಿ ಪುರಾಣಿ ಪರಾಶಕ್ತಿ| ಕಾಮಕೋಟಿ ಪೀಠವಾಸಿನಿ ||ತಲ್ಲಿ||

ವ್ಯಾಖ್ಯಾನ

ವಿಲೋಮ ಮಿಶ್ರಛಾಪು ತಾಳದ ಬಂಧದ ಬಗ್ಗೆ ಈಗಾಗಲೇ ವಿಶ್ಲೇಷಿಸಲಾಗಿದೆ. ಈ ತಾಳದಲ್ಲಿರುವ ಕಲ್ಯಾಣಿ ರಾಗದ ಈ ಕೃತಿ ಶ್ರೀ ಶಾಸ್ತ್ರಿಗಳ ಅತ್ಯಂತ ಸುಂದರವಾದ, ಘನವಾದ ಕೃತಿಗಳಲ್ಲೊಂದು. ಕಲ್ಯಾಣಿಯು ವೇಂಕಟಮಖಿಯವರಿಗೆ ಪೂರ್ವದ19 ಪೂರ್ವ ಪ್ರಸಿದ್ಧ ಮೇಳಗಳಲ್ಲಿ ಒಂದಾಗಿ ಅಂದಿನಿಂದಲೂ ಪ್ರಸಿದ್ಧಿ ಪ್ರಾಚುರ್ಯಗಳಿಗೆ ಪಾತ್ರವಾದ ಮಹಾ ರಕ್ತಿರಾಗ. ಘನರಾಗದ, ದೇಶ್ಯರಾಗದ ಮತ್ತು ಸ್ವಭಾವಸಿದ್ಧವಾದ ರಕ್ತಿರಾಗದ ಮೂರೂ ಗುಣಗಳನ್ನು ಹೊಂದಿ ವ್ಯಕ್ತಪಡಿಸುವ ಅದ್ಭುತ ಸುಂದರ ರಾಗ. ಎಲ್ಲ ವಾಗ್ಗೇಯಕಾರರನ್ನೂ ರಚನೆಗಳಿಗಾಗಿ ಶಕ್ತಿಯುತವಾಗಿ ಆಕರ್ಷಿಸಿರುವ ರಾಗವಿದು. ಮಿಶ್ರಛಾಪಿನ ವಿಲೋಮ ನಡೆಯಲ್ಲಿ ಈ ಕೃತಿ ಅತಿ ಗಂಭೀರವಾಗಿ ಕಲ್ಯಾಣಿಯ ಸೌಂದರ್ಯದ ವಿನ್ಯಾಸಕ್ಕೆ, ಕಲ್ಪನಾ ಸಾಮರ್ಥ್ಯಕ್ಕೆ ಹೆಚ್ಚಿನ ಆಸ್ಪದ ನೀಡುತ್ತದೆ. ತಾಳ ಯಾವುದೇ ಆಗಲಿ, ನಡೆ ಯಾವುದೇ ಆಗಲಿ, ಭಾಷೆ ಯಾವುದೇ ಆಗಲಿ ಎಲ್ಲ ಕೃತಿಗಳಲ್ಲೂ ತಾರತಮ್ಯವಿಲ್ಲದೆ ತನ್ನ ಅದ್ಭುತ ಸೌಂದರ್ಯವನ್ನು ಪ್ರಕಾಶಪಡಿಸಿಕೊಳ್ಳುವ ರಾಗ ಕಲ್ಯಾಣಿ. ಶ್ರೀ ಶಾಸ್ತ್ರಿಗಳ ಮನೋಧರ್ಮ ಈ ರಾಗದಲ್ಲಿ, ಈ ರಚನೆಯಲ್ಲಿ ಅಡ್ಡಿಗಳೇ ಇಲ್ಲದೆ ಸಾಗಿದೆ. ಮಧ್ಯಮದ ಸಂಪರ್ಕಕ್ಕೆ ಬಂದಿಲ್ಲದಾಗಲೂ, 'ತಲ್ಲಿ ನಿನ್ನು ನೆರ' ಎಂಬ ಪ್ರಾರಂಭದ ಭಾಗದಲ್ಲೇ ಕಲ್ಯಾಣಿ ಗಾಂಧಾರದ ಸ್ವಭಾವದ ಕಂಪನ ಸೌಂದರ್ಯದಿಂದ ಅತ್ಯಲ್ಪ ವಸ್ತುವಿನ ಅತಿ ಪರಿಣಾಮಕಾರಿ ಆಕ್ಷಿಪ್ತಿಕೆಯನ್ನು ಕಲ್ಯಾಣಿ ರಾಗಕ್ಕೆ ಒದಗಿಸುತ್ತದೆ. ಕೃತಿಯುದ್ದಕ್ಕೂ ಕಲ್ಯಾಣಿಯ ರಸಾನುಭೂತಿ ಮನದಣಿಯ ಲಭಿಸುತ್ತದೆ. ಇನ್ನು, ಕೃತಿಯ ಸಾಹಿತ್ಯದಲ್ಲಿನ ಭಾವನೆಗಳೋ, ಅವು ಹೀಗೆ:

ತಲ್ಲಿ ನಿನ್ನು ನೆರನಮ್ಮಿನಾನು ವಿನವೇ - ತಾಯೆ, ನಿನ್ನನ್ನು ಗಟ್ಟಿಯಾಗಿ ನಂಬಿದ್ದೇನೆ ನಂಬಮ್ಮಾ ('ವಿನವೇ' ಎಂದರೆ ಕೇಳಮ್ಮಾ ಎಂದು ಆದರೂ ಈ ಸಂದರ್ಭದ ಆ ಮಾತಿನ ಬಲ ಬೇರೆಯಾದುದು).

'ಎಲ್ಲ ಲೋಕಮುಲಕಾಧಾರಮೈಯುನ್ನ ನಾತಲ್ಲಿ'- ಎಲ್ಲ ಲೋಕಗಳಿಗೂ ಆಧಾರವೇ ಆಗಿರುವ ನನ್ನ ತಾಯಿ, ಕೇಳಮ್ಮ ನಿನ್ನನ್ನೇ ಗಟ್ಟಿಯಾಗಿ ನಂಬಿದ್ದೇನೆ.

1. 'ಆದಿಶಕ್ತಿ ನೀವು ಪರಾಕುಸೇಯಕ ಆದರಿಂಚುಟಕಿದೇ ಮಂಚಿ ಸಮಯಮು ಗಾದಾ'-ಆದಿಶಕ್ತಿಯಾದ ನೀನು ಉಪೇಕ್ಷೆ ಮಾಡದೆ ನನ್ನನ್ನಾದರಿಸಲು ಇದೇ ಉತ್ತಮ ಸಮಯವಲ್ಲವೇ? ಕಮಲಸಂಭವನಾದ ಬ್ರಹ್ಮ, ಶ್ರೀಹರಿ ಮತ್ತು ಶಂಭು ಅವರಿಂದೆಲ್ಲ ಕೊಂಡಾಡಲ್ಪಟ್ಟಿರುವಂಥವು ನಿನ್ನ ಪಾದಗಳು. ನಾನು ನಿನ್ನ ದಾಸಾನುದಾಸನು ತಾಯಿ.

2. 'ದೇವಿ ನೀದು ಸರಿಸಮಾನಮೆವರು ಅನಿ ದೇವರಾಜು ಮುನುಲು ನಿನ್ನು ಪೊಗಡಗ'- ಓ ದೇವಿಯೇ, ನಿನಗೆ ಸರಿಮಾನವಾದವರು ಯಾರುಂಟು ಎಂದು ಇಂದ್ರನೂ ಮುನೀಶ್ವರರೂ ನಿನ್ನು ಶ್ಲಾಘಿಸಿಲು, ನನ್ನ ವ್ಯಥೆ ನಿವಾರಿಸಿ ಶೀಘ್ರುವಾಗಿ ವರಗಳನ್ನನುಗ್ರಹಿಸಿ ನನ್ನನ್ನು ಪಾಲಿಸಲು ಈ ಹಿಂಜರಿಕೆ ಏಕಮ್ಮಾ?

3. ಶ್ಯಾಮಕೃಷ್ಣನನ್ನು ಚೆನ್ನಾಗಿ ಪಾಲಿಸಿದವಳೇ. ತಾಯೆ, ಕಮಲನೇತ್ರೆಯಾದ ಇಚ್ಛಾಪೂರಕಳೇ ಕೌಮಾರಿಯೇ, ರಾಣಿಯೇ, ಪುರಾಣಿ-ಪ್ರಾಚೀನಳೇ, ಮೊದಲಿನವಳೇ, ಪಾರಾಶಕ್ತಿ ಕಾಮಕೋಟಿ ಪೀಠಾಧಿವಾಸಿನಿಯೇ, ತಾಯೆ, ನಿನ್ನನ್ನೇ ಗಟ್ಟಿಯಾಗಿ ನಂಬಿದೆ. ಕೇಳಮ್ಮಾ.

3. 'ದೇವಿ ಬ್ರೋವ ಸಮಯಮಿದೇ' - ಚಿಂತಾಮಣಿ ರಾಗ. ಆದಿ ತಾಳ

ಸಾಹಿತ್ಯದ ಮೂಲ ಪಾಠ

||ಪ|| ದೇವಿ ಬ್ರೋವ ಸಮಯಮಿದೇ ಅತಿವೇಗಮೇ ವಚ್ಚಿ ನಾ ವೆತಲು
ದೀರ್ಚಿ ಕರುಣಿಂಚವೇ ಶಂಕರಿ ಕಾಮಾಕ್ಷಿ || ದೇವಿ ಬ್ರೋವ||

||ಚ1.|| ಲೋಕ ಜನನಿ ನಾಪೈ ದಯಲೇದಾ ನೀ ದಾಸುಡು ಗಾದಾ ಶ್ರೀ
ಕಾಂಚೀವಿಹಾರಿಣಿ ಕಲ್ಯಾಣಿ ಏಕಾವ್ರೇಶ್ವರುನಿ ಪ್ರಿಯ
ಭಾಮಯ್ಯೆಯುನ್ನ ನೀಕೇಮಮ್ಮಾ ಎಂತೋ ಭಾರಮಾ? ವಿನುಮಾ!
ನಾ ತಲ್ಲಿ || ದೇವಿ ಬ್ರೋವ||

||ಚ.2.|| ರೇಪು ಮಾಪನಿ ಚೆಪ್ಪಿತೆ ನೇ ವಿನನು ಇಕ ತಾಳನು ನೇನು ಈ ಪ್ರೊದು
ದಯಚೇಯವೇ ಕೃಪಜೂಡವೇ ನೀ ಪದಾಬ್ಜಮುಲೇ ಮದಿಲೋ

ಸದಾ ಎಂಚಿ ನೀ ಪ್ರಾಪೇ ಕೋರಿಯುನ್ನಾನಮ್ಮಾ ಮೋದಮುತೋ
ನನ್ನು || ದೇವಿ ಬ್ರೋವ||

||ಚ.3.|| ಶ್ಯಾಮಕೃಷ್ಣುನಿ ಸೋದರಿ ಕೌಮಾರಿ, ಬಿಂಬಾಧರಿ, ಗೌರಿ ಹೇಮಪಾಂಗಿ
ಲಲಿತೇ ಪರದೇವತೆಕಾಮಾಕ್ಷಿ ನಿನ್ನುವಿನಾ ಭೂಮಿಲೋ ಪ್ರೇಮತೋ
ಕಾಪಾಡೇವಾರೆವರುನ್ನಾರಮ್ಮಾ ನಾ ತಲ್ಲಿ || ದೇವಿ ಬ್ರೋವ||

ವ್ಯಾಖ್ಯಾನ

ಈ ಕೃತಿಯ ರಾಗದ ಬಗೆಗೇ ಮೊದಲು ಪ್ರಸ್ತಾಪಿಸಬೇಕು.

ಸಂಗೀತ ತ್ರಿಮೂರ್ತಿಗಳಲ್ಲಿ ಶ್ರೀ ಶಾಮಶಾಸ್ತ್ರಿಗಳು ಮಾತ್ರವೇ ಚಿಂತಾಮಣಿ ರಾಗದಲ್ಲಿ ಕೃತಿ ರಚನೆ ಮಾಡಿರುವುದರಿಂದ ಈ ರಾಗ ಅವರ ಸೃಷ್ಟಿಯೇ ಆದುದೆಂದು ಅನುಮಾನಿಸಬಹುದು. ರಾಗಗಳ ಉಲ್ಲೇಖ, ಲಕ್ಷಣ ವರ್ಣನೆಗಳ ಸಂದರ್ಭಗಳಲ್ಲಿ ಇವರ ಬಳಕೆಗೆ ಮೊದಲು ಎಲ್ಲೂ ಈ ರಾಗ ಉಲ್ಲೇಖವಾಗಿಲ್ಲ.

ಚಿಂತಾಮಣಿಯು 56ನೇ ಮೇಳ ಷಣ್ಮುಖಪ್ರಿಯದಲ್ಲಿ ಜನ್ಯವೂ, ವಕ್ರವೂ, ಭಾಷಾಂಗವೂ ಆದ ರಾಗ. ಆರೋಹಣ ಅವರೋಹಣ ಸ್ವರಸಂಚಾರ ಹೀಗಿದೆ:

ಸ ಗ ರಿ ಗ ಮ ಪ ದ ನಿ ಸೆ
2 2 2 2 2 2

ಇದಕ್ಕೆ ಪಾಠಾಂತರ, ಸ ರಿ ಪ ಮ ಪ ದ ನಿ ಸೆ ಎಂದು ಇದ್ದು,
2 2 2 2

ಸೆ ನಿ ಧ ಪ ಮ ಗ ರಿ ಗ ಸಾ
2 1 2 2 2 2

ಎಂಬ ಈ ಅವರೋಹಣ ಸಂಚಾರಕ್ಕೆ ಸೆ ಪ ದ ಪ ಮ ಗ ರಿ ಗ ಸ ಪಾಠಾಂತರವಿದೆ.

ಆರೋಹಣ ಸಂಚಾರಗಳಲ್ಲಿ ಚತುಃಶ್ರುತಿ ಧೈವತವು ಭಾಷಾಂಗ ಸ್ವರವಾಗಿದ್ದು, ರಾಗದ ಅವರೋಹಣ ಸಚಾರದಲ್ಲಿ ಶುದ್ಧ ಧೈವತವೇ ಪ್ರಯುಕ್ತವಾಗುತ್ತದೆ, ಅದುವೆ ವಕ್ರವಾಗಿ.

ಬಹುಚರಣ ಕೃತಿಗಳಲ್ಲಿ ಇದೂ ಒಂದು

ಇನ್ನು, ಕೃತಿಯ ಸಾಹಿತ್ಯಭಾವ ದರ್ಶನ ಹೀಗೆ :

ದೇವಿ ಬ್ರೋವ ಸಮಯಮಿದೇ, ಅತಿವೇಗಮೇ ವಚ್ಚಿ ನಾವೆತಲು ದೀರ್ಚಿ ಕರುಣಿಂಚವೇ ಶಂಕರಿ, ಕಾಮಾಕ್ಷಿ.

ಹೇ ಮಂಗಳಕರಳೆ (ಶಂಕರಿ) ಕಾಮಾಕ್ಷೀ ದೇವಿ, ಇದು ನನ್ನ ಅವಶ್ಯಕತೆಯ ಸಮಯ ನೀನು ಕಾಪಾಡಲು, ತ್ವರಿತವಾಗಿ ಬಂದು ನನ್ನ ವ್ಯಥೆಗಳನ್ನು ಪರಿಹರಿಸಮ್ಮಾ. ಲೋಕಜನನಿ ನಾಪೈ ದಯಲೇದಾ? ನೀ ದಾಸುಡುಗಾದಾ? ಶ್ರೀ ಕಾಂಚೀ ವಿಹಾರಿಣಿ, ಕಲ್ಯಾಣಿ - ಲೋಕಗಳಿಗೇ ಮಾತೆಯಾದ ನಿನಗೆ ನನ್ನ ಮೇಲೆ ದಯೆ ಇಲ್ಲವಾಯಿತೇ? ನಾ ನಿನ್ನ ದಾಸನಲ್ಲವೇ, ಹೇ ಕಾಂಚೀಪುರದಲ್ಲಿ ವಿಶೇಷವಾಗಿ ವಿಹರಿಸುವ ಕಲ್ಯಾಣಕರಳಾದ ಮಾತೆಯೇ, ಏಕಾಮ್ರೇಶ್ವರುನಿ ಪ್ರಿಯಭಾಮಯ್ಯೆ-ಏಕಾಮ್ರೇಶ ಸ್ವಾಮಿಗೆ ಪ್ರಿಯ ಸತಿಯಾಗಿರುವ ತಾಯಿ (ತಲ್ಲಿ). ಕೇಳಮ್ಮಾ (ವಿನುಮಾ) ನೀಕು, ಏಮಮ್ಮಾ, ಎಂತೋ ಭಾರಮಾ? ಅಂಥ ನಿನಗೆ ನನ್ನ ರಕ್ಷಣೆ ಎಂಬುದು ಅಷ್ಟು ಹೊರೆಯಾಗಿಬಿಟ್ಟಿತೇ?

ರೇಪುಮಾಪನಿ ಚೆಪ್ಪಿತೆ ನೇ ವಿನನು ಇಕ ತಾಳನು ನೇನು.
ನಾಳೆ, ನಾಡಿದ್ದು ಎಂದರೆಲ್ಲ ನಾ ಕೇಳೆನು. ಇನ್ನು ನಾನು ಸಹಿಸುವುದಿಲ್ಲ.

ಈ ಪ್ರೊದ್ದು ದಯಸೇಯವೇ, ಕೃಪ ಜೂಡವೇ-ಇಂದು ದಯೆ ಮಾಡು ಕೃಪೆಯ ಕಣ್ಗಳಿಂದ ನೋಡೇ, ನೀ ಪದಾಬ್ಜಮುಲೇ ಮದಿಲೋ ಸದಾ ಎಂಚಿ- ನಿನ್ನ ಪಾದಕಮಲಗಳನ್ನೇ ಮತಿಯಲ್ಲಿ ಸದಾ ಎಣಿಸಿ, ನೀ ಪ್ರಾಪೇ ಕೋರಿಯುನ್ನಾನಮ್ಮಾ, ಮೋದಮುತೋ ನನ್ನು- ಬ್ರೋವು ದೇವಿ.- ನಿನ್ನ ಆಶ್ರಯವನ್ನೇ ಬೇಡಿಕೊಳ್ಳುತ್ತಿದ್ದೇನಮ್ಮಾ. ಒಲವಿಂದ ದೇವಿ, ಕಾಪಾಡು. (ಪ್ರಾಪು ಎಂದರೆ ಆಶ್ರಯ)

ಶ್ಯಾಮಕೃಷ್ಣನಿ ಸೋದರಿ, ಕೌಮಾರಿ, ಬಿಂಬಾಧರಿ, ಗೌರಿ, ಹೇಮಪಾಂಗಿ, ಲಲಿತೇ. ಪರದೇವತಾ, ಕಾಮಾಕ್ಷಿ, 'ನಿನ್ನುವಿನಾ ಭೂಮಿಲೋ ಪ್ರೇಮತೋ ಕಾಪಾಡೇ ವಾರೆವರುನ್ನಾರಮ್ಮಾ' ನಿನ್ನನ್ನು ಬಿಟ್ಟರೆ ಈ ಜಗತ್ತಿನಲ್ಲಿ ನನ್ನನ್ನು ಪ್ರೇಮದಿಂದ ಕಾಪಾಡುವವರು ಮತ್ತೊಬ್ಬರಾರಾದರೂ ಉಂಟೇ ತಾಯೆ, ಕಾಪಾಡು.

4. 'ಮಾಯಮ್ಮಾಯನಿ ಪಿಲಿಚಿತೆ ಮಾಟ್ಲಾಡರಾದಾ' - ಆಹಿರಿ ರಾಗ, ಆದಿತಾಳ

ಸಾಹಿತ್ಯದ ಮೂಲಪಾಠ

|| ಮಾಯಮ್ಮಾಯನಿ ಪಿಲಿಚಿತೆ ಮಾಟ್ಲಾಡರಾದಾ ನಾತೋ, ಅಂಬಾ?

||ಅ. ಪ.|| ನ್ಯಾಯಮಾ ಶ್ರೀ ಮೀನಾಕ್ಷಮ್ಮಾ ಮೀನಾಕ್ಷಿಕಿದಿ ?
ನಿನ್ನುವಿನಾ ವೇರೆ ದಿಕ್ಕೆವರುನ್ನಾರು ? ||ಮಾಯಮ್ಮಾ||

ಚ. 1. || ಸರಸಿಜಭವ ಹರಿಹರನುತ ಸುಲಲಿತ ! ನೀ ಪದಪಂಕಜಮುಲ
ಸ್ಥಿರಮನಿ ನಮ್ಮಿತಿ ನಮ್ಮಿತಿ ನಮ್ಮಿತಿನಿ
ಕರುಣಜೂಡವೇ ಕಾತ್ಯಾಯನಿ ಕಾಳಿಕಾ ಭವಾನಿ
ಪರಮೇಶ್ವರಿ ಸುಂದರೇಶುರಾಣಿ ಬಾಲಾಂಬಾ, ಮಧುರವಾಣಿ !
||ಮಾಯಮ್ಮಾ||

|| ಚ. 2 || ವಿನುತಜನ ಪಾಪವಿಮೋಚನಿ ಓ ಜನನೀ ಘನ ನೀಲವೇಣಿ
ವಿದಳಿತ ದಾನವ ಮಂಡಲದಮನೀ
ವನಜಲೋಚನಾ ಸುಧಾಕರಾನನಾ ವರದಾಯಕಿ
ಅನಯಮು ನಿನು ಕೋರಿಯುನ್ನಾನಮ್ಮಾ ಬಂಗಾರು ಬೊಮ್ಮಾ||
ಮಾಯಮ್ಮ||

|| ಚ. 3 || ಅಭಯಮೊಸಗಿ ನನ್ನು ಬ್ರೋವುಮು ಓ ವರದಾ ನೆರದಾತವು ಗದಾ
ಅಂಬಿಕಾ ಬಿಡ್ಡಪೈ ಗೊಪ್ಪಗ ದಯರಾದಾ
ಅಖಿಲಲೋಕ ಜನನೀ ಅನಾಥ ರಕ್ಷಕಿ ಅನೇಟಿ ಬಿರುದು ಗಾದಾ
ವೈಭವಮುಗಲ ಶ್ಯಾಮಕೃಷ್ಣ ಸೋದರಿ ವೀರಶಕ್ತಿ ತ್ರಿಪುರಸುಂದರಿ
||ಮಾಯಮ್ಮ||

ವ್ಯಾಖ್ಯಾನ

ಆಹಿರಿ, ಕರ್ಣಾಟಕ ಸಂಗೀತದಲ್ಲಿನ ಮಹತ್ವಪೂರ್ಣ ರಾಗಗಳಲ್ಲೊಂದು. ವೇಂಕಟಮಖಿಯವರ ಹಿಂದಿನ ಕಾಲದಿಂದಲೂ ಪ್ರಸಿದ್ಧವಾಗಿರುವ ಆಹಿರಿ, ಪೂರ್ವಪ್ರಸಿದ್ಧವಾದ 19 ಮೇಳಗಳಲ್ಲಿ 8ನೆಯ ಸ್ಥಾನದಲ್ಲಿದು ನಂತರದ ಲಕ್ಷ್ಯ

ಲಕ್ಷಣಗಳ ಎಣಿಕೆಯಲ್ಲಿ, 72 ಮೇಳಗಳಲ್ಲಿನ 21ನೆಯ ಕೀರವಾಣಿ ಮೇಳಕ್ಕೆ ಸಮವಾದುದು. ಸಂಗೀತ ತ್ರಿಮೂರ್ತಿಗಳ ಕಾಲಕ್ಕೆ ಈ ರಾಗ ಜನ್ಯವೆಂಬ ಸ್ಥಾನಕ್ಕೆ ಬಂದಿತ್ತು. ಭಾಷಾಂಗವೂ ಆಗಿದ್ದು ಶ್ರೀ ಸುಬ್ಬರಾಮ ದೀಕ್ಷಿತರು ಇದನ್ನು ತಮ್ಮ ಸಂಗೀತ ಸಂಪ್ರದಾಯ ಪ್ರದರ್ಶಿನಿಯಲ್ಲಿ ಕೀರವಾಣಿಯ ಹಿಂದಿನ, ಅಂದರೆ 20ನೆಯದಾದ ನಾರೀ ರೀತಿಗೌಳ ಮೇಳದಲ್ಲಿ ಭಾಷಾಂಗ ಜನ್ಯವಾಗಿ ವ್ಯವಹಾರಿಸಿ, ಸಾಕಷ್ಟು ಬೆಳಕನ್ನು ಚೆಲ್ಲುತ್ತಾರೆ.

ದೀಕ್ಷಿತರ ಪರಂಪರೆಯಲ್ಲಿ, ಮಧ್ಯಮವನ್ನು ಶುದ್ಧಮಧ್ಯಮವನ್ನಾಗಿ ಮಾತ್ರ ಬಳಸಿಕೊಂಡು, ಉಳಿದೆಲ್ಲ ವಿಕೃತಿ ಸ್ವರಗಳನ್ನೂ ಎರಡೆರಡು ಸ್ಥಾನಗಳಲ್ಲಿ, (ಪ್ರಯೋಗಾರ್ಹ ಸ್ವರ ಸ್ಥಾನಗಳ ಅಣುಸ್ವರ ಮೌಲ್ಯಗಳಲ್ಲಿ) ಅತ್ಯಂತ ಸೂಕ್ಷ್ಮ ಗಮಕಾನ್ವಯದೊಂದಿಗೆ ವಿಶಿಷ್ಟವೆಂದು ಎದ್ದು ಕಾಣುವ ರಾಗವಿದು, ಹಾಗೇ ಲಕ್ಷ್ಯದಲ್ಲಿ ದೀಕ್ಷಿತರಿಂದ ತಮ್ಮ ಕೃತಿಗಳಲ್ಲಿ ಬಳಸಲ್ಪಟ್ಟ ರಾಗವಿದು. ಪ್ರಾಚೀನ ರಾಗಗಳಲ್ಲಿ ಈ ಆಯಾಮದಲ್ಲಿ ಭಾಷಾಂಗತ್ವ ಪ್ರಕಾಶಪಡಿಸುವ ರಾಗ ಆಹಿರಿ ಒಂದೇ. ಇಷ್ಟು ಭಾಷಾಂಗ ಸ್ವರಗಳು ಪ್ರಯೋಗವಾಗುವುದೇ ಕಾರಣವೂ ಆಗಿ ಆಹಿರಿ ರಾಗವು ಕೀರವಾಣಿಯಲ್ಲಿ ಜನ್ಯ, ರೀತಿಗೌಳದಲ್ಲಿ ಜನ್ಯ (ಅಥವಾ ತತ್ ಸಮಾನವಾದ ನಠಭೈರವಿ ಮೇಳದಲ್ಲಿ ಜನ್ಯ) ವಕುಳಾಭರಣ ಮೇಳದಲ್ಲಿಜನ್ಯ, ತೋಡಿ ಮೇಳದಲ್ಲಿ ಜನ್ಯ-ಎಂಬ ವಿವಿಧ ದೃಷ್ಟಿಗಳಿಗೂ ಅಭಿಪ್ರಾಯಗಳಿಗೂ ಆಸ್ಪದವಾಗಿದೆ. ಯಾವ ಮೇಳದಲ್ಲಿ ಜನ್ಯ ಎಂಬ ಅಂಶವನ್ನೂ ಅಭಿಪ್ರಾಯ ಭೇದಗಳನ್ನೂ ಪಕ್ಕಕ್ಕೆ ಗುಡಿಸಿಟ್ಟು ತಮ್ಮ ಮಹತ್ವವನ್ನೂ, ಮೇಲ್ಮೆಯನ್ನೂ ವಿಶಿಷ್ಟ ಸೌಂದರ್ಯವನ್ನೂ ಅನವಲಂಬಿಗಳಾಗಿ ಪ್ರಕಟಗೊಳಿಸಿಕೊಳ್ಳುವ ಮಹಾ ರಾಗಗಳು ಆಹಿರಿಯಂಥವು.

ಶ್ರೀ ತ್ಯಾಗರಾಜರ ಮತ್ತು ಬಹುತೇಕ ಅದೇ ಪರಂಪರೆಯಲ್ಲಿ ಇಳಿದು ಬಂದ ರಾಗ ಮೌಲ್ಯಗಳನ್ನೇ ಅನುಸರಿಸಿದ್ದ ಶ್ರೀ ಶ್ಯಾಮಶಾಸ್ತ್ರಿಗಳು ಬಳಸಿದ ಆಹಿರಿ ರಾಗ ಈಗ ಹೇಳಿದ ಶ್ರೀ ದೀಕ್ಷಿತರ ಪರಂಪರೆಯ ಆಹಿರಿ ರಾಗದ ಸ್ವರೂಪದಷ್ಟು ಜಟಿಲವೂ ಅಲ್ಲ, ಸಂಕೀರ್ಣವೂ ಅಲ್ಲ. ಇವರಿಬ್ಬರ ಪರಂಪರೆಗಳಲ್ಲಿ ದ ನಿ ಸ ಎನ್ನುವ ಆರೋಹಣ ಸಂಚಾರದಲ್ಲಿ ಸಂದರ್ಭಾನುಸಾರವಾಗಿ ಶುದ್ಧ ಧೈವತವನ್ನೂ, ವಿರಳವಾಗಿ ಚತುಃಶ್ರುತಿ

ಧೈವತವನ್ನೂ ಬಳಸಿ ಭಾಷಾಂಗತ್ವ ಪ್ರಕಟಿಸಿ ಆಹಿರಿಗೆ ಸಹಜವಾದ ಉಳಿದ ಸ್ವರ ಸಂಚಾರಗಳಲ್ಲಿನ ಭಾವಗಳನ್ನೂ ಸೌಂದರ್ಯವನ್ನೂ ಪ್ರಕಾಶಪಡಿಸುವುದು ನಮಗೆ ಅನುಭವಕ್ಕೆ ಬರುವ ಸಂಗತಿ. ಈ ಅನುಪಮ ಸುಂದರ ರಾಗದಲ್ಲಿ ಶ್ರೀ ಮುದ್ದು ಸ್ವಾಮಿ ದೀಕ್ಷಿತರ, ಶ್ರೀತ್ಯಾಗರಾಜರ ಒಂದಕ್ಕಿಂತ ಹೆಚ್ಚು ಕೃತಿಗಳು ಲಭ್ಯ. ಆದರೆ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಯ ವ್ಯಾಪ್ತಿಯಲ್ಲಿ, ಆಹಿರಿ ರಾಗದಲ್ಲಿ ಲಭ್ಯವಿರುವುದು 'ಮಾಯಮ್ಮಾ'ಮಾತ್ರ.

ಭಕ್ತಿ, ಕರುಣಾ, ಶಾಂತ, ಆನಂದ ರಸಗಳ ಅಭಿವ್ಯಕ್ತಿಗೆ ಹೇಳಿ ರಚಿಸಿದೆಂಬಂಥ ರಾಗವಾದ ಆಹಿರಿಯಲ್ಲಿ ಶ್ರೀ ಶ್ಯಾಮಶಾಸ್ತ್ರಿಗಳು ಇವೆಲ್ಲದರ ಜತೆಗೆ ತೀವ್ರ ಆರ್ತತೆ ಕಾಣುತ್ತಾರೆ. ಈ ಕೃತಿಯ ಸಾಹಿತ್ಯ ಇದನ್ನು ಸಾರುತ್ತದೆ.

ಮಾಯಮ್ಮಾ ಅನಿ ಪಿಲಿಚಿತೆ ಮಾಟ್ಲಾಡರಾದಾ ?-ಮಾತೆ! 'ನಮ್ಮಮ್ಮಾ' ಎಂದು ನಿನ್ನನ್ನು ನಾನು ಆರ್ತನಾಗಿ ಕರೆದರೆ ಮಾತನಾಡಬಾರದೆ ತಾಯಿ?

ನ್ಯಾಯಮಾ ಮೀನಾಕ್ಷಿಕಿದಿ, ನಿನ್ನು ವಿನಾ ವೇರೆ ದಿಕ್ಕೆವರುನ್ನಾರು-

ಮಿನಾಕ್ಷಿಯಾದ ನಿನಗಿದು ನ್ಯಾಯವೇ? ನೀನಲ್ಲದೆ ನನಗೆ ದಿಕ್ಕು ಯಾರಿದ್ದಾರೆ?

ಸರಸಿಜಭವ ಹರಿಹರನುತ ಸುಲಲಿತ-ಬ್ರಹ್ಮ ವಿಷ್ಣು ಮಹೇಶ್ವರರಿಂದ ಹೊಗಳಸಿಕೊಂಡವಳು ಸುಮ್ಮನೆ ಅಲ್ಲ, ಸು-ಲಲಿತೆ ನೀನು. 'ನೀ ಪದಪಂಕಜಮುಲ ಸ್ಥಿರಮನಿ ನಮ್ಮಿತಿ ನಮ್ಮಿತಿ ನಮ್ಮಿತಿನಿ -ನಿನ್ನ ಪಾದಪದ್ಮಗಳೇ ಶಾಶ್ವತವಾದವೆನಗೆ ಎಂದು ಸ್ಥಿರವಾಗಿ, ಗಟ್ಟಿಯಾಗಿ ನಂಬಿದೆ, ನಂಬಿದೆ, ನಂಬಿದೆನು! ' ಕರುಣಜೂಡವೆ' ಕರುಣೆಯಿಂದ ನೋಡು ಹೇ ಕಾತ್ಯಾಯಿನಿ, ಕಾಳಿಕಾದೇವಿ, ಭವಾನಿ, ಹೇ ಪರಮೇಶ್ವರಿ, ಸುಂದರೇಶ್ವರನ ರಾಣಿಯೇ, ಹೇ ಬಾಲಾ ತ್ರಿಪುರ ಸುಂದರಿಯೇ, ಮಧುರ ಮಾತಿನವಳೇ, ಕಾಮಾಕ್ಷಿ, ನನ್ನ ಕೂಗು ಕೇಳಿಸದೇ ?

ಈ ಕೃತಿಯಲ್ಲಿ ನಿನ್ನ ಪಾದಪದ್ಮಗಳನ್ನು ಸ್ಥಿರವಾಗಿ ನಂಬಿದೆ ನಂಬಿದೆ ನಂಬಿದೆ ಎಂದು ಒತ್ತಿ ಒತ್ತಿ, ಕೂಗಿ, ಮೂರು ಸಲ ಭಾವುಕತೆ ಭಾವೋದ್ವೇಗಗಳಲ್ಲಿ ಹೇಳಿಕೊಂಡಾಗ ಆ ಕೂಗು ಅಮ್ಮನಿಗೆ ಕೇಳಿಸಿ ಒತ್ತಡವೇರಿ, ಅಮ್ಮ ಮಗುವಿನತ್ತ

ಗಮನಹರಿಸಿ ರಕ್ಷಿಸಿಯೇ ರಕ್ಷಿಸುತ್ತಾಳೆ ಎಂಬ ಭಾವನೆಯಿಂದ ಶ್ರೀ ಶಾಸ್ತ್ರಿಗಳು ಹೀಗೆ ಹಾಡಿರುವುದು ಪರಿಣಾಮಕಾರಿ ಎನಿಸಿದರೂ, ಶ್ಯಾಮಶಾಸ್ತ್ರಿಗಳ ಸಾಹಿತ್ಯವೆಲ್ಲೆಡೆಯೂ ಇರುವುದು ಇದೇ ಭಾವನೆಯೇ, ಮಾತೇ, ಆಗಿರುವುದರಿಂದ ಈ ವಿಷಯ ಒಂದು ಕ್ಲೀಷೇ (Cliche) ಆಗಬೇಕಿಲ್ಲ. ಏಕೆಂದರೆ ಶ್ರೀ ಶಾಸ್ತ್ರಿಗಳು ಇನ್ನೂ ಮೂರು ಕೃತಿಗಳಲ್ಲೂ ಹೀಗೆಯೇ, ಅವರ ಶೈಲಿಯಾಗಿಯೇ ಎಂಬಂತೆ 'ನಂಬಿದೆ, ನಂಬಿದೆ, ನಂಬಿದೆ' ಎಂದು ಒತ್ತಿ ಒತ್ತಿ ಹೇಳಿ ರಚಿಸಿದ್ದಾರೆ.

ಶ್ರೀ ಶಾಸ್ತ್ರಿಗಳು ಒಂದೇ ಸಲ ನಮ್ಮಿತಿ ಎಂದು ಉಳಿದ ಕೃತಿಗಳಲ್ಲಿ ಹೇಳಿಕೊಂಡಿರುವುದರಲ್ಲೂ ಅವರ ಮನಸ್ಸಿನ ಒತ್ತಡ, ತುಮುಲ, ತವಕ, ಆರ್ತತೆಗಳು, ಅಮ್ಮನಲ್ಲಿ ನಂಬಿಕೆ ನಿವೇದಿಸಿಕೊಳ್ಳುವಾಗ, ಅಮ್ಮನ ಪಾದಗಳೇ ಸ್ಥಿರವಾದವು, ರಕ್ಷಕವಾದವು, ಆರ್ತಿಹರವಾದವು ಎಂಬುದು ನಮಗೇ ಅಸಂದಿಗ್ಧವಾಗಿ ಅರಿವಿಗೆ ಬಂದು ಅವರ -ಮತ್ತು ಮಾತೆಯ ವಿಶಿಷ್ಟ ಸಂಬಂಧ ಅರಿವಿಗೆ ಬರುವಾಗ ಸರ್ವಸಾಕ್ಷಿಯಾದ, ಪರಮೇಶ್ವರಿಯಾದ ಕಾಮಾಕ್ಷೀ ದೇವಿಗೆ ಇಂಥ ಭಕ್ತನ ಆರ್ತಿ, ಆಕೆಯಲ್ಲಿನ ಇವರ ನಂಬಿಕೆ ಆಕೆಗೆ ಮೂರು ಸಲ ಕೂಗಿ ಹೇಳುವ ಆವಶ್ಯಕತೆ ಬರುವುದು-ಇರುವುದು ಒಪ್ಪಲು ಅರ್ಹವಾದುದೇ? ಅದೇ ಅದೇ ಮಾತುಗಳು, ಭಾವನೆಗಳು, ಪದಸರಣಿ ಬಹುತೇಕ ಅವರ ಕೃತಿಗಳಲ್ಲಿ ಪದೇ ಪದೇ ಪದೇ ಅವೇ ಪುನರಾವರ್ತಿಸುತ್ತಿರುವಲ್ಲೇ ಈ ನನ್ನ ಜಿಜ್ಞಾಸೆಯ ವಿಷಯ ಸ್ಪಷ್ಟವಾಗುವುದಿಲ್ಲವೇ?

ಇನ್ನು, ಉಳಿದೆರಡು ಚರಣಗಳು ಸಾಹಿತ್ಯ ಭಾವ ಹೀಗಿದೆ :

2. ವಿನುತಜನರ- ಅಂದರೆ, ನಿನ್ನನ್ನು ಕೊಂಡಾಡಿದವರ, ಪಾಪಗಳನ್ನು ನಾಶಮಾಡುವವಳು ಇಲ್ಲಿ 'ವಿನತ' ಎಂಬುದು ಹೆಚ್ಚುಗ್ರಾಹ್ಯವಾದ ಪಾಠವೆನಿಸುತ್ತದೆ ಏಕೆಂದರೆ, 'ನತ' ಎಂದರೆ 'ಬಗ್ಗಿದ' ಅಥವಾ ವಿನಮ್ರವಾಗಿ ಎದುರಿಗೆ ಬಗ್ಗಿ ನಿಂತ -'ವಿ'-ವಿಶೇಷವಾಗಿ ಬಗ್ಗಿ ನಿಂತ-ಅರ್ಥಾತ್ 'ಅನ್ಯಥಾ ಶರಣಂ ನಾಸ್ತಿ' ಭಾವನೆಯಿಂದ 'ಆಶ್ರಯಿಸಿದ' ಭಕ್ತರ ಪಾಪಗಳನ್ನೆಲ್ಲವನ್ನೂ ನಿವಾರಿಸುವವಳು ಮಾತೆ ಎಂಬುದು ಮಾತೆಗೆ ಸಹಜ ಗುಣ. ಈ ವರ್ಗದಲ್ಲಿ ಮಾತೆಯನ್ನು ಕೊಂಡಾಡುವವರು ಕೊಂಡಾಡದವರೆಂಬ ತಾರತಮ್ಯ 'ಆಶ್ರಯಿಸಿದವರ' ವಿಷಯದಲ್ಲಿ ಮಾತೆಗೆ ಇರುವುದಿಲ್ಲ. ಓ ಜನನೀ

(ತಾಯೆ!) ನೀಲಿ ಮೋಡಗಳ ಕಾಂತಿಯುಳ್ಳ ಕೇಶರಾಶಿಯುಳ್ಳವಳೇ (ಘನನೀಲವೇಣಿ!) ದಂಡಿಸಲ್ಪಟ್ಟ ದಾನವ ಸಮೂಹವನ್ನೇ ದಮನಗೊಳಿಸಿದವಳೇ (ವಿದಳಿತ ದಾನವ ಮಂಡಲ ದಮನೀ) ಕಮಲದ ಸೌಂದರ್ಯವುಳ್ಳ ಕಣ್ಣುಳ್ಳವಳು (ವನಜ ಲೋಚನಾ) ಚಂದ್ರಮುಖಿ (ಸುಧಾಕರಾನನಾ), ವರದಾಯಕಿ, ಹೇ ಬಂಗಾರು ಕಾಮಾಕ್ಷಿ (ಬಂಗಾರು ಬೊಮ್ಮ) ಎಂದೂ (ಅನಯಮು), ನಿನು ಕೋರಿಯುನ್ನಾನಮ್ಮಾ-ನಿನ್ನನ್ನು ಪ್ರಾರ್ಥಿಸಿಕೊಂಡಿದ್ದೆನಮ್ಮಾ! ||ಮಾಯಮ್ಮಾಯನಿ||

3. ಅಭಯವನ್ನಿತ್ತು ನನ್ನನ್ನು ಕಾಯೆ ಓ ವರದಾಯಕಿಯೇ ! ನೀನೇ ಆಲಂಬನವಲ್ಲವೆ? (ನೆರದಾತವುಗದಾ), ಈ ಮಗುವಿನ ಮೇಲೆ (ಬಿಡ್ಡಪೈ) ಹೆಚ್ಚಿನ ದಯಬಾರದೆ? (ಗೊಪ್ಪಗ ದಯರಾದಾ?) ಅಖಿಲ ಲೋಕ ಜನನಿ, ಅನಾಥ ರಕ್ಷಕಿ ಎಂಬೆಲ್ಲ ಬಿರುದು ನಿನ್ನದಲ್ಲವೆ ? ಹೇ ಶ್ಯಾಮಕೃಷ್ಣ ಸೋದರಿಯೇ ವೈಭವೋಪೇತಳಾದ ನೀನು ವೀರರ ಶಕ್ತಿ ಸ್ವರೂಪಳೂ ತ್ರಿಪುರಸುಂದರಿಯೂ ಆಗಿ, ಮಾಯಮ್ಮಾ ಎಂದು ಕರೆದರೆ ಮಾತಾಡೆಯೇಕೆ ?

5. **'ನನ್ನುಬ್ರೋವು ಲಲಿತಾ' -**

ರಾಗ : ಲಲಿತಾ **ತಾಳ : ಮಿಶ್ರಏಕ**

ಸಾಹಿತ್ಯದ ಮೂಲ ಪಾಠ

||ಪ || ನನ್ನುಬ್ರೋವು ಲಲಿತಾ ವೇಗಮೆ |
ಚಾಲ ನಿನ್ನು ನೆರನಮ್ಮಿಯುನ್ನವಾಡುಗದಾ ಭಕ್ತ ಕಲ್ಪಕಲತಾ |
||ನನ್ನುಬ್ರೋವು||

||ಅ.ಪ.|| ನಿನ್ನುವಿನಾ ಎವರುನ್ನಾರು ಗತಿ ಜನನೀ ಅತಿವೇಗಮೆ ವಚ್ಚಿ
||ನನ್ನು ಬ್ರೋವು||

|| ಚ.1.|| ಪರಾಕುಸೇಯಕನೆ ವಚ್ಚಿ ಕೃಪ ಸಲುಪರಾದಾ ? ಮೊರ ವಿನವಾ ?
ಪರಾಶಕ್ತಿ ಗೀರ್ವಾಣ ವಂದಿತಪದಾ ! ನೀ ಭಕ್ತುಡನಮ್ಮಾ ಸಂತತಮು
||ನನ್ನು ಬ್ರೋವು||

||ಚ.2.|| ಸರೋಜಭವ ಕಮಲನಾಥ ಶಂಕರ ಸುರೇಂದ್ರನುತ ಚರಿತಾ |
ಪುರಾಣಿ ವಾಣಿ ಇಂದ್ರಾಣಿ ವಂದಿತ ರಾಣಿ ಅಹಿಭೂಷಣುನಿ ರಾಣಿ!
||ನನ್ನು ಬ್ರೋವು||

||ಚ.3.|| ಮದಾತ್ಮುಲೈನ ದುರಾತ್ಮಜನುಲನು ಕಥಲನು ಪೊಗಡಿ
ಸದಾ ನೇ ವರಾಲ ಚುಟ್ಟಿ ತಿರಿಗಿ ತಿರಿಗಿ ವೆತಲನೆಲ್ಲದೀರ್ಚಿ ವರಮೊಸಗಿ
||ನನ್ನು ಬ್ರೋವು ||

||ಚ.4.|| ಸುಮೇರು ಮಧ್ಯನಿಲಯೇ ! ಶ್ಯಾಮಕೃಷ್ಣುನಿ ಸೋದರಿ ಕೌಮಾರಿ !
ಉಮಾ, ಶ್ರೀ ಮೀನಾಕ್ಷಮ್ಮಾ, ಶಂಕರಿ, ಓ ಮಹಾರಾಜ್ಞಿ
ರಕ್ಷಿಂಚುಟಕಿದಿ ಸಮಯಮು ||ನನ್ನುಬ್ರೋವು||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳ ಕೃತಿಗಳಲ್ಲಿ ಹಲವು ಕೃತಿಗಳು ಮೂರು ಚರಣಗಳನ್ನು ಹೊಂದಿದ್ದರೆ, ಲಲಿತಾ ರಾಗದ 'ನನ್ನು ಬ್ರೋವು ಲಲಿತಾ' ಕೃತಿ 4 ಚರಣಗಳನ್ನು ಹೊಂದಿದೆ. ತಾಳ ಮಿಶ್ರ ಏಕ ಎಂದು ಉಕ್ತವಾದರೂ, ಪರಿಣಾಮದಲ್ಲಿ ಮತ್ತು ಲಯ ಮಾದರಿಯ ಓಟದಲ್ಲಿ ಮಿಶ್ರಛಾಪು ತಾಳದ ಹಂದರದ್ದೇ ಆಗಿದೆ. ವಿಲೋಮ ಮಿಶ್ರಛಾಪಿನ ರಚನೆಗಾಗಿ ಇದನ್ನೂ ಉದಹರಿಸುವುದುಂಟು. ಈ ಲಯಕ್ಕೆ ಹೊಂದಿಕೊಂಡ ಈ ಕೃತಿಯ ಗೇಯದಲ್ಲಿ 'ಸಮಾ' ಎಂಬ ಸಂಚಾರದ ಆಧಿಕ್ಯವೇ ಇದ್ದು, 'ಸರಿಗ' ಅಥವಾ 'ಗರಿಗ' ಎಂಬ ಸಂಚಾರಗಳು ವಿರಳವಾಗಿರುವುದರಿಂದ ಈ ಕೃತಿಯ ರಾಗ ಲಲಿತವೇ ಅಥವಾ ವಸಂತವೇ ಎಂಬ ವಿವಾದ ಅಲ್ಲಲ್ಲಿ ಪ್ರಚಲಿತವಾಗಿದೆ. 'ಸಮಾ' ಸಂಚಾರ ಅಧಿಕವಾಗಿದ್ದರೂ ಕೃತಿಯ ಗೇಯದ ಒಟ್ಟಾರೆ ಓಟ ಲಲಿತಾ ರಾಗದ ಭಾವಗಳನ್ನೇ ವ್ಯಕ್ತಪಡಿಸುತ್ತದೆ ಮತ್ತು ಈ ಪ್ರಜ್ಞೆ ಹೆಚ್ಚಾಗಿ ಮೂಡಿರುವುದರಿಂದಲೇ ಈ ಕೃತಿಯ ರಾಗ ಲಲಿತವೇ ಎಂಬ ಒಪ್ಪಿಗೆ ಲಕ್ಷ್ಯ ಕ್ಷೇತ್ರದಲ್ಲಿ ದೊರೆತಿದೆ.

ಶ್ರೀ ಶಾಸ್ತ್ರಿಗಳ ಕೃತಿಗಳಲ್ಲಿ ಒಮ್ಮೊಮ್ಮೆ ಕಾಮಾಕ್ಷಿ ಶ್ರೀ ರಾಜರಾಜೇಶ್ವರಿಯ ನಾಮ ಸಹಸ್ರದಲ್ಲಿ ಮಾತೆಯ ಕೆಲವು ಹೆಸರುಗಳು, ಸಂಬೋಧನೆ ಬೇರೆಯಾಗಿದೆಯಲ್ಲದೆ ಭಕ್ತ ವಾಗ್ಗೇಯಕಾರರ ಭಾವನಾಭಿವ್ಯಕ್ತಿ, ಆ

ನಿವೇದನೆಯ ಮಾತುಗಳು, ಪದಗಟ್ಟು, ಎಲ್ಲವೂ ಪುನರಾವರ್ತಿಸುತ್ತಲೇ ಇವೇ ಎನ್ನುವ ವಸ್ತುಸ್ಥಿತಿ- fact - ಗಮನವನ್ನು ಸೆಳೆಯದೇ ಇರುವುದಿಲ್ಲ, ವಿಶ್ಲೇಷಣೆಯ ಕಣ್ಣಿನಿಂದ ಸಾಹಿತ್ಯವನ್ನು ಸ್ವಲ್ಪ ದೃಷ್ಟಿಸಿದಾಗ. ಈ ಕೃತಿಯಲ್ಲೂ ಇದನ್ನು ಗಮನಿಸಿ! "ನನ್ನು ಬ್ರೋವು ಲಲಿತಾ ವೇಗಮೇ-ಬೇಗ ನನ್ನನ್ನು ಕಾಪಾಡು ಲಲಿತೇ, 'ಚಾಲಾ ನಿನ್ನು ನೆರನಮ್ಮಿಯುನ್ನವಾಡುಗದಾ" - ನಿನ್ನನ್ನು ತುಂಬ ಗಟ್ಟಿಯಾಗಿ ನಂಬಿದವನಲ್ಲವೇ ನಾನು, ಹೇ ಮಾತೆ, ಭಕ್ತರಿಗೆ ಕಲ್ಪವೃಕ್ಷವಾಗಿ ಬೇಡಿದ್ದನ್ನು ನೀಡುವವಳೇ !

ನಿನ್ನ ಬಿಟ್ಟರೆ ಯಾರಿದ್ದಾರೆ ಗತಿ ತಾಯಿ, ಬೇಗ, ಅತಿಶೀಘ್ರವಾಗಿ ಬಂದು ಕಾಯಿ ತಾಯಿ! 'ನಿನ್ನುವಿನಾ ಎವರುನ್ನಾರು ಗತಿ ಜನನಿ, ಅತಿ ವೇಗಮೇ ವಚ್ಚಿ-ನನ್ನು ಬ್ರೋವು ಲಲಿತಾ.

'ಪರಾಕು ಸೇಯಕ -ಅಸಡ್ಡೆ ಮಾಡದೆ, ನೀವು ವಚ್ಚಿ ಕೃಪ ಸಲುಪರಾದಾ, ಮೊರ ವಿನದಾ?- ಪರಾಶಕ್ತಿ, ಗೀರ್ವಾಣಿ ವಂದಿತ ಪಾದ'- ಪರಾಶಕ್ತಿಯೇ, ವೇದಗಳಿಂದ ನಮಿಸಲ್ಪಟ್ಟ ಪದದ್ವಯಳೇ, ನೀನು ಬಂದು ಕೃಪೆ ತೋರಬಾರದೇ, ನನ್ನ ಮೊರೆ ಆಲಿಸದೇ-ಕಾಮಾಕ್ಷಿ, ಎಂದೆಂದಿಗೂ ನಾನು ನಿನ್ನ ಭಕ್ತನಮ್ಮಾ!

ಕಮಲಭವ ಬ್ರಹ್ಮ, ಕಮಲನಾಭ ವಿಷ್ಣು ಶಿವಶಂಕರ ದೇವೇಂದ್ರರೇ ಕೊಂಡಾಡಿದ ಚರಿತವಲ್ಲವೇ ನಿನ್ನದು? ಹೇ ಪುರಾಣಿ, ಸರಸ್ವತೀ ಲಕ್ಷ್ಮಿಯರಿಂದ ವಂದಿಸಲ್ಪಟ್ಟವಳೇ, ಭುಜಗಭೂಷಣನ ರಾಣಿ ಪಾರ್ವತೀ ದೇವಿ ಕಾಮಾಕ್ಷಿಯೇ-

'ಮದಾಂಧುಲೈಯುನ್ನ ದುರಾತ್ಮ ಜನಮುಲನು ದಾತಲನಿ ಪೊಗಡಿ ಸದಾ ನೇನಿಟ್ಲ ಚುಟ್ಟಿ ತಿರಿಗಿತಿ'- ಮದಾಂಧರಾಗಿರುವ ದುರಾತ್ಮ ಜನರನ್ನು ಮಹಾ ಉದಾರ ದಾನಿಗಳೆಂದು ಕೊಂಡಾಡಿ ನಾನು ಹೀಗೆ ಸುತ್ತಿ ತಿರಿಗಿದೆ. 'ಚಂಚಲಂಬನ್ನಿಯು ದೀರ್ಚಿ ವರವೊಸಗಿ ಬ್ರೋವು'. ಈ ನನ್ನ ಚಿತ್ತಚಾಂಚಲ್ಯವನ್ನು ನಿವಾರಿಸಿ ವರನೀಡಿ ಕಾಪಾಡು ತಾಯಿ! ಕಾಮಾಕ್ಷಿ!

'ಸುಮೇರು ಮಧ್ಯ ನಿಲಯ'- ಮೇರು ಶ್ರೀ ಚಕ್ರ ಮಧ್ಯದ ತ್ರಿಕೋಣದಲ್ಲಿನ ಬಿಂದುವೆಂಬ ಚಿಂತಾಮಣಿ ನಿಲಯೇ, 'ಶ್ಯಾಮಕೃಷ್ಣುನಿ ಸೋದರಿ, ಕೌಮಾರಿ, ಉಮಾ, ಮೀನಾಕ್ಷಮ್ಮಾ' ಶ್ಯಾಮಕೃಷ್ಣ ರೂಪದ ನಾರಾಯಣನ ಸೋದರಿಯೇ,

ಕೌಮಾರಿ, ಉಮೇ, ಮೀನಾಕ್ಷಮ್ಮಾ, ಶಂಕರಿ, 'ಓ ಮಹಾರಾಜ್ಞಿ ರಕ್ಷಿಂಪ ಸಮಯಮಿದಿ ! ಓ ಮಹಾರಾಜ್ಞಿ (ಲಲಿತಾ ಸಹಸ್ರನಾಮದ 2ನೇ ನಾಮ, ಶ್ರೀಮಾತಾ-ಶ್ರೀ ಮಹಾರಾಜ್ಞಿ) ಕಾಪಾಡಲು ಸಮಯ ಸನ್ನಿಹಿತವಾಗಿದೆಯಮ್ಮಾ-ಲಲತೇ!

6. 'ಓ ಜಗದಂಬಾ' -

ರಾಗ : ಆನಂದ ಭೈರವಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ|| ಓ ಜಗದಂಬಾ ನನ್ನು ನೀವು ಜವಮುನ ಬ್ರೋವು ಅಂಬ
|| ಓ ಜಗದಂಬಾ||

||ಅ.ಪ.|| ಈ ಜಗತಿ ಗತಿಯ್ಯೆ ಜನುಲಕು ಮರಿ ತೇಜಮುನ ರಾಜವಿನುತಯೌ
ರಾಜಮುಖಿ ಸರೋಜ ನಯನ ಸುಗುಣ ರಾಜರಾಜಿತ ಕಾಮಾಕ್ಷಿ!
||ಓ ಜಗದಂಬಾ||

||ಚ.1.|| ಕನ್ನತಲ್ಲಿ ನಾದುಚೆಂತನಿಂತ ಕನ್ನಡ ಸಲುಪಗ ತಗುನಾ ನಿನ್ನು ನೇ
ನಮ್ಮಿಯುನ್ನವಾಡುಗದಾ ನನ್ನೊಕನಿ ಬ್ರೋಚುಟಕರುದಾ ?
ಅನ್ನಿ ಭುವನಂಬುಲ ಗಾಚೇವು ಪ್ರಸನ್ನಮೂರ್ತಿ ಅನ್ನಪೂರ್ಣ ವರದಾ!
ವಿನ್ನಪಂಬು ವಿನ್ನಪಿಂಚಿ ಸನ್ನಿಧಿ ವಿಪನ್ನ ಭಯ ವಿಮೋಚನ ಧೌರೇಯ
|| ಓ ಜಗದಂಬಾ ||

||ಚ.2.|| ಜಾಲಮೇಲ ಶೈಲಬಾಲ ತಾಳಜಾಲ ಜನನೀ ನಿನ್ನುವಿನಾ
ಪಾಲನಾರ್ಥಮುಗ ವೇರೆ ದೈವಮುಲ ಲೋಲಮತಿಯ್ಯೆ ನಮ್ಮಿತಿನಾ?
ನೀಲನುತ ಶೀಲಮುನೆಚ್ಚಟನ್ನೆನ ಗಾನ ಗಾನಲೋಲ ಹೃದಯ!
ನೀಲಕಂಠರಾಣಿ ನಿನ್ನು ನಮ್ಮಿತಿನಿ ನಿಜಂಬುಗ ಬಲ್ಕೆದಿ ದಯಚೇಸಿ
||ಓ ಜಗದಂಬಾ||

||ಚ.3.|| ಚಂಚಲಾತ್ಮುಡೇನು ಏಮಿ ಪೂರ್ವ ಸಂಚಿತಮುಲ ಸಲುಪಿತಿನೋ
ಕಂಚಿ ಕಾಮಾಕ್ಷಿ ನೇನು ನಿನ್ನು ಪೊಡಗಾಂಚಿತಿನಿ ಶರಣು ಶರಣು ನೀ
ವಿಂಚುಕಾ ಚಂಚಲಗತಿ ನಾ ದೆಸನುಂಚವಮ್ಮಾ ಶ್ಯಾಮಕೃಷ್ಣವಿನುತ

ಮಂಚಿ ಕೀರ್ತಿನಿಚ್ಚುನಟ್ಟಿ ದೇವಿ ಮನ್ನಿಂಚಿ ನಾದಪರಾಧಮುಲ
ಸಹಿಂಚಿ ||ಓ ಜಗದಂಬಾ||

|| ಸ್ವರ ಸಾಹಿತ್ಯ|| ವರಸಿತಗಿರಿನಿಲಯುನಿ ಪ್ರಿಯ ಪ್ರಣಯಿನಿ ಪರಾಶಕ್ತಿ ಮನವಿನಿ ವಿನುಮಾ ಮರಿಯಾದಲೆರುಗನಿ ದುಷ್ಪ್ರಭುಲ ಕೋರಿ ವಿನುತಿಂಪಗ ವರಂಬೊಸಗಿ
||ಓ ಜಗದಂಬಾ||

ವ್ಯಾಖ್ಯಾನ

ಶ್ರೀ ಶ್ಯಾಮಶಾಸ್ತ್ರಿಗಳ ಪ್ರತ್ಯೇಕತೆಯನ್ನೂ ವೈಶಿಷ್ಟ್ಯವನ್ನೂ ಉಲ್ಲೇಖಿಸುವಾಗ ಅವರಿಗೆ ಆನಂದಭೈರವಿ ರಾಗದಲ್ಲಿದ್ದ ವಿಶೇಷ ಒಲವನ್ನೂ, ಈ ರಾಗದಲ್ಲೇ ಆರು ಕೃತಿಗಳನ್ನೂ ಒಂದು ಪದವರ್ಣವನ್ನೂ, ಒಟ್ಟು 7 ರಚನೆಗಳನ್ನು ಮಾಡಿ ಈ ಆನಂದಭೈರವಿಯಲ್ಲಿನ ತಮ್ಮ ಒಲವನ್ನು ಅಭಿವ್ಯಕ್ತಿಪಡಿಸಿರುವ ವಿಷಯಕ್ಕೆ ಸಹಜ ಒತ್ತು ದೊರೆಯುತ್ತದೆ. ಲಭ್ಯವಿರುವ ಅವರ 71 ಕೃತಿಗಳಲ್ಲಿ ಆನಂದಭೈರವಿ ರಾಗವೊಂದರಲ್ಲೇ 7 ರಚನೆಗಳೆಂಬುದೂ, ಕಲ್ಯಾಣಿ ರಾಗವೊಂದರಲ್ಲೇ 8 ರಚನೆಗಳೆಂಬುದೂ ಈ ಒತ್ತಿಗೆ ಕಾರಣ, 'ಸಾಮಿನಿ ರಮ್ಮನವೇ' ಅಟ್ಟತಾಳದ ಪದವರ್ಣ, ಆದಿತಾಳದ ಕೃತಿಗಳಾದ ಓ ಜಗದಂಬಾ, ಹಿಮಾಚಲತನಯ ಬ್ರೋವು, ಮಹಿಲೋ ಅಂಬಾ, ರೂಪಕತಾಳದ ಪಾಹಿಶ್ರೀ ಗಿರಿರಾಜಸುತೇ ಮಿಶ್ರ ಛಾಪಿನ ಮರಿವೇರೆಗತಿಯೆವರಮ್ಮಾ, ತ್ರಿಶ್ರತ್ರಿಪುಟದ 'ಆದಿನಮುನಿಂಚಿ' ಇವೇ ಆನಂದ ಭೈರವಿಯಲ್ಲಿ ಶ್ರೀ ಶಾಸ್ತ್ರಿಗಳ ಕೃತಿಗಳು.

ಶ್ರೀ ಮುದ್ದುಸ್ವಾಮಿ ದೀಕ್ಷಿತರೂ ಅದ್ಭುತ ಸುಂದರವಾದ 6 ಕೃತಿಗಳನ್ನು ವಿಸ್ತಾರವಾದ ಹಂದರದಲ್ಲಿ ರಚಿಸಿದ್ದರೂ, ಅವು ಲಭ್ಯವಿದ್ದರೂ, ಆನಂದಭೈರವಿಗೆ ಶ್ಯಾಮಶಾಸ್ತ್ರಿಗಳೇ ಎಂಬುದೂ ಒಂದು ಕ್ಲೀಶೇ. ಆನಂದಭೈರವಿಯಲ್ಲಿ ಶ್ರೀ ತ್ಯಾಗರಾಜರು ಹೆಚ್ಚು ಕೃತಿಗಳನ್ನು ರಚಿಸದಿರಲು ಒಬ್ಬ ನಟ್ಟುವನಾರ್‌ಗೆ ಶ್ರೀ ತ್ಯಾಗರಾಜರು ಈ ರಾಗದಲ್ಲಿ ರಚಿಸದಿರಲು ಕೊಟ್ಟ ಆಶ್ವಾಸನೆಯೇ ಕಾರಣವೆಂಬ ದಂತಕಥೆ ಎಲ್ಲರಿಗೂ ತಿಳಿದುದೇ.

ಶ್ರೀ ಶಾಸ್ತ್ರಿಗಳ ಓ ಜಗದಂಬ ಕೃತಿಭಾವ ದರ್ಶನ ಮಾಡೋಣ :

ವಿಳಂಬ ಕಾಲದ ಆದಿತಾಳದ ಸಮಗ್ರಹದ ಕೃತಿಗಳ ಘನ ಗಜಗಮನಕ್ಕೆ

ನಿದರ್ಶನರೂಪವಾದುದು ಓ ಜಗದಂಬ ಕೃತಿ. ಇದೂ ಸಹ 3 ಚರಣಗಳುಳ್ಳ ಕೃತಿ.

ಓ ಜಗದಂಬ, ನನ್ನನ್ನು ನೀನು ಬೇಗ ಕಾಪಾಡು. ಈ ಲೋಕದ ಜನರಿಗೆ ಗತಿಯೂ ಆಶ್ರಯವೂ ಆದ ನೀನು ರಾಜಮಹಾರಾಜರೆಲ್ಲರೂ ನುತಿಸಿದ ಅಂಬೆ, ಚಂದ್ರವದನೆ, ಪದ್ಮನೇತ್ರೇ, ಸುಗುಣಗಳ ರಾಶಿಯಿಂದ ಶೋಭಿಸುವ ಕಾಮಾಕ್ಷಿ. ಶ್ರೇಷ್ಠವಾದ ಹಿಮದ ಬಿಳುಪಿನ ಕೈಲಾಸವಾಸಿ ಶಿವನ ಪತ್ನಿ, ಪರಾಶಕ್ತಿ, ನನ್ನ ಮನವಿ ಕೇಳಮ್ಮಾ. ಸನಾತನ ಕ್ರಮವನ್ನು (ಮರಿಯಾದ) ಅರಿಯದ ದುರಾಚಾರಿ ದೊರೆಗಳನ್ನು ಬೇಡೆನು, ಆಶ್ರಯಿಸೆನು, ಕೊಂಡಾಡೆನು, ವರ ನೀಡುತಾಯೆ.

1. ಹೆತ್ತ ತಾಯಿ, ನನ್ನೊಂದಿಗೆ ಇಷ್ಟು ಉಪೇಕ್ಷೆ ಮಾಡುವುದು ಉಚಿತವೇ ತಾಯೆ, ನಿನ್ನನ್ನೇ ನಂಬಿದವ ನಾನಲ್ಲವೇ, ನನ್ನೊಬ್ಬನನ್ನು ರಕ್ಷಿಸಲು ಕಷ್ಟವೇ, ಸಕಲಭುವನ ಜನನಿ ನೀನು, ಸಕಲ ಭುವನ ರಕ್ಷಕಿಯಾಗಿ ಪ್ರಸನ್ನತೆಯೇ ಮೂರ್ತಿ ಸ್ವರೂಪಳಾದವಳು, ನೀನೇ ಅನ್ನಪೂರ್ಣೇ ವರದಾಯಕಿ, ನನ್ನ ಬಿನ್ನಹವನ್ನು ಕೇಳಿ ನಿನ್ನ ಸನ್ನಿಧಿಯಲ್ಲಿರುವರಿಗೆ ಭಯವಿಲ್ಲದವಳಾಗು.

2. ವಿಳಂಬವೇಕೆ ಶೈಲಜೆ, ಬಾಲೇ, ತಾಯೆ, ನೀನಿಲ್ಲದೆ ತಾಳಲಾರೆನು. ಅತ್ಯಾಸೆ ದುರಾಸೆಗಳಿಂದ ಪ್ರಾಪಂಚಿಕ ಭೋಗಗಳಿಗಾಗಿ ಬೇರೆ ದೈವಗಳನ್ನಾ ಶ್ರಯಿಸಿದೆನೆ ನಾನು ? ಶಿವನಿಂದಲೇ ಸ್ತುತಳು ನೀನು. ನೀಲಕಂಠನ ರಾಣಿ, ಮತ್ತೆಲ್ಲೂ ನಿನ್ನನ್ನು ಕಾಣೆನು. ನಿನ್ನನ್ನೇ ನಂಬಿದೆ, ಇದು ಸತ್ಯ, ದಯಮಾಡು - ಓ ಜಗದಂಬೆ.

3. ಚಂಚಲಮನಸ್ಕನಾಗಿ ಜನ್ಮಾಂತರಗಳಲ್ಲಿ ಏನೇನು ಪಾಪ ಸಂಚಯನ ಮಾಡಿಕೊಂಡಿದ್ದೆನೋ ! ಕಂಚಿಕಾಮಾಕ್ಷಿ! ಇಂದು ನಿನ್ನನ್ನರಿತೆ, ನಿನಗೆ ಶರಣು ಶರಣು ತಾಯೆ, ಸದ್ಗತಿ ತೋರಮ್ಮಾ. ಶ್ಯಾಮಕೃಷ್ಣವಿನುತೇ, ಒಳ್ಳೆಯ ಕೀರ್ತಿ ಮೆರೆದವಳು, ದೇವಿ, ಮನ್ನಿಸಿ, ನನ್ನಾಪರಾಧಗಳ ಕ್ಷಮಿಸಿ, ಓ ಜಗದಂಬೆ, ಕಾಪಾಡು.

7. 'ಮರಿವೇರೆ ಗತಿಯೆವರಮ್ಮಾ'- ಆನಂದಭೈರವಿ ರಾಗ : ಮಿಶ್ರ ಛಾಪು ತಾಳ

ಸಾಹಿತ್ಯದ ಮೂಲ ಪಾಠ

||ಪ.|| ಮರಿವೇರೆ ಗತಿ ಎವರಮ್ಮಾ ಮಹಿಲೋ ಬ್ರೋಚುಟಕು ?
|| ಮರಿವೇರೆ ||

||ಅ.ಪ.|| ಶರಣಾಗತ ರಕ್ಷಕಿ ನೀವೆಯೆನಿ ಸದಾ ನಮ್ಮಿತಿ ನಮ್ಮಿತಿನಿ ಮೀನಾಕ್ಷಿ
|| ಮರಿವೇರೆ||

||ಚ.1.|| ಮಧುರಾಪುರಿ ನಿಲಯಾ ವಾಣೀ ರಮಾ ಸೇವಿತ ಪದಕಮಲಾ ಮಧುಕೈಟಭ ಭಂಜನಿ ಕಾತ್ಯಾಯನೀ ಮರಾಳಗಮನಾ ನಿಗಮಾಂತವಾಸಿನೀ || ಮರಿವೇರೆ||

||ಚ.2.|| ವರಮಿಚ್ಚಿ ಶೀಘ್ರಮೇ ಬ್ರೋವು ಶಿವಾ ಅಂಬಾ ಇದಿ ನೀಕು ಬರುವಾ? ನೆರದಾತವು ನೀವು ಗದಾ ಶಂಕರೀ ಸರೋಜಭವಾದಿ ಸುರೇಂದ್ರ ಪೂಜಿತೆ|| ಮರಿವೇರೆ||

||ಚ.3.|| ಶುಕಶ್ಯಾಮಳ ಘನಶ್ಯಾಮ ಕೃಷ್ಣುನಿ ಸೋದರಿ ಕೌಮಾರೀ! ಅಕಳಂಕ ಕಲಾಧರೀ ಬಿಂಬಾಧರೀ ಅಪಾರ ಕೃಪಾನಿಧಿ ನೀವೇ ರಕ್ಷಿಂಪ ||ಮರಿವೇರೆ||

||ಸ್ವರ ಸಾಹಿತ್ಯ|| ಪಾದಯುಗಮು ಮದಿಲೋ ದಲಚಿ ಕೋರಿತಿ ವಿನುಮು ಮದಗಜಗಮನ ಪರುಲ ನುತಿಂಪಗನೇ ವರಮೊಸಗು ಸತತಮು ನಿನುಮದಿ ಮರವಕನೇ ಮದನರಿಪುಸತಿ ನಿನು ಹೃದಯಮುಲೋ ಗತಿಯನಿ ದಲಚಿ ಸ್ತುತಿ ಸಲಿಪಿತೇ ಮುದಮುತೋಫಲಮೊಸಗುಟುಕು ಧರಲೋ ನತಾವನಿ ಕುತೂಹಲ ನೀವೇಗಾ
|| ಮರಿವೇರೆ||

ವ್ಯಾಖ್ಯಾನ

ಶ್ರೀ ಶ್ಯಾಮಶಾಸ್ತ್ರಿಗಳ ಆನಂದ ಭೈರವಿ ರಾಗದ ಕೃತಿಗಳಲ್ಲಿ ಅತ್ಯಂತ ಹೆಚ್ಚಿನ ಆಕರ್ಷಣೆಯನ್ನು ಗಾಯಕವಾದಕರಿಗೆ ಮುಂದಿಟ್ಟು ಸೆಳೆದುಕೊಂಡ ಕೃತಿಯೆಂದರೆ ಅದು ಮರಿವೇರೆ ಗತಿಯೆವರಮ್ಮಾ. ಘನ ಗಂಭೀರದ ನಡೆಯಲ್ಲಿ ಮಿಶ್ರಛಾಪು

ತಾಳದಲ್ಲಿ ಮಧ್ಯಲಯದಲ್ಲಿ ಸಾಗಿ, ಸುಂದರ ಚಿಟ್ಟೆಸ್ವರ ಸಾಹಿತ್ಯವನ್ನು ಈ ಕೃತಿ ಹೊಂದಿರುವ ಈ ಅಂಶಗಳೇ ಈ ಹೆಚ್ಚಿನ ಆಕರ್ಷಣೆಗೆ ಕಾರಣ. ಮಧುರೆಯ ಮೀನಾಕ್ಷೀ ದೇವಿಯ ಸ್ತುತಿ ಇದು. ಪದೇ ಪದೇ 'ನೀನಲ್ಲದೆ ನನಗೆ ಮತ್ಯಾರು ದಿಕ್ಕು' ಎಂಬ ಆಳಲನ್ನು ತೋಡಿಕೊಳ್ಳುವ ಶ್ರೀ ಶಾಸ್ತ್ರಿಗಳ ಅದೇ ಅಳಲಿನೊಂದಿಗೇ ಈ ಕೃತಿಯ ಆರಂಭ.

'ಮರಿ ವೇರೆ ಗತಿ ಎವರಮ್ಮಾ ಮಹಿಲೋ ಬ್ರೋಚುಟಕು'-ಕಾಪಾಡಲು ಮತ್ಯಾರಿದ್ದಾರೆ ಇಳೆಯಲ್ಲಿ? ಶರಣಾಗತ ರಕ್ಷಕಿ ನೀನೇ ಎಂದು ಸದಾ ನಿನ್ನನ್ನು ನಂಬಿದೆ ಹೇ ಮೀನಾಕ್ಷಿ ದೇವಿ! ನಿನ್ನ ಪಾದದ್ವಯವನ್ನೇ ಮತಿಯಲ್ಲಿಟ್ಟು ಕೋರಿದೆ, ಕೇಳಮ್ಮಾ, ಮದಗಜಗಮನೆ, ನಾನನ್ಯರ ಪೊಗಳೆನು, ವರ ನೀಡು, ಎಂದೂ ನಿನ್ನಲ್ಲಿ ನೆಟ್ಟ ಮತಿಯೇ, ಮರೆಯೆ, ಕಾಮಹರ ಶಿವನ ಸತಿ, ಹೇ ತಾಯಿ, ನೀನೆ ಗತಿಯೆಂದು ಚಿಂತಿಸಿ ಸ್ತುತಿಸಿದರೆ ಸಂತೋಷಿಸಿ ಶುಭ ಫಲಗಳನ್ನನುಗ್ರಹಿಸಲು ಭುವಿಯಲ್ಲಿ ನಿನ ಪಾದಕ್ಕೆ ಬಿದ್ದವರ ರಕ್ಷಣೆಯ ಹೊಣೆ-ಆಸಕ್ತಿ ಇರುವವಳು ನೀನೇ ಅಲ್ಲವೆ ಮಾತೆ?

1. ಹೇ ಮಧುರಾ ಪುರ ನಿಲಯೇ ಮೀನಾಕ್ಷಿ, ಸರಸ್ವತೀ ಲಕ್ಷ್ಮಿಯರು ಸೇವೆ ಸಲ್ಲಿಸುತ್ತಿರುವ ಪದಪದ್ಮಳೇ, ಮಧು, ಕೈಟಭ ರಾಕ್ಷಸರನ್ನು ಕೊಂದವಳೇ, ಕಾತ್ಯಾಯನಿ, ಹಂಸನಡೆಯವಳೇ, ವೇದವೇದಾಂತದಲ್ಲಿಯೇ ನೆಲೆಸುವ ಬ್ರಹ್ಮ ಸ್ವರೂಪಳೇ?

2. ವರವಿತ್ತು ಬಿರ್‍ರನೆ ಕಾಯೆ ತಾಯೆ, ಶಿವೇ, ಇದೇನು ಭಾರವೇ ನಿನಗೆ, ಶಂಕರಿ, ಆಲಂಬನ ನೀಡುವವಳೆಂದರೆ ನೀನೇ ಅಲ್ಲವೆ ಬ್ರಹ್ಮ-ರುದ್ರ-ಹರಿ-ಇಂದ್ರರಿಂದ ಪೂಜಿತಳೇ?

3. ಮೇಘಕಾಂತಿಯ ಶ್ಯಾಮಕೃಷ್ಣನ ಸೋದರಿ, ಕೌಮಾರಿ, ಗಿಣಿಯನ್ನು ಕೈಯಲ್ಲಿಟ್ಟ ಮೀನಾಕ್ಷೀದೇವಿ, ಅಕಳಂಕ ಕಳಾಧರಿ, ಬಿಂಬಾಧರಿ, ಎಲ್ಲೆ ಇಲ್ಲದ ಕೃಪೆಗೆ ನಿಧಿ ನೀನೇ ಆಗಿರುವಾಗ, ತಾಯೆ, ರಕ್ಷಿಸಲು... ಮರಿವೇರೆ ಗತಿ ಎವರಮ್ಮಾ!?

8. 'ಹಿಮಾಚಲತನಯ ಬ್ರೋಚುಟಕಿದಿ' – ಆನಂದಭೈರವಿ ರಾಗ, ಆದಿತಾಳ

ಸಾಹಿತ್ಯದ ಮೂಲ ಪಾಠ

||ಪ|| ಹಿಮಾಚಲತನಯ ಬ್ರೋಚುಟಕಿದಿ ಮಂಚಿ ಸಮಯಮು ರಾವೇ ಅಂಬ

||ಅ.ಪ.|| ಕುಮಾರ ಜಜನೀ ಸಮಾನಮೆವರಿಲನು ಮಾನವತಿ ಶ್ರೀ ಬೃಹನ್ನಾಯಕೀ ಅಂಬ || ಹಿಮಾಚಲ||

||ಚ.1.|| ಸರೋಜಮುಖಿ ಬಿರಾನ ನೀವು ವರಾಲೊಸಗುಮನಿ ನಿನ್ನುವೇಡಿತಿ ಪುರಾರಿ ಹರಿ ಸುರೇಂದ್ರನುತ (ನೀವು) ಪುರಾಣಿ ಪರಾಙ್ಮುಖಮೇಲನೆ ತಲ್ಲಿ ||ಹಿಮಾಚಲ||

||ಚ.2.|| ಉಮಾ ಹಂಸಗಮಾ ತಾಮಸಮಾಬ್ರೋವ ದಿಕ್ಕವರು ನಿತ್ಯಮುಗನು, ಮಾಕಿಪುಡಭಿಮಾನಮು ಚೂಪ ಭಾರಮಾ ವಿನುಮಾ ದಯತೋನು || ಹಿಮಾಚಲ||

||ಚ.3.|| ಸದಾ ನತವರದಾಯಕೀ ನಿಜದಾಸುಡನಿ ಶ್ಯಾಮಕೃಷ್ಣಸೋದರಿ-ಗದಾ ಮೊರವಿನವಾ ದುರಿತವಿದಾರಿಣೀ ಶ್ರೀ ಬೃಹನ್ನಾಯಕೀ || ಹಿಮಾಚಲ||

ವ್ಯಾಖ್ಯಾನ

ಮಧ್ಯಮ ಕಾಲದ ನಡೆ ಇರುವ ಈ ಕೃತಿಯೂ 3 ಚರಣಗಳುಳ್ಳದ್ದು.

ಹೇ ಹಿಮಾಚಲ ರಾಜನ ಪುತ್ರಿ, ಪಾರ್ವತಿ, ಅಮ್ಮ ಬಾರೇ (ಅಂಬ ರಾವೇ) 'ಬ್ರೋ ಚುಟಕಿದಿ ಮಂಚಿ-ಸಮಯಮು'- ರಕ್ಷಿಸುವುದಕ್ಕಿದು ಸೂಕ್ತ ಸಮಯ ತಾಯಿ. ಷಣ್ಮುಖ ಜನನಿಯೇ, ನಿನಗೆ ಲೋಕದಲ್ಲಿ ಸಾಟಿಯಾದವರಾರಿದ್ದಾರೆ? ಗೌರವನೀಯಳಾದ ಬೃಹನಾಯಕೀ ದೇವಿಯೇ !

1. ಪದ್ಮಮುಖಿಯೇ ಬಿರ್ರನೆ ನೀನು ವರಗಳನ್ನು ನೀಡೆಂದು ಬೇಡಿದೆ ಪುರಹರನಾದ ಶಿವ, ಹರಿ ಸುರೇಂದ್ರರೇ ಮೊದಲಾದವರಿಂದ ಶ್ಲಾಘಿತಳಾದ ಅತಿಪ್ರಾಚೀನಳೇ (ಪುರಾಣಿ) ನನಗೆ ಮರೆಯಾಗಲೇಕೆ?

2. ಉಮೇ, ಹಂಸಗಮನಿಯೇ, ವಿಳಂಬವೇಕೇ, ರಕ್ಷಣೆಗಾರಿದ್ದಾರೆ? ಆತ್ಮೀಯತೆಯಿಂದ ನಮಗೀಗ ಅಭಿಮಾನ ತೋರಲು ಭಾರವೇ, ದಯತೋರಿ ಆಲಿಸು ತಾಯೆ!

3. ಆಶ್ರಿತರಿಗೆಂದೂ ವರದಾಯಕಿಯೇ ನೀನು, ನಿನ್ನ ಸ್ವಂತಕ್ಕೆ ಸೇರಿದ ದಾಸ ನಾನು. ಶ್ಯಾಮಕೃಷ್ಣ ಸೋದರಿ ನೀನಲ್ಲವೇ, ನನ್ನ ಮೊರೆ ಆಲಿಸೆಯಾ, ಪಾಪನಾಶಿನಿ ಶ್ರೀ ಬೃಹನ್ನಾಯಕಿ, ಕಾಮಾಕ್ಷಿಯೇ, ರಕ್ಷಿಸಲಿದು ಸೂಕ್ತ ಸಮಯ ತಾಯೆ!

ಈ ಹಲವು ಕೃತಿಗಳ ಸಾಹಿತ್ಯ ವೀಕ್ಷಣೆಯಿಂದ, ಸಂಗೀತ ರಚನೆಯಲ್ಲಿ ದ್ವಿತೀಯಾಕ್ಷರಪ್ರಾಸವೆಂಬ ನಿಯಮ ಒಂದು ಮುಖ್ಯ ನಿಯಮವಾದರೂ ಅದೇ ಶ್ರೀ ಶಾಸ್ತ್ರಿಗಳ ಕೆಲವು ಕೃತಿಗಳ ಸಾಹಿತ್ಯದ ಓಘಕ್ಕೆ ಅಡಚಣೆಯಪ್ರಾಯವಾಗಿ ಅದೇ ಅದೇ ಭಾವನೆಗಳು ಪುನಃ ಪುನಃ ವ್ಯಕ್ತಪಡಿಸುವ ಒತ್ತಡವನ್ನು ಈ ಪೂಜ್ಯರ ಮನಸ್ಸಿನ ಮೇಲೆ ಹೇರಿದೆಯೋ ಎನ್ನುವ ಶಂಕೆ ಅವರಲ್ಲಿ ಅತೀವ ಭಕ್ತಿ ಭಾವವನ್ನು ತಳೆದಿರುವವರಿಗೂ ಬರದೆ ಇರದು, ವಸ್ತುನಿಷ್ಠವಾಗಿ ಮಾತ್ರ ಚಿಂತಿಸಿದಾಗ.

9. "ಮಹಿಲೋ, ಅಂಬ, ನೀದು ಮಹಿಮಾತಿಶಯಮೆನ್ನತರಮಾ"

ರಾಗ : ಆನಂದ ಭೈರವಿ ತಾಳ :ರೂಪಕ

ಸಾಹಿತ್ಯದ ಮೂಲ ಪಾಠ

||ಪ || ಮಹಿಲೋ ಅಂಬಾ ! ನೀದು ಮಹಿಮಾತಿಶಯ ಮೆನ್ನ ತರಮಾ?

||ಅ.ಪ.|| ಅಹಿಭೂಷಣುನಿರಾಣಿ ! ಶಂಕರಿ, ಅಂಬಿಕಾ, ಬೃಹನ್ನಾಯಕೀ ಗೌರೀ!
||ಮಹಿಲೋ||

||ಚ.1.|| ಸಾರಸದಳ ನಯನಾ! ವದನ ಸರೋಜ, ವಿಜಿತ ಘನ, ಪುರಾರಿವೈ ರಾಣಿ !
ವರಾಲೊಸಗಿಂಪವೇ ! ಬಿರಾನ ಬ್ರೋಚಿನ ಪರಾಶಕ್ತಿ ಗದಾ ?
||ಮಹಿಲೋ||

||ಚ.2.|| ಸುಮೇರು ಮಧ್ಯಲತಾ ! ಲಲಿತಾ ! ರಮಿಂಚು, ವಿನು, ನೇ
ಕುಮಾರುಡನನು- ಚು, ಮಾ ತಲ್ಲಿ ನೀವು ಮಾನವತಿ ! ನೀ
ಸಮಾನಮೆವರಿಲಲೋ? ಚೆಪ್ಪವಮ್ಮಾ! ||ಮಹಿಲೋ ||

||ಚ.3.|| ಸಾಮಗಾನನುತ ! ಸರಸಪದಾ ! ತಾಮಸಮುಚೇಸ್ತೇ ತಾಳನೇ !
ಶ್ಯಾಮ ಕೃಷ್ಣ ಸೋದರಿ, ಶಂಕರಿ ! ಶ್ಯಾಮಳಾಂಬಾ ನೀವೇ
ಮಾಯಮ್ಮಾ! ||ಮಹಿಲೋ ||

ವ್ಯಾಖ್ಯಾನ

ಆನಂದಭೈರವಿ ರಾಗದಲ್ಲಿ ಅಪುರೂಪವಾಗಿ ಕೇಳ್ಮಿಗೆ ಸಿಗುವ ಶಾಸ್ತ್ರಿಗಳ ಕೃತಿಯಿದು. ಈ ಕೃತಿಯ ಸಾಹಿತ್ಯದಲ್ಲಿ ಎಂದಿನ ಭಾವನೆಗಳು ಕೆಲವು ಪುನರಾವರ್ತಿಸಿದರೂ ಸ್ವಲ್ಪ ವಿಭಿನ್ನವಾದ ಪದ ಜೋಡಣೆಯಿದ್ದು ಸ್ವಲ್ಪ ಹಾಯೆನಿಸುತ್ತದೆ.

ಈ ಮಹೀತಲದಲ್ಲಿ ನಿನ್ನ ಮಹಿಮೆಯನ್ನೆಣಿಸುವ ಕೆಲಸ ಸಾಧ್ಯವೇ ತಾಯಿ, (ಅಪಾರವಾದ್ದಲ್ಲವೇ ಅದು) ನಾಗಾಭರಣ ಶಿವನ ರಾಣಿ ನೀನು, ಶಂಕರಿ, ಅಂಬಿಕೆ, ಹೇ ಬೃಹನ್ನಾಯಕಿ ಗೌರಿ.

ಚ. 1. ಹೇ ಕಮಲಾಕ್ಷಿ, ನಿನ್ನ ಮುಖ ಸೌಂದರ್ಯ ಕಮಲದ ಸೌಂದರ್ಯವನ್ನು ಮೀರಿ ಗೆದ್ದುದು. ಘನವಂತನಾದ ಪುರಾರಿ ಶಿವನ ರಾಣಿ ನೀನು. ವರಗಳನ್ನನುಗ್ರಹಿಸಮ್ಮಾ ಬೇಗನೇ ಕಾಯ್ದು ಪರಾಶಕ್ತಿ ನೀನಲ್ಲವೇ?

ಚ. 2. ಶ್ರೀ ಚಕ್ರದ ಸುಮೇರು ಮಧ್ಯದಲ್ಲಿ ಹಬ್ಬಿಕೊಂಡಿರುವ ಲತಾ ಸ್ವರೂಪಳು ನೀನು ಲಲಿತೇ, ತಾಯೇ ನಾನು ನಿನ್ನ ಪುತ್ರನೇ, ಕೇಳಮ್ಮಾ, ಸಂತೋಷಿಸಮ್ಮಾ, ನಮ್ಮಮ್ಮಾ, ಮಾನಿತಳೇ, ನೀನೇ ಹೇಳು ನಿನ್ನ ಸಮಾನ ಯಾರಿದ್ದಾರೆ ಜಗತ್ತಿನಲ್ಲಿ?

ಚ. 3. ಸಾಮಗಾನವಿನುತೇ, ಕಮಲಪದೇ, ನೀನು ವಿಳಂಬಿಸಿದರೆ ನಾ ತಾಳೆನು ಶಂಕರಿ ಶ್ಯಾಮಕೃಷ್ಣ ಸೋದರಿ, ಶ್ಯಾಮಲಾಂಬೆ ನೀನೇ ನಮ್ಮಮ್ಮಾ.

10. 'ಪಾಹಿ, ಶ್ರೀ ಗಿರಿರಾಜಸುತೇ' -

ರಾಗ : ಆನಂದಭೈರವಿ **ತಾಳ : ಚ ರೂಪಕ**

||ಪ || ಪಾಹಿ ಶ್ರೀ ಗಿರಿರಾಜಸುತೇ! ಕರುಣಾ ಕಲಿತೆ!ಪದ ಸರೋಜಮನುಸರಾಮಿ
ತೇ ಆಂಬ || ಪಾಹಿ||

||ಅ.ಪ.|| ದೇಹಿ ಮತೇರನುಪಮಗತಿಂ ಮೇ ಏಕಾಮ್ರಪತಿ ಸುದತಿ ಸತಿ
ತೇಜಸಾ ಅತುಲಿತ ದಿವ್ಯಮೂರ್ತೇ ಲಲಿತೇಽತಿಲಲಿತೇ ||ಪಾಹಿ||

||ಚ.1.|| ದೇವಿ ಪುರಾಣಿ ನಿಗಮವಿನುತೇ ಪ್ರೀತಿರಿಹ ವಸತು ತೇ ಮಾನದೇ
ಅನುದಿನಮಜಿತೇ ಯುಧಿಜತೇಂದ್ರ ವಿನುತೇ ||ಪಾಹಿ||
ದೇವಾವಿರತ ಕೃತನುತೇ ಕಾಮಕೋಟಿಪೀಠಗತೇ !
ದೀನಜನ ನಿಜಕರೇ ಭುವಿ ಪರ ದೇವತೇ ಸುಚರಿತೇ ||ಪಾಹಿ||

||ಚ.2.|| ನೀಪವನೀ ಪರಮನಿವಸನೇ ನಮ್ರ ಜಗದವನ ನೇತ್ರೀ
ಜನನೀ ಕನಕವಸನೇ ಝುಷವಿಶಾಲನಯ -
ನೇ, ಗೋಪಯಿತ ಸುಕವಿಜನೇ ಪಾಪತಾಪಖಂಡನ ನಿಪು-ಣೇ,
ಕುಂತಳವಿಜಿತ ಘನೇ, ಘನಜಘನೇ, ಕಲಾವತಿ ರತೇ || ಪಾಹಿ||

||ಚ.3.|| ಕಾಮಿತ ದಾತ್ರಿ ಕಮಲಮುಖಿ ಕಾಮಾಕ್ಷಿ ಅಖಿಲ ಸಾಕ್ಷಿ
ಕಾಮರತಿಕಾಮ ಶುಭಫಲದೇ ಧೃತ ಸುಗಂಧ ಘನಲತೇ
ಶ್ಯಾಮೇ ಅದ್ಯಭವ ಮಮ ಮುದೇ ಶ್ಯಾಮಕೃಷ್ಣ ಸದ್ವರದೇ
ಶ್ಯಾಮಳೇ ಆಶ್ರಿತ ರತೇ ವಿದಿತೇ ಸದಾ ಇಹ ವರದೇ || ಪಾಹಿ ||

ವ್ಯಾಖ್ಯಾನ

ಈ ಕೃತಿ ಶ್ಯಾಮಶಾಸ್ತ್ರಿಗಳ ಸಂಸ್ಕೃತ ಭಾಷೆಯ ರಚನೆಗಳಲ್ಲೊಂದು.

ಹೇ ಗಿರಿರಾಜಸುತೆ, ಪಾರ್ವತಿ, ಕರುಣಾ ಕಲಿತೇ, ನಿನ್ನ ಪಾದ ಪದ್ಮಗಳನ್ನೇ ಅನುಸರಿಸುತ್ತೇನೆ, ತಾಯಿ ಕಾಪಾಡು (ಪಾಹಿ). ಹೇ ಏಕಾಮ್ರನಾಥನ ರಾಣಿ, ಲಲಿತೇ, ಅತಿಯಾಗಿ ಲಲಿತವಾಗಿರುವ ಅನ್ವರ್ಥನಾಮಕಳಾದ ಲಲಿತೇ, ಅಳತೆಗೆಮೀರಿದ ತೇಜಸ್ಸುಳ್ಳ ದಿವ್ಯವಿಗ್ರಹ ಮೂರ್ತೇ, ಪಾಹಿ, ನನ್ನ ಬುದ್ಧಿಗೆ ವಿಶಿಷ್ಟ್ಯವಾದ (ಅನುಪಮವಾದ) ಗತಿಯನ್ನು (ಲಕ್ಷ್ಯವನ್ನು) ನೀಡಮ್ಮಾ!

1. ವೇದಗಳೇ ಕೊಂಡಾಡುವ ಪ್ರಾಚೀನಳಾದ ದೇವಿ, ನಿನ್ನ ಪ್ರೀತಿ ಅನುದಿನವೂ ನನಗೆಂದಾಗಲಿ, ಹಲವಾರು ಅಸುರರನ್ನು ಯುದ್ಧದಲ್ಲಿ ಸಂಹರಿಸಿದಾಗಲೂ ಜಿತೇಂದ್ರಿಯಳಾಗಿದ್ದ ಮಾತೆ, ಕಾಮಕೋಟಿಪೀಠಸ್ಥಿತೇ, ದೀನ ಜನರನ್ನು ನಿನ್ನ ಸ್ವಂತದವರನ್ನಾಗಿಸಿಕೊಂಡು ರಕ್ಷಿಸುವವಳೇ, ಪರದೇವತೇ, ಸುಚರಿತೇ, ದೇವಿ, ಪಾಹಿ.

2. ಹೇ ಕದಂಬವನವಾಸಿನಿ, ಜಗದ್ರಕ್ಷಣೆಯನ್ನು ಅಪಾಂಗದೃಷ್ಟಿಯಿಂದಲೇ ಮಾಡುವವಳೇ, ಮಾತೆ, ಬಂಗಾರದ ಉಡುಪಿನವಳೇ, ವಿಶಾಲವಾದ ಮೀನ ನೇತ್ರೇ, ಕವಿಜನರಿಗೆ ಆಶ್ರಯವಿತ್ತು ಪಾಲಿಸಿದವಳೇ, ಪಾಪಗಳನ್ನೂ ತಾಪತ್ರಯವನ್ನೂ ನಿವಾರಿಸುವವಳೇ, ಮೋಡಗಳ ಕಾಂತಿಯನ್ನು ಗೆದ್ದ ಕೂದಲಿನವಳೇ, ಘನಜಘನೇ, ಕಲಾವತೀ, ಕಲೇ, ಕಾಮಾಕ್ಷಿ ಪಾಹಿ.

3. ಕೇಳಿದ ವರಗಳನ್ನು ಕೊಡುವವಳೇ, ಪದ್ಮಾಸನೇ, ಕಾಮಾಕ್ಷಿ, ಲೋಕಸಾಕ್ಷಿ, ಮನ್ಮಥ ರತಿಯರ ಕಾಮನೆಗಳನ್ನು ಪೂರೈಸಿದವಳೇ. ಇಕ್ಷುಚಾಪಧರೇ, ಶ್ಯಾಮವರ್ಣದವಳೇ, ಆಶ್ರಯ ಕೊಡುವುದರಲ್ಲಿ ಸಂತೋಷಿಸುವವಳೇ, ನಡೆದೆಲ್ಲವನ್ನು ಅರಿತವಳೇ, ವರದೇ ಪಾಹಿ.

11. ' ಮೀನಲೋಚನ ಬ್ರೋವ ಯೋಚನಾ ?'-

ರಾಗ : ಧನ್ಯಾಸಿ **ತಾಳ : ಮಿಶ್ರಛಾಪು**

ಸಾಹಿತ್ಯದ ಮೂಲಪಾಠ

||ಪ|| ಮೀನಲೋಚನ ಬ್ರೋವ ಯೋಚನಾ? ದೀನಜನಾವನಾ, ಅಂಬಾ!
|| ಮೀನಲೋಚನ||

||ಅ.ಪ.||ಗಾನವಿನೋದಿನಿ ನೀ ಸಮಾನಮು ಜಗಾನ ಗಾನನಮ್ಮಾ ದೇವಿ
|| ಮೀನಲೋಚನ||

||ಚ.1.|| ಕನ್ನತಲ್ಲಿ ಗದಾ ನಾ ವಿನ್ನಪಮು ವಿನವಮ್ಮಾ ಪನ್ನಗಭೂಷಣುನಿಕಿ
ರಾಣೀ ನಿನ್ನುವಿನಾ ಇಲಲೋ ದಾತ ವೇರೆವರುನ್ನಾರಮ್ಮಾ ಬಂಗಾರು
ಬೊಮ್ಮ || ಮೀನಲೋಚನ ||

||ಚ.2.|| ಇಂದು ಮುಖಿ ನೀವು ವರಮುಲೊಸಗಿ ನಾಯಂದು ವಚ್ಚಿ
ದಯಸೇಯವಮ್ಮಾ ಕುಂದಮುಕುಂದರದನಾ, ಹಿಮಗಿರಿ ಕುಮಾರೀ
ಕೌಮಾರೀ, ಪರಮೇಶ್ವರೀ ||ಮೀನಲೋಚನ||

||ಚ.3.|| ಸಾಮಜಗಮನಾ ನೀವು ತಾಮಸಮು ಸೇಯಕ ಶ್ಯಾಮಕೃಷ್ಣಸೋದರೀ,
ರಾವೇ !

ಕಾಮಪಾಲಿನೀ, ಭವಾನೀ, ಚಂದ್ರಕಲಾಧಾರಿಣೀ, ನೀರದವೇಣೀ
||ಮೀನಲೋಚನ||

ವ್ಯಾಖ್ಯಾನ

ಅತೀತಗ್ರಹದ ಕೃತಿ ಇದು. ಧನ್ಯಾಸೀ ರಾಗದ ಕೃತಿಗಳಲ್ಲಿ ಮಿಶ್ರಛಾಪಿನ ಗಂಭೀರ ನಡೆಯ ಶ್ರೀ ಶಾಸ್ತ್ರಿಗಳ ಈ ಕೃತಿ ಅತ್ಯಂತ ವಿದ್ವಾಂಸ ಪ್ರಿಯವೂ ಜನಪ್ರಿಯವೂ ಆದುದು. ಧನ್ಯಾಸಿ ರಾಗ ಕರ್ಣಾಟಕ ಸಂಗೀತದ ಶೈಲಿಯ, ಸ್ವಭಾವದ, ಗಮಕ ಸಂಪತ್ತಿನ ಪ್ರಕಾಶಕವಾದುದು, ಪ್ರತಿನಿಧಿಯಾದುದು. ಕೃತಿಯುದ್ದಕ್ಕೂ ಸುಂದರವಾದ ಧನ್ಯಾಸಿ ರಾಗವನ್ನು ವಿನ್ಯಾಸ ಮಾಡಿದ್ದಾರೆ ಶಾಸ್ತ್ರಿಗಳು. ಸಾಹಿತ್ಯದಲ್ಲಿ, ಮಿಕ್ಕ ಹಲವು ಕೃತಿಗಳಲ್ಲಿ ವ್ಯಕ್ತವಾಗಿರುವ ಭಾವನೆಗಳೇ 3 ಚರಣಗಳುಳ್ಳ ಈ ಕೃತಿಯಲ್ಲೂ ಪುನರಾವರ್ತಿಸಿರುವುದು. ಅದು ಹೀಗೆ :

1. ಹೆತ್ತ ತಾಯಿ ನೀನು, ನನ್ನ ಬಿನ್ನಹವನ್ನು ಕೇಳು ! ನಾಗಾಭರಣನಾದ ಶಿವನ ರಾಣಿ ನೀನು! ಲೋಕದಲ್ಲಿ ನಿನ್ನಂಥ ಉದಾರಳು ಬೇರೆ ಯಾರುಂಟು, ಬಂಗಾರ ವಿಗ್ರಹವೇ, ಬಂಗಾರು ಕಾಮಾಕ್ಷಿ!

2. ಹೇ ಇಂದುಮುಖಿ, ವರಗಳನ್ನಿತ್ತು, ನನ್ನೆದುರು ಬಂದು ದಯೆ ತೋರಮ್ಮಾ, ಮಲ್ಲಿಗೆ ಮೊಗ್ಗಿನಂಥ ಸುಂದರವಾದ ದಂತ ಪಂಕ್ತಿಯುಳ್ಳ ಹಿಮಾಚಲಪುತ್ರಿ, ಹೇ ಪರಮೇಶ್ವರಿ, ನನ್ನ ಬಿನ್ನಹ ಕೇಳು. ದಂತಪಂಕ್ತಿಯ ಉಪಮೆಗೆ ಈ ಚರಣದಲ್ಲಿ 'ಕುಂದ ಮುಕುಂದ ರದನಾ' ಎಂಬ ಪಾಠಾಂತರ ಗಮನ ಸೆಳೆಯುತ್ತದೆ. 'ಮುಕುಂದ' ಶಬ್ದಕ್ಕೆ ಶ್ರೀಕೃಷ್ಣನ ಹೆಸರೆಂಬುದರ ಜತೆಗೆ, 'a kind of precious stone'ಎಂದು ವಿ.ಎಸ್. ಆಪ್ಟೆಯವರ ಶಬ್ದಕೋಶ ಅರ್ಥಕೊಡುತ್ತದಾದರೂ, ಶ್ರೀ ಶ್ಯಾಮಶಾಸ್ತ್ರಿಗಳು ಶಬ್ದಗಳನ್ನೂ ಭಾವನೆಗಳನ್ನೂ ಹೆಚ್ಚಾಗಿ, ಪುನಃ ಪುನಃ ಬಳಸುವ ಹಿನ್ನೆಲೆಯಲ್ಲಿ. ಅವರೇ ಹಲವು ಸಲ ಬಳಸಿರುವ 'ಮಲ್ಲಿಗೆ ಮೊಗ್ಗು' ಎಂಬ 'ಕುಂದ ಮುಕುಳರದನಾ' ಎಂಬ ಉಪಮೆಯೇ ಸಮುಚಿವಾದ ಪಾಠ.

3. ಗಜಗಮನೆ, ಶ್ಯಾಮಕೃಷ್ಣ ಸೋದರಿ, ಮನ್ಮಥ ರಕ್ಷಕಿ, ಭವಾನಿ, ಚಂದ್ರಕಲಾವತಂಸೆ, ಮೋಡ ಕಾಂತಿಯ ಕೂದಲಿನವಳೇ, ವಿಳಂಬಿಸದೆ ಅಮ್ಮ ಬಾರೇ, ನನ್ನ ಬಿನ್ನಹ ಕೇಳು.

12. 'ನಿನ್ನುವಿನಾ ಮರಿ ಗಲದಾ'

ರಾಗ : ರೀತಿಗೌಳ ತಾಳ : ಚ. ರೂಪಕ

ಸಾಹಿತ್ಯದ ಮೂಲ ಪಾಠ

||ಪ|| ನಿನ್ನುವಿನಾ ಮರಿಗಲದಾ ಗತಿ ಲೋಕಮುಲೋ ನಿರಂಜನೀ, ನಿಖಿಲ
ಲೋಕಜಜನನೀ, ಮೃಡಾನಿ, ಅಂಬಾ ||ನಿನ್ನುವಿನಾ||

||ಅ.ಪ.|| ಪನ್ನಗಭೂಷಣನಿರಾಣಿ ! ಪಾರ್ವತಿ ಜನನೀ ಅಂಬಾ ಪರಾಕು
ಸೇಯಗರಾದು ವಿನು ಶ್ರೀ ಬೃಹದಂಬ ವಿನುಮು || ನಿನ್ನುವಿನಾ||

||ಚ.1.|| ಪಾಮರುನಮ್ಮಾ ದಯಜೇಸಿ ವರಮೀಯಮ್ಮಾ ಮಾಯಮ್ಮಾ
ಪಾಪಮೆಲ್ಲ ಪರಿಹರಿಂಚಿ ಬಿರಾನ ಬ್ರೋಚುಟಕು || ನಿನ್ನುವಿನಾ||

||ಚ.2.|| ಸಾರಮುಲೇನಿ ಭವಜಲಧಿ ತಗುಲುಕೊನೆ
ಚಾಲಾವೇಸಾರಿತಿನಿ ನಾ ವಿಚಾರಮು ದೀರ್ಚುಟಕು || ನಿನ್ನು ವಿನಾ||

||ಚ.3.|| ನಾ ಮದಿಲೋ ಅಂಬ ನೀವೇ ಗತಿಯನಿ ನಮ್ಮಿತಿ
ಶ್ಯಾಮಕೃಷ್ಣನುತಾ ಭಕ್ತ ಪರಿಪಾಲನಮು ಸೇಯುಟಕು|| ನಿನ್ನುವಿನಾ||

ವ್ಯಾಖ್ಯಾನ

ಇದೂ ಸಹ 3 ಚರಣಗಳುಳ್ಳ ಕೃತಿ. ರೂಪಕ ತಾಳದಲ್ಲಿ ಮಧ್ಯಮಕಾಲದ ನಡೆಯಲ್ಲಿ ಸುಂದರವಾದ ಭಾವ ವಾಹಿನಿಯ ರೀತಿಗೌಳ ರಾಗದಲ್ಲಿ ಈ ಕೃತಿಯನ್ನು ರಚಿಸಿದ್ದಾರಾದರೂ, ಶ್ರೀ ಶಾಸ್ತ್ರಿಗಳ ಪುತ್ರ ಸುಬ್ಬರಾಯ ಶಾಸ್ತ್ರಿಗಳು ರಚಿಸಿರುವ 'ಜನನೀ ನಿನ್ನು ವಿನಾ' ಕೃತಿಯಲ್ಲಿನ ರೀತಿಗೌಳದ ಹಂದರ, ನಡೆ, ತಂದೆಯವರ ರೀತಿಗೌಳದ ಕೃತಿಯೊಂದಿಗೇ ಸ್ಪರ್ಧಿಸಿದ್ದು, 'ಪುತ್ರಾದಿಚ್ಛೇತ್ ಪರಾಜಯಂ' ಎಂಬಂತೆ ಗೆದ್ದು ಹೆಚ್ಚು ಜನಪ್ರಿಯವಾಗಿರುವುದು ಎಲ್ಲರ ಅನುಭವದಲ್ಲಿರುವ ಸಂಗತಿಯೇ. ಶಾಸ್ತ್ರಿಗಳ ಈ ಕೃತಿಯ ಸೌಂದರ್ಯವನ್ನು ನೋಡೋಣ:

ನಿನ್ನ ಹೊರತು ಮತ್ತೊಂದು ಗತಿ ನನಗುಂಟೇ ಲೋಕದಲ್ಲಿ, ನಿರಂಜನಿ, ನಿಖಿಲ ಜನನಿ, ಮೃಡಾನಿ, ಭವಾನಿ ಅಂಬೆ!

ಆತ್ಮೀಯ ಓದುಗರೇ, ಎಲ್ಲ ಕೃತಿಗಳಲ್ಲೂ ಇದೇ ಭಾವನೆ, ಮಾತು,

ಪುನಃ ಪುನಃ ಆವರ್ತಿಸುತ್ತಿರುವುದನ್ನು, ಗಮನಿಸುತ್ತಿದ್ದೀರಿ ಎಂದು ಭಾವಿಸುತ್ತೇನೆ. ಶ್ರೀ ಶಾಸ್ತ್ರಿಗಳ ಕೃತಿಗಳ ಸಮಗ್ರ ದರ್ಶನ ವಿಶ್ಲೇಷಣೆಗಳನ್ನು ಮಾಡುವಾಗ ಮಾತ್ರವೇ ಈ ಅಂಶ ಗಮನಕ್ಕೆ ಬರುವುದೇ ವಿನಾ ಗಾಯಕರು ಶಾಸ್ತ್ರಿಗಳ ಒಂದೊಂದೇ ಕೃತಿಯನ್ನು ಸಮರ್ಪಿಸುವಾಗ ಗಮನಕ್ಕೆ ಬರುವುದಿಲ್ಲ. ಇರಲಿ, ಕೃತಿ ಮುಂದುವರಿದು ಅನುಪಲ್ಲವಿ ಹೀಗಿದೆ:

ಪನ್ನಗ ಭೂಷಣನಾದ ಶಿವಶಂಕರನ ರಾಣಿ ಪಾರ್ವತಿಯೇ ತಾಯೆ, ಅಂಬೆ, ಉಪೇಕ್ಷೆ ಮಾಡಲಾಗದು ತಾಯೆ, ಕೇಳಮ್ಮಾ ಶ್ರೀ ಬೃಹದಂಬಾ, ಕೇಳು !

1. ನಾ ಪಾಮರನಮ್ಮಾ (ಮುಗ್ಧ ಎಂದು ಭಾವ!) ದಯೆಮಾಡಿ ವರಕೊಡಮ್ಮಾ ನಮ್ಮಮ್ಮಾ ಪಾಪವೆಲ್ಲವನ್ನೂ ಪರಿಹರಿಸಿ ಬೇಗನೆ ಕಾಯುವುದಕ್ಕೆ, ನೀನಲ್ಲದೆ ಬೇರೆ ಉಂಟೆ?

2. ಸಾರವಿಲ್ಲದ ಈ ಸಂಸಾರಕ್ಕೆ ಅಂಟಿಕೊಂಡು ಬಹಳ ಬಳಲಿದೆ, ನನ್ನ ಸಂಗತಿ ಬದಲಿಸಲು (ನೀನಲ್ಲದೆ ಬೇರೆ ಉಂಟೆ?).

3. ನನ್ನ ಮತಿಯಲ್ಲಿ ನೀನೇ ಗತಿ ಎಂದು ನಂಬಿದೆ ಹೇ ಶ್ಯಾಮಕೃಷ್ಣನುತೇ, ಭಕ್ತಪರಿಪಾಲನೆಗೆ ನೀನಲ್ಲದೆ ಬೇರೊಬ್ಬರುಂಟೆ ತಾಯಿ!

13. 'ಕನಕಶೈಲ ವಿಹಾರಿಣಿ'-

ರಾಗ : ಪುನ್ನಾಗವರಾಳಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ || ಕನಕಶೈಲವಿಹಾರಿಣಿ ಶ್ರೀ ಕಾಮಕೋಟಿ ಬಾಲೇ, ಸುಶೀಲೇ !
|| ಕನಕ ಶೈಲ||

||ಅ.ಪ.|| ವನಜಭವಹರಿನುತೇ ! ದೇವಿ! ಹಿಮಗಿರಿಜೇ, ಲಲಿತೇ ! ಸತತಂ
ವಿನತಂ ಮಾಂ ಪರಿಪಾಲಯ ಶಂಕರವನಿತೇ ಮಹಾತ್ರಿಪುಸುಂದರಿ
|| ಕನಕ ಶೈಲ||

||ಚ.1.|| ಕಂಬುಕಂಠಿ ಕಂಜಸದೃಶನಯನೇ ('ವದನೇ'-ಪಾಠಾಂತರ?)
ಕರಿರಾಜಗಮನೇ ಮಣಿಸದನೇ ಶಂಬರವಿದಾರಿ ತೋಷಿಣಿ ಶಿವಶಂಕರಿ
ಸದಾ ಮಧುರಭಾಷಿಣಿ || ಕನಕ ಶೈಲ||

||ಚ.2.|| ಚಂಡಮುಂಡ ಖಂಡನ ಪಂಡಿತೇ! (ಇ)ಕ್ಷುಕೋದಂಡ ಮಂಡಿತ ಪಾಣಿ
ಪುಂಡರೀಕ ನಯನಾರ್ಚಿತಪದಾ ತ್ರಿಪುವಾಸಿನಿ ಶಿವೇ, ಹರವಿಲಾಸಿನಿ
|| ಕನಕ ಶೈಲ||

||ಚ.3.|| ಶ್ಯಾಮಳಾಂಬಿಕೇ ಭವಾಬ್ಧಿ ತರಣೇ ! ಶ್ಯಾಮಕೃಷ್ಣ ಪರಿಪಾಲಿನಿ ! ಜನನಿ!
ಕಾಮಿತಾರ್ಥ ಫಲದಾಯಿಕೇ ! ಕಾಮಾಕ್ಷಿ! ಸಕಲ ಲೋಕಸಾಕ್ಷಿ
||ಕನಕ ಶೈಲ||

ವ್ಯಾಖ್ಯಾನ

ಕರ್ಣಾಟಕ ಸಂಗೀತದ ಅತಿ ಹೃದಯ ಸ್ಪರ್ಶಿಯಾದ ರಕ್ತಿರಾಗಗಳಲ್ಲಿ ಪುನ್ನಾಗವರಾಳಿ ಅಗ್ರಸ್ಥಾನದಲ್ಲಿ ನಿಲ್ಲುತ್ತದೆ. ರಾಗ ಲಕ್ಷಣ ವರ್ಣನಾ ಸಂದರ್ಭಗಳಲ್ಲಿ 'ಪುನ್ನಾಗ' ಎಂದಷ್ಟೇ ಉಲ್ಲೇಖವೂ ಈ ರಾಗಕ್ಕೆ ಉಂಟು. ಈ ರಾಗದ ಪ್ರಸಿದ್ಧಿ, ಪ್ರಚಾರ ಅತ್ಯಧಿಕವಾಗಿ ಆಗಿರುವುದು ಕನಕಶೈಲಿ ವಿಹಾರಿಣಿ ಕೃತಿಯಿಂದ ಎಂದರೆ ಅತಿಶಯೋಕ್ತಿಯಾಗಲಾರದು. ಅದೇ ಅದೇ ಭಾವನೆಗಳು ಮಾತುಗಳು ಪುನರಾವರ್ತಿಸುತ್ತಿರುತ್ತವೆ ಎಂಬ ಶ್ರೀ ಶಾಸ್ತ್ರಿಗಳ ತೆಲಗು ಭಾಷೆಯ ಕೃತಿಗಳ ವ್ಯಾಖ್ಯಾನ ಸಂದರ್ಭದಲ್ಲಿ ಮಾಡಿದ ವೀಕ್ಷಣೆ, ಸಂಸ್ಕೃತ ಭಾಷೆಯ ಅವರ ಕೃತಿಗಳಿಗೆ ಅಷ್ಟಾಗಿ ಅನ್ವಯಿಸುವುದಿಲ್ಲ. ಸಂಸ್ಕೃತ ಭಾಷೆಯ ರಚನೆಗಳ ಹಂದರವೇ (format) ಆ ಸಂಗತಿಗೆ ಅಷ್ಟಾಗಿ ಆಸ್ಪದ ಕೊಡುವುದಿಲ್ಲ. ಕೃತಿಗಳಲ್ಲಿ ದೇವಿಯೆಂಬ ವಿಶೇಷ್ಯಕ್ಕೆ ವಿಶೇಷಣಗಳ ಕಲಾತ್ಮಕ ಸರಣಿಯೇ, ಒಂದು ಕ್ರಿಯಾಪದದ ಬಳಕೆಯೇ ಈ ಹಂದರದ ಸಾಮಾನ್ಯ ಲಕ್ಷಣ. 'ಕನಕಶೈಲ ವಿಹಾರಿಣಿ' ಕೃತಿ ಈ ಸಂಗತಿಯನ್ನೇ ಪ್ರಕಟಿಸುತ್ತದೆ. ಸಮಾಸ ಪದಗಳು ಬಹಳಷ್ಟನ್ನು ತಿಳಿಸುತ್ತವೆ.

'ಕನಕಶೈಲ ವಿಹಾರಿಣಿ' ಎಂದರೆ ಹಿಂದೊಮ್ಮೆ ಹೇಳಿರುವಂತೆ, ಆಂಧ್ರ ಪ್ರದೇಶದ ವಿಜಯವಾಡದ ಊರಾಚೆ ಇರುವ ಬೆಟ್ಟದ ಮೇಲೆ ನೆಲೆಸಿದ್ದು ಭಕ್ತಕೋಟಿಯನ್ನು ನಿರಂತರವಾಗಿ ಆಕರ್ಷಿಸುವ ಕನಕದುರ್ಗಮ್ಮನೇ ಈ ದೇವತೆ. ಲಲಿತೆಯ ಅವತಾರ. ಹೇ, ಕನಕಶೈಲವಿಹಾರಿಣಿ, ಅಂಬ, ಕಾಮಕೋಟಿ ಪೀಠಸ್ಥಳಾದ ಬಾಲೇ-ಅಂದರೆ- ಬಾಲಾ ತ್ರಿಪುರ ಸುಂದರಿಯ ಒಂದು ರೂಪಳು. ಸುಶೀಲೇ.

ಮತ್ತೆ ನೋಡಿ! ಬ್ರಹ್ಮ ವಿಷ್ಣುಗಳಿಂದ ಶ್ಲಾಘಿಸಲ್ಪಟ್ಟವಳು, ಹಿಮಗಿರಿಜೇ, ಲಲಿತೇ, ಎಂದೂ ಸಹ ನಿನ್ನಡಿಗೆ ಬಿದ್ದಿರುವ (ವಿನತಂ)ನನ್ನನ್ನು ಪರಿಪಾಲಿಸು, ಹೇ ಶಂಕರನ ಪತ್ನಿಯೇ, ಒಮ್ಮೆ 'ಸತಿ' ಎಂಬ ರೂಪ ತಳೆದಿದ್ದವಳು, ಮಹಾ ತ್ರಿಪುರಸುಂದರಿ, ಪರಿಪಾಲಿಸು. ಶ್ರೀವಿದ್ಯಾ ಲಕ್ಷ್ಯವಾದ ಲಲಿತೆಯನ್ನು ಬಾಲಾ ತ್ರಿಪುರಸುಂದರಿ ಎಂಬ ನಾಮರೂಪಗಳಲ್ಲಿ ಒಂದು ಮಂತ್ರರೂಪಳಾಗಿ, ಮಹಾತ್ರಿಪುರಸುಂದರಿ ರೂಪದಲ್ಲಿ ಪಂಚದಶಾಕ್ಷರೀ ಮಂತ್ರ ಸ್ವರೂಪಿಣಿಯಾಗಿ, ಪಂಚಾದಶಾಕ್ಷರೀ ಮಂತ್ರದ ಹದಿನೈದು ಬೀಜಾಕ್ಷರಗಳಿಗೆ ಹದಿನಾರನೆಯ 'ಶ್ರೀಂ'ಬೀಜಾಕ್ಷರವನ್ನು ಕಡೆಯಲ್ಲಿ ಸೇರಿಸಿ 'ಮಹಾಷೋಡಶೀ' ಮಂತ್ರ ಸ್ವರೂಪಣಿಯಾಗಿ ಆರಾಧಿಸುವ ಹಂತಗಳು ರೂಢಿಯಲ್ಲಿದೆ.

2. ಚಂಡಭಂಡಾಸುರರನ್ನು (ಚಂಡ ಮುಂಡ ಖಂಡನ ಎಂಬ ಪಾಠಾಂತರವಿದೆ) ದಮನ ಮಾಡಿದುದರಲ್ಲಿ ಪಂಡಿತಳೆನಿಸಿಕೊಂಡವಳು, ಕಬ್ಬಿನ ಜಲ್ಲೆಯನ್ನು ಬಿಲ್ಲಾಗಿ ಹಿಡಿದವಳು, ಪುಂಡರೀಕನಯನ-ನಿಂದ ಅರ್ಚಿಸಲ್ಪಟ್ಟ ಪದಳು (ಪುಂಡರೀಕಾಕ್ಷ ಎನ್ನುವದು-ಎಲ್ಲಾ ರೂಪಗಳಲ್ಲೂ-ನಾರಾಯಣನಾಗಿಯೂ ನರಾವತಾರಗಳಾದ ರಾಮ-ಕೃಷ್ಣರ ಅವತಾರಗಳಲ್ಲಿಯೂ ಸೌಂದರ್ಯಕ್ಕೆ ಪರ್ಯಾಯ ನಾಮಕನಾದ ವಿಷ್ಣುವಿಗೆ ಹೇಳುವ ಶ್ಲಾಘನೆ) ಪುರವಾಸಿನಿ ಎಂದರೆ ಪುಟ್ಟ ಒಂದು ಮಾತಿನಲ್ಲಿ 'ಶ್ರೀಮನ್ನಗರನಾಯಿಕಾ, ಸುಮೇರು ಮಧ್ಯ ಶೃಂಗಸ್ಥಾ, ಚಿಂತಾಮಣಿ ಗೃಹಾಂತಸ್ಥಾ ಎಂಬ, ಶ್ರೀ ಲಲಿತಾ ಸಹಸ್ರನಾಮದ ಅಷ್ಟೂ ನಾಮಗಳ ಸಾರ. ಮಾತೆ ಮಂಗಳಕರಳು-ಶಿವೇ. ಹರನೊಂದಿಗೆ ವಿಲಾಸವಾಡುವವಳು.

1. **ಕಂಬು - ಕಂಠಿ :-** ದೇವ ದೇವತೆಗಳ ಸೌಂದರ್ಯ ವರ್ಣನೆಯಲ್ಲಿಕತ್ತನ್ನು ಶಂಖಕ್ಕೆ ಹೋಲಿಸುವುದೇ ಎಲ್ಲಕ್ಕಿಂತ ಹೆಚ್ಚಾಗಿ ಭಕ್ತರನ್ನಾಕರ್ಷಿಸಿರುವುದು. ಕಮಲವೂ ಹಾಗೇ. 'ಕಂಜ ಸದೃಶ ನಯನೇ' ಕಮಲ ಸದೃಶವಾದ ಕಣ್ಣುಳ್ಳವಳು. ಮುಖ, ಕಣ್ಣು, ಕರ(ಕೈ) ಪಾದ ಇಷ್ಟೂ ದೇವ ದೇವತೆಗಳಲ್ಲಿ ಕಮಲದ ಉಪಮೆಗೆ ಪಾತ್ರವಾದವು.

2. **ಕರಿರಾಜಗಮನೇ:-** ಗಜರಾಜನ ಗಾಂಭೀರ್ಯ ನಡಿಗೆಯಲ್ಲಿ !, ಮಣಿಸದನೇ ಎಂದರೆ ಚಿಂತಾಮಣಿ ಗೃಹಾಂತಸ್ಥಾ ಎಂದೇ. ಶಂಬರಾಸುರ ಸಂಹರಣ

ಮಾಡಿದ ಶಿವನನ್ನು ಸಂತೋಷಪಡಿಸುವ ದೇವಿ, ಶಿವಶಂಕರಿ, ಯಾವಾಗಲೂ ಮಧುರವಾಗಿಯೇ ಭಾಷಿಸುವವಳು.

3. ಶ್ಯಾಮಲಾಂಬಿಕೇ, ಸಂಸಾರವೆಂಬ ಸಾಗರವನ್ನು ದಾಟಿ ಮೋಕ್ಷಕ್ಕೆ ದಾರಿ ತೋರುವ, ದಾಟಿಸುವ ನಾವೆಯ ರೂಪದಲ್ಲಿರುವವಳು ಮಾತೆ, 'ಭವಾಬ್ಧಿ ತರಣೆ', ಶ್ಯಾಮಕೃಷ್ಣ ಪರಿಪಾಲಿನಿ, ಜನನಿ. ಕಾಂಕ್ಷಿತ ವರಗಳನ್ನು ನೀಡುವವಳು, ಸಕಲ ಲೋಕಸಾಕ್ಷಿ, ಕಾಮಾಕ್ಷಿ ಹೇ ಅಂಬೆ ಪರಿಪಾಲಯ!

14. 'ನಿನ್ನುವಿನಾಗಾ ಮರಿ ದಿಕ್ಕೆವರುನ್ನಾರು'-

ರಾಗ : ಪೂರ್ವಿಕಲ್ಯಾಣಿ **ತಾಳ : ಮಿಶ್ರ ಛಾಪು**

ಸಾಹಿತ್ಯದ ಮೂಲ ಪಾಠ

||ಪ || ನಿನ್ನುವಿನಾಗಾ ಮರಿ ದಿಕ್ಕೆವರುನ್ನಾರು |
ನಿಖಿಲಲೋಕಜನನೀ ನನ್ನುಬ್ರೋಚುಟಕು ||ನಿನ್ನುವಿನಾಗಾ||

||ಅ.ಪ.|| ಪನ್ನಗಭೂಷಣುಡೈನ ಕಂಚಿಏಕಾಮ್ರಪತಿ ಮನೋಹಾರಿಣಿ
ಶ್ರೀ ಕಾಮಾಕ್ಷಿ || ||ನಿನ್ನುವಿನಾಗಾ||

||ಚ.1.|| ಪರಮಲೋಭುಲನು ಪೊಗಡಿಪೊಗಡಿ ಅತಿ ಪಾಮರುಡೈ ತಿರಿಗಿತಿರಿಗಿ ವೇಸಾರಿ!
ಸ್ಥಿರಮುಲೇಕನತಿಚಪಲುಡೈತಿ ನಾ ಚಿಂತ ದೀರ್ಚಿ ವೇಗಮ
ಬ್ರೋಚುಟಕು || ||ನಿನ್ನುವಿನಾಗಾ||

||ಚ.2.|| ಇಲಲೋ ನೀವಲೆಗಲದಾ? ನೀ ಮಹಿಮ ಎಂತನಿ ಯೋಚಿಂಪ ಎವ್ವರಿ ತರಮಾ?
ಪಲುಕ ವಶಮಾ ಆದಿಶೇಷುನಿಕೈನನು ಪತಿತಪಾವನಿ ನನ್ನು
ಬ್ರೋಚುಟಕು ||ನಿನ್ನುವಿನಾಗಾ||

||ಚ.3.|| ತಾಮಸಂಬಿಟುಲ ಸೇಯರಾದಿಕನು ತಲ್ಲಿನಾಮೊರವಿನರಾದಾ
ದಯಲೇದಾ?

ಕಾಮಿತಾರ್ಥಫಲದಾಯಕಿ ನೀವೇಗದಾ ಶ್ಯಾಮಕೃಷ್ಣಸೋದರಿ
ಬ್ರೋಚುಟಕು || ನಿನ್ನುವಿನಾಗಾ||

ವ್ಯಾಖ್ಯಾನ

ಶ್ರೀ ಶ್ಯಾಮಶಾಸ್ತ್ರಿಗಳ ಕೃತಿಗಳಲ್ಲಿ ಈ ಹಿಂದೆ ಉಲ್ಲೇಖಿಸಿದ ಅವರ ವಿಶಿಷ್ಟ ಕೊಡುಗ ಎಂದು ಗಣಿಸಲಾದ ವಿಲೋಮ ಮಿಶ್ರಛಾಪು ಹಂದರಲ್ಲಿ ರಚಿಸಿರುವ 4 ಕೃತಿಗಳಲ್ಲಿ ಇದು ಹೆಚ್ಚು ಶ್ರವಣ ಲಭ್ಯವಾದ ಕೃತಿ. ವಿಲೋಮ ಮಿಶ್ರಛಾಪು ತಾಳದ ರಚನೆಯ ವಿಶಿಷ್ಟತೆಯನ್ನೂ, ಈ ತಾಳದಲ್ಲಿ ರಚಿಸಿದ ಶ್ಯಾಮಶಾಸ್ತ್ರಿಗಳ ಕೊಡುಗೆಯ ವಿಶಿಷ್ಟತೆಗಳನ್ನೂ ಈಗಾಗಲೇ ಜಿಜ್ಞಾಸೆ ಮಾಡಿ ಆಗಿದೆ. ಈ ಕೃತಿಯ ಸಾಹಿತ್ಯದ ಸೊಗಸನ್ನು ನೋಡೋಣ :

ಬಹುತೇಕ ಎಲ್ಲ ಕೃತಿಗಳಲ್ಲೂ ವ್ಯಕ್ತವಾಗಿರುವ 'ನೀನಲ್ಲದೆ ಮತ್ಯಾರು ನನಗೆ ದಿಕ್ಕು' ಎಂಬ ಅದೇ ಭಾವನೆಯ ಅಭಿವ್ಯಕ್ತಿಯಿಂದಲೇ ಆರಂಭವಾಗುತ್ತದೆ ಈ ಕೃತಿಯೂ. ನಿಖಿಲಲೋಕ ಮಾತೆಯೇ, ನನ್ನನ್ನು ಕಾಪಾಡಲು ನಿನ್ನ ಬಿಟ್ಟರೆ ದಿಕ್ಕು ಮತ್ಯಾರಿದ್ದಾರೆ? ಪನ್ನಗಭೂಷಣನಾದ ಏಕಾಮ್ರಪತಿಯ ಮನಸ್ಸನ್ನು ಗೆದ್ದವಳೇ ಶ್ರೀ ಕಾಮಾಕ್ಷಿ ಮತ್ಯಾರಿದ್ದಾರೆ?

1. ಪರಮ ಲೋಭಿಗಳನ್ನು (ಪ್ರಯೋಜನಕ್ಕಾಗೆಂದು) ಹೊಗಳಿ ಹೊಗಳಿ ಅತಿ ಸಾಮಾನ್ಯನಾಗಿಬಿಟ್ಟು (ಅತಿಪಾಮರುಡೈ) ಅಲೆದು ಅಲೆದು ಬಸವಳಿದು ಮನಸ್ಸಿನಲ್ಲಿ ಸ್ಥಿರತೆ ಇಲ್ಲದೆ ಅತಿ ಚಪಲ ಚಿತ್ತನಾದೆನು. ನನ್ನ ಈ ಚಿಂತೆ ಸ್ಥಿತಿಗಳನ್ನು ಪರಿಹರಿಸಿ, ಬೇಗ ಕಾಯುವುದಕ್ಕೆ ನಿನ್ನ ಬಿಟ್ಟರೆ ಮತ್ತೊಬ್ಬರಾರುಂಟು ತಾಯೆ?

2. ಇಳೆಯಲ್ಲಿ ನಿನ್ನಂತೆ ಉಂಟೆ ತಾಯೆ, ನಿನ್ನ ಮಹಿಮೆ ಎಷ್ಟೆಂದು ಯೋಚಿಸಲು ಯಾರಿಗೆ ಸಾಧ್ಯ? ಆದಿಶೇಷನಿಗಾದರೂ ಅದನ್ನು ಹೇಳಲಾದೀತೇ? ಪತಿತಪಾವನಿ, ನನ್ನನ್ನು ಕಾಯಲು ಮತ್ಯಾರುಂಟು?

3. ಕಾಮನೆಗಳನ್ನು ಪೂರೈಸುವವಳು ನೀನೇ ಅಲ್ಲವೇ ತಾಯೆ, ನಾರಾಯಣ ಭಗಿನಿಯೇ (ಶ್ಯಾಮಕೃಷ್ಣ ಸೋದರಿ) ನನ್ನನ್ನು ಕಾಯುವುದಕ್ಕೆ-ಮತ್ಯಾರುಂಟು ?

ಹೀಗೆ ಇದೂ ಸಹ 3 ಚರಣಗಳುಳ್ಳ ಕೃತಿ.

ಪರಮ ಭಕ್ತರಾದ ಮಹಾನುಭಾವರಾದ ಮಹಾ ವಾಗ್ಗೇಯಕಾರರೆಲ್ಲರಲ್ಲೂ ಒಂದು ಸಾಧಾರಣಾಂಶ (common factor) ಗಮನ ಸೆಳೆಯುತ್ತದೆ. ನೈಚ್ಯಾನುಸಂಧಾನವೇ ಈ ಸಾಧಾರಣಾಂಶ. ಶ್ರೀ ಶ್ರೀ ಶಂಕರಭಗವತ್ಪಾದರ 'ದೇವ್ಯಪರಾಧ ಕ್ಷಮಾಪಣ ಸ್ತೋತ್ರದಂಥ ಸ್ತೋತ್ರಗಳ ವಸ್ತು ಇದಕ್ಕೆ ನಿದರ್ಶನ.

ಶ್ರೀ ತ್ಯಾಗರಾಜರಂಥ ಸಾತ್ತ್ವಿಕತೆಯ ಪ್ರತಿಮೂರ್ತಿ, ತಮ್ಮ 'ದುಡುಕುಗಲ ನನ್ನು ಏ ದೊರಕೊಡುಕು ಬ್ರೋಚುರಾ' ಪಂಚರತ್ನ ಕೃತಿಯಲ್ಲಿ ರಾಮನಲ್ಲಿ ನಿವೇದಿಸಿಕೊಳ್ಳುವ ಆ ಅಪರಾಧಗಳ ಉದ್ದವಾದ ಪಟ್ಟಿಯಲ್ಲಿನ ಯಾವೊಂದನ್ನೂ ಎಸಗಿದವರಲ್ಲ. ಚಕ್ರವಾಕ ರಾಗದ 'ಎಟುಲ ಬ್ರೋತುವೋ ತೆಲಿಯ ಏಕಾಂತ ರಾಮಯ್ಯ' ಕೃತಿಯಲ್ಲಿ ಅವರು ಹೇಳಿಕೊಂಡ 'ಪಟ್ಟಿಗೊಡ್ಡು ರೀತಿ ಭಕ್ಷಿಂಚಿ ತಿರಿಗಿತಿ, ಪುಟ್ಟು ಲೋಭುಲನು ಪೊಟ್ಟಕೈ ಪೊಗಡಿತಿ, ದುಷ್ಟುಲತೋ ಗೂಡಿ ದುಷ್ಕೃತ್ಯಮುಲ ಜೆಂದಿ ರಟ್ಟುಜೇಸಿನ ತ್ಯಾಗರಾಜುನಿ, ದಯತೋ ಎಟುಲ ಬ್ರೋತುವೋ!' ಎಂಬ ಒಂದೇ ಒಂದು ಕೃತ್ಯಕ್ಕೂ ದೋಷಕ್ಕೂ ಅಪರಾಧಕ್ಕೂ ಮತಿ ಮನಸ್ಸುಗಳಲ್ಲೇ ಒಂದು ಕಣದಷ್ಟು ಸಂಬಂಧವೂ ಇಲ್ಲದಿದ್ದ ಉತ್ತಮೋತ್ತಮವಾದ ಜೀವನ ನಡೆಸಿದವರು- ಅದುವೇ, ಅತಿಬಾಲ್ಯದಿಂದಲೇ.

ಇದೇ ರೀತಿಯಲ್ಲಿ ಶ್ರೀ ಶ್ಯಾಮಶಾಸ್ತ್ರಿಗಳೂ ಸಹ ಪೂರ್ವಿ ಕಲ್ಯಾಣಿರಾಗದಲ್ಲಿ ರಚಿಸಿದ, ವಿಲೋಮ ಮಿಶ್ರಛಾಪುನ ಖ್ಯಾತಿಯ 'ನಿನ್ನುವಿನಾಗಾ ಮರಿದಿಕ್ಕೆವರುನ್ನಾರು' ಕೃತಿಯಲ್ಲಿ ವ್ಯಕ್ತಪಡಿಸಿದ 'ಪರಮ ಲೋಭುಲನು ಪೊಗಡಿ ಪೊಗಡಿ ಅತಿಪಾಮರುಡೈ, ಸ್ಥಿರಮುಲೇಕ ಅತಿ ಚಪಲುಡೈತಿ' ಅನ್ನುವ ಅಂಥ ಲೋಕದ ಡೊಂಕಿಗೆ ಸಿಲುಕಿ ಕೊಂಡವರೇ ಅಲ್ಲ. ಹಾಗಿದ್ದರೂ ಈ ನೈಚ್ಯಾನುಸಂಧಾನದ ಮಾತುಗಳಿಗೇನು ಪ್ರಸಕ್ತಿ ಎಂದರೆ, ಅಂಥಂಥ, ಶುದ್ಧಾತಿಶುದ್ಧ ಆದರ್ಶ ಸಾತ್ತ್ವಿಕ ಜೀವನ ನಡೆಸಿದ ಮಹಾನುಭಾವರು, ಜನ್ಮಾಂತರ ಸಂಚಿತವಾಗಿ ತಮಗೆ ಅರಿವಿಗೆ ಬರದ ದೋಷಗಳಾಗಿರಬಹುದಾದರೂ, ಆದರ್ಶಕ್ಕೆ ದೂರವಿರುವ ಸಾಮಾನ್ಯ ಸಾಮಾಜಿಕರು ಆತ್ಮಪರೀಕ್ಷಣ ಮಾಡಿಕೊಂಡು ಉತ್ತಮರಾಗಲು ನಡೆಸಬೇಕಾದ ಪ್ರಯತ್ನವೇ ಇದರ ಸಂದೇಶ. ಇದೇ ಈ ನೈಚ್ಯಾನುಸಂಧಾನದ ಪ್ರಸಕ್ತಿ.

15. 'ತ್ರಿಲೋಕಮಾತಾ ನನ್ನುಬೋವು' -

ರಾಗ : ಫರಜು ತಾಳ : ಆದಿ

(ಪಾಠಾಂತರ : ಮಿಶ್ರಛಾಪು)

ಸಾಹಿತ್ಯದ ಮೂಲಪಾಠ

|| ಪ || ತ್ರಿಲೋಕಮಾತಾ ನನ್ನುಬ್ರೋವು ಕರುಣನು ದಿನದಿನಮಿಕನು
ಬ್ರೋವುಮು ಅಂಬಾ || ತ್ರಿಲೋಕಮಾತಾ||

||ಅ.ಪ.|| ವಿಲೋಕಿಂಪುಮು ಸದಯ ನನ್ನು ಚಲ್ಲನಿ ವೀಕ್ಷಿಂಚಿ ಕ್ಷಣಮುನ
ಕಾಮಾಕ್ಷಿ || ತ್ರಿಲೋಕಮಾತಾ||

||ಚ.1.|| ನಿನ್ನು ನಮ್ಮಿಯುಂಡಗ ಶ್ರಮಪಡವಲೆನಾ?ನೇನೆಂದು ಗಾನ ದಿಕ್ಕು
ನಿನ್ನುವಿನಾ ಘನಮುಗಾ ಕೋರಿಕಲ ಕೋರಿಕೋರಿ ಏಮಿಕಾನಕ
ಖಿನ್ನುಡನ್ನೈತಿ, ಧನ್ಯುಚೇಸಿ ||ತ್ರಿಲೋಕಮಾತಾ||

||ಚ.2.|| ಜಪಮುಲೆರುಗನು ತಪಮುಲೆರುಗನು ಚಪಲಚಿತ್ತುಡನು ಸತತಮು
ಕೃಪಕು ಪಾತ್ರುಡನು ವೇಡೆದನು. ನಿನ್ನು ಕೀರ್ತಿಂಚಿ ಎಟ್ಲೈನ ನೀ
ಬಿಡ್ಡಯನಿ || ತ್ರಿಲೋಕಮಾತಾ||

||ಚ.3.|| ಮರುವಕ ನಿನ್ನು ನೇ ಮದಿದಲಚಗನು ಮನ್ನಿಂಚಿ ವೆರವಕಮನರಾದಾ?
ಶರಣಮೇ ಸುಜನುಲ ಪಾಲಿ ಕಲ್ಪವಲ್ಲಿ ಶಂಕಲ ಶ್ಯಾಮಕೃಷ್ಣ ಸೋದರಿ
||ತ್ರಿಲೋಕಮಾತಾ||

ವ್ಯಾಖ್ಯಾನ

ಫರಜು ದೇಶ್ಯವೆಂಬ ವರ್ಗದಲ್ಲಿ ಉಲ್ಲೇಖಿತ ರಾಗವಾದರೂ, ಸುರಟಿ, ಹುಸೇನಿ ಇತ್ಯಾದಿ ಹಲವು ರಾಗಗಳಂತೆ ಕರ್ಣಾಟಕ ಸಂಗೀತದ ಸ್ವಭಾವದ ಗಮಕಾನ್ವಯ ಸೌಂದರ್ಯದ ಪ್ರತಿನಿಧಿಯಾಗಿ ಸಂಗೀತ ತ್ರಿಮೂರ್ತಿಗಳಾದಿಯಾಗಿ ಹಲವಾರು ವಾಗ್ಗೇಯಕಾರರು ರಚನೆಗಳಿಗಾಗಿ ಆಯ್ದುಕೊಂಡಿರುವ ಮಹಾ ರಕ್ತಿರಾಗ. ಶ್ರೀಮುದ್ದುಸ್ವಾಮಿ ದೀಕ್ಷಿತರ ಪ್ರಸಿದ್ಧವಾದ ನವಗ್ರಹಕೃತಿಗಳಲ್ಲಿ ಶುಕ್ರಗ್ರಹಸ್ತುತಿಯಲ್ಲಿ ಅತ್ಯಂತ ವಿಸ್ತಾರವಾದ, ಅದ್ಭುತವಾದ ಫರಜು ರಾಗದ

ಸೌಂದರ್ಯ ಮನೋಹರವಾಗಿ ಎದ್ದುನಿಲ್ಲುತ್ತದೆ. ಶ್ರೀ ಶ್ಯಾಮಶಾಸ್ತ್ರಿಗಳು ಎರಡು ಗೀತೆಗಳನ್ನೂ ಎರಡು ಕೃತಿಗಳನ್ನೂ, ಒಟ್ಟು ನಾಲ್ಕು ರಚನೆಗಳನ್ನು ಮಾಡಿ ಫರಜು ರಾಗದಲ್ಲಿನ ತಮ್ಮ ವಿಶೇಷ ಒಲವನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ 'ತ್ರಿಲೋಕಮಾತಾ ನನ್ನು ಬ್ರೋವು' ಕೃತಿಯ ಸಾಹಿತ್ಯ ಭಾವಾನುಭವವನ್ನು ಪಡೆಯೋಣ:

ಹೇ ತ್ರಿಲೋಕಮಾತೆ, ತ್ರಿಭುವನೇಶ್ವರಿಯೇ, ಕರುಣೆಯಿಂದ ನನ್ನನ್ನು ಕಾಪಾಡು, ದಿನದಿನವೂ -ಅಂದರೆ ನಿರಂತರವಾಗಿ - ಕಾಪಾಡುತ್ತಲೇ ಇರು!- 'ದಿನದಿನಮಿಕನು ಬ್ರೋವುಮು ಅಂಬ.' ಹೇ ಕಾಮಾಕ್ಷೀ ದೇವಿ ವಿಲೋಕಿಸು, - ಎಂದರೆ ವಿಶೇಷವಾದ ದೃಷ್ಟಿ ನನ್ನ ಮೇಲೆ ಬೀರು, ನೀನು ಸದಯೆ, ಕರುಣಾಪೂರ್ಣೇ, ತಣ್ಣನೆ ನಿನ್ನ ದೃಷ್ಟಿಯಿಂದ ಕ್ಷಣ ಮಾತ್ರದಲ್ಲೇ ನನ್ನನ್ನು ಕಾಪಾಡು! ಮಾತೆ, 'ಕರುಣಾಮೃತಸಾಗರಾ', 'ಕಟಾಕ್ಷಸ್ಯಂದಿ ಕರುಣಾ' ಅಲ್ಲವೆ? ಆಕೆಯ ಕಣ್ಣಂಚಿನ ದೃಷ್ಟಿಯಿಂದಲೇ (ಕಟಾಕ್ಷದಿಂದಲೇ) ಕರುಣೆ ಹೊರ ಹೊಮ್ಮುತ್ತದೆ.

ಚ. 1. : ಮಾತೆ! ನಾ ನಿನ್ನನ್ನು ನಂಬಿರುವಾಗ ನಾ ಶ್ರಮಪಡಬೇಕೆ? ನಿನ್ನ ಹೊರತು ಮತ್ತೆಲ್ಲೂ ನನ್ನ ಆಶ್ರಯ ಕಾಣೆ. ಕೋರಿಕೆಗಳನ್ನು ಕೋರಿ ಕೋರಿ ಏನೂ ತೋರದೆ ಖಿನ್ನನಾದೆ. ಧನ್ಯನನ್ನು ಮಾಡು.

ಚ. 2. : ಜಪವನರಿಯೆ, ತಪವನರಿಯೆ, ಎಂದೂ ನಾ ಚಪಲಚಿತ್ತನು, ಒಪ್ಪಿದೆ. ಆದರೆ, ನಿನ್ನ ಕೃಪೆಗೆ ಪಾತ್ರನಾಗಿ ಬೇಡುವೆ, ನಿನ್ನನ್ನು ಕೀರ್ತಿಸಿ, ಹಾಗಾದರೂ, ನಿನ್ನ ಮಗುವೆಂದು, ಕಾಪಾಡಮ್ಮಾ.

ಚ. 3. : 'ಹೇ ಶ್ಯಾಮಕೃಷ್ಣ ಸೋದರಿ ದೇವಿ, ಮರೆಯದೆ ನಿನ್ನನ್ನು ಮನಸ್ಸಿನಲ್ಲೇ ಸ್ಥಾಪಿಸಿಕೊಂಡಿರುವಾಗ ಅದನ್ನು ಮನ್ನಿಸಿ (ಮನ್ನಣೆ ಕೊಟ್ಟು) 'ನೀನು ಹೆದರಬೇಡ' ಎನ್ನಬೇಡವೆ ತಾಯಿ? ಶಂಕರಿ, ಸುಜನರಪಾಲಿಗೆ ಸರ್ವೋಚ್ಚ, ಸರ್ವಶ್ರೇಷ್ಠ ಕಲ್ಪವೃಕ್ಷವಲ್ಲವೆ ನೀನು! ಕಾಪಾಡು ತಾಯಿ.

16. 'ನೀಲಾಯತಾಕ್ಷಿ' -

ರಾಗ : ಘರಜು ತಾಳ : ತ್ರಿಶ್ರ ತ್ರಿಪುಟ

||ಪ.|| ನೀಲಾಯತಾಕ್ಷಿ ನೀವೇ ಜಗತ್ಸಾಕ್ಷೀ || ನೀಲಾಯತಾಕ್ಷೀ||

||ಅ.ಪ.|| ಫಾಲಾಕ್ಷುನಿ ರಾಣೀ ಪಾಲಿತ ಶ್ರಿತಶ್ರೇಣೀ || ನೀಲಾಯತಾಕ್ಷೀ||

||ಚ.1.|| ದೀನರಕ್ಷಕಿ ಅಭಯ ದಾನಮೀಯವೇ ಸಾಮ ಗಾನಲೋಲೆ
ಅಭಿಮಾನಮೀಯವೇ ದೇವಿ || ನೀಲಾಯತಾಕ್ಷೀ||

||ಚ.2.|| ಆದಿಶಕ್ತಿ ಕೌಮಾರೀ ಮೇದಿನಿಲೋ ನಿನ್ನು ಪೊಗಡ ಆದಿಶೇಷುನಿಕೈನ
ರಾದಿಕನೇಮಿಜೆಪ್ಪುದು ದೇವಿ || ನೀಲಾಯತಾಕ್ಷೀ||

||ಚ.3.|| ಕಾಮಪಾಲಿನಿ ವಿನುನೀ ನಾಮಮುಲು ಧರ್ಮಾರ್ಥ
ಕಾಮಮೋಕ್ಷಮಿಚ್ಚೇದಿ ಶ್ಯಾಮಕೃಷ್ಣ ಪಾಲಿನಿ ದೇವಿ
|| ನೀಲಾಯತಾಕ್ಷೀ||

ವ್ಯಾಖ್ಯಾನ

ಈ ಕೃತಿಯಲ್ಲಿ ಶ್ರೀ ಶಾಸ್ತ್ರಿಯವರ ಭಾವನಾಭಿವ್ಯಕ್ತಿ ಅವರ ಯಾವಾಗಿನ ಶೈಲಿಗೆ ಸ್ವಲ್ಪ ವಿಭಿನ್ನವಾಗಿದೆ. ಕಣ್ಣಿನ ಪಾಪೆಗಳು ನೀಲಿ ಬಣ್ಣದ ಹತ್ತಿರವಾಗಿದ್ದರೆ ಸೌಂದರ್ಯಾಂಶವಾಗುತ್ತದೆ. ಹಾಗೇ, ಕಣ್ಣುಗಳು ಅಡ್ಡವಾಗಿ ಎಳೆದು ಉದ್ದ ಹೆಚ್ಚಿದರೆ ಕೂಡ ಸೌಂದರ್ಯಾಂಶ. ಅದೇ 'ಆಯತ'- ಬಂಗಾಳದ ದುರ್ಗಾಮೂರ್ತಿಗಳಲ್ಲಿ ಚಿತ್ರಿಸಿದ ಕಣ್ಣುಗಳಂತೆ ಎನ್ನಬಹುದು. ಹಾಗೆ ನೀಲಾಯತಾಕ್ಷಿ, ದೇವಿ ಜಗತ್ಸಾಕ್ಷಿಯೇ, ಸರ್ವಸಾಕ್ಷಿಯೇ ತಾನೆ? ಹೇ ದೇವಿ, ಹಣೆಗಣ್ಣ (ಫಾಲಾಕ್ಷ) ಶಿವನ ರಾಣಿಯೇ, ಆಶ್ರಿಯಿಸಿದವರ ಸಮೂಹವನ್ನೇ ಪಾಲಿಸಿದವಳೇ.

ಚ. 1. : ಹೇ ದೀನರಕ್ಷಕಿ ಅಭಯಕೊಡಮ್ಮಾ, ಸಾಮಗಾನಲೋಲೆ, ಅಭಿಮಾನದಿಂದ ಕಾಪಾಡಮ್ಮಾ! ಸಾಮಗಾನಲೋಲೆ, ಪ್ರೀತಿ ತೋರಮ್ಮಾ!

ಚ. 2. : ಹೇ ಆದಿಶಕ್ತಿ, ಕೌಮಾರೀ, ಲೋಕದಲ್ಲಿ ಆದಿಶೇಷನಿಗೂ ನಿನ್ನನ್ನು ಕೊಂಡಾಡಲು ಬಾರದು. ಅಂತಿರುವಾಗ ನನ್ನ ವಿಷಯವೇನು ದೇವಿ!?

ಚ. 3. : ಮನ್ಮಥ ರಕ್ಷಕಿಯೇ, ಶ್ಯಾಮಕೃಷ್ಣ ಪಾಲಿನಿ, ದೇವಿ, ಕೇಳು, ನಿನ್ನ ನಾಮೋಚ್ಚಾರಣ ಮಾತ್ರವೇ ಚತುವರ್ಗವನ್ನೂ ಅಂದರೆ, ಧರ್ಮ, ಅರ್ಥ, ಕಾಮಗಳನ್ನೂ, ಮೋಕ್ಷವನ್ನೂ ನೀಡುವಂಥದು.

ಮೂರು ಚರಣಗಳುಳ್ಳ ಈ ಕೃತಿಯನ್ನು ಮಾಯಾಮಾಳವಗೌಳ ದಲ್ಲಿ ಕೊಡುವ ಪಾಠಾಂತರವೂ ಇದೆ. ಆದರೆ ಘರಜು ರಾಗದಲ್ಲಿ ರಚಿತವಾಗಿದೆ ಎಂಬುದೇ ಗ್ರಾಹ್ಯವಾದ ಪಾಠ.

17. 'ಏನ್ನೇರಮುಂ'-

ರಾಗ:ಪೂರ್ವಿಕಲ್ಯಾಣಿ **ತಾಳ : ತ್ರಿಶ್ರ ತ್ರಿಪುಟ (ಮಿಶ್ರಛಾಪು)**

ಸಾಹಿತ್ಯದ ಮೂಲ ಪಾಠ

|| ಪ || ಎನ್ನೇರಮುಂ ಉನ್ನಾಮಮುರೈಪ್ಪದೇ ಎನ್ನೇಮಮ್ ಅನ್ನೈಯೇ!
||ಎನ್ನೇರಮುಂ ||

||ಅ.ಪ.|| ಪುನ್ನಗೈಯುಡನ್ ಕಣ್‌ಪಾರ್ತ್ ಎನ್ನೈ ಎಪ್ಪೋದುಮ್ ಮನ್ನಿಪ್ಪುದುಂ
ನೀಯೇ, ಎನ್ ತಾಯೇ ||ಎನ್ನೇರಮುಂ ||

||ಚ.1.|| ಏನಮ್ಮಾ ತಾಮದಮೇನಮ್ಮಾ ?
ಎನ್ನೈರಕ್ಷಿಕ್ಕ ಉನಕ್ಕ್ ಭಾರಮಾ ?
ಉನ್ ನಿನ್ನೈವೇ ಎನ್ ನೇಮಮಲ್ಲವೋ ಉನ್ನುಳ್ಳಮ್
ಕರೈಯವುಂ ನಾನ್ ಶೊಲ್ಲವೋ ||ಎನ್ನೇರಮುಂ ||

||ಚ.2.|| ಅನ್ಬುಡನ್ ಉನ್ನೈ ನಾನ್ ಅಡೈಕ್ಕಲಂ ಅಡೈನ್ದೇನ್ ಅಖಿಲಾಂಡೇಶ್ವರಿ
ಅಭಿರಾಮಸುಂದರಿ ಅನ್ಯೆತ್ತುಮರಿಂದ ಆದಿಶಕ್ತಿ ನೀಯೇ ಅರವಣೈತ್ತೆನ್ನೈ
ಆದರಿ ಶ್ಯಾಮಕೃಷ್ಣ ಸೋದರಿ ||ಎನ್ನೇರಮುಂ ||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳ ಮಾತೃಭಾಷೆಯಾದ ತಮಿಳಿನಲ್ಲಿ ರಚಿಸಿರುವ ನಾಲ್ಕು ಕೃತಿಗಳಲ್ಲಿ ಒಂದಿದು. ಮಾತೆಯೇ, ನನ್ನ ಸಮಯವೆಲ್ಲ ನಿನ್ನ ನಾಮೋಚ್ಚಾರಣೆಗೆಂದೇ ನನ್ನ ಮನಸ್‌ತತ್ತ್ವ. ಮುಗುಳ್‌ನಗೆಯೊಂದಿಗೆ ನಿನ್ನಕಟಾಕ್ಷಬೀರಿ ನನ್ನನ್ನು ಯಾವಾಗಲೂ ಮನ್ನಿಸುವುದೇ ನೀನೇ ನನ್ನ ತಾಯಿ!

ಈ ಕೃತಿಯಲ್ಲಿ ಎರಡೇ ಚರಣಗಳಿವೆ.

ಚ. 1. : ಏನಮ್ಮಾ, ತಾಮಸವೇಕೆ? ನನ್ನನ್ನು ರಕ್ಷಿಸಲು ನಿನಗೆ ಭಾರವೇ? ನಿನ್ನ ಧ್ಯಾನವೇ ನನ್ನ ವ್ರತವಲ್ಲವೇ? ನಿನ್ನ ಮನಸ್ಸು ಕರಗಲು ನಾ ಹೇಳಬೇಕೆ ತಾಯೇ?

ಚ. 2. : ಪ್ರೀತಿಯಿಂದ ನಿನ್ನ ಚರಣಕ್ಕೆ ಶರಣಾದೆ ಹೇ ಅಖಿಲಾಂಡೇಶ್ವರಿ ಅಭಿರಾಮಸುಂದರಿ! ಎಲ್ಲವನ್ನೂ ಅರಿತ ಆದಿಶಕ್ತಿ ನೀನೇ, ಶ್ಯಾಮಕೃಷ್ಣ ಸೋದರಿಯೇ, ಅಪ್ಪಿಕೊಂಡು ಎನ್ನಾದರಿಸು.

18. 'ಪಾಲಯಾಶುಮಾಂ'-

ರಾಗ : ಆರಭಿ **ತಾಳ : ತ್ರಿಶ್ರ ತ್ರಿಪುಟ**

ಸಾಹಿತ್ಯದ ಮೂಲ ಪಾಠ

|| ಪ. || ಪಾಲಯಾಶು ಮಾಂ ಪರದೇವತೇ || ಪಾಲಯಾಶು||

||ಅ.ಪ.|| ಕಾಲಕಾಲವಲ್ಲಭೇ ಲಲಿತೇ ಅತಿಲಲಿತೇ || ಪಾಲಯಾಶು||

||ಚ.1.|| ಗಾನವಿನೋದಿನಿ ನಿರಂಜನಿ ದಾನಪ್ರದಾಯಿನಿ ರಂಜನಿ ಮಾನೋನ್ನತಿಂ
ದೇಹಿ ಮೇ ಶಿವೇ ಮಾನವತಿ ಹಿಮಗಿರಿತನಯೇ ||ಪಾಲಯಾಶು||

||ಚ.2.|| ಕಂಜಲೋಚನೇ ಕಾಮಾಕ್ಷಿ ಪಂಚಾಕ್ಷರ ವೈಭವಮುದಿತೇ
ಕಾಮಕೋಟಿಪೀಠ ಸುವಾಸಿನಿ ಶ್ಯಾಮಕೃಷ್ಣ ಪರಿಪಾಲಿತ ಜನನಿ
|| ಪಾಲಯಾಶು||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳದು ಆರಭಿ ರಾಗದಲ್ಲಿ ಲಭ್ಯವಿರುವುದು ಇದೊಂದೇ ಕೃತಿ. ಅದು ಸಂಸ್ಕೃತ ಭಾಷೆಯಲ್ಲಿದೆ.

ಹೇ ಪರದೇವತೇ ನನ್ನನ್ನು ಪಾಲಿಸು. ಅತಿ ಲಲಿತವಾದ -ಅಂದರೆ, ಸುಂದರವಾದ, ಸೌಮ್ಯವಾದ, ಮೃದುವಾದ ಲಲಿತೇ, ಬಾಲೇ, ಶುಭಪ್ರದಳೇ, ಕಾಲಕಾಲವಲ್ಲಭೇ- ಪಾಲಿಸು.

ಎರಡು ಚರಣಗಳ ಕೃತಿ ಇದು.

1. ಗಾನವಿನೋದಿನಿ, ನಿರಂಜನಿ (ನಿರ್ಲೇಪಳು), ರಂಜನಿ, ದಾನಪ್ರದಾಯಕಿ, ಗೌರವ ಪಾತ್ರಳೇ - (ಮಾನವತಿ), ಹೇ ಶಿವೇ, ಹಿಮಗಿರಿಕುಮಾರಿ, ನನಗೆ ಹೆಚ್ಚಿನ ಆದರಣೆ ನೀಡಮ್ಮಾ (ಮಾನೋನ್ನತಿಂ ದೇಹಿ)
2. ಹೇ ಕಮಲಾಕ್ಷಿ, ಕಾಮಾಕ್ಷಿ, ಓಂ ನಮಃ ಶಿವಾಯ ಎಂಬ ಶಿವಪಂಚಾಕ್ಷರೀ ಮಂತ್ರದ ವೈಭವದಿಂದ ಸಂತೋಷಿಸುವವಳೇ, ಕಾಮಕೋಟಿ ಪೀಠದಲ್ಲಿ ನೆಲೆಸಿರುವವಳೇ. ಶ್ಯಾಮಕೃಷ್ಣ ಪರಿಪಾಲಿನಿ, ಹೇ ಜನನಿ, ಈಗಲೇ ಪಾಲಿಸು!

19. 'ಪಾರ್ವತಿ ನಿನ್ನು ನೇ ನೆರನಮ್ಮಿತಿ'

ರಾಗ : ಕಲ್ಗಡಾ **ತಾಳ : ಚ. ರೂಪಕ**

ಸಾಹಿತ್ಯದ ಮೂಲ ಪಾಠ

||ಪ.|| ಪಾರ್ವತಿ ನಿನ್ನು ನೇ ನೆರನಮ್ಮಿತಿ ಶುಕಪಾಣಿ ಪರಾಕಿಕನೇಲ ಸುಶೀಲೆ ||ಪಾರ್ವತಿ||

||ಅ.ಪ.|| ಗೀರ್ವಾಣ ವಂದಿತ ಪದಸಾರಸ ಸಂಗೀತಲೋಲೆ ಸುಗುಣಜಾಲೆ
ಜಾಲಮೇಲ ಕಾಮಾಕ್ಷಿ ||ಪಾರ್ವತಿ||

||ಚ.1.|| ಭಂಡದೈತ್ಯಖಂಡನಾಖಂಡಲವಿನುತಾ, ಮಾರ್ತಾಂಡಕೋಟಿತೇಜ
ನೀರಜಾಕ್ಷಿ ನಿಖಿಲಸಾಕ್ಷಿ ||ಪಾರ್ವತಿ||

||ಚ.2.|| ಇಂದುವದನಾ, ಕುಂದರದನಾ, ಸಿಂಧುರಗಮನಾ, ಮಕರಂದವಾಣಿ,
ನೀಲಮೇಘವೇಣಿ, ಗೀರ್ವಾಣೇ ||ಪಾರ್ವತಿ||

||ಚ.3.|| ಶ್ಯಾಮಕೃಷ್ಣ ಸೋದರಿ ಶಿವಶಂಕರಿ, ಗೌರಿ, ಗುಣಧಾಮ, ಕಾಮಕೋಟಿ
ಪೀಠವಾಸಿನಿ, ಶಾಂಭವಿ, ಮೃಡಾನಿ ||ಪಾರ್ವತಿ||

ವ್ಯಾಖ್ಯಾನ

ಈ ಕೃತಿಯ ಕಲ್ಗಡಾ ರಾಗದ ಬಗ್ಗೆ 'ಭೂಮಿಕೆ'ಯಲ್ಲಿ ಈಗಾಗಲೇ ಜಿಜ್ಞಾಸೆ ಮಾಡಲಾಗಿದೆ. 13ನೇ ಮೇಳಕರ್ತವಾದ ಗಾಯಕಪ್ರಿಯದಲ್ಲಿ ಜನ್ಯ, ಉಪಾಂಗ, ಈ ಮೇಳಾನುಸಾರ ಶುದ್ಧ ಧೈವತ, ಶುದ್ಧ ನಿಷಾದವನ್ನೇ ಬಳಸುವ ರಾಗವಿದು.

ಆರೋಹಣ ಅವರೋಹಣಗಳು: ಸ ರಿ$_1$ ಗ$_3$ ಪ ದ$_1$ ಸಾ̇ ಸ̇ ನಿ$_1$ ದ$_1$ ಪ ಗ$_3$ ರಿ$_1$ ಸಾ

ಸಾಹಿತ್ಯವನ್ನು ನೋಡೋಣ

ಹೇ ಪಾರ್ವತಿ, ನಿನ್ನನ್ನು ದೃಢವಾಗಿ ನಂಬಿದೆ . ಮಧುರೆ ಮೀನಾಕ್ಷಿಯಾಗಿ ಶುಕಪಾಣಿಯೇ. ಸುಶೀಲೇ, 'ಪರಾಕು ಇಕನೇಲೆ'-ವಿಳಂಬವಿನ್ನೇಕೆ, ಕಾಪಾಡು. 'ಪರಾಕು' ಎಂಬ ಈ ಶಬ್ದವನ್ನು ವಿಳಂಬ, ಉಪೇಕ್ಷೆ, ಅಸಡ್ಡೆ, ತಿರಸ್ಕಾರ, ಎಂಬ ಅರ್ಥಗಳೊಂದಿಗೆ ಬಳಸಲಾಗಿರುತ್ತದೆ. ಈ ಶಬ್ದವನ್ನು 'ಶಬ್ದರತ್ನಾಕರ'ವು 'ತತ್ಪರತೆ' ಎಂದು ಅರ್ಥೈಸುತ್ತದೆ.

ಗೀರ್ವಾಣ ವಂದಿತ ಪದಸಾರಸ -ವೇದಗಳಿಂದೂ ದೇವತೆಗಳಿಂದ ವಂದಿತ ಪಾದಪದ್ಮಗಳುಳ್ಳ ತಾಯೆ ಸಂಗೀತಲೋಲೆ, ಸುಗುಣಶೀಲೆ, ಕಾಮಾಕ್ಷಿ, 'ಜಾಲಮೇಲೆ' 'ವಿಳಂಬವೇಕೆ?

3 ಚರಣಗಳು :

1. ಭಂಡಾಸುರ ವಧೆಯನ್ನು ಮಾಡಿ ಲೋಕದ ಭಕ್ತಿಪೂರ್ಣ ಶ್ಲಾಘನೆ ಪಡೆದವಳು. ರವಿ ಕೋಟಿಯ ತೇಜಸ್ಸುಳ್ಳವಳು, ನೀರಜಾಕ್ಷಿ, ಸರ್ವಲೋಕ ಸಾಕ್ಷಿ, ಕಾಮಾಕ್ಷಿ!

2. ಹೇ ಚಂದ್ರಮುಖಿ, ಮಲ್ಲಿಗೆಮೊಗ್ಗಿನಂಥ ಹಲ್ಲುಗಳವಳೇ, ಗಜಗಮನೆ, ಮಧುವಿನಷ್ಟು ಮಧುರ ವಾಣಿಯೇ, ನೀಲಮೇಘಕಾಂತಿಯು ಕೂದಲುಳ್ಳವಳೇ, ಗೀರ್ವಾಣೀ-ದೇವಿ.

3. ಹೇ ಶ್ಯಾಮಕೃಷ್ಣ ಸೋದರಿ, ಶಿವಶಂಕರಿ, ಗೌರಿ, ಗುಣಗಳಿಗೆ ತವರಿನ

ರೂಪಳೇ, ಪೀಠವಾಸಿನಿ-ಎಂದರೆ ಕಾಮ ಕೋಟಿ ಪೀಠವಾಸಿನಿ, ಶಾಂಭವಿ, ಮೃಡಾನಿ, ಪಾರ್ವತಿ-

ಶ್ರೀ ಶ್ಯಾಮಶಾಸ್ತ್ರಿಗಳ ಕಲ್ಪನೆಯಲ್ಲಿನ ಕಲ್ಗಡಾ ರಾಗ ಸ್ವರೂಪ ದರ್ಶನ ಈ ಕೃತಿಯಲ್ಲಿ ಲಭ್ಯವಿದೆ.

20. 'ಪಾಹಿಮಾಂ ಶ್ರೀ ರಾಜರಾಜೇಶ್ವರಿ' -

ರಾಗ : ನಾಟ **ತಾಳ : ಚ. ರೂಪಕ**

|| ಪ. || ಪಾಹಿಮಾಂ ಶ್ರೀ ರಾಜರಾಜೇಶ್ವರಿ ಅಂಬ, ಪಾಹಿಮಾಂ ಶ್ರೀ
ರಾಜರಾಜೇಶ್ವರಿ || ಪಾಹಿಮಾಂ||

||ಅ.ಪ.|| ಸಿಂಹಾಸನಾರೂಢೇ ದೇವತೇ ದೃಢವ್ರತೇ,
ಸಿಂಹಾಸನಾರೂಢೇ ಏಹಿ ಆನಂದ ಹೃದಯೇ || ಪಾಹಿಮಾಂ||

||ಚ.1.|| ಕಾಮಿತಾರ್ಥ ಫಲದಾಯಿಕೇ, ಅಂಬಿಕೇ, ಕಾಳಿಕೇ,
ಕಾಮಿತಾರ್ಥದಾಯಿಕೇ, ಕಾಮಕೋಟಿ ಪೀಠಗತೇ || ಪಾಹಿಮಾಂ||

||ಚ.2.|| ಮಾನವ ಮುನಿಗಣಪಾಲಿನಿ, ಮಾನಿನಿ, ಜನನೀ, ಭವಾನಿ,
ಮಾನಿತ ಗುಣಶಾಲಿನಿ ನಿರಂಜನಿ, ನಿಖಿಲಪಾಪ ಶಮನೀ||ಪಾಹಿಮಾಂ||

||ಚ.3.|| ಸಾರಸಪದಯುಗಳೇ, ಸ್ವರಜಿತ ಕಲ್ಪಿತ ಸಂಗೀತ ರಸಿಕೇ
ನಟಪ್ರಿಯೇ ಬಾಲೇ ಸುರಭಿಪುಷ್ಪಮಾಲೇ ||ಪಾಹಿಮಾಂ||

||ಚ.4.|| ಶಾರದೇ ಸಾಮಗಾನ ಸಮ್ಮೋದಿತಕರಿ ಶ್ರೀ ಚಕ್ರರಾಜೇಶ್ವರಿ,
ಸುಲಯಕರಿ ಶ್ಯಾಮಕೃಷ್ಣಸೋದರಿ || ಪಾಹಿಮಾಂ||

ವ್ಯಾಖ್ಯಾನ

ನಾಟ ರಾಗದಲ್ಲಿ ಶ್ರೀ ಶಾಸ್ತ್ರಿಗಳ ಏಕೈಕ ಕೃತಿ ಇದು. ಸಂಸ್ಕೃತ ಭಾಷೆಯಲ್ಲಿ ರಚಿತವಾದ ಕೃತಿ. ಎರಡು ಚರಣಗಳುಳ್ಳ ಕೃತಿಯಿದು. ಸಾಹಿತ್ಯ ಭಾವ ಹೀಗಿದೆ:

ದೇವಿ, ಶ್ರೀ ರಾಜರಾಜೇಶ್ವರಿಯೇ, ಸಿಂಹವಾಹಿನಿಯೇ, ದೃಢವ್ರತೆಯೇ, ಆನಂದ ಹೃದಯಳೇ, ಏಹಿ -ಬಾರಮ್ಮ, ಪಾಹಿ ಮಾಂ-ನನ್ನನ್ನು ಕಾಪಾಡು.

ಇಚ್ಛಿಸಿದ್ದನ್ನೆಲ್ಲ ಕೊಡುವವಳೇ, ಅಂಬಿಕೇ, ಕಾಳಿಕಾದೇವಿ, ಕಾಮಕೋಟಿ ಪೀಠಗತೇ -ಪಾಹಿ ಮಾಂ ಪಾಹಿ ಮಾಂ!

ಪದೇ ಪದೇ ಕಾಮಕೋಟಿ ಪೀಠ - ಸ್ಥಿತೇ, ವಾಸಿನಿ, ಗತೇ, ನಿಲಯೇ ಇತ್ಯಾದಿಯಾಗಿ ಶ್ರೀ ಶಾಸ್ತ್ರಿಗಳು ಹೇಳುವಾಗ, ಅರಿತ ಹಿರಿಯರು ಗುರ್ತಿಸುವ 96 ಪೀಠಗಳಲ್ಲಿ ಕಾಮಕೋಟಿಪೀಠವೆಂಬುದು ಶ್ರೀಚಕ್ರಕ್ಕೆಹೆಸರು. ಚಕ್ರ, ಚಕ್ರರಾಜ, ಶ್ರೀಪುರ, ಶ್ರೀಮನ್ನಗರ, ನಗರ ಮೊದಲಾದ ಹಲವಾರು ಶಬ್ದಗಳೂ ಲಲಿತಾಂಬಿಕೆಯ ಆವಾಸಸ್ಥಾನವಾದ ಶ್ರೀ ಚಕ್ರಕ್ಕೇ ಹೆಸರುಗಳು. ಪಲ್ಲವಿಯಲ್ಲಿ ಸಿಂಹಾಸನಾರೂಢೇ ಎಂಬ ಪದವನ್ನೂ ಅನುಪಲ್ಲವಿಯಲ್ಲಿ 'ಕಾಮಿತಾರ್ಥ ಫಲದಾಯಿಕೇ' ಎಂಬ ಪದವನ್ನು ಭಕ್ತಿ ದ್ಯೋತಕವೋ ಎಂಬಂತೆ ದ್ವಿರುಕ್ತಿಯಲ್ಲಿ ಬಳಸಿದ್ದಾರೆ.

ಚ. 1. : ಮಾನವ ಸಮೂಹವನ್ನು ಋಷಿಮುನಿಗಳನ್ನೂ ಪಾಲಿಸುವವಳು, ಮಾನ್ಯಳು, ಜನನಿ, ಭವಾನಿ, ಗುಣಶಾಲಿನಿಯೆಂದು ಮಾನಿತಳಾದವಳು. ನಿರಂಜನಿ, ಸಕಲ ಪಾಪನಾಶಿನಿಯು.

ಚ 2. : ದೇವಿಯ ಪಾದದ್ವಯ ಕಮಲದಷ್ಟು ಸುಂದರ, ಸ್ವರಗಳಿಂದಲೂ ಜತಿಗಳಿಂದಲೂ ರಚಿತವಾದ ಸಂಗೀತದ ರಸಿಕ ಶ್ರೇಷ್ಠಳು ದೇವಿ. ಬಾಲಾತ್ರಿಪುರ ಸುಂದರಿ, ನಾಟ್ಯ ಪ್ರಿಯಳು, ಸುಗಂಧ ಪುಷ್ಪಗಳ ಮಾಲೆ ಧರಿಸಿರುವವಳು, ಸರಸ್ವತೀ ಸ್ವರೂಪಳು, ಶಾರದೆಯೇ, ಸಾಮಗಾನವೆಂದರೆ ದೇವಿಗೆ ಬಹು ಇಷ್ಟ. ಶ್ಯಾಮಕೃಷ್ಣಸೋದರಿ, ಸುಲಯಕರಿ, ಶ್ರೀಚಕ್ರರಾಜೇಶ್ವರಿ ಪಾಹಿ ಮಾಂ.

21. 'ಶಂಕರಿ ಶಂಕರಿ ಕರುಣಾಕರಿ'-

ರಾಗ : ಕಲ್ಯಾಣಿ **ತಾಳ : ಖಂಡ ಅಟ್ಟ**

||ಪ.|| ಶಂಕರಿ ಶಂಕರಿ ಕರುಣಾಕರಿ ರಾಜರಾಜೇಶ್ವರಿ ಸುಂದರಿ ಪರಾತ್ಪರಿ
ಗೌರಿ ||ಶಂಕರಿ||

||ಅ.ಪ.|| ಪಂಕಜನೇತ್ರಿ ಗಿರಿರಾಜ ಕುಮಾರಿ ಪರಮಪಾವನಿ ಭವಾನಿ
ಸದಾಶಿವಕುಟುಂಬಿನಿ ||ಶಂಕರಿ||

||ಚ.|| ಶ್ಯಾಮಕೃಷ್ಣ ಸೋದರಿ ಶಿಶುಂ ಮಾಂ ಪರಿಪಾಲಯ ಶಂಕರಿ ಕರಿಮುಖ
ಕುಮಾರ ಜನನಿ ಕಾತ್ಯಾಯಿನಿ ಕಲ್ಯಾಣಿ ಸರ್ವಚಿತ್ತ ಬೋಧಿನಿ
ತತ್ತ್ವಜ್ಞಾನರೂಪಿಣಿ ಸರ್ವಲೋಕಾಧೀಶೇ ಮಂಗಳಂ ಜಯಮಂಗಳಂ
ಶುಭಮಂಗಳಂ ||ಶಂಕರಿ||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳು 'ಮಂಗಳ'ವಾಗಿ ರಚಿಸಿದ ಕೃತಿ ಇದು. ಎಂದೇ ಸ್ತೋತ್ರಸ್ವರೂಪದಲ್ಲಿದೆ ಹೇ, ಶಂಕರಿ, ಶಂ-ಕರಿ, ಕರುಣಾಕರಿ, ರಾಜರಾಜೇಶ್ವರಿ,ಸುಂದರಿ, ಪರಾತ್ಪರಿ, ಗೌರಿ, ಪಂಕಜದಳನೇತ್ರಿ, ಗಿರಿರಾಜ ಕುಮಾರಿ, ಪರಮ ಪಾವನಿ, ಭವಾನಿ, ಸದಾಶಿವಕುಟುಂಬಿನಿ. ಏಕಚರಣದಲ್ಲಿ : ಶ್ಯಾಮಕೃಷ್ಣ ಸೋದರಿ, ಶಂಕರಿ, ಗುಹ-ಗಣೇಶರ ಜನನಿ, ಕಾತ್ಯಾಯನಿ, ಕಲ್ಯಾಣಿ, ಸರ್ವಚಿತ್ತಬೋಧಿನಿ, ತತ್ತ್ವಜ್ಞಾನ ರೂಪಿಣಿ, ನಿನ್ನ ಮಗುವಾದ ನನ್ನ ಪಾಲಿಸು, ಸಕಲ ಲೋಕಕ್ಕೂ ಮಂಗಳವನ್ನು, ಶುಭ ಮಂಗಳವನ್ನು ತೋರು.

ವಾಗ್ಗೇಯಕಾರರು ಪ್ರಾಸವೇ ಮೊದಲಾದ ಕೆಲವು ಕಾರಣಗಳಿಂದ, ಒಂದು ರಚನೆಯಲ್ಲಿ ಬಳಸಿದ ಪದವನ್ನು ವಿಶೇಷಣವನ್ನು, ಪದಗಟ್ಟನ್ನು ಇತರ ಕೆಲವು ರಚನೆಗಳಲ್ಲೂ ಬಳಸುವುದು ಸಹಜ. ಒಂದೇ ಪದವನ್ನು ಅದೇ ರಚನೆಯಲ್ಲಿ ಪುನಃ ಬಳಸಿರುವ ಕೆಲವು ಕೃತಿಗಳ ಸಂದರ್ಭಗಳು ಶ್ರೀ ಶಾಸ್ತ್ರಿಗಳ ರಚನೆಯ ಓಟದಲ್ಲಿ ನಮ್ಮ ಗಮನವನ್ನು ಸೆಳೆಯುತ್ತವೆ. ಈ ಮಂಗಳ ಕೃತಿ ಅಂಥ ವೀಕ್ಷಣೆಗೊಂದು ನಿದರ್ಶನ, ಉದಾಹರಣೆ.

22. 'ನನ್ನು ಬ್ರೋವರಾದಾ'

ರಾಗ : ಜನರಂಜನಿ ತಾಳ: ತ್ರಿಶ್ರ ತ್ರಿಪುಟ

ಸಾಹಿತ್ಯದ ಮೂಲ ಪಾಠ

||ಪ.|| ನನ್ನು ಬ್ರೋವರಾದಾ ಓ ಜಗದಂಬಾ ! ನೀ ದಯ ಚೇಯವೇ!
|| ನನ್ನು||

||ಅ.ಪ.|| ಕನ್ನತಲ್ಲಿ ನೀವೇ ಅಂಬಾ! ನಾ ಮೊರಲನು ವಿನರಾದಾ ? || ನನ್ನು||

||ಚ.1.|| ಆದಿಶಕ್ತಿ ಮಹೇಶ್ವರಿ, ಕೌಮಾರೀ, ಆದರಿಂಪವೇ ವೇವೇಗಮೆ,
ನೀಲಾಯತಾಕ್ಷಿ, ಭವಾನೀ! || ನನ್ನು||

||ಚ.2.|| ಕೋಮಳಮೃದುವಾಣೀ, ಕಲ್ಯಾಣೀ, ಸೋಮಶೇಖರುನಿ ರಾಣೀ,
ಲಲಿತಾಂಬಿಕೇ, ವರದೇ ! || ನನ್ನು||

||ಚ.3.|| ಶ್ಯಾಮಕೃಷ್ಣ ಸಹೋದರಿ, ಓಂಕಾರೀ, ಶಾಂಭವೀ, ಓ ಜನನೀ
ನಾದರೂಪಿಣೀ ನಳಿನಾಕ್ಷೀ || ನನ್ನು||

ವ್ಯಾಖ್ಯಾನ

ಜನರಂಜನಿ ರಾಗದಲ್ಲೂ ಶ್ರೀ ಶಾಸ್ತ್ರಿಗಳ ಈ ಒಂದೇ ಕೃತಿ ಲಭ್ಯವಿದೆ. ಇದೂ ಮೂರು ಚರಣಗಳ ಕೃತಿ.

ನನ್ನನ್ನು ಕಾಪಾಡಲಾಗದೇ ತಾಯಿ ಓ ಜಗದಂಬೆ! ದಯೆಮಾಡೇ ಅಮ್ಮಾ! ಹೆತ್ತ ತಾಯಿ ನೀನೇ ಅಮ್ಮ ನನ್ನ ಮೊರೆಗಳನ್ನಾಲಿಸಬಾರದೇ!

1. ಆದಿಶಕ್ತಿ, ಮಹೇಶ್ವರಿ, ಕೌಮಾರೀ, ಬೇಗ ಬೇಗ ಆದರಿಸಮ್ಮಾ, ನೀಲಾಯತಾಕ್ಷಿ, ಭವಾನಿ.

2. ಕೋಮಲ ಮೃದುವಾಣಿಯೇ, ಕಲ್ಯಾಣಿ, ಚಂದ್ರಶೇಖರನ ರಾಣಿ, ವರದೇ, ಲಲಿತಾಂಬಿಕೆಯೇ!

3. ಶ್ಯಾಮಕೃಷ್ಣ ಸಹೋದರಿ, ಓಂಕಾರಿ, ಶಾಂಭವಿ, ಓ ಜನನಿ, ನಾದರೂಪಿಣಿ, ನಳಿನಾಕ್ಷಿ.

23. 'ಪರಾಕೇಲ ನನ್ನು ಪರಿಪಾಲಿಂಪ' -

ರಾಗ : ಕೇದಾರಗೌಳ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ|| ಪರಾಕೇಲ ನನ್ನು ಪರಿಪಾಲಿಂಪ ಮುರಾರಿ ಸೋದರಿ ಅಂಬಾ?
||ಪರಾಕೇಲ||

||ಅ.ಪ.||ನಿರಾದರಣ ಸೇಯರಾದಮ್ಮಾ ಶಿವೇ! ಪರಾಶಕ್ತಿ ನಾ
ಮೊರನಾಲಗಿಂಪ ||ಪರಾಕೇಲ||

|| ಚ. || ಧರಾದ್ಯಖಿಲಮುನಕು ರಾಣಿ ಹರಿಹರಾದುಲು ಪೊಗಡು ಪರಾತ್ಪರಿ
ದುರಂಧರ ಮಹಿಷಾಸುರ ದಮನಿ ಸ್ಮರಾಧೀನುಡೌಶ್ಯಾಮಕೃಷ್ಣನುತ
||ಪರಾಕೇಲ||

ವ್ಯಾಖ್ಯಾನ

ಒಂದೇ ಚರಣವುಳ್ಳ ಮಧ್ಯಮಕಾಲದ, ಕೇದಾರಗೌಳ ರಾಗದಲ್ಲಿನ ಶಾಸ್ತ್ರಿಗಳ ಎರಡು ಕೃತಿಗಳಲ್ಲಿ ಒಂದು ಕೃತಿ ಇದು.

ಉಪೇಕ್ಷೆ ಏಕೆ ತಾಯಿ ನನ್ನನ್ನು ಪಾಲಿಸಲು, ಹೇ ಮುರಾರಿ ಸೋದರಿ ಅಂಬೆ, ಅನಾದರ ಬೇಡ ತಾಯಿ, ಶಿವೇ, ಪರಾಶಕ್ತಿ, ನನ್ನ ಮೊರೆ ಕೇಳಮ್ಮಾ! ಧರೆಯೇ ಮೊದಲಾದ ಎಲ್ಲ ಲೋಕಗಳ ಮಹಾರಾಜ್ಞಿ ನೀನಲ್ಲವೇ? ಹರಿಹರಾದಿಗಳು ನಿನ್ನನ್ನೇ ಹೊಗಳುವ ಪರಾತ್ಪರಿ ! ಹೇ ಶ್ಯಾಮಕೃಷ್ಣನುತೇ, ಮಹಿಷಾಸುರ ಮರ್ದಿನಿ, ದುರಂಧರೆ-ಅಂದರೆ, ಭಕ್ತರ ಕಷ್ಟಗಳ ಭಾರವನ್ನೆಲ್ಲಾ ನೀನೇ ವಹಿಸುವವಳಲ್ಲವೇ! ಶ್ಯಾಮಕೃಷ್ಣನುತೇ ಎನ್ನುವಾಗ ಸ್ಮರನ ತಂದೆಯಾದ ವಿಷ್ಣುವನ್ನು ಸ್ಮರಾಧೀನನಾದ - 'ಸ್ಮರಾಧೀನುಡೌ' - ಎಂಬ ಮಾತನ್ನು ಬಳಸುತ್ತಾರೆ ಶಾಸ್ತ್ರಿಗಳು.

24. 'ಪಾಲಿಂಪವಮ್ಮಾ'-

ರಾಗ : ಮುಖಾರಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ಪಾಲಿಂಪವಮ್ಮಾ ಪರಮಪಾವನಿ, ಭವಾನೀ! || ಪಾಲಿಂಪವಮ್ಮಾ||

||ಅ.ಪ.|| ಶ್ರೀ ಲಲಿತಾ ಗುಣಶೀಲಮುಲನು ವಿನಿ ಚಾಲ ನೀ ಸೇವ ಚೇಯ
ಕೋರಿವಚ್ಚಿತಿ || ಪಾಲಿಂಪವಮ್ಮಾ||

||ಚ.1.|| ನೀ ಸಮಾನ ದೈವಮು ನೇಗಾನ ನಿಖಿಲಲೋಕಜನನೀ ಮಾಯಮ್ಮಾ!
ಶ್ರೀ ಸ್ವಯಂಭುನಾಥ ತರುಣೀ, ಮಧುರವಾಣೀ,
ನೀ ದಾಸುನಿ ಬ್ರೋವ ಇಂತಪರಾಕೇಲನಮ್ಮಾ ?|| ಪಾಲಿಂಪವಮ್ಮಾ||

||ಚ.2.|| ನಾ ತಾಪಮು ದೀರ್ಚಿ ಪ್ರೇಮ ಜೂಚಿ ನಿಧಾನಮುಗ ಮಾಟ್ಲಾಡ
ಸಮಯಮಿದೇ ಗಾದಾ? ಜೆಪ್ಪವಮ್ಮಾ! ಮಾಯಮ್ಮಾ! ಸದಾ ನೀ
ಜಪಮೇ ಗತಿಯನಿ ನಮ್ಮಿತಿನಮ್ಮಾ || ಪಾಲಿಂಪವಮ್ಮಾ||

ವ್ಯಾಖ್ಯಾನ

ಮುಖಾರಿ ರಾಗದಲ್ಲಿ ಶ್ರೀ ಶಾಸ್ತ್ರಿಗಳ ಏಕೈಕವಾದ ಈ ಕೃತಿ 2 ಚರಣಗಳುಳ್ಳ ವಿಳಂಬ ಕಾಲದ್ದು. ಸಾಹಿತ್ಯ ಭಾವವನ್ನು ನೋಡೋಣ.

ಪಾಲಿಸಮ್ಮಾ, ಪರಮ ಪಾವನಿ, ಭವಾನಿ!

1. ನಿನಗೆ ಸಾಟಿಯಾದ ದೈವ ನಾ ಕಾಣೆ, ನಿಖಿಲ ಲೋಕಜನನಿ, ನಮ್ಮಮ್ಮಾ! ಮಧುರವಾಣಿ, ನಿನ್ನ ದಾಸನಾದ ನನ್ನನ್ನು ಕಾಪಾಡಲು ಇಷ್ಟು ವಿಳಂಬವೇಕೆ ತಾಯಿ? ಮಾತೆಯನ್ನು ಈ ಚರಣದಲ್ಲಿ ಶಾಸ್ತ್ರಿಗಳು 'ಸ್ವಯಂಭುನಾಥ ತರುಣಿ' ಎಂದು ವರ್ಣಿಸುವುದೊಂದು ವಿಶೇಷ.
2. ನನ್ನ ತಾಪತ್ರಯವನ್ನು ನಿವಾರಿಸಿ, ಪ್ರೇಮ ತೋರಿ, ನಿಧಾನವಾಗಿ ಮಾತನಾಡಲು ವೇಳೆ ಇದೇ ಅಲ್ಲವೇ ಹೇಳಮ್ಮಾ ನಮ್ಮಮ್ಮಾ ಸದಾ ನಿನ್ನ ಜಪವೇ ಗತಿಯೆಂದು ನಂಬಿದ್ದೇನಮ್ಮಾ!

25. 'ಕರುಣಾನಿಧಿ ಇಲಲೋ ನೀವನುಚುನು' -

ರಾಗ : ತೋಡಿ **ತಾಳ : ಆದಿ (ತ್ರಿಶ್ರಗತಿ)**

ಸಾಹಿತ್ಯದ ಮೂಲ ಪಾಠ

|| ಪ. || ಕರುಣಾನಿಧಿ ನೀವನುಚುನು ಕನ್ನತಲ್ಲಿ ವೇಡುಕೊಂಟಿನಿ, ನೀ ಶರಣಂಟಿನಿ ||ಕರುಣಾನಿಧಿ||

||ಅ.ಪ.|| ಅರುಣಾಂಬುದನಿಭ ಚರಣಾ! ಸುರಮುನಿ ಶರಣಾನಂತೇಷ್ಟದಾಯಕಿ
ಶ್ರೀ ಬೃಹನ್ನಾಯಕಿ ||ಕರುಣಾನಿಧಿ||

||ಚ.1.|| ಗಾನವಿನೋದಿನಿ, ನೀ ಮಹಿಮಾತಿಶಯಂಬುಲ ಎಂತಟಿವಾಡನು
ತರಮಾ ? ಬ್ರೋವ ತಾಮಸುಮಿಟು ಜೇಸಿತೆ ಅರನಿಮಿಷಮ್ಮೈನ
ತಾಳಜಾಲನಮ್ಮಾ, ಮಾಯಮ್ಮಾ ! ||ಕರುಣಾನಿಧಿ||

||ಚ.2.|| ಪಾಮರ ಪಾಲಿನಿ, ಪಾವನಿ ನೀವುಗದಾ ? ನೀ ಪದಮೇ ಗತಿಯನಿ
ನಮ್ಮಿನಾನು ಕೋಮಳ ಮೃದುಭಾಷಿಣೀ, ಘನಸದೃಶವೇಣೀ!
ಶ್ಯಾಮಕೃಷ್ಣ ಸೋದರೀ ಗೋಕರ್ಣೇಶ್ವರುನಿರಾಣಿ ||ಕರುಣಾನಿಧಿ||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳು ರಚಿಸಿರುವ ಆದಿತಾಳದ ತ್ರಿಶ್ರಗತಿಯಲ್ಲಿನ 2 ಕೃತಿಗಳಲ್ಲಿ ಇದು ಒಂದು.

ಎರಡು ಚರಣಗಳುಳ್ಳ ಈ ಕೃತಿಯ ಸಾಹಿತ್ಯ ಭಾವ ಹೀಗಿದೆ :

ಹೇ ಕರುಣಾನಿಧಿ ತಾಯೆ, ಹೆತ್ತ ತಾಯಿ ಇಳೆಯಲ್ಲಿ ನೀನೇ ಎಂದು ಶರಣಾದೆ, ಬೇಡಿಕೊಂಡೆ. ಅರುಣವರ್ಣದ ಪದಯುಗಳೇ, ಶ್ರೀ ಬೃಹನ್ನಾಯಕಿ, ನಿನಗೇ ಶರಣಾದ ದೇವತೆಗಳಿಗೂ ಮುನಿ ಬೃಂದಕ್ಕೂ ಇಷ್ಟ್ಯಾರ್ಥಗಳನ್ನೀಯುವಳು ನೀನು.

1. ಗಾನವಿನೋದಿನಿ, ನಿನ್ನ ಮಹಿಮಾತಿಶಯಗಳನ್ನು ಎಷ್ಟರವರಿಗಾದರೂ ವರ್ಣಿಸಲು ಸಾಧ್ಯವೇ? (ಎಂಟಿವಾಡನು ವರ್ಣಿಂಪ ತರಮಾ ಎಂಬ ಮಾತಿನಲ್ಲಿ, ಶಾಸ್ತ್ರಿಗಳ ಕೃತಿಗಳ ಆಕರಗಳಲ್ಲಿ 'ವರ್ಣಿಂಪ' ಎಂಬ ಪದ ಬಿಟ್ಟುಹೋಗಿದೆ). ಕಾಪಾಡಲು ಹೀಗೆ ತಾಮಸ ಮಾಡಿದರೆ ಅರೆ ನಿಮಿಷದಷ್ಟೂ ತಾಳಲಾರೆನು. ನಾನು ನಿನ್ನ ಮಗುವಮ್ಮಾ! ಗಾನವಿನೋದಿನಿ!

2. ಪಾಮರ ಪಾಲಿನಿ, ಪಾವನಮೂರ್ತಿ ನೀನಲ್ಲವೇ? ನಿನ್ನ ಪಾದವೇ ಗತಿಯೆಂದು ನಂಬಿದೆ ದೇವಿ, ಕೋಮಲ ಮೃದುಭಾಷಿಣಿ, ಮೋಡ ಕಾಂತಿಯ ವೇಣಿ. ಶ್ಯಾಮಕೃಷ್ಣ ಸೋದರಿ,- ಹೀಗೆಂದು ಸ್ತುತಿಸಿ, ಗೋಕರ್ಣೇಶ್ವರುನಿರಾಣಿ ಎಂದು ವಿಶೇಷವಾಗಿ ಸಂಬೋಧಿಸಿದಾಗ, ಶ್ರೀ ಶಾಸ್ತ್ರಿಗಳು ಗೋಕರ್ಣ ಕ್ಷೇತ್ರ ದರ್ಶನಕ್ಕಾಗಿ ಹೋಗಿದ್ದಿರಬಹುದೆನಿಸುತ್ತದೆ.

ತೋಡಿರಾಗದಲ್ಲಿ ಲಭ್ಯವಿರುವ ಶಾಸ್ತ್ರಿಗಳ 4 ಕೃತಿಗಳಲ್ಲಿ ಇದು ಒಂದು.

26. 'ನಿನ್ನೇ ನಮ್ಮಿನಾನು' -

ರಾಗ : ತೋಡಿ **ತಾಳ : ಮಿಶ್ರಛಾಪು**

ಸಾಹಿತ್ಯದ ಮೂಲ ಪಾಠ

||ಪ.|| ನಿನ್ನೇ ನಮ್ಮಿನಾನು ನಾ ವಿನ್ನಪಮುವಿನಿ ನನ್ನು ಬ್ರೋವುಮು
|| ನಿನ್ನೇ ನಮ್ಮಿನಾನು||

||ಅ.ಪ.|| ಕನ್ನತಲ್ಲಿ ಗಾದಾ ಬಿಡ್ಡಯನಿ ಕನಿಕರಮಿಂತೈನ ಲೇದಾ ಪನ್ನಗಧರುನಿ
ರಾಣಿ ಶುಕಪಾಣಿ ಕಾಮಾಕ್ಷಿ ಕಲ್ಯಾಣಿ || ನಿನ್ನೇ ನಮ್ಮಿನಾನು||

||ಚ.1.|| ವೇಗಮೇ ವಚ್ಚಿ ನಾದು ಕೋರ್ಕಲೀವೇ ಪರಾಙ್ಮುಖಮೇಲೇ
ಭೋಗೀಂದ್ರ ಸನ್ನುತ ಪೂತಚರಿತಾ, ಪುರುಹೂತ ಪೂಜಿತಾ ಪರದೇವತೇ
||ನಿನ್ನೇ ನಮ್ಮಿನಾನು||

||ಚ.2.|| ಧ್ಯಾನಮೇ ವಿನಾಗಾ ಮಂತ್ರತಂತ್ರಮುಲೇಮೀ ಎರುಗನೇ
ಗಾನವಿನೋದಿನೀ ನೀದುಸಾಟಿ ಜಗಾನ ಕಾನನೇ ಬಂಗಾರು ಬೊಮ್ಮಾ!
||ನಿನ್ನೇ ನಮ್ಮಿನಾನು||

||ಚ.3.|| ಶ್ಯಾಮಕೃಷ್ಣ ಸೋದರೀ, ಭಕ್ತ ಕಾಮಿತಾರ್ಥ ಫಲದಾಯಕೀ
ಕಾಮಾಕ್ಷೀ, ಕಂಜದಳಾಯತಾಕ್ಷೀ, ಕಾರುಣ್ಯ ಮೂರ್ತಿ ಗದಾ?
ನೀವೇ ಸಂಪದ. ||ನಿನ್ನೇ ನಮ್ಮಿನಾನು||

|| ಸ್ವರ ಸಾಹಿತ್ಯ || ನೀ ಮಹಿಮ ವಿನಿ ಮದಿಲೋ ನೀವೇ ಗತಿಯನುಚು ಕೋರಿತಿ
ಕಮಲಭವ ದನುಜರಿಪುನುತ ಪದಕಮಲಯುಗ ಸಮಯಮಿದೇ
ಬ್ರೋವುಮು ||ನಿನ್ನೇನಮ್ಮಿನಾನು||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳ ರಚನೆಯಲ್ಲಿ ತೋಡಿ ರಾಗದಲ್ಲಿ ಲಭ್ಯವಿರುವ 4 ರಚನೆಗಳಲ್ಲಿ ಅವರ 'ರಾವೇ ಹಿಮಗಿರಿ ಕುಮಾರಿ' ಸುಂದರ ಸ್ವರಜತಿಯೂ, ನಿನ್ನೇ ನಮ್ಮಿನಾನು ಕೃತಿಯೂ ಅತ್ಯಂತ ವಿದ್ವಾಂಸ ಪ್ರಿಯವಾದ ಮತ್ತು ಹೆಚ್ಚು ಚಲಾವಣೆಯಲ್ಲಿರುವ ರಚನೆಗಳು.

ಇದು 3 ಚರಣಗಳನ್ನೂ ಸ್ವರ ಸಾಹಿತ್ಯವನ್ನೂ ಹೊಂದಿದೆ. ಈ ಕೃತಿಯ ಭಾವ ಹೀಗಿದೆ:

ಕಾಮಾಕ್ಷಿ, ಕಲ್ಯಾಣಿ, ಪನ್ನಗಾಭರಣನಾದ ಶಿವನ ರಾಣಿಯೇ, ಶುಕಪಾಣಿಯಾದ ಮೀನಾಕ್ಷಿಯೇ, ಸದಾ ನಿನ್ನನ್ನೇ ನಂಬಿದ್ದೇನೆ. ನನ್ನ ಬಿನ್ನಹವನ್ನಾಲಿಸಿ ನನ್ನನ್ನು ಸದಾ ರಕ್ಷಿಸು. ಹೆತ್ತ ತಾಯಿ ನೀನಲ್ಲವೇ ಅಂಬೆ, ನಿನ್ನ ಮಗುವೆಂಬ ಕನಿಕರ ಒಂದಿಷ್ಟಾದರೂ ನಿನಗಿಲ್ಲವೇ?

1. ಬೇಗ ಬಂದು ನನ್ನ ಇಷ್ಟಾರ್ಥಗಳನ್ನು ಕೊಡು. ಆದಿಶೇಷನೇ ಶ್ಲಾಘಿಸಿದ

ಪಾವನಚರಿತಳೇ, ಇಂದ್ರನಿಂದ ಪೂಜಿಸಲ್ಪಟ್ಟವಳೇ (ಪುರುಹೂತ ಪೂಜಿತಾ) ಪರದೇವತೆಯೇ!

2. ತಾಯಿ, ಧ್ಯಾನವೊಂದರ ವಿನಾ ಮಂತ್ರ ತಂತ್ರಗಳನ್ನರಿಯೆ, ಗಾನವಿನೋದಿನಿ, ನಿನ್ನಂತೆ ಲೋಕದಲ್ಲೆಲ್ಲೂ ಕಾಣೆನೇ ಬಂಗಾರು ಕಾಮಾಕ್ಷಿ!

3. ಶ್ಯಾಮಕೃಷ್ಣ ಸೋದರಿ, ಭಕ್ತರ ಇಷ್ಟಾರ್ಥ ಫಲಪ್ರದಾಯಿನಿ, ಕಾಮಾಕ್ಷಿ, ಪದ್ಮದಳನೇತ್ರೇ, ಕಾರುಣ್ಯವೇ ಮೂರ್ತಿವೆತ್ತ ನೀನಲ್ಲವೇ, ನೀನೇ ನನ್ನ ಐಶ್ವರ್ಯ.

ಸ್ವರ ಸಾಹಿತ್ಯ : ನಿನ್ನ ಮಹಿಮೆಯನ್ನು ಕೇಳಿ ಮತಿಯಲ್ಲಿ ನೀನೇ ಗತಿಯೆಂದು ಬೇಡಿದೆ. ಬ್ರಹ್ಮ, ವಿಷ್ಣುಗಳು ಪೂಜಿಸಿದ ಪದ್ಮಚರಣಯುಗಳೆ, ಇದು ಸಮಯ, ಕಾಯೆ ತಾಯೆ!

27. 'ಶ್ರೀ ಕಾಮಾಕ್ಷಿ'

ರಾಗ : ಕಲ್ಯಾಣಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ಶ್ರೀ ಕಾಮಾಕ್ಷೀ ಕಾವವೇ ನನ್ನು ಕರುಣಾಕಟಾಕ್ಷಿ |
ಶ್ರೀ ಕಾಂತಿಮತೀ ಶ್ರೀಕಾಂಚೀಪುರವಾಸಿನಿ || ಶ್ರೀ ಕಾಮಾಕ್ಷಿ||

||ಅ.ಪ.|| ಏಕಾಮ್ರೇಶ್ವರಿ ನೀಕು ಏಲಾಗು ದಯವಚ್ಚುನೋ ಲೋಕುಲು
ಕೋರಿನದೈವಮು ನೀವೇಗಾದಾ? || ಶ್ರೀ ಕಾಮಾಕ್ಷಿ||

||ಚ.1.|| ಕೋರಿವಚ್ಚಿನ ಭಕ್ತ ಜನುಲಕು ಕೋಮಳಾಂಗೀ ನೀವೇ ಸಾಮ್ರಾಜ್ಯಮು
ಕಾಮಾಕ್ಷಮ್ಮಾ ನಿನ್ನೇ ವೇಡಿನ ಬಿಡ್ಡನು ಕಾಪಾಡಮ್ಮಾ
ಕರುಣಜೂಡವಮ್ಮಾ !
ಸಾರಸದಳನೇತ್ರಿ ಕಾಮಪಾಲಿನೀ ಸೋಮಶೇಖರುನಿ ರಾಣಿ ಪುರಾಣೀ
ಶ್ಯಾಮಳಾಂಬಿಕೇ ಕಾಳಿಕೇ ಕಲೇ ಸಾಮಗಾನಮೋದಿನೀ ಜನನೀ
|| ಶ್ರೀ ಕಾಮಾಕ್ಷಿ||

||ಚ.2.|| ನೀರಜಲೋಚನಾ ಸ್ಥಿರಮನಿ ಭಕ್ತಿತೋ ನಿನ್ನೇ ಶರಣಂಟಿನಿ !
ದಾಸುಡುನೇನು !

ನೀ ಸನ್ನಿಧಿ ಜೇರಿನ ನಾಪೈ ನಿರೀಕ್ಷಣಮು ಚೇಯ ತಗುನಾ?
ನೀ ನಾಮಧ್ಯಾನಮೇ ನಿಯತಿ. ವೇರೆ ಜಪತಪಮುಲೆರುಗನೇ
ಮಾಯಮ್ಮಾ! ನೀ ಸಾಟೆವರು ಶ್ಯಾಮಳೇ ಶಿವೇ! ಶ್ಯಾಮಕೃಷ್ಣ
ಪರಿಪಾಲಿತ ಜನನೀ || ಶ್ರೀ ಕಾಮಾಕ್ಷಿ||

|| ಸ್ವರ ಸಾಹಿತ್ಯ || ನಾ ಮನವಿ ವಿನುಮಿಕ ಗಿರಿತನಯಾ ! ಮುದಮುತೋ
ವಚ್ಚಿಕೋರಿತಿ ನಾ ವೆತಲನು ದೀರ್ಚವೇ ಮಾಕಭಯದಾನಮೀಯವೇ
ತಾಮಸಮು ಸೇಯಕನೆ || ಶ್ರೀ ಕಾಮಾಕ್ಷಿ||

ವ್ಯಾಖ್ಯಾನ

ಶ್ರೀ ಕಾಮಾಕ್ಷಿ, ಕರುಣಾಕಟಾಕ್ಷಿ, ಶ್ರೀ ಕಾಂತಿಮತಿ, ಕಾಂಚೀಪುರ ನಿವಾಸಿನಿ ಎನ್ನ ಕಾಯೆ ತಾಯೆ!

ಹೇ ಏಕಾಮ್ರೇಶ್ವರಿ ನಿನಗೆ ದಯೆ ಬರುವುದೆಂತೋ! ಲೋಕದ ಜನರೆಲ್ಲ ಬೇಡಿದ ದೇವತೆ ನೀನೇ ಅಲ್ಲವೇ? ಹೀಗಿರುವಾಗ ಒಬ್ಬಂಟಿಗ ನಾನೆಂಬಂತೆ ನನ್ನೊಬ್ಬನನ್ನು ಕಾಯಲು ಭಾರವಾಯಿತೇ?

ಸ್ವರ ಸಾಹಿತ್ಯ : ಹೇ ಗಿರಿಜೇ, ಪ್ರೀತಿಯಿಂದ ಬಂದು ಕೋರಿದೆ. ನನ್ನ ವ್ಯಥೆಗಳನ್ನು ಪರಿಹರಿಸು, ನಮಗಭಯ ನೀಡು, ವಿಳಂಬ ಮಾಡಬೇಡ ತಾಯೆ! ಎರಡು ಚರಣಗಳ ಕೃತಿಯಿದು.

1. ಹೇ ಕೋಮಲಾಂಗಿ ಕಾಮಾಕ್ಷಮ್ಮಾ, ಬೇಡಿಬಂದ ಭಕ್ತ ಜನರಿಗೆ ನೀನೇ ಮಹಾ ಸಾಮ್ರಾಜ್ಯ. ನಿನ್ನೇ ಬೇಡಿದ ಮಗು ನಾನಮ್ಮಾ, ಕಾಪಾಡಮ್ಮಾ, ಕರುಣೆ ತೋರಮ್ಮ ! ಕಮಲದಳನೇತ್ರಿ, ಕಾಳಿಕಾದೇವಿ, ಕಲಾರೂಪಿಣಿ, ಸಾಮಗಾನ ವಿನೋದಿನಿ, ಜನನೀ, ಪುರಾಣೀ.

2. ಗಮನಿಸಿ, ಹಿಂದಿನ ಚರಣದಲ್ಲಿ 'ಸಾರಸದಳನೇತ್ರಿ' ಎಂದವರು ಈ ಚರಣದಲ್ಲೂ 'ನೀರಜಲೋಚನಾ' ಎಂದು ಪ್ರಾರಂಭಿಸುತ್ತಾರೆ. ನನಗೆ ನೀನೇ ಸ್ಥಿರವೆಂದು ನಂಬಿ ಭಕ್ತಿಯಿಂದ ನಿನ್ನೇ ಶರಣಾದೆ. ನಿನ್ನ ದಾಸ ನಾನೆಂದರಿತರೂ, ನಿನ್ನ ಸನ್ನಿಧಿಯನ್ನು ಸೇರಿದ ನನ್ನ ಮೇಲೆ ದೃಷ್ಟಿ ಬೀರದಿರುವುದು ಸರಿಯೇ ತಾಯೆ? ನಿನ್ನ ನಾಮಧ್ಯಾನವೇ ನನ್ನ ನೇಮ.

ಜಪತಪಗಳನ್ನರಿಯೆನೇ ನಮ್ಮಮ್ಮಾ ! ನಿನಗೆ ಸಾಟಿಯುಂಟೆ ಶ್ಯಾಮಲೇ, ಶಿವೇ, ಶ್ಯಾಮಕೃಷ್ಣನನ್ನು ಪಾಲಿಸಿದ ಜನನಿ, ನಿನಗೆ ದಯಬರುವುದೆಂತೋ!

28. 'ಶಂಕರಿ ಶಂಕರು ಚಂದ್ರಮುಖಿ', -

ರಾಗ : ಸಾವೇರಿ **ತಾಳ : ಆದಿ-ತ್ರಿಶ್ರಗತಿ**

ಸಾಹಿತ್ಯದ ಮೂಲ ಪಾಠ

||ಪ.|| ಶಂಕರಿ ಶಂಕುರು ಚಂದ್ರಮುಖಿ, ಅಖಿಲಾಂಡೇಶ್ವರಿ
ಶಾಂಭವಿ ಸರಸಿಜಭವ ವಂದಿತೇ ಗೌರೀ || ಶಂಕರಿ ||

||ಅ.ಪ.|| ಸಂಕಟಹಾರಿಣಿ ರಿಪುವಿದಾರಿಣಿ ಕಲ್ಯಾಣಿ | ಸದಾ ನತವರದಾಯಿಕೇ,
ಜಗಜ್ಜನನಿ || ಶಂಕರಿ ||

||ಚ.1.|| ಜಂಬುಪತಿವಿಲಾಸಿನಿ ಜಗದವನೋಲ್ಲಾಸಿನಿ |
ಕಂಬುಕಂಧರೇ, ಭವಾನಿ, ಕಪಾಲಧಾರಿಣಿ, ಶೂಲಿನಿ || ಶಂಕರಿ ||

||ಚ.2.|| ಅಂಗಜರಿಪು ತೋಷಿಣಿ, ಅಖಿಲ ಭುವನ ಪೋಷಿಣಿ |
ಮಂಗಳಪ್ರದೇ, ಮೃಡಾನಿ, ಮರಾಳಸನ್ನಿಭ ಗಮನಿ || ಶಂಕರಿ ||

||ಚ.3.|| ಶ್ಯಾಮಕೃಷ್ಣ ಸೋದರಿ ಶ್ಯಾಮಲೇ, ಶಾತೋದರಿ |
ಸಾಮಗಾನಲೋಲೇ, ಬಾಲೆ, ಸದಾರ್ತಿಭಂಜನ ಶೀಲೇ || ಶಂಕರಿ ||

ವ್ಯಾಖ್ಯಾನ

ತ್ರಿಶ್ರಗತಿಯಲ್ಲಿನ ಶ್ರೀ ಶಾಸ್ತ್ರಿಗಳ ಕೃತಿಗಳಲ್ಲಿ ಇದು ಹೆಚ್ಚು ಪ್ರಸಿದ್ಧವಾದುದು. ಸಾವೇರಿ ರಾಗಕ್ಕಾಗಿಯೂ ಪ್ರಸಿದ್ಧವೇ ಆದುದು. ಸಂಸ್ಕೃತ ಭಾಷೆಯಲ್ಲಿ ರಚಿತವಾದುದು.

ಹೇ ಶಂಕರಿ, ಶಂ-ಕುರು, ಅಂದರೆ, ಮಂಗಳವನ್ನು ಮಾಡು, ಹೇ ಇಂದು ವದನೆಯೇ, ಅಖಿಲಾಂಡೇಶ್ವರಿ, ಶಾಂಭವಿ, ಬ್ರಹ್ಮನುತಳೇ, ಗೌರಿ, ಅಂಬೆ, ಶಂ-ಕುರು.

ಸಂಕಟಹಾರಿಣಿ, ಶತ್ರುಮರ್ದನ ಮಾಡುವವಳು, ಕಲ್ಯಾಣಿ, ಎಂದೂ ಆಶ್ರಿತರಿಗೆ ಫಲದಾಯಕಿ, ಹರನ ಪತ್ನಿ. ಜಗನ್ಮಾತೆ- ಹೇ ಅಂಬ ಶಂ-ಕುರು. ಎಂದಿನಂತೆ, ಇದು 3 ಚರಣಗಳನ್ನುಳ್ಳದ್ದು.

1. ಜಂಬೂಪತಿಯ ಜತೆ ವಿಲಾಸವಾಡುವವಳು. ಲೋಕ ರಕ್ಷಣವನ್ನು ಉಲ್ಲಾಸದಿಂದ ಮಾಡುವವಳು, ಶಂಖ ಸೌಂದರ್ಯದ ಕತ್ತುಳ್ಳವಳು. ಭವಾನಿ, ಕಾಳಿಕಾ ರೂಪದಲ್ಲಿ ಕಪಾಲವನ್ನು ಹಿಡಿದವಳು, ಶೂಲಿನಿ.

2. ಸ್ಮರಹರ (ಅಂಗಜರಿಪು)ಶಿವನನ್ನು ಸಂತೋಷಪಡಿಸುವವಳು, ಲೋಕಗಳನ್ನೆಲ್ಲ ಪೋಷಿಸುವವಳು. ಮಂಗಳ ಪ್ರದಳು, ಮೃಡಾನಿ, ಹಂಸದಂತೆ ಬೆಳಗುವ ನಡೆಯುಳ್ಳವಳು (ಮರಾಳ ಸನ್ನಿಭಗಮನಿ).

3. ಶ್ಯಾಮಕೃಷ್ಣ ಸೋದರಿ, ಶ್ಯಾಮಲೇ, ಶಾತೋದರಿ. (ಸಣ್ಣನೆ ನಡುವುಳ್ಳವಳು), ಸಾಮಗಾನಲೋಲೆ, ಬಾಲೆ, ಸದಾ ಕಷ್ಟ ನಿವಾರಣ ನಿರತಳಾದವಳು ಭಕ್ತರಿಗೆ.

29. 'ಹಿಮಾದ್ರಿಸುತೇ ಪಾಹಿಮಾಂ' -

ರಾಗ : ಕಲ್ಯಾಣಿ **ತಾಳ : ಚ. ರೂಪಕ**

ಸಾಹಿತ್ಯದ ಮೂಲ ಪಾಠ

||ಪ.|| ಹಿಮಾದ್ರಿಸುತೇ ಪಾಹಿ ಮಾಂ ವರದೇ ಪರದೇವತೇ

||ಅ.ಪ.||ಸುಮೇರು ಮಧ್ಯವಾಸಿನಿ ಶ್ರೀ ಕಾಮಾಕ್ಷಿ

||ಚ.1.|| ಹೇಮಗಾತ್ರಿ ಪಂಕಜನೇತ್ರಿ ಮತಂಗಾತ್ಮಜೇ, ಸರೋಜಭವಹರೀಶ
ಸುರಮುನೀಂದ್ರನುತೇ ||ಹಿಮಾದ್ರಿಸುತೇ||

||ಚ.2.|| ಅಂಬುಜಾರಿನಿಭವದನೇ ಮೌಕ್ತಿಕಮಣಿಹಾರ ಶೋಭಮಾನಗಳೇ,
ಭಕ್ತಕಲ್ಪಲತೇ ||ಹಿಮಾದ್ರಿಸುತೇ||

||ಚ.3.|| ಶ್ಯಾಮಕೃಷ್ಣ ಸೋದರಿ ಗೌರಿ, ಪರಮೇಶ್ವರಿ ಗಿರಿಜೇ, ಅಲನೀಲವೇಣಿ,
ಶ್ರೀ ಲಲಿತೇ ||ಹಿಮಾದ್ರಿಸುತೇ||

ಈ ಕೃತಿಯ ಗೇಯಕ್ಕೇ, ಅದೇ ಹಂದರದ ತೆಲುಗಿನ ಸಾಹಿತ್ಯವನ್ನು ಶ್ರೀ ಶಾಸ್ತ್ರಿಗಳು ಹೀಗೆ ರಚಿಸಿದ್ದಾರೆ:

29A. 'ಬಿರಾನ ವರಾಲಿಚ್ಚಿ' -

ರಾಗ : ಕಲ್ಯಾಣಿ **ತಾಳ : ಚ. ರೂಪಕ**

ಬಿರಾನ ವರಾಲಿಚ್ಚಿ ಬ್ರೋವುಮು ನಿನ್ನು ನೆರನಮ್ಮಿತಿ|
ಪುರಾರಿಮನೋಹಾರಿಣಿ- ಶ್ರೀ ಕಾಮಾಕ್ಷಿ ||

1. ತಾಮಸಂಬುಸೇಯಕ ನೀವು ಕರುಣಾನಿಧಿಗಾದಾ|
ಪರಾಙ್ಮುಖಮಿಕನೇಲ ವಿನು ಸರೋಜಮುಖಿ ||

2. ಕಾಮಿತಾರ್ಥ ಫಲದಾಯಕಿ ದೇವಿ ನತಕಲ್ಪಲತಿಕಾ |
ಪುರಾಣಿ, ಮಧುರವಾಣಿ, ಶಿವುನಿಕಿ ರಾಣಿ ||

3. ಶ್ಯಾಮಕೃಷ್ಣ ಸೋದರಿ ಗೌರಿ, ಪರಮೇಶ್ವರಿ ಗಿರಿಜಾ |
ಅನಾಥ ರಕ್ಷಣಂಬು ಸಲುಪಗರಾವೇ || ಬಿರಾನ ||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳ, ಹೆಚ್ಚು ಪ್ರಸಿದ್ಧಿಗೆ ಬಂದಿರುವ, ಕೃತಿಗಳಲ್ಲೊಂದು ಈ ಕೃತಿ. ಒಂದೇ ಗೇಯಕ್ಕೆ ಎರಡು ಸಾಹಿತ್ಯಗಳನ್ನು ರಚಿಸುವುದು ಬಹಳ ಅಪರೂಪದ ಸಂಗತಿ. ದಾಸರ ಪದಗಳಲ್ಲಿ ಈ ಸಂಗತಿಯನ್ನು ಕಾಣುತ್ತೇವೆ - ಕಲ್ಲು ಸಕ್ಕರೆ ಕೊಳ್ಳಿರೋ, ಇನ್ನೂ ದಯಬಾರದೇ, ನಂಬಿಕೆಟ್ಟವರಿಲ್ಲವೋ ಎಲ್ಲವನ್ನೂ ಒಂದೇ ಗೇಯದಲ್ಲಿ ಹಾಡುವಂತೆ. ಹಾಡುಗಳ ಮೂಲ ಗೇಯವು ದಾಸಸಾಹಿತ್ಯದ ಗಾನಪರಂಪರೆಯಲ್ಲಿ ಲಭ್ಯವಿದ್ದರೆ ಮುಂದುವರಿಯುತ್ತದೆ. ಹಾಗಿಲ್ಲದಿದ್ದರೆ ನಂತರದವರಿಂದ ಗೇಯ ಅಥವಾ ಮಟ್ಟು ಬೇರೆಯಾಗುತ್ತದೆ-ಮೂಲಗೇಯ ಗಾನ ಪರಂಪರೆಯಲ್ಲೂ ಇಲ್ಲದೆ ಬರಹದಲ್ಲಿ ಹಾಡಿನ ವರ್ಣಮಟ್ಟು ಎಲ್ಲೂ ದಾಖಲಾಗಿಲ್ಲದಾಗ. ಸಂಗೀತ ತ್ರಿಮೂರ್ತಿಗಳ ಕಾಲಕ್ಕೆ ಸ್ವಲ್ಪ ಹಿಂದೆಯೇ ಸ್ವರಲಿಪಿ ಅಭ್ಯಾಸಕ್ಕೆ ಬಂದಿದ್ದ ಹಿನ್ನೆಲೆಯಲ್ಲಿ ಒಂದೇ ಗೇಯಕ್ಕೆ ಎರಡು ಸಾಹಿತ್ಯಗಳನ್ನು ಒಬ್ಬರೇ ವಾಗ್ಗೇಯಕಾರರು ರಚಿಸಿರುವುದು ಅಪರೂಪದ ಸಂಗತಿಯೇ. ಶ್ರೀ ಶಾಸ್ತ್ರಿಗಳು ಹೀಗೆ ಕಲ್ಯಾಣಿ ರಾಗದ ಒಂದೇ ಗೇಯಕ್ಕೆ ಸಂಸ್ಕೃತದಲ್ಲಿ 'ಹಿಮಾದ್ರಿಸುತೇ ಪಾಹಿಮಾಂ' ಸಾಹಿತ್ಯವನ್ನೂ ತೆಲುಗಿನಲ್ಲಿ 'ಬಿರಾನವರಾಲಿಚ್ಚಿ ಬ್ರೋವುಮು' ಎಂಬ ಪೂರ್ಣ ಪ್ರತ್ಯೇಕ ಸಾಹಿತ್ಯವನ್ನೂ ರಚಿಸಿರುವುದು

ಗಮನಾರ್ಹ. ಈ ಗೇಯದಲ್ಲಿ 'ಬಿರಾನ ವರಾಲಿಚ್ಚಿಬ್ರೋವುಮು' ಹೆಚ್ಚು ಚಲಾವಣೆಯಲ್ಲಿದ್ದುದು. ಇತ್ತೀಚಿನ ದಶಕಗಳಲ್ಲಿ 'ಹಿಮಾದ್ರಿಸುತೇ' ಕೃತಿ ಸಾಹಿತ್ಯವೇ ಹೆಚ್ಚು ಚಲಾವಣೆಯಲ್ಲಿರುವುದು.

ಈ ಕೃತಿಯ ತಾಳದ ಹಂದರದ ಬಗ್ಗೆ ಒಂದು ಜಿಜ್ಞಾಸೆಯ ಆವಶ್ಯಕತೆ ಇದೆ. ಇದು ರೂಪಕ ತಾಳದ (ತ್ರಿಶ್ರ ಏಕದ) ಕೃತಿಯೇ ಮೂಲ ಪರಿಕಲ್ಪನೆಯಲ್ಲಿ. ಈ ಹಂದರದ (Format)ನ ನಾಲ್ಕು ಆವರ್ತಗಳ ವಸ್ತು ತ್ರಿಶ್ರಗತಿಯಲ್ಲಿ ಆದಿತಾಳದ ಒಂದಾವರ್ತಕ್ಕೆ ಹೊಂದಿಕೊಳ್ಳುತ್ತದೆ ಎಂಬ 'ಅನುಭವಿಗಳಿಗೆ ಮೇಲೇ ಕಾಣುವ' ಸಂಗತಿಯನ್ನು ವೇದಿಕೆಯಿಂದ ಯಾವಾಗಲೋ ಯಾರೋ ಪ್ರಸಿದ್ಧರು ಪ್ರಯೋಗಮಾಡಿ ನವೀನತೆಯ ಪ್ರದರ್ಶನದಲ್ಲಿ ಯಶಸ್ವಿಯಾಗಿ, ಪ್ರಸಿದ್ಧರು ಮಾಡಿದುದು ಇತರರಿಗೆ ಎಂದೂ ಪಾವನ, ಅನುಕರಣೀಯ ಎಂಬ ನ್ಯಾಯದೊಂದಿಗೆ, ತರ್ಕದೊಂದಿಗೆ ಅನೇಕರು ತ್ರಿಶ್ರಗತಿಯ ಆದಿತಾಳದಲ್ಲಿ ಹಾಡುವುದು ರೂಢಿಯಲ್ಲಿ ಬಂದು ನಿಂತಿರುವ ಸಂಗತಿ. ಆದರೆ, ಒಂದು ವಾಗ್ಗೇಯ ವಸ್ತುವಿನ ರಾಗರೂಪವಾಗಲಿ, ರಾಗನಾಮವಾಗಲಿ, ತಾಳದ ಹಂದರವಾಗಲಿ, ತಾಳನಾಮವಾಗಲಿ ಆ ವಾಗ್ಗೇಯ ವಸ್ತುವಿನ ವಾಗ್ಗೇಯಕಾರರ ಪರಿಕಲ್ಪನೆ, ಉದ್ದೇಶಗಳೇನಿದ್ದುವೋ ಅವನ್ನು ಆ ವಾಗ್ಗೇಯ ವಸ್ತುವಿನಲ್ಲಿ ಸಮರ್ಪಿಸಬೇಕಾದುದೇ ಆ ವಾಗ್ಗೇಯಕಾರರಿಗೆ ನಾವು ಸಲ್ಲಿಸಬೇಕಾದ ಕರ್ತವ್ಯ, ಧರ್ಮ ಮತ್ತು ಹೊಣೆ ಅಲ್ಲವೇ? ಯಾವ ಮಾರ್ಗ ತನಗೆ ಹೆಚ್ಚು ಜನಪ್ರಿಯತೆಯನ್ನು ತರುತ್ತದೋ ಅದು ಮೂಲ ಪರಿಕಲ್ಪನೆಯಲ್ಲದಿದ್ದರೂ ಆ ಮಾರ್ಗದಲ್ಲೇ ಕಲೆಗಾರ ಸಾಗುವುದು ಸರಿಯೇ? ಎಂಬುದು ಚಿಂತ್ಯವಾದ ವಿಷಯ. ಈ ಎರಡೂ ಸಾಹಿತ್ಯಗಳ ಭಾವಗಳನ್ನು ಈಗ ನೋಡೋಣ : ಮೊದಲು ತೆಲುಗು ಸಾಹಿತ್ಯ:

ಬಿರಾನ ವರಾಲಿಚ್ಚಿ ಬ್ರೋವುಮು ನೆರನಮ್ಮಿತಿ : ಬೇಗನೆ ವರಗಳನ್ನಿತ್ತು ಕಾಪಾಡು, ಗಾಢವಾಗಿ ನಂಬಿದೆ.

ಪುರಾರಿಯ -ಅಂದರೆ ಶಿವನ ಮನೋಹಾರಿಣಿ, ಶ್ರೀ ಕಾಮಾಕ್ಷಿ

ಈ ಕೃತಿಯಲ್ಲಿ 3 ಚರಣಗಳಿವೆ.

1. ವಿಳಂಬ ಮಾಡದೆ, ನೀನು ಕರುಣಾನಿಧಿಯಾಗುವುದಿಲ್ಲವೇಕೆ, ಮರೆಯಾಗುವುದಿನ್ನೇಕೆ ಕೇಳು, ಹೇ ಕಮಲವದನೆ ಕಾಮಾಕ್ಷಿ.

2. ಕಾಮಿತಾರ್ಥದಾಯಕಿ ದೇವಿ, ಆಶ್ರಿತರ ಕಲ್ಪಲತೆಯೇ, ಪುರಾಣಿಯೇ, ಮಧುರಾವಾಣಿ ಶಿವನರಾಣಿಯಲ್ಲವೇ?

3. ಶ್ಯಾಮಕೃಷ್ಣ ಸೋದರಿ, ಗೌರಿ, ಪರಮೇಶ್ವರಿ, ಗಿರಿಜೇ, ಉದಾಸೀನ ಮಾಡಿದರೆ ಒಂದು ಕ್ಷಣವೂ ನಾ ತಾಳೆನು ಕೇಳು ತಾಯೆ - ಕಾಪಾಡು !

ಈ ಕೃತಿಯ ಗೇಯ ಹಂದರದ ಸಂಸ್ಕೃತ ಸಾಹಿತ್ಯಭಾವವನ್ನು ನೋಡೋಣ :

ಹಿಮಾದ್ರಿಸುತೇ, ನನ್ನನ್ನು ಕಾಯಮ್ಮಾ, ವರದೇ, ಪರದೇವತೆಯೇ!

ಸುಮೇರು ಮಧ್ಯವಾಸಿನಿ - (ಮೇರು ಶ್ರೀ ಚಕ್ರದ ಶಿಖರದಲ್ಲಿ ಚಿಂತಾಮಣಿಯಲ್ಲಿ ಮಾತೆಯ ವಾಸ.)

1. ಬಂಗಾರದಂತೆ ಮೈಕಾಂತಿಯುಳ್ಳವಳು. ಕಮಲನೇತ್ರೆ, ಮತಂಗನ ಮಗಳು, ಬ್ರಹ್ಮ, ವಿಷ್ಣು, ಶಿವ, ಇಂದ್ರ, ಮುನಿಬೃಂದ ಎಲ್ಲರಿಂದ ನುತಳು.

2. ಚಂದ್ರಕಾಂತಿಯಮುಖಿಳು (ಅಂಬುಜಾರಿನಿಭವದನೇ ಎನ್ನುತ್ತಾರೆ) ಮುತ್ತಿನಹಾರದಿಂದ ಶೋಭಿಸುವ ಕತ್ತುಳ್ಳವಳು. ಭಕ್ತರ ಕಲ್ಪಲತೆ.

3. ಶ್ಯಾಮಕೃಷ್ಣ ಸೋದರಿ, ಗೌರಿ, ಪರಮೇಶ್ವರಿ, ಗಿರಿಜೇ, ನೀಲವೇಣಿ, ಗಿಣಿಯಂತೆ ಮಧುರ ಮಾತಿನವಳು (ಕೀರವಾಣಿ) ಶ್ರೀ ಲಲಿತೇ-ಹಿಮಾದ್ರಿಸುತೇ ಪಾಹಿ ಮಾಂ.

30. 'ಕರುಣಜೂಡವಮ್ಮಾ' -

ರಾಗ : ವರಾಳಿ **ತಾಳ: ಮಿಶ್ರಛಾಪು**

ಸಾಹಿತ್ಯದ ಮೂಲ ಪಾಠ

||ಪ.|| ಕರುಣಾಜೂಡವಮ್ಮಾ ವಿನಮ್ಮಾ ಶ್ರಿತಜನಕಲ್ಪವಲ್ಲಿ ಮಾತಲ್ಲಿ
||ಕರುಣಜೂಡವಮ್ಮಾ||

||ಅ.ಪ.|| ಮರಕತಾಂಗಿ ಪಂಚನದೇಶುರಾಣಿ ಮಧುರವಾಣಿ ಧರ್ಮ ಸಂವರ್ಧನಿ
||ಕರುಣಜೂಡವಮ್ಮಾ||

||ಚ.1.|| ನರಾಧಮುಲನು ಮಹಾರಾಜುಲನಿ ಪೊಗಡಿ, ದುರಾಸಚೇ ವೇಸಾರಿ
ತಿರಿಗೆ ಇಲಲೋ ವಿರಾಜಮುಖಿ ನೀವು ದಯತೋ ಕಾಪಾಡಿ ಬಿರಾನ
ವರಮೀಯವೇ ಗಿರಿರಾಜಸುತಾ ನೀವು ||ಕರುಣಜೂಡವಮ್ಮಾ||

||ಚ.2.|| ಉಮಾ ! ಭುವಿನಿ ನೀಕು ಸಮಾನಮೆವರು!?
ಭಾರಮಾ ರಕ್ಷಿಂಚುಟಕು ಅಭಿಮಾನಮು ಲೇದನ
ಕುಮಾರುಡುಗಾದಾ? ನಾಕಿಪುಡು ಅಭಯಮೀಯವೇ,
ಕುಮಾರ ಜನನಿ ನೀವು ಮಾನವಾತೀತ ಗದಾ ?
||ಕರುಣಜೂಡವಮ್ಮಾ||

||ಚ.3.|| ಉದಾರ ಗುಣವತಿಗದಾ ? ಸಾಮಗಾನನುತಾ !
ಸದಾನುತಿಜೇಸಿ ನೀಪಾದಾಬ್ಜಮುಲ(ನು)
-ನು ದಾಸುನಿ ಮೊರ ವಿನವಾ?ಸಮಯಮಿದೇ !
ಸದಾಶಿವುನಿರಮಣೀ, ದೀನಜನಾಶ್ರಿತೇ ||ಕರುಣಜೂಡವಮ್ಮಾ||

||ಚ.4.|| ಉದಾರಮುಗನು ಅವತಾರಮೆತ್ತಿ ಜಗಮುನು ಸುಧಾಕರುನಿವಲೆ
ರಂಜಿಂಪಜೇಯು ನೀ ಪದಾಂಬುಜಮುನು ನಮ್ಮಿ ಸದಾ ನಿನ್ನೇ ಭಜಿಂಚಿ
ಶ್ಯಾಮಕೃಷ್ಣ ಜೇಸಿನ ಭಾಗ್ಯಮೇ ||ಕರುಣಜೂಡವಮ್ಮಾ||

ವ್ಯಾಖ್ಯಾನ

ವರಾಳಿ ರಾಗದಲ್ಲಿನ ಶ್ರೀ ಶ್ಯಾಮಶಾಸ್ತ್ರಿಗಳ 2 ಕೃತಿಗಳಲ್ಲಿ ಇದು ಒಂದು, 'ಕಾಮಾಕ್ಷಿ ಬಂಗಾರು ಕಾಮಾಕ್ಷಿ' ಎಂದಾರಂಭಿಸುವ ಮಿಶ್ರಛಾಪಿನದು ಮತ್ತೊಂದು ಕೃತಿ. 4 ಚರಣಗಳುಳ್ಳ 'ಕರುಣಜೂಡವಮ್ಮಾ' ಕೃತಿಯ ಸಾಹಿತ್ಯಭಾವ ನೋಡೋಣ:

ಕರುಣೆ ತೋರಮ್ಮಾ, ಕೇಳಮ್ಮಾ, ಶ್ರೀತಜನ ಕಲ್ಪಲತೇ ನಮ್ಮಮ್ಮಾ ! ಮರಕತಾಂಗಿ- (ಪಚ್ಚೆ ರತ್ನದ ಕಾಂತಿಯ ಒಡಲುಳ್ಳವಳು (ಕಾಳಿಕಾ ಸ್ವರೂಪ), ಪಂಚನದೇಶನ ರಾಣಿ ತಂಜಾವೂರನ್ನು, ಅದರಲ್ಲಿ ತಿರುವೈಯಾರನ್ನು, ಪಂಚನದ ಕ್ಷೇತ್ರವೆನ್ನುತ್ತಾರೆ, ಐದು ನದಿಗಳು ಅಲ್ಲಿ ಹರಿಯುತ್ತವೆ ಎಂಬ ಕಾರಣದಿಂದ. ಆ ಕ್ಷೇತ್ರಾಧಿಪತಿ ಶಿವ, ಬೃಹದೀಶ್ವರ, ಅಂಥ ಶಿವನರಾಣಿ, ಮಧುರವಾಣಿ,

ಧರ್ಮ ಸಂವರ್ಧನಿ–ಇದೇ, ಕ್ಷೇತ್ರಾಧಿದೇವತೆ ಪಾರ್ವತಿಗೆ ಅಲ್ಲಿಯ ಕ್ಷೇತ್ರನಾಮ.

1. ನರಾಧಮರನ್ನು 'ಮಹಾ'ರಾಜರೆಂದು ದುರಾಸೆಯಿಂದ ಹೊಗಳಿ, ತಿರಿಗಿ, ಸುತ್ತಿ ಬಳಲಿ ಭುವಿಯಲ್ಲಿ ದಯನೀಯ ಸ್ಥಾನಕ್ಕಿಳಿದ ನನಗೆ, ಹೇ ಚಂದ್ರಮುಖಿ, ದಯೆಯಿಂದ ಕಾಪಾಡಿ ವರಗಳನ್ನು ಕೊಡಮ್ಮಾ ಗಿರಿರಾಜಸುತೇ!

2. ಉಮೇ, ಭುವಿಯಲ್ಲಿ ನಿನಗೆ ಸಮಾನರುಂಟೆ, ನನ್ನನ್ನು ರಕ್ಷಿಸಲು ಅಭಿಮಾನವಿಲ್ಲದಾಗಿ ಭಾರವೆನಿಸುವುದೇ, ನಿನ್ನ ಕುಮಾರನಲ್ಲವೆ ನಾನು, ಈಗಲೇ ಅಭಯ ಕೊಡು ಕುಮಾರಜನನಿ.

(ಇಲ್ಲಿ, 'ನೀವು ಮಾನವಾತೀತಗದಾ'- ಎಂದರೆ, 'ನೀನು ಮಾನವರಿಗೆ ಮೇಲಿರುವವಳಲ್ಲವೇ' 'ಆಚೆ ಇರುವವಳಲ್ಲವೇ' ಎಂಬ ಶಾಸ್ತ್ರಿಗಳ ಮಾತು, ಅಂಥ ಭಕ್ತ, ಪರಾಶಕ್ತಿ ಪರಮೇಶ್ವರಿಯನ್ನು ಹೀಗೆ ತೀರಾ ಸಹಜವಾಗಿರುವ ಸಂಗತಿಯನ್ನು ವರ್ಣನೆಯಾಗಿ ಹೇಳುವುದು ಆಶ್ಚರ್ಯವೇ ಸರಿ.)

3. ಉದಾರಗುಣವತಿಯಲ್ಲವೇ, ಸಾಮಗಾನದಿಂದ ಸ್ತುತಳಾದವಳು, ನಿನ್ನ ಪದಾಬ್ಜಗಳನ್ನು ಸದಾ ಸ್ತುತಿ ಮಾಡುವ ನಿನ್ನ ದಾಸನ ಮೊರೆ ಆಲಿಸೆಯಾ, ದೀನ ಜನಾಶ್ರಿತೇ, ಸದಾಶಿವನ ರಾಣಿ, ಇದು ವೇಳೆ !

4. ಉದಾರವಾಗಿ ಅವತಾರವೆತ್ತಿ ಜಗವನು ಸುಧಾಕರ ಚಂದ್ರನಂತೆ ಬೆಳಗಿಸುವ ನಿನ್ನ ಪದಾಬ್ಜವ ನಂಬಿ ಸದಾ ಭಜಿಸಲು ಶ್ಯಾಮಕೃಷ್ಣನು ಮಾಡಿದ ಭಾಗ್ಯವೆ ಅಲ್ಲವೇ!

'ಶ್ಯಾಮಕೃಷ್ಣ' ವಾಗ್ಗೇಯಕಾರ ನಾಮವನ್ನು ಉಳಿದೆಲ್ಲ ಕೃತಿಗಳಲ್ಲೂ

(ಶ್ಯಾಮಕೃಷ್ಣ ಸೋದರಿ ಎಂದು ದೇವಿಯನ್ನು ಯಾವಾಗಲೂ ಸಂಬೋಧಿಸುವಂತೆ) ವಿಷ್ಣುವಿನ ಹೆಸರಾಗಿಯೇ ಸಾಹಿತ್ಯದಲ್ಲಿ ಜೋಡಿಸುವ ಶ್ರೀ ಶಾಸ್ತ್ರಿಗಳು ಈ ಕೃತಿಯಲ್ಲಿ ತಮ್ಮನ್ನೇ, ಈ ಭಕ್ತ ಶ್ಯಾಮಶಾಸ್ತ್ರಿಯನ್ನೇ ಉದ್ದೇಶಿಸಿ ಜೋಡಿಸಿ ವಾಗ್ಗೇಯಕಾರಮುದ್ರೆ ಇಟ್ಟಿರುವುದು ವಿಶೇಷ.

31. 'ಕಾಮಾಕ್ಷಿ ! ಬಂಗಾರು ಕಾಮಾಕ್ಷಿ' –

ರಾಗ : ವರಾಳಿ **ತಾಳ : ಮಿಶ್ರಛಾಪು.**

ಸಾಹಿತ್ಯ

||ಪ|| ಕಾಮಾಕ್ಷಿ ! ಬಂಗಾರು ಕಾಮಾಕ್ಷಿ ! ನನ್ನು ಬ್ರೋವವೇ |
|| ಕಾಮಾಕ್ಷಿ||

||ಅ.ಪ.||ತಾಮಸಮೇಲ ರಾವೇ ಸಾಮಗಾನಲೋಲೇ ಸುಶೀಲೇ|| ಕಾಮಾಕ್ಷಿ||

||ಚ.1.|| ಕಾಮಕಲಾಪ್ರಿಯಭಾಮಿನೀ ! ಕಾಮ್ಯಕಾಮದೇ ! ಕಲ್ಯಾಣಿ !
ಕಾಮಾಕ್ಷೀ ಕಂಜದಳಾಯತಾಕ್ಷಿ ! ತ್ರಿಕೋಣವಾಸಿನಿ ಕಾರುಣ್ಯ
ರೂಪಿಣಿ || ಕಾಮಾಕ್ಷಿ||

||ಚ.2.|| ಪಾವನೀ, ಮೃದುಭಾಷಿಣೀ, ಭಕ್ತ ಪಾಲಿನಿ ಭವಮೋಚನೀ !
ಹೇಮಾಂಗೀ ಹಿಮಗಿರಿಪುತ್ರೀ ! ಮಹೇಶ್ವರಿ ! ಹ್ರೀಂಕಾರರೂಪಿಣೀ!
|| ಕಾಮಾಕ್ಷಿ||

||ಚ.3.|| ಶ್ಯಾಮಕೃಷ್ಣ ಪರಿಪಾಲಿನೀ ಶುಕಶ್ಯಾಮಳೇ ಶಿವಶಂಕರೀ ಶೂಲಿನೀ!
ಸದಾಶಿವುನಿಕಿ ರಾಣೀ ವಿಶಾಲಾಕ್ಷಿ, ತರುಣಿ, ಶಾಶ್ವತರೂಪಿಣೀ
|| ಕಾಮಾಕ್ಷಿ||

|| ಸ್ವರ ಸಾಹಿತ್ಯ || ನಾ ಮನವಿನಿ ವಿನು ದೇವೀ ನೀವೇ ಗತಿಯನಿ
ನಮ್ಮಿನಾನು ಮಾಯಮ್ಮಾ ವೇಗಮೇ ಕರುಣಜೂಡವಮ್ಮ
ಬಂಗಾರು ಬೊಮ್ಮಾ! || ಕಾಮಾಕ್ಷಿ||

ವ್ಯಾಖ್ಯಾನ

ಕಾಮಾಕ್ಷಿ ದೇವಿಯ ಉತ್ಸವಮೂರ್ತಿ, ಬಂಗಾರದ ಅಪುರೂಪವಾದ ಸುಂದರ ವಿಗ್ರಹವಾಗಿದ್ದು ಅದರ ನಿತ್ಯಾರಾಧನೆಯಲ್ಲಿ ನಿರತರಾಗಿದ್ದ ಶ್ರೀ ಶ್ಯಾಮಶಾಸ್ತ್ರಿಗಳ ಮನಸ್ಸಿನ ಕೇಂದ್ರಬಿಂದುವಾಗಿ ಸದಾಕಾಲ ಇದ್ದುದು ಅವರ ಹಲವು ಸಲದ 'ಬಂಗಾರು ಕಾಮಾಕ್ಷಿ, ಬಂಗಾರು ಬೊಮ್ಮಾ' ಮುಂತಾದ ಉಲ್ಲೇಖಗಳಲ್ಲಿ ಪ್ರಕಟಗೊಳ್ಳುತ್ತದೆ. ಈ ಕೃತಿಯ ಸಾಹಿತ್ಯದ ಪ್ರಾರಂಭವೇ

ಹೀಗೆ ! ಕಾಮಾಕ್ಷಿ, ಹೇ ಬಂಗಾರು ಕಾಮಾಕ್ಷಿ, ನನ್ನನ್ನು ಕಾಪಾಡೇ ಅಮ್ಮಾ, ಸಾಮಗಾನಲೋಲೇ, ಸುಶೀಲೇ!

ಅಮ್ಮ ಬಾರೇ| ವಿಳಂಬವೇಕೇ ? ಕಾಲಕಾಲ ಪ್ರಿಯಭಾಮಿನಿ, ಬೇಡಿದುದನ್ನು ನೀಡುವವಳೇ, ಕಲ್ಯಾಣೀ, ಕಾಮಾಕ್ಷೀ, ಕಂಜದಳಾಯತಾಕ್ಷಿ, ಕಾರುಣ್ಯರೂಪಿಣಿ, ತ್ರಿಕೋಣವಾಸಿನಿ, ಶ್ರೀಮಾತೆಯು ಶ್ರೀಚಕ್ರದಲ್ಲಿ ನೆಲೆಸಿರುವವಳಲ್ಲವೇ !? ಮೂಲಾಧಾರ ಪದ್ಮದ ಕರ್ಣಿಕೆಯ ಮಧ್ಯದಲ್ಲಿ ಒಂದು ತ್ರಿಕೋಣವಿದೆ. ಇದರಲ್ಲಿರುವ ಅಗ್ನಿ ಮಂಡಲವು ಪಂಚದಶೀ ಅಥವಾ ಪಂಚದಶಾಕ್ಷರೀ ಮಂತ್ರದಲ್ಲಿ ಪ್ರಥಮವಾದ ಶ್ರೀ ವಾಗ್ಭವ ಕೂಟ ಸ್ವರೂಪವಾಗಿರುವುದು ಎಂದು 'ತಂತ್ರರಾಜ'ದಲ್ಲಿ ಹೇಳಿದೆ. ಇದೇ ಶ್ರೀ ಲಲಿತಾ ಸಹಸ್ರನಾಮದ 592ನೇ ನಾಮ 'ತ್ರಿಕೋಣಾಂತರ ದೀಪಿಕಾ' ಎಂದು ದೇವಿಯನ್ನು ವರ್ಣಿಸಿರುವುದು, ಮಹಾ ಶ್ರೀವಿದ್ಯಾ ಉಪಾಸಕರಾದ ಶ್ರೀ ಶ್ಯಾಮಶಾಸ್ತ್ರಿಗಳು ಈ ನಾಮದ ವರ್ಣನೆಯನ್ನೇ ದೇವಿಗೆ ಇಲ್ಲಿ ಮಾಡಿರುವುದು. ಈ ಕೃತಿಗೆ ಸ್ವರ ಸಾಹಿತ್ಯವಿದೆ. ಸಾಹಿತ್ಯ ಹೀಗೆ :

ನನ್ನ ಮನವಿ ಕೇಳಮ್ಮಾ ದೇವಿ, ನೀನೇ ಗತಿಯೆಂದು ನಂಬಿದ್ದೇನೆ. ನಮ್ಮಮ್ಮಾ ಬೇಗನೆ ಕರುಣೆ ತೋರಮ್ಮಾ ಬಂಗಾರು ವಿಗ್ರಹವೇ, ಬಂಗಾರು ಕಾಮಾಕ್ಷಿ !

ಇನ್ನು, 2 ಚರಣಗಳಲ್ಲಿನ ಭಾವ :

1. ಪಾವನಿ, ಮೃದುಭಾಷಿಣಿ, ಭಕ್ತಪಾಲಿನಿ, ಭವಮೋಚನಿ, ಕನಕಾಂಗಿ. ಹಿಮಗಿರಿ ಪುತ್ರಿ, ಮಹೇಶ್ವರಿ, ಹ್ರೀಂಕಾರ ರೂಪಿಣಿ (ಇದು ಲಲಿತಾ ತ್ರಿಶತಿಯಲ್ಲಿ 81ನೇ ನಾಮವೇ)

2. ಶ್ಯಾಮಕೃಷ್ಣ ಪರಿಪಾಲಿನಿ, ಶುಕಶ್ಯಾಮಲೇ (ಅರ್ಥಾತ್, ಮೀನಾಕ್ಷಿ) ಶಿವಶಂಕರಿ, ಶೂಲಿನಿ, ಸದಾಶಿವನ ರಾಣಿ, ವಿಶಾಲಾಕ್ಷಿಯಾಗಿ ನಿತ್ಯತಾರುಣ್ಯವಿರುವ ಶಾಶ್ವತಳಾದ ಹೇ ಬಂಗಾರು ಕಾಮಾಕ್ಷಿ, ಕಾಪಾಡಮ್ಮಾ -ಬ್ರೋವವೇ.

32. 'ತರುಣಮಿದಮ್ಮಾ ಎನ್ನೈ ರಕ್ಷಿಕ್ಕ' –

ರಾಗ : ಗೌಳೀಪಂತು **ತಾಳ : ಮಿಶ್ರ ಛಾಪು**

ಸಾಹಿತ್ಯದ ಮೂಲ ಪಾಠ

||ಪ.|| ತರುಣಮಿದಮ್ಮಾ ಎನ್ನೈರಕ್ಷಿಕ್ಕ ||ತರುಣಮಿದಮ್ಮಾ||

||ಅ.ಪ.|| ಕರುಣಾನಿಧಿಯಾಗಿಯ ಕಾಮಾಕ್ಷಿ ||ತರುಣಮಿದಮ್ಮಾ||

||ಚ.1.|| ಅನುದಿನಮು ಎಂದನ್ ನಾಕ್ಕಿಲ್ ಉಂದನ್ ನಾಮಮ್
ಅದುವಲ್ಲಾಲ್ ಮಟ್ರೊನ್ನಿಲ್ಲೈಯೇ ಎನ್ನೇಮಮ್
ಮನಕ್ಕವಲೈಯ್ಯೈ ತೀರ್ಕ್ಕ ಮರುದ್ದೈವಂ ಎನಕ್ಕುಂಡೋ
ಉನ್ನೈಪಾರ್ಕ್ಕ ಇರಂಗಿಕ್ಕಣ್ಣಾಪಾರ್ಕ್ಕ ||ತರುಣಮಿದಮ್ಮಾ||

||ಚ.2.|| ಆದಿಶಕ್ತಿ ಎನ್ಸ್ರಪೇರ್ ಎಡುತ್ತಾಯೇ| ಅಖಿಲಮುಂ ವರ್ಧಿಕ್ಕ
ಅವತಾರಿತ್ತಾಯೇ!
ಚಾತಕಂ ಪೋಲ್ ಉನ್ನೈಶರಣಂ ಪುಹುನ್ದೇನ್ ಎನ್ನೈ ಆದರಿಕ್ಕಪ್ಪಿನ್ನೈ
ಯಾರುಂಡು ಶೊಲ್ ಅನ್ನೈಯೇ | ||ತರುಣಮಿದಮ್ಮಾ||

||ಚ.3.|| ಕಾಮಿತಫಲತ್ತೈಕೈಮೇಲ್ ತರುವಾಯೇ! ಕಣ್‌ಪಾರ್ತ್ತು
ರಕ್ಷಿಪ್ಪುದೆಪ್ಪೋದುಂ ನೀಯೇ ಶ್ಯಾಮಕೃಷ್ಣನ್ ಸೋದರೀ
ಶೈಲರಾಜಕುಮಾರೀ ||ತರುಣಮಿದಮ್ಮಾ||

ವ್ಯಾಖ್ಯಾನ

ಶ್ರೀ ಶ್ಯಾಮಶಾಸ್ತ್ರಿಗಳ ತಮಿಳು ಭಾಷೆಯಲ್ಲಿ ರಚಿತವಾದ 4 ಕೃತಿಗಳಲ್ಲಿ ಇದೊಂದು. ತೆಲುಗಿನಲ್ಲಿನ ಅವರ ಉಳಿದ ಹಲವಾರು ಕೃತಿಗಳಲ್ಲಿ ವ್ಯಕ್ತಪಡಿಸಿರುವ ಭಾವನೆಗಳನ್ನೇ, ಮಾತುಗಳನ್ನೇ, ಸಂಬೋಧನೆಯನ್ನೇ ತಮ್ಮ ಮಾತೃಭಾಷೆಯಾದ ತಮಿಳಿನಲ್ಲಿ ಈ ಕೃತಿಯಲ್ಲಿ ವ್ಯಕ್ತಪಡಿಸಿಕೊಂಡಿದ್ದಾರೆ.

'ತರುಣಂ ಇದಮ್ಮಾ ಎನ್ನೈ ರಕ್ಷಿಕ್ಕ'- ಇದು ಸಮಯವಮ್ಮಾ ನನ್ನನ್ನು ರಕ್ಷಿಸಲು.

'ಕರುಣಾನಿಧಿಯಾಗಿಯ ಕಾಮಾಕ್ಷಿ ರಕ್ಷಿಕ್ಕ'-ಕರುಣಾನಿಧಿಯಾದ ಕಾಮಾಕ್ಷಿಯೇ ರಕ್ಷಿಸಲು (ಇದು ಸಮಯ)

1. 'ಅನುದಿನಮುಂ ಎಂದನ್ ನಾಕ್ಕಿಲ್ ಉನ್ನಾಮಂ ಅದುವಲ್ಲಾಲ್ ಮಟ್ರೊನ್ರುಂ ಇಲ್ಲೈಯೇ ಎನ್ನೇಮಂ'

ಅನುದಿನವೂ ನನ್ನ ನಾಲಿಗೆಯಲ್ಲಿ ನಿನ್ನ ನಾಮವಲ್ಲದೆ ಮತ್ತೇನೂ ಇಲ್ಲದುದೇ ನನ್ನ ವ್ರತ.

'ಮನಕ್ಕವಲ್ಲೈಯ್ಯೈ ತೀರ್ಕ ಮರುದೈವಂ ಉನ್ನೈಪಾರ್ಕ ಎನಕ್ಕುಂಡೋ ಉನಕ್ಕೇರ್ಕಇರಂಗಿ ಉನ್‌ಕಣ್‌ಪಾರ್ಕ (ಪಾಠಾಂತರ)

ಮನದ ಚಿಂತೆ ತೀರಿಸಲು ನಿನ್ನಂಥ ಮತ್ತೊಂದು ದೈವ ನನಗುಂಟೇ? ನಿನ್ನ ಕಣ್ಣಿನ ದೃಷ್ಟಿ ಇಳಿದು (ರಕ್ಷಿಸಲು)

2. 'ಆದಿಶಕ್ತಿಯೆನ್ರ್ ಪೇರೆಡುತ್ತಾಯೇ ಅಖಿಲಮುಂ ವರ್ಧಿಕ್ಕ ಅವದರಿತ್ತಾಯೇ

ಚಾತಕಂಪೋಲ್ ಉನ್ನೈಶರಣಂ ಪುಹುಂದೇನ್, ಎನ್ನೈ ಆದರಿಕ್ಕಪ್ಪಿನ್ನೈ ಯಾರ್ ಉಂಡು ಶೊಲ್ ಅನ್ನೈಯೇ'

ಆದಿಶಕ್ತಿ ಎಂದು ಹೆಸರನ್ನು ಪಡೆದೆಯಲ್ಲ, ಅಖಿಲ ಲೋಕ ಪಾಲನೆಗೆಂದು (ವರ್ಧನಕ್ಕೆಂದು) ಆವತರಿಸಿದೆಯಲ್ಲ, ಚಾತಕಪಕ್ಷಿಯಂತೆ ನಿನ್ನ ಶರಣು ಹೊಕ್ಕೆನು, ನನ್ನನ್ನಾದರಿಸಲು ಮತ್ತಾರುಂಟು ಹೇಳು ತಾಯೆ!

3. 'ಕಾಮಿತ ಫಲತ್ತೈ ಕೈಮೇಲ್ ತರುವಾಯೇ ಕಣ್‌ಪಾರ್ತ್‌ರಕ್ಷಿಪ್ಪ ದೆಪ್ಪೋದುಂ ನೀಯೇ!

ಕಾಂಕ್ಷಿತ ಫಲಗಳನ್ನು ಕ್ಷಿಪ್ರವಾಗಿ ಕೊಡುವವಳೇ ಕಟಾಕ್ಷಬೀರಿ ರಕ್ಷಿಸುವವಳೆಂದಿಗೂ ನೀನೇ! (ರಕ್ಷಿಸಲು)

ಸೋಮಶೇಖರನ ಅರ್ಧಾಂಗಿಯಾದ ಸುಂದರಿ, ಕೌಮಾರಿ, ಶ್ಯಾಮಕೃಷ್ಣ ಸೋದರಿ, ಶೈಲಜೇ.

ಸೋಮಶೇಖರರ್ ಪಾದಿ ಸುಂದರಿ ಕೌಮಾರಿ, ಶ್ಯಾಮಕೃಷ್ಣಸೋದರಿ ಶೈಲರಾಜಕುಮಾರಿ' 'ತರುಣಂ ಇದಮ್ಮಾ ಎನ್ನೈ ರಕ್ಷಿಕ್ಕ'

ಈ ಕೃತಿಯ ಪ್ರಸ್ತಾಪವಿರುವಾಗ ಗೌಳೀಪಂತು ರಾಗದ ಬಗೆಗೆ ಹೇಳುವ ಅಗತ್ಯವಿದೆ. ಗೌಳೀಪಂತು ರಾಗ ಬಹಳ ಪ್ರಾಚೀನವಾದ ರಾಗವೇನಲ್ಲ. ವೇಂಕಟಮಖಿ ಹೇಳಿಲ್ಲದ, ಮುದ್ದು ವೇಂಕಟಮಖಿ ಹೇಳಿ ಲಕ್ಷಣ ನೀಡುವ ಮಾಳವಗೌಳ ಮೇಳಜನಿತ ರಾಗ, ಮತ್ತು ಹಾಗೇ ಸಂಗೀತ ತ್ರಿಮೂರ್ತಿಗಳೆಲ್ಲರೂ ಬಳಸಿರುವಾಗ. ಮುದ್ದುವೇಂಕಟಮಖಿ ತನ್ನ 'ರಾಗ ಲಕ್ಷಣಂ' ಪುಟ್ಟ ಗ್ರಂಥದಲ್ಲಿ 42ನೇ ಶ್ಲೋಕದಲ್ಲಿ ಹೇಳಿರುವ ಸರಿಮಪನಿಸ -ಸನಿದಪಮಗರಿಸ ಎಂಬ ಸ್ವರ ಶ್ರೇಣಿಯನ್ನೇ ಇವರೆಲ್ಲರೂ ಅನುಸರಿಸಿರುವುದು. 'ರಾಗ ಲಕ್ಷಣಂ' ಇದನ್ನು ಭಾಷಾಂಗ ಎಂಬ ವರ್ಗದಲ್ಲಿ ಹೇಳಿದ್ದರೂ ಅನ್ಯ ಸ್ವರವನ್ನು ಬಳಸದಿರುವ ರಾಗವಿದು. ಹೀಗಿದ್ದರೂ, ಆಧುನಿಕರಲ್ಲಿ ಹಲವರು ಗೌಳೀಪಂತುರಾಗದ ಕೃತಿಗಳನ್ನು ಪ್ರತಿ ಮಧ್ಯಮದೊಂದಿಗೆ ಸಮರ್ಪಿಸುವ ಪರಿಪಾಠ ಬೆಳೆದು ನಿಂತಿದೆ. ಸಂಪ್ರದಾಯ ವಿರುದ್ಧವೆಂದರಿತಿದ್ದರೂ ಶ್ರೋತೃರಂಜನೆಯ ನೆಪದಲ್ಲಿ ಪ್ರಸಿದ್ಧರೊಬ್ಬರು ಅನುಚಿತವಾದಷ್ಟು ಸ್ವಾತಂತ್ರ್ಯವನ್ನು ರಾಗಗಳ ವಿಷಯದಲ್ಲಿ ತಳೆದು ಸ್ವೇಚ್ಛಾಚಾರವೆಸಗಿದಾಗ ಅನುಯಾಯಿ ಸಮುದಾಯದ ದಾರಿ ಬದಲಿಸಿ ಸಂಪ್ರದಾಯಕ್ಕೆ ಅಪಚಾರವಾಗುವುದು ಹೀಗೆಯೇ. ಮಿತಿಮೀರಿ, ಅತ್ಯಧಿಕ ಬಳಕೆಯಿಂದ ಅಸತ್ಯವು ಸತ್ಯವನ್ನೇ ನಿರ್ನಾಮ ಮಾಡಿ ಸತ್ಯದ ಸ್ಥಾನವನ್ನೇ ಪಡೆದು ಅಟ್ಟಹಾಸ ಮಾಡುವ ದುರ್ದೈವ ಸನ್ನಿವೇಶ ಸಂಪ್ರದಾಯಕ್ಕೆ, ಕಲೆಗೆ ಒದಗುವುದೂ ಹೀಗೆಯೇ.

33. 'ದಯಜೂಡ ಮಂಚಿ ಸಮಯಮಿದೇ' –

ರಾಗ : ಜಗನ್ಮೋಹಿನಿ **ತಾಳ : ಮಿಶ್ರ ಛಾಪು**

ಸಾಹಿತ್ಯದ ಮೂಲ ಪಾಠ

||ಪ.|| ದಯಜೂಡ ಮಂಚಿ ಸಮಯಮಿದೇ ವೇಗಮೇ ವಚ್ಚಿ|| ದಯಜೂಡ||

||ಅ.ಪ.||ಜಯಮೊಸಗೇ ಶಂಕರಿ ನೀವು ಜನನಿಗದಾ ಬೃಹದಂಬಾ ?
|| ದಯಜೂಡ||

||ಚ.1.|| ಕನಕಾಂಗೀ ನೀ ಪಾದ ಕಮಲಮೇ ದಿಕ್ಕನಿ ನಮ್ಮಿನಾನು ನೇನು
ಸನಕಸನಂದನ ವಂದಿತ ಚರಣಾ!ಸಾರಸನೇತ್ರ ನೀವು ಗದಾ!?
|| ದಯಜೂಡ||

||ಚ.2.|| ಚಪಲಮನ್ನಿಯು ದೀರ್ಚಿ ಅಖಂಡ ಸಾಮ್ರಾಜ್ಯಮೀಯವೇ !
ಕಪಟಮು ಸೇಯಕವೇ ನಿಗಮವಿನುತಾ ಕಾಮಿತ ದಾಯಕಿ ನೀವುಗದಾ
|| ದಯಜೂಡ||

||ಚ.3.|| ಶ್ಯಾಮಕಷ್ಣ ಸೋದರಿ ಕೌಮಾರೀ ಸಕಲಾಗಮಪೂಜಿತೇ ದೇವೀ
ನೀ ಮಹಿಮಲು ಪೊಗಡತರಮಾ? ನೀ ಸಮಾನಮೆಂದು ಗಾನನೇ!
|| ದಯಜೂಡ||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳದು ಜಗನ್ಮೋಹಿನಿ ರಾಗದಲ್ಲಿ ಇದೊಂದೇ ಕೃತಿ ಲಭ್ಯ.

ಸಾಹಿತ್ಯ ಭಾವ ಹೀಗಿದೆ:

ಹೇ ಬೃಹದಂಬಾ, ನನ್ನ ಜನನಿಯಲ್ಲವೇ ನೀನು, ಜಯಕೊಡುವ ಶಂಕರಿ, ಬೇಗನೆ ಬಂದು ದಯೆತೋರಲು ಇದು ಒಳ್ಳೆಯ ಸಮಯವಮ್ಮಾ! – ಎಂದು ಅನುಪಲ್ಲವಿಯಿಂದ ಪಲ್ಲವಿಗೆ ಬರುತ್ತದೆ ಈ ಕೃತಿಯ ಸಾಹಿತ್ಯ. ಉಳಿದ ಹಲವು ರಚನೆಗಳಂತೆ 3 ಚರಣಗಳ ಕೃತಿ ಇದು.

ಚ. 1. ಕನಕಾಂಗಿ, ನಿನ್ನ ಪದಕಮಲವೇ ದಿಕ್ಕೆಂದು ನಂಬಿದೆ ನಾನು. ಸಾರಸಾಕ್ಷಿಯೇ, ಸನಕಸನಂದನ ಮುನಿಗಳಿಂದಲೇ ವಂದಿತವಾದ ಚರಣಗಳಲ್ಲವೆ ನಿನ್ನದು!

ಚ. 2. ಚಪಲ ಚಿತ್ತವನ್ನು ಕೊನೆಗಾಣಿಸಿ ಅಖಂಡಸಾಮ್ರಾಜ್ಯ ನೀಡೇ ಅಮ್ಮಾ! ವೇದಗಳೇ ಹೊಗಳಿದವಳು ನೀನಲ್ಲವೇ ಕಾಮಿತದಾತ್ರಿ! ನನ್ನೊಂದಿಗೆ ಕಪಟ ಮಾಡಬೇಡಮ್ಮಾ!

ಚ.3. ಶ್ಯಾಮಕೃಷ್ಣಸೋದರಿ, ಕೌಮಾರಿ, ಆಗಮಗಳಿಂದ ಕ್ರಮವಾಗಿ ಪೂಜಿತಳೇ ದೇವಿ, ನಿನ್ನ ಮಹಿಮೆಗಳನ್ನು ಹೊಗಳಲು ನಿಲುಕುವುದೇ, ಸಾಧ್ಯವೇ, ನಿನಗೆ ಸರಿಸಾಟಿ ಕಾಣೆನೇ ಅಮ್ಮಾ!

34. 'ದುರುಸುಗ ಕೃಪಜೂಚಿ' -

ರಾಗ : ಸಾವೇರಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ದುರುಸುಗ ಕೃಪಜೂಚಿ ಸಂತತಂ ಅರೋಗ ದೃಢ ಶರೀರಮುಗ ಸಲುಪು
ನನ್ನು ||ದುರುಸುಗ||

||ಅ.ಪ.|| ಪರಮ ಪಾವನಿ !ಕೃಪಾವನಿ ! ವಿನುತ ಪದಸರೋಜ ! ಪ್ರಣತಾರ್ತಿಹರು
ರಾಣಿ !
ಪರಾಕು ಧರ್ಮಸಂವರ್ಧನಿ ! ಬಹುಪರಾಕ್ ! ಅಮಲಗುಣಾ,
ತ್ರಿಪುರಸುಂದರಿ ||ದುರುಸುಗ||

||ಚ.1.|| ನೀ ಸನ್ನಿಧಿನಿ ಜೇರಿಗೊಲಿಚಿನ ನಿನ್ನೆಪುಡು ದಲಚೇ ಸುಜನ
ದಾಸ ಜನಭಾಗ್ಯಮೆಟು ದೆಲ್ಪುದುನೋ!
ಓ ಸಕಲಲೋಕ ಜನನಿ! ವಿನು, ಓಂಕಾರಿ ! ನಿಯತಿ ಎಟುಲನೋ!?
ನೀ ಸಾಟೆವರು ? ಈ ಜಗಂಬುನನು ನೇ ನಿರತಮುನು ಗೊಲಿಚಿತಿ
||ದುರುಸುಗ||

||ಚ.2.|| ಏಮೋ ಕಲಕ ಜೆಂದಿ ಮನಮುನ ನೇನೆಚ್ಚಟಿ ಗತಿಕಾನಕನು
ನೀ ಮಹಿಮಲೆಲ್ಲ ಚೆವುಲಾರ ವಿನಿ
ಈ ಮನಸುಲೋನಿ ವೆತದೀರ್ಚುಟಕೀವೇಳ ನಿಪುಣವನಿ
ಕಾಮಾಕ್ಷಿ ! ನೀವೇ ! ವೇರೆವರುಗಾದನಿ ದಲಚಿ ಗೊಲಿಚಿತಿನಿ
||ದುರುಸುಗ||

||ಚ.3.|| ಧಾರಾಧರವಿ ನೀಲ ಕಚಲಸಿತಾ ! ಸರಸಕವಿತಾ ನಿಚಿತಾ (ನಿಶಿತಾ-
ಪಾಠಾಂತರ)
ಸಾರಘನಸಾರಸಿತ ದರಹಸಿತಾ!
ವಾರಿರುಹ ವಾರಿವದನೋಚಿತ ! ವಾಗೀಶ ವಿನುತ, ಭೃತ ನತಾ!
ನಾರಾಯಣೀ ಶ್ಯಾಮಕೃಷ್ಣನುತ ! ನಾ ಮನವಿನಿ ವಿನು, ವಿನಿ ಗಿರಿಸುತ!
||ದುರುಸುಗ||

|| ಸ್ವರ ಸಾಹಿತ್ಯ || ಸರೋಜನಯನ ! ನತಜನಪಾಲಿನಿವನಿ ವೇದಮುಲು
ಮೊರಲಿಡಗಾ ನಿತರುಲೆವರು! ಮನವಿನಿ ವಿನಿ ಕೃಪ ಸಲುಪ ಪರಾಕು
ಸಲುಪರಾಕದಿಕ ನೀವಿಪುಡು ||ದುರುಸುಗ||

ವ್ಯಾಖ್ಯಾನ

ಸಾವೇರಿ, ಕರ್ಣಾಟಕ ಸಂಗೀತದಲ್ಲಿನ ಮಹಾ ರಕ್ತಿರಾಗಗಳಲ್ಲೊಂದು. ಎಲ್ಲ ವಾಗ್ಗೇಯಕಾರರೂ ಇದರಲ್ಲಿ ಅಕ್ಕರೆಯಿಂದ ರಚಿಸಿ ಅತ್ಯಂತ ಸುಂದರ ರಚನೆಗಳನ್ನು ಸಂಗೀತಲೋಕಕ್ಕೆ ನೀಡಿದ್ದಾರೆ.

ಅದರಲ್ಲಿ ಸಂಗೀತ ತ್ರಿಮೂರ್ತಿಗಳ ಕೃತಿಗಳು ವಿಶೇಷ ಸುಂದರವಾದವು. ಶ್ರೀ ಶಾಸ್ತ್ರಿಗಳ ಸಾವೇರಿ ರಾಗದಲ್ಲಿ ಲಭ್ಯವಿರುವ, ಗೀತವೊಂದು ಸೇರಿದಂತೆ 5 ರಚನೆಗಳಲ್ಲಿ, 'ಶಂಕರಿ ಶಂಕರು' ಮತ್ತು 'ದುರುಸುಗ ಕೃಪಜೂಚಿ' ಕೃತಿಗಳು ಗಾಯಕರನ್ನು ಹೆಚ್ಚು ಆಕರ್ಷಿಸಿರುವುದನ್ನು ಈ ಕೃತಿಗಳ ಹೆಚ್ಚಿನ ಚಲಾವಣೆ ಸಾರುತ್ತದೆ.

ಶ್ಯಾಮಶಾಸ್ತ್ರಿಗಳು ತೀವ್ರವಾಗಿ ಅಸ್ವಸ್ಥರಾಗಿದ್ದಾಗ ದೇಹಾರೋಗ್ಯ ದೃಢತೆಗಳಿಗಾಗಿ ಬೇಡಿ ಕಾಮಾಕ್ಷೀ ದೇವಿಯಲ್ಲಿ ಮೊರೆಯಿಟ್ಟು, ಈ ಕೃತಿ ರಚಿಸಿದರೆಂಬ ದಂತಕತೆಯೊಂದಿದೆ.

ಶೀಘ್ರವಾಗಿ ಕೃಪೆ ತೋರಿ, ಎಂದೂ ಉಳಿಯುವಂತೆ, ರೋಗವಿಲ್ಲದ, ಮತ್ತು ದೃಢವಾದ ಶರೀರವುಳ್ಳವನಾಗಿ ನನ್ನನ್ನು ಸಲಹು ತಾಯೆ ಕಾಮಾಕ್ಷೀ ದೇವಿ!

ಹೇ ಪರಮ ಪಾವನಿ, ಕೃಪಾವನಿ (ಕಪೆಯಿಂದ ಪಾಲಿಸುವವಳು), ಶ್ಲಾಘನೆಗೆ ಪಾತ್ರವಾದ ಪಾದ ಪದ್ಮಗಳುಳ್ಳವಳು, ವಿಶೇಷವಾಗಿ ಆಶ್ರಯಿಸಿದವರ ಆರ್ತಿಯನ್ನು ನಿವಾರಿಸುವ ಶಿವಶಂಕರನ ರಾಣಿ ! (ಪ್ರಣತ-ಆರ್ತಿ-ಹರುನಿ-ರಾಣಿ) ತಾಯೆ, ಒಂದಿಷ್ಟೂ ಮಾಲಿನ್ಯವಿಲ್ಲದ ಗುಣವಂತೆಯೇ (ಅಮಲಗುಣಾ!) ತ್ರಿಪುರ ಸುಂದರಿ, ದೇವಿ ನಿನಗೆ ಪರಾಕು ! ಬಹುಪರಾಕು ಹೇ ಧರ್ಮ ಸಂವರ್ಧನಿ!

ಚ. 1. : ನಿನ್ನ ಸನ್ನಿಧಿಯನ್ನು ಸೇರಿ ಸೇವೆ ಮಾಡಿದ, ನಿನ್ನನ್ನೇ ಸದಾಕಾಲವೂ

ಧ್ಯಾನಿಸುತ್ತಿರುವ ಸದ್ಭಕ್ತರ ಮತ್ತು ನಿನ್ನದಾಸರೇ ಆಗಿಬಿಟ್ಟ ಭಕ್ತ ಜನರ ಆ ಭಾಗ್ಯವನ್ನೆಂತು ವರ್ಣಿಸಲಿ ತಾಯೆ!

ಓ ಸಕಲ ಪಾಪಶಮನಿ, ಓಂಕಾರಿ, ನಿನಗೆ ಸಾಟಿ ಯಾರು ಈ ಜಗತ್ತಿನಲ್ಲಿ! ನಿರತವಾಗಿ ನಾ ನಿನ್ನನೇ ಸೇವಿಸಿದೆ! ವಿಧಿ ಎಂತುಂಟೋ! 'ನಿಯತಿ ಎಟುಲನೋ' ಎಂಬ ಖಿನ್ನಮನಸ್ಕರ ಮಾತನ್ನು ಇಲ್ಲಿ ಸೇರಿಸಿರುವುದನ್ನು ಗಮನಿಸಿದಾಗ ಶಾಸ್ತ್ರಿಗಳು ಬಹಳ ಅಸ್ವಸ್ಥರಾಗಿದ್ದುದು ಮನಸ್ಸಿನಲ್ಲಿ ಆತಂಕ ಮೂಡಿಸಿತ್ತು ಎಂದು ಹೇಳುವಂತಿದೆ.

ಚ. 2. : ಮನಸ್ಸಿನಲ್ಲಿ ಏನೋ ಗೊಂದಲ ಸೇರಿಗೊಂಡು, ಮತ್ತಾವ ದಾರಿಯೂ ತೋರದೆ (ಹಾಡಲಾಗದೆ ಎಂದಿರಬಹುದು!) ನಿನ್ನಮಹಿಮೆಗಳನ್ನೆಲ್ಲ ಕಿವಿಯಾರ ಕೇಳಿ, ಮನಸ್ಸಿನಲ್ಲಿನ ದುಗುಡವನ್ನು ನಿವಾರಿಸಲು ಈ ಸಮಯದಲ್ಲಿ, ಯಾವಾಗಲೂ ಬಹು ನಿಪುಣತೆಯಿಂದ ಕಾಪಾಡುವ ನೀನೇ ಅಲ್ಲದೆ ಮತ್ತಾರೂ ಇಲ್ಲ ಎಂದು, ಧ್ಯಾನಿಸಿ ,ಸೇವೆ ಮಾಡಿದೆ ತಾಯೆ !(ಗೊಲಿಚಿತಿ)

ಚ.3.: ಮಳೆಮೋಡ ಕಾಂತಿಯು, ವರ್ಣದ, ನೀಲ ಕೇಶರಾಶಿಯ ಸೌಂದರ್ಯವುಳ್ಳವಳು ದೇವಿ – 'ಧಾರಾಧರ ವಿನೀಲ ಕಚಲಸಿತಾ', ರಸಪೂರ್ಣವೂ, ಒರೆಯಿಟ್ಟು (ನಿಶಿತಾ) ತೇರ್ಗಡೆಯಾದುದೂ ಆದ ಕವಿತಾ ಸ್ವರೂಪಳಾಗಿ, ಕರ್ಪೂರದ ಬಿಳುಪಿನ ಶುಭ್ರತೆಯ ಕಿರುನಗೆಯಿಂದ ಶೋಭಿಸುವವಳು, (ಸಾರ ಘನಸಾರ ಸಿತ ದರಹಸಿತಾ), ಕಮಲದಂತೆ ಸುಂದರವಾಗಿರುವುದೇ ಮಾತೆಗೆ ಉಚಿತವಾದುದೆಂಬ ಅಪರೂಪದ ಮಾತಿದು- 'ವಾರಿರುಹವಾರಿವದನೋಚಿತಾ', ವಾಗ್ದೇವಿಯ ಪತಿ ಬ್ರಹ್ಮನಿಂದ ನುತಳು (ವಾಗೀಶನುತಾ), ಆಶ್ರಿತರನ್ನು ಭರಿಸುವವಳು, ಆಶ್ರಿತರಿಂದ ಸಮೂಹಿತಳಾದವಳು ಎಂಬ ಎರಡೂ ಅರ್ಥ ಹೊರುವ ಅಪರೂಪವಾದ 'ಭೃತನತಾ' ಎಂಬ ಮಾತನ್ನು ಬಳಸುತ್ತಾರೆ. ನಾರಾಯಣೀ, ಶ್ಯಾಮಕೃಷ್ಣನುತೇ, ಗಿರಿಸುತೆ ಪಾರ್ವತಿಯೇ ನನ್ನ ಮೊರೆ ಆಲಿಸಮ್ಮಾ ಎಂದು ಬೇಡುತ್ತಾರೆ.

ಶ್ರೀ ಶಾಸ್ತ್ರಿಗಳಿಗೆ ವಿಶೇಷ ಸ್ಥಾನ ಕಲ್ಪಿಸಿರುವ 'ಸ್ವರ ಸಾಹಿತ್ಯ'ವನ್ನು ಈ ಕೃತಿ ಹೊಂದಿದೆ. ಹೇ ಸರೋಜ ನಯನೇ, ನತಜನಪಾಲಿನಿ ಎಂದು ವೇದಗಳೇ ಮೊರೆಯುವಾಗ (ಘೋಷಿಸುವಾಗ) ಇತರರ ಮಾತೇನು! ನನ್ನ ಮನವಿಯನ್ನಾಲಿಸಿ ಕೃಪೆ ಮಾಡು ತಾಯೆ. ಇನ್ನು ವಿಳಂಬ ಮಾಡಲಾಗದು ನೀನು. 'ಪರಾಕು' ಎನ್ನುವ ಪದವನ್ನು ಮೊದಲು ಮಹಾರಾಜ್ಞಿಗೆ ಸಲ್ಲುವ 'ಭೋ ಪರಾಕು ಬಹುಪರಾಕು ದೇವಿ' ಎಂಬ ಅತ್ಯುನ್ನತ ಗೌರವದ ಮಾತಾಗಿ ಬಳಸಿ ಕೃತಿಯ ಕಡೆಯಲ್ಲಿ ಅದೇ ಪದವನ್ನು 'ವಿಳಂಬ', 'ಉಪೇಕ್ಷೆ' ಎಂಬ ಅರ್ಥದೊಡನೆ ಬಳಸಿದ್ದಾರೆ ಎಂಬುದು ಈ ಕೃತಿಯಲ್ಲಿನ ವಿಶೇಷತೆಗಳಲ್ಲೊಂದು. ಎಂದಿಗಿಂತಲೂ ಶ್ರೀ ಶಾಸ್ತ್ರಿಗಳು ಅನಾರೋಗ್ಯದಲ್ಲಿ ಬಳಲುತ್ತಿದ್ದಾಗಲೆ ಅವರ ಭಾವನಾ ಶ್ರೀಮಂತಿಕೆ, ಭಾಷಾ ಶ್ರೀಮಂತಿಕೆ ಭಾವುಕತಾ ಶ್ರೀಮಂತಿಕೆಗಳು ಶಿಖರಕ್ಕೇರಿ ವಿಲಾಸವಾಡಿದಂತೆ ತೋರುತ್ತದೆ ಈ ಕೃತಿಯ ಸಾಹಿತ್ಯದ ಓಘ ನಮ್ಮನ್ನು ಸೆಳೆದುಕೊಂಡಾಗ.

35. 'ಮಾಯಮ್ಮಾ ನನ್ನು ಬ್ರೋವವಮ್ಮಾ' -

ರಾಗ : ನಾಟಕುರಂಜಿ **ತಾಳ : ಆದಿ**

||ಪ.|| ಮಾಯಮ್ಮಾ ನನ್ನುಬ್ರೋವವಮ್ಮಾ ಮಹಾಮಾಯಾ ಉಮಾ !
|| ಮಾಯಮ್ಮ||

||ಅ.ಪ.|| ಸತ್ಯಾನಂದಾ, ಸಾನಂದಾ, ನಿತ್ಯಾನಂದಾ, ಆನಂದಾ ! ಅಂಬಾ !
|| ಮಾಯಮ್ಮ||

||ಚ.|| ಶ್ಯಾಮಕೃಷ್ಣ ಜನನೀ, ತಾಮಸಮೇಲೆ ರಾವೇ ದೇವಿ !
ಶ್ಯಾಮಳೇ ನಿಲೋತ್ಪಲೇ ಹಿಮಾಚಲಸುತೇ ಸುಫಲೇ ಶಿವೇ !
|| ಮಾಯಮ್ಮ||

|| ಸ್ವರ ಸಾಹಿತ್ಯ|| ಮಾಧವಾದಿ ವಿನುತ ಸರಸಿಜಾಕ್ಷಿ ಕಂಚಿ ಕಾಮಾಕ್ಷಿ
ತಾಮಸಮುಸೇಯಕ ರಮ್ಮಾ ಮರಕತಾಂಗಿ ಮಹಾತ್ರಿಪುರ ಸುಂದರಿ
ನಿನ್ನೇ ಹೃದಯಮು ಪಟ್ಟುಕೊನಿ || ಮಾಯಮ್ಮಾ||

ವ್ಯಾಖ್ಯಾನ

ಈ ಕೃತಿ ಒಂದೇ ಚರಣುಳ್ಳದ್ದು. ಕರ್ನಾಟಕ ಸಂಗೀತದ ಅತಿಸುಂದರ

ಮಹಾರಕ್ತಿರಾಗವಾದ, ಘನರಾಗದ ಲಕ್ಷಣಗಳನ್ನು ಹೊಂದಿರುವ ನಾಟಕುರಂಜಿ ರಾಗದಲ್ಲಿನ, ಶಾಸ್ತ್ರಿಗಳ ಏಕೈಕ ಕೃತಿ ಇದು. ಅವರ ಎಂದಿನ, ಎಲ್ಲ ಕೃತಿಗಳಲ್ಲೂ ಪುನರಾವರ್ತಿಸುವ 'ತಾಮಸವೇಕೆ' ಮುಂತಾದ ಭಾವನೆಗಳ ಅಭಿವ್ಯಕ್ತಿಯ ಜತೆಗೆ ಕೆಲವು ವಿಶೇಷತೆಗಳುಂಟು ಈ ಕೃತಿಯಲ್ಲಿ.

ನಮ್ಮಮ್ಮಾ ನನ್ನನ್ನು ಕಾಪಾಡೇ ಅಮ್ಮಾ. ಉಮಾ, ಮಹಾಮಾಯಾ! ಇಲ್ಲಿ, 'ಮಹಾಮಾಯಾ' ಎಂಬ ಅಮ್ಮನವರ ಹೆಸರು ನೇರವಾಗಿ ಲಲಿತಾ ಸಹಸ್ರನಾಮದಿಂದ ತೆಗೆದು ಇಟ್ಟುದು. ಮಾತೆ ಮಹಾಮಾಯೆ. ಬ್ರಹ್ಮಾದಿಗಳಿಗೂ ಕೂಡ ಮೋಹವನ್ನುಂಟು ಮಾಡುವವಳು ದೇವಿ ಎಂದರ್ಥ. 'ಜ್ಞಾನಿನಾಂ ಅಪಿ ಚೇತಾಂಸಿ ದೇವೀ ಭಗವತೀ ಹಿ ಸಾ| ಬಲಾತ್ ಆಕೃಷ್ಯ ಮೋಹಾಯ ಮಹಾಮಾಯಾ ಪ್ರಯಚ್ಛತಿ" ಎಂದು-ಅಂದರೆ, ಜ್ಞಾನಿಗಳ ಮನಸ್ಸನ್ನೂ ಸಹ ಬಲತ್ಕಾರದಿಂದ ಆಕರ್ಷಿಸಿ ಮೋಹಕ್ಕೆ ವಶಪಡಿಸುತ್ತಾಳೆ ದೇವಿ ಎಂದು ಮಾರ್ಕಂಡೇಯ ಪುರಾಣ ತಿಳಿಸುತ್ತದೆ. ಸತ್ಯಾನಂದಾ, ಸಾನಂದಾ, ನಿತ್ಯಾನಂದಾ, ಆನಂದಾ ಅಂಬ ಎಂಬ ಅಷ್ಟೂ ಮಾತುಗಳಲ್ಲಿ ಶ್ರೀ ಶಾಸ್ತ್ರೀಗಳು ಲಲಿತಾ ಸಹಸ್ರನಾಮದ 365ನೇ ನಾಮವಾದ 'ಸ್ವಾತ್ಮಾನಂದಲವೀಭೂತ ಬ್ರಹ್ಮಾದ್ಯಾನಂದ ಸಂತತಿಃ' ಎಂಬ, ದೇವಿಯ ಮಹತ್ವಪೂರ್ಣ ವರ್ಣನೆಯನ್ನು ಬಿಡಿಸಿ ಪ್ರತ್ಯೇಕ ಶಬ್ದಗಳಲ್ಲಿ ಹೇಳಿದ್ದಾರೆ. ಶಾಸ್ತ್ರಿಗಳು ಈ ಕೃತಿಯಲ್ಲೂ ಸ್ವರಸಾಹಿತ್ಯವನ್ನು ರಚಿಸಿದ್ದಾರೆ, ಹೀಗಿದೆ:

ಮಾಧವನೇ ಮೊದಲಾದವರಿಂದ ನುತಳು. ಸರಸಿಜಾಕ್ಷಿ, ಕಂಚಿ ಕಾಮಾಕ್ಷಿ, ತಾಮಸ ಮಾಡಬೇಡಮ್ಮಾ, ಮರಕತಾಂಗಿ, ಮಹಾತ್ರಿಪುರಸುಂದರಿ, ಸುಂದರಿ, ಹೃದಯದಲ್ಲಿ ನಿನ್ನನ್ನೇ ಸ್ಥಾಪಿಸಿಕೊಂಡಿದ್ದೇನೆ. ಶ್ಯಾಮಕೃಷ್ಣ ಸೋದರಿ, ಜನನಿ, ವಿಳಂಬವೇಕೆ ಬಾರಮ್ಮಾ, ಶ್ಯಾಮಲೇ ನೀಲೋತ್ಪಲನಾಯಿಕೆಯೇ, ಹಿಮಾಚಲ ಪುತ್ರಿ ಪಾರ್ವತಿಯೇ, ಫಲದಾಯಿನಿ ಶಿವೇ ಕಾಪಾಡಮ್ಮಾ.

36. **'ರಾವೇ ಪರ್ವತರಾಜ ಕುಮಾರೀ'-**

ರಾಗ : ಕಲ್ಯಾಣಿ **ತಾಳ : ತ್ರಿಶ್ರ ಮಠ್ಯ**

||ಪ.|| ರಾವೇ, ಪರ್ವತರಾಜ ಕುಮಾರೀ! ದೇವಿ, ನನ್ನು ಬ್ರೋಚುಟಕು
ವೇವೇಗಮೇ || ರಾವೇ||

||ಅ.ಪ.||ನೀವೇ ಗತಿಯನಿ ನಮ್ಮಿಯುಂಟಿಗದಾ ? ನಾ ಮೊರಲಿಡಗಾ
ಜೆಪ್ಪವಮ್ಮಾ ಮಾತಲ್ಲಿ || ರಾವೇ||

||ಚ.1.|| ಧೀರ ಕುಮಾರ ವಂದಿತ ಪದಾ ! ನೀರದವೇಣಿ, ತ್ರಿಲೋಕ ಜನನಿ
ನೀವು ಗದಾ !?
ನಾರದಾದಿನುತ ಶುಭಚರಿತಾ! ಉದಾರ ಗುಣವತೀ ಪದಾಬ್ಜಮುಲೇ
ಶರಣಂಟಿ ||ರಾವೇ||

||ಚ.2.|| ಮೀನಲೋಚನಿ ಕೃಪಜೂಡಮ್ಮಾ ! ದೀನರಕ್ಷಕಿ ಎನಿ ಬಿರುದು ನೀಕು
ತಗು ದಾನವರಿಪು ತೋಷಿಣಿ, ಪುರಾಣೀ, ಅಭಯದಾನಮೀಯವೇ
ಶ್ಯಾಮಕೃಷ್ಣ ಸೋದರಿ! ||ರಾವೇ||

ವ್ಯಾಖ್ಯಾನ

ಕರ್ಣಾಟಕ ಸಂಗೀತದ ಮಹಾರಾಗಗಳಲ್ಲೊಂದಾದ ಕಲ್ಯಾಣಿಯಲ್ಲಿ ತಮ್ಮ ಅತ್ಯಧಿಕ ಸಂಖ್ಯೆಯ -8- ಕೃತಿಗಳನ್ನು ಶಾಸ್ತ್ರಿಗಳು ರಚಿಸಿರುವುದರಲ್ಲಿ ಇದೊಂದು ಕೃತಿ. ಸಾಹಿತ್ಯಭಾವ ನೋಡೋಣ:

ಬಾರೇ ದೇವಿ, ಹೇ ಪರ್ವತರಾಜಕುಮಾರಿ, ಪಾರ್ವತಿ ನನ್ನನ್ನು ಕಾಪಾಡಲು ಬೇಗ ಬೇಗ ಬಾರಮ್ಮಾ! ನಮ್ಮಮ್ಮಾ, ನೀನೇ ಗತಿಯೆಂದು ನಂಬಿದ್ದೇನಲ್ಲವೇ, ನನ್ನ ಮೊರೆ ಇಟ್ಟಾಗ ಉತ್ತರಿಸು ತಾಯೆ!

ಎರಡು ಚರಣಗಳುಳ್ಳ ಕೃತಿ ಇದು.

1. ಧೀರನಾದ ಕುಮಾರಸ್ವಾಮಿ ವಂದಿತ ಪದಯುಗಳೆ, ಮೋಡದ ಕಾಂತಿಯ ಕೇಶರಾಶಿಯವಳೇ, ತ್ರಿಲೋಕ ಜನನಿ ನೀನೇ ಅಲ್ಲವೇ ನಾರದಾದಿನುತೆ, ಶುಭಚರಿತೆ, ಮಹಾಗುಣವತಿ. ನಿನ್ನ ಪಾದಪದ್ಮಗಳೇ ಶರಣೆಂದೆ ತಾಯಿ!

2. ಮೀನಲೋಚನಿ, ದೀನರಕ್ಷಕಿ ಎಂದೇ ನಿನ್ನ ಬಿರುದು ನಿನಗೆ ಮಾತ್ರವೇ ಹೊಂದುವುದಲ್ಲವೇ!? ದಾನವ ಸಂಹಾರಕ ಶಿವನಿಗೆ ಸಂತೋಷ ಕೊಡುವವಳು. ಪುರಾಣಿ (ಪ್ರಾಚೀನಳು) ಶ್ಯಾಮಕೃಷ್ಣ ಸೋದರಿ ಅಭಯ ಪ್ರದಾನ ಮಾಡುವ ತಾಯೆ! ಬಾ ತಾಯೆ?

37. 'ಬೃಹನ್ನಾಯಕೀ' -

ರಾಗ : ಮಧ್ಯಮಾವತಿ ತಾಳ : ತ್ರಿಶ್ರಮಠ್ಯ

ಸಾಹಿತ್ಯದ ಮೂಲ ಪಾಠ

||ಪ.|| ಬೃಹನ್ನಾಯಕೀ ! ನನ್ನು ಬ್ರೋವು ವೇಗಮೇ ! ||ಬೃಹನ್ನಾಯಕಿ||

||ಅ.ಪ.|| ಬೃಹದಂಬಾ ! ನೀಮಹಿಮಲು ಬ್ರಹ್ಮಾದಿ ಸುರುಲಚೇ ಪೊಗಡ
ತರಮಾ? ||ಬೃಹನ್ನಾಯಕಿ||

||ಚ.1.|| ದೇವೀ ನೀವೇ ಗತಿಯೆನಿ ಅಂಬಾ ದೃಢ ಭಕ್ತಿತೋ ಪೂಜಿಂಚೆ ಗದಾ
ನಾ ವೆತ ದೀರ್ಚವೇ ಕರುಣಜೂಡ ಸಮಯಮಿದೇ! ನೀಪಾದಮೇ
ಗತಿಯನುಚು ನೆರನಮ್ಮಿತಿ ||ಬೃಹನ್ನಾಯಕಿ||

||ಚ.2.|| ದೀನ ರಕ್ಷಕಿ ನೀವನಿ ಸದಾ ದಲಚಿನ ದಾಸುಡು ನೇನು
ಗದಾ!ಮಾಕಭಯ-ದಾನಮೀಯವೇ ಕಾಮಿತದಾಯಿಕೇ! ನೀನಾಮಮೇ
ಅನುದಿನಮು ಮರವಕನು ||ಬೃಹನ್ನಾಯಕಿ||

||ಚ.3.|| ಶ್ಯಾಮಕೃಷ್ಣಪಾಲಿನಿ ಗೌರಿ, ಸುಲಲಿತೇ, ಶ್ಯಾಮಳೇ! ನಾತೋ ವಾದಾ
ಮಾಯಮ್ಮಾ?
ಈ ಮಹಿಲೋ ನೀ ಸಮಾನಮೆವರು ಈ ವೇಳನು ದುರಮುಗನು
ವರಮೊಸಗು ||ಬೃಹನ್ನಾಯಕಿ||

ಮಧ್ಯಮಾವತಿ ರಾಗದಲ್ಲಿ ಶ್ರೀ ಶಾಸ್ತ್ರಿಗಳು 1 ಗೀತವನ್ನೂ 2 ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ 'ಪಾಲಿಂಚು ಕಾಮಾಕ್ಷಿ ಪಾವನಿ' ಅತಿಪ್ರಸಿದ್ಧವಾದ ಕೃತಿ. ಮಧ್ಯಮಾವತಿ ರಾಗದ ಇನ್ನೊಂದು ಕೃತಿ ಇದು.

ಹೇ ಬೃಹನ್ನಾಯಕಿ ನನ್ನನ್ನು ಬೇಗನೆ ಕಾಯಮ್ಮಾ! ಬೃಹದಂಬೆ, ನಿನ್ನ ಮಹಿಮೆಗಳು ಬ್ರಹ್ಮಾದಿಸುರರಿಗೇ ಹೊಗಳಲು ನಿಲುಕವಂಥವೇ? ಯಥಾ ಪ್ರಕಾರ, ಈ ಕೃತಿಯಲ್ಲೂ 3 ಚರಣಗಳಿವೆ:

1. ದೇವಿ! ನೀನೇ ಗತಿಯೆಂಬ ದೃಢ ಭಕ್ತಿಯಿಂದ ಪೂಜಿಸಿಯೇ ಅಲ್ಲವೆ, ನಿನ್ನ ಪಾದವೇ ಗತಿ ಎಂದೂ, ಇದು ಸಮಯ ನಿನ್ನ ಕರುಣೆ ತೋರಲು ಎಂದೂ ದೃಢವಾಗಿ ನಂಬಿದೆ?

2. ದೀನರಕ್ಷಕಿ ನೀನೆಂದು ಸದಾ ನೆನೆದ ನಿನ್ನ ದಾಸನಲ್ಲವೆ ನಾನು? ನಮಗೆ ಅಭಯದಾನಕೊಡು ಕಾಂಕ್ಷಿತಾರ್ಥದಾಯಿನಿ. ನಿನ್ನ ನಾಮವನ್ನು ಎಂದೆಂದಿಗೂ ಮರೆಯದೆ-ನಿನ್ನನ್ನೇ ನಂಬಿದೆನಮ್ಮಾ!

3. ಶ್ಯಾಮಕೃಷ್ಣ ಪರಿಪಾಲಿನಿ ಗೌರಿ, ಸುಲಲಿತೇ, ಶ್ಯಾಮಲೇ, ನಮ್ಮಮ್ಮ ನೀನು, ನನ್ನೊಂದಿಗೆ ವಾದವೇ, ಚರ್ಚೆಯೇ? ಈ ಲೋಕದಲ್ಲಿ ನಿನ್ನ ಸಮಾನವಾದ ದೈವ ಯಾವುದಿದೆ? ಈಗಲೇ ಶೀಘ್ರವಾಗಿ ವರಕೊಡು ತಾಯೆ !

38. 'ಸರಿಯೆವರಮ್ಮಾ' –

ರಾಗ : ಭೈರವಿ **ತಾಳ : ಖಂಡಜಾತಿ ಝಂಪೆ**

ಸಾಹಿತ್ಯದ ಮೂಲ ಪಾಠ

|| ಪ|| ಸರಿಯೆವರಮ್ಮಾ ಅಂಬಾ, ನೀ ದಯಜೂಡವಮ್ಮಾ ಶ್ರೀ ಕಾಮಾಕ್ಷಿ,
ನೀ ||ಸರಿಯೆವರಮ್ಮಾ||

||ಅ.ಪ.||ಪರಮ ಪಾವನೀ, ಭವಾನೀ, ದೇವಿ, ಪರಾಶಕ್ತಿ ನೀವನಿ ನಮ್ಮನಾನು
||ಸರಿಯೆವರಮ್ಮಾ||

||ಚ.1.||ಮಾಧವ ಸೋದರಿ, ಗೌರಿ, ಅಂಬ, ಮಹಾಭೈರವಿ ಶಾಂಭವೀ
ನಾದರೂಪಿಣೀ ಜನನೀ ದೇವಿ ನಾರಾಯಣೀ, ನಳಿನಾಕ್ಷಿ!
||ಸರಿಯೆವರಮ್ಮಾ||

||ಚ.2.||ರಾಜರಾಜೇಶ್ವರೀ, ಚಿದ್ರೂಪೀ, ರಾಜೀವಾಕ್ಷೀ, ಲೋಕಸಾಕ್ಷೀ!
ತೇಜೋಮಯೀ ಜನನೀ ದೇವೀ, ಓಜೋವತೀ, ಓಂಕಾರೀ!
||ಸರಿಯೆವರಮ್ಮಾ||

||ಚ.3.||ಪಾಮರ ಪಾವನೀ ಪಾರ್ವತೀ, ಪಾಕಾರಿವಿನುತೇ, ಶ್ರೀ ಲಲಿತೇ !
ಶ್ಯಾಮಕೃಷ್ಣ ಪರಿಪಾಲಿನೀ ದೇವೀ, ಶ್ಯಾಮಗಿರಿ ಸುಪುತ್ರೀ !
||ಸರಿಯೆವರಮ್ಮಾ||

||ಸ್ವರ ಸಾಹಿತ್ಯ|| ಸಾರಸ, ದಳನಯನಾ, ಹರಿಹರ ಸುರನುತ ಲಲಿತಾ! ನಿನ್ನು
ಸತತಮು ಶರಣಮು ಕೋರಿತಿನಿ ಕಮಲಪಾದಯುಗಮು ನಮ್ಮಿತಿ
ಸುಂದರಿ, ಶಂಕರಿ! ಈ ಜಗಮುಲೋ ||ಸರಿಯೆವರಮ್ಮಾ||

ವ್ಯಾಖ್ಯಾನ

ಕರ್ಣಾಟಕ ಸಂಗೀತದ ಪದ್ಧತಿಯ, ಶೈಲಿಯ ಸಂಕೀರ್ಣತಮ ಗಮಕ ವೈಭವದ ಅನ್ವಯದ ಆನಂದಾನುಭೂತಿ ಶುದ್ಧರೂಪದಲ್ಲಿ ದೊರೆಯುವುದು ಅತ್ಯಧಿಕವಾಗಿ ಭೈರವಿ, ತೋಡಿಗಳಂಥ ರಾಗಗಳ ಸೌಂದರ್ಯಗಳಲ್ಲಿ. ಅಂಥ ಭೈರವಿಯಲ್ಲಿ ಶ್ರೀ ಶಾಸ್ತ್ರಿಗಳು ವಿರಳವಾಗಿ ಬಳಕೆಯಾಗಿರುವ ಖಂಡ ಮಠ್ಯ ತಾಳದಲ್ಲಿ ಒಂದು ಗೀತವನ್ನು ರಚಿಸಿದ್ದು, ಅವರ ಉಳಿದೆರಡು ರಚನೆಗಳು ಚೇತೋಹಾರಿಯಾದ ಕಾಮಾಕ್ಷಿ ಮಿಶ್ರಛಾಪು ತಾಳದ ಸ್ವರಜತಿ ಮತ್ತು ವಿಸ್ತಾರವಾದ ಚೌಕಟ್ಟಿನಲ್ಲಿ ಖಂಡಝುಂಪೆ ತಾಳದಲ್ಲಿ-ಮತ್ತೊಂದು ವಿರಳವಾಗಿ ಬಳಕೆಯಾಗಿರುವ ತಾಳದಲ್ಲಿ ರಚಿತವಾದ, ತಾರಸ್ಥಾಯಿಯಲ್ಲಿ ಸ್ವರಾಕ್ಷರದೊಂದಿಗೆ ಆರಂಭಿಸುವ ಕೃತಿ 'ಸರಿಎವರಮ್ಮಾ'.

ಯಥಾ ಪ್ರಕಾರವಾಗಿಯೇ 3 ಚರಣಗಳ ಕೃತಿ ಇದು. ಸ್ವರ ಸಾಹಿತ್ಯವನ್ನು ಉಳ್ಳದ್ದು. ಅಂಬೆ, ಶ್ರೀ ಕಾಮಾಕ್ಷಿ, ನಿನ್ನ ದಯೆ ತೋರಮ್ಮಾ, ನಿನಗೆ ಸಾಟಿಯಾದವರಾರುಂಟು ದೇವಿ!

ಪರಮ ಪಾವನಿ, ಭವಾನಿ, ದೇವಿ, ಪರಾಶಕ್ತಿ ಎಂಬುವಳು ನೀನೇ ಎಂದು ನಂಬಿದ್ದೇನೆ.

ಸ್ವ. ಸಾ: ಸಾರಸದಳ ನಯನೇ, ಹರಿಹರನುತೇ ಲಲಿತೇ ಸದಾ ನಿನ್ನಾಶ್ರಯವನ್ನೇ ಕೋರಿದೆ. ನಿನ್ನ ಪದಕಮಲಗಳನ್ನೇ ನಂಬಿದೆ. ಸುಂದರಿ, ಶಂಕರಿ, ಈ ಜಗದಲಿ ನಿನಗೆ ಸರಿಯಾರಮ್ಮಾ!

ಚ. 1. : ಮಾಧವ ಸೋದರಿ, ಗೌರಿ, ಮಹಾಭೈರವಿ, ಶಾಂಭವಿ, ನಾದರೂಪಿಣಿ, ಜನನಿ, ದೇವಿ, ನಾರಾಯಣಿ, ನಳಿನಾಕ್ಷಿ- ಸರಿಯಾರಮ್ಮಾ ನಿನಗೆ!

ವಾಗ್ಗೇಯಕಾರರು ಒಂದು ವಿಶೇಷಣವನ್ನಾಗಲಿ ಭಾವನೆಯನ್ನಾಗಲಿ, ಮಾತನ್ನಾಗಲಿ ಬೇರೆ ಬೇರೆ ರಾಗಗಳ ರಚನೆಗಳಲ್ಲಿ ಪುನಃ ಬಳಸುವುದಾದರೂ ಕೆಲವೊಮ್ಮೆ ಸಹಜವೆನಿಸಬಹುದು. ಆದರೆ ಒಂದೇ ರಚನೆಯಲ್ಲಿ ಒಂದೇ ಮಾತನ್ನು ಪುನಃ ಬಳಸುವುದು ಶ್ಯಾಮಶಾಸ್ತ್ರಿಗಳ ಹಲವು ರಚನೆಗಳಲ್ಲಿನ ವಾಸ್ತವಾಂಶ. ಈ ಒಂದೇ ಕೃತಿಯಲ್ಲಿ ಸ್ವರ

ಸಾಹಿತ್ಯವನ್ನು ಪ್ರಾರಂಭಿಸುವ 'ಸಾರಸದಳ ನಯನಾ' ಎಂಬ ವಿಶೇಷಣವೇ ಚರಣದಲ್ಲಿ 'ನಳಿನಾಕ್ಷಿ' ಎಂಬ ವಿಶೇಷಣದಲ್ಲಿ ಪುನರಾವರ್ತಿಸಿರುವುದು ಉದಾಹರಣೆ.

ಚ. 2. : ರಾಜರಾಜೇಶ್ವರಿ, ಚಿದ್ರೂಪಿ (ಎಂದರೆ ಜ್ಞಾನರೂಪಿಣಿ ಎಂದರ್ಥ)ರಾಜೀವಾಕ್ಷಿ, ಲೋಕಸಾಕ್ಷಿ, ತೇಜೋನ್ಮಯಿ, ಜನನಿ, ದೇವಿ, ಓಜೋವತಿ (ಶಕ್ತಿಯನ್ನೂ, ತೇಜಸ್ಸನೂ ಉಳ್ಳವಳು) ಓಂಕಾರಿ.

ಚ. 3. : ಪಾಮರ ಪಾವನಿ (ದುಷ್ಟರನ್ನೂ, ನೀಚರನ್ನೂ, ಮೂರ್ಖರನ್ನೂ, ತಿದ್ದಿ ಪಾವನಗೊಳಿಸಿ ಯೋಗ್ಯರನ್ನಾಗಿ ಮಾಡುವವಳೆಂದರ್ಥ) ಪಾರ್ವತಿ, ದೇವೇಂದ್ರನುತಳೇ, ಶ್ರೀ ಲಲತೇ, ಶ್ಯಾಮಕೃಷ್ಣ ಪರಿಪಾಲಿನಿ, 'ಶ್ಯಾಮಗಿರಿ ಸುಪುತ್ರಿ'- ಸಾಮಾನ್ಯವಾಗಿ ಹಿಮಗಿರಿ ಕುಮಾರಿ, ಹಿಮಾದ್ರಿಸುತೇ, ಹಿಮಗಿರಿಸುತೇ, ಇತ್ಯಾದಿಯಾಗಿ ಬಳಸುವ ವಿಶೇಷಣವನ್ನು ಇಲ್ಲಿ 'ಶ್ಯಾಮಗಿರಿ ಸುಪುತ್ರಿ' ಎಂದಿರುವುದು ವಿಶೇಷ.

39. 'ದೇವಿ ಮೀನನೇತ್ರಿ' –

ರಾಗ : ಶಂಕರಾಭರಣ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ದೇವೀ, ಮೀನನೇತ್ರಿ, ಬ್ರೋವ ರಾವೇ ! ದಯಸೇಯವೇ,
ಬ್ರೋವರಾವಮ್ಮಾ! || ದೇವಿ||

||ಅ.ಪ.|| ಸೇವಿಂಚೇವಾರಿಕೆಲ್ಲನು ಚಿಂತಾಮಣಿಯೈಯುನ್ನ ||ದೇವಿ||

||ಚ.1.|| ಬಾಲಾ! ನೀವೇ ಗತಿಯೆನಿ ನಿನ್ನೇ ಚಾಲಾ ನಮ್ಮಿತಿ ನಾಪೈ ಪರಾ-
ಕೇಲಾ? ದಯಚೇಯ ನೀಕಿದಿ ಮೇಲಾ ದಿವ್ಯಾಂಬಾ !
ಕಾಲಾದಿ ವಾರಿಣೀ ಸದ್ಗುಣಶೀಲಾ, ಕೀರವಾಣೀ, ದೇವೀ!
ನೀಲನೀರದ ವೇಣೀ, ತ್ರಿಲೋಕ ಜನನೀ, ದೇವೀ, ಮಹೇಶ್ವರೀ,
ಭವಾನೀ! ||ದೇವಿ||

||ಚ.2.|| ಅಂಬಾ ಮುಖ ನಿರ್ಜಿತ ಶತಧರಬಿಂಬಾ! ರಕ್ಷಿತ ದೇವದಾತ-
ವಮ್ಮಾ! ನತನಿಜಸುತ ಗುಹ ಹೇರಂಬಾಂಬಾ, ಶ್ಯಾಮಳಾಂಬಾ!

ಬಿಂಬಾಧರೀ, ಗೌರೀ, ಕಾದಂಬವಿಹಾರೀ, ಅಂಬಾ!
ಕಂಬು ಕಂಠಿ ಹಿಮಶೈಲ ವೃಕ್ಷ ಪಾಲಿಕಾ ದೇವಿ ಬಾಲಾಂಬಿಕಾ ಅಂಬಾ!
|| ದೇವಿ||

||ಚ.3.|| ವಾಣೀ ರಮಾ ವಂದಿತ ರುದ್ರಾಣೀ, ನೀ ಸಾಟೆವರು ಕಲ್ -
ಯಾಣೀ, ಶ್ಯಾಮಕೃಷ್ಣನುತಾ, ಕೀರವಾಣೀ, ಶರ್ವಾಣೀ!
ವೀಣಾವಿನೋದಿನೀ, ಶ್ರೀಚಕ್ರಕೋಣ ನಿವಾಸಿನಿ ಗೀರ್-
ವಾಣ ವಂದಿತ ಪದಾರವಿಂದಾ, ಶಿವಾ, ದೇವೀ, ಕಾತ್ಯಾಯಿನೀ,
ಅಂಬಾ! || ದೇವಿ||

ವ್ಯಾಖ್ಯಾನ

ಮಹಾರಕ್ತಿರಾಗವೆಂದು ಪ್ರಸಿದ್ಧಿ ಪಡೆದರೂ ಘನಗಾಂಭೀರ್ಯಗಳ ಅಗಾರವಾದ, ಪೂರ್ವ ಪ್ರಸಿದ್ಧ 19 ಮೇಳಗಳಲ್ಲೇ ದೊಡ್ಡ ಸ್ಥಾನ ಪಡೆದಿದ್ದು ಅದೇ ಅಗ್ರಮಾನ್ಯ ಸ್ಥಾನವನ್ನು ಆಧುನಿಕ ಯುಗದಲ್ಲೂ ಉಳಿಸಿಕೊಂಡಿರುವ ಶಂಕರಾಭರಣ ರಾಗದಲ್ಲಿರುವ ಶ್ರೀ ಶ್ಯಾಮಶಾಸ್ತ್ರಿಗಳ ಎರಡು ಕೃತಿಗಳೂ ವಿಳಂಬ ಕಾಲದ ನಡೆಯುಳ್ಳ ಕೃತಿಗಳು. 'ಸರೋಜ ದಳನೇತ್ರಿ' ಕೃತಿಯು 'ದೇವಿ ಮೀನನೇತ್ರಿ' ಕೃತಿಗಿಂತ ಹೆಚ್ಚು ಪ್ರಸಿದ್ಧಿ-ಚಲಾವಣೆಗಳನ್ನು ಪಡೆದ ಕೃತಿ. 'ದೇವಿ ಮೀನನೇತ್ರಿ' ಕೃತಿಯ ಸಾಹಿತ್ಯ ಭಾವವನ್ನು ಸವಿಯೋಣ:

ದೇವಿ, ಮೀನಾಕ್ಷಿ ಕಾಪಾಡಲು ಬಾರಮ್ಮಾ, ದಯಮಾಡಮ್ಮಾ, ದಯೆಮಾಡಿ ನೀನು ನನ್ನನ್ನು ಕಾಪಾಡಲು ಬಾರಮ್ಮಾ! ನಿನ್ನ ಸೇವೆ ಮಾಡುವವರಿಗೆಲ್ಲ ಕೇಳಿಕೊಂಡುದನ್ನೆಲ್ಲಾ ಕೊಡುವ ಚಿಂತಾಮಣಿಯಾಗಿರುವೆ ತಾಯೆ!

ಇಲ್ಲೊಂದು ಟಿಪ್ಪಣಿಯ ಅಗತ್ಯವಿದೆ:

ಶ್ರೀ ಶ್ಯಾಮಶಾಸ್ತ್ರಿಗಳ ಕೃತಿಗಳನ್ನು ಪ್ರಕಟಿಸಿರುವ ಹಲವು ಗ್ರಂಥಗಳಲ್ಲಿ 'ಸೇವಿಂಚೇವಾರಿಕೆಲ್ಲನು ಚಿಂತಾಮಣಿಯೈ, ಯುನ್ನಾರಾ' ಎಂಬ ಪಾಠವೇ ಇದೆ. 'ಚಿಂತಾಮಣಿಯೈಯುನ್ನಾವು' 'ಚಿಂತಾಮಣಿಯಾಗಿದ್ದೀಯೆ'ಎಂಬುದು ಶ್ರೀ ಶಾಸ್ತ್ರಿಗಳ ಉದ್ದಿಶ್ಯ ಮತ್ತು ರಚನೆಯ ಶೈಲಿ. 'ಚಿಂತಾಮಣಿಯೈಯುನ್ನಾರಾ'

ಎಂದಾಗ 'ಚಿಂತಾಮಣಿಯಾಗಿದ್ದೀರಾ' ಎಂದು ಪ್ರಶ್ನಾರ್ಥಕವಾಗಿಯೋ ಇಲ್ಲವೇ ವಿಭಿನ್ನವಾಗಿ ಓದಿಕೊಂಡಾಗ 'ಚಿಂತಾಮಣಿಯ್ಯೈ ಯುನ್ನಾರಾ, ಎಂದರೆ 'ಉನ್ನಾನುರಾ' ಎಂದರೆ 'ಚಿಂತಾಮಣಿಯಾಗಿ ಇದ್ದೇನೆ' ಎಂಬ ಅರ್ಥ ಸ್ಫುರಿಸುತ್ತದೆ. ಎರಡೂ ಅರ್ಥಗಳೂ ಇಲ್ಲಿಯ ಸಂದರ್ಭಕ್ಕೆ ಹೊಂದುವುದಿಲ್ಲ. ಮಾನ್ಯ ಗಾಯಕರು ವಿಚಾರ ಮಾಡಿ ಸರಿಯಾದ ಪಾಠವನ್ನು ಹಾಡಿ ಶ್ರೀ ಶಾಸ್ತ್ರಿಗಳ ಸಾಹಿತ್ಯಕ್ಕೆ ನ್ಯಾಯತೋರಬೇಕೆಂದು ವಿನಮ್ರವಾಗಿ ನಿವೇದಿಸಿಕೊಳ್ಳುತ್ತೇನೆ. ಇನ್ನು ಚರಣದ ಸಾಹಿತ್ಯ ಹೀಗಿದೆ:

ಉತ್ತಮ 'ಲ'ಕಾರ ದ್ವಿತೀಯಾಕ್ಷರ ಪ್ರಾಸದೊಂದಿಗೆ ಶಬ್ದಾಲಂಕಾರದೊಂದಿಗೆ ಶೋಭಿಸುತ್ತದೆ. ಬಾಲೆ, ನೀನೇ ಗತಿಯೆಂದು ಬಹಳ ನಂಬಿದ ನನ್ನ ಮೇಲೆ ಉಪೇಕ್ಷೆ ಏಕೆ, ಇದು ನಿನಗೆ ಸರಿಯ ತಾಯೆ? ಕಾಲಕ್ಕಿಂತ ಮೊದಲಿಗನಾದ ಶಿವನರಾಣಿಯೇ, ಸದ್ಗುಣಶೀಲೆ, ಕೀರವಾಣಿ ದೇವಿ, ಮೋಡದ ನೀಲವರ್ಣದ ವೇಣಿ, ತ್ರಿಲೋಕ ಜನನಿ, ದೇವಿ ಮಹೇಶ್ವರಿ, ಭವಾನಿ. 'ದೇವಿ' ಎಂಬ ಶಬ್ದವನ್ನು ಇದೇ ಕೃತಿಯಲ್ಲೇ 3 ಸಲ ಬಳಸಿರುವುದು ಗಮನಾರ್ಹ.

40. 'ಸರೋಜದಳನೇತ್ರಿ' –

ರಾಗ : ಶಂಕರಾಭರಣ **ತಾಳ : ಆದಿ**

||ಪ.|| ಸರೋಜದಳನೇತ್ರಿ, ಹಿಮಗಿರಿ ಪುತ್ರಿ, ನೀ ಪದಾಬ್ಜಮುಲೇ
ಸದಾ ನಮ್ಮಿನಾನಮ್ಮಾ, ಶುಭಮಿಮ್ಮಾ, ಶ್ರೀ ಮೀನಾಕ್ಷಮ್ಮ!
|| ಸರೋಜದಳನೇತ್ರಿ||

||ಅ.ಪ.|| ಪರಾಕುಸೇಯಕ! ವರದಾಯಕಿ, ನೀವಲೆ ದೈವಮು ಲೋಕಮುಲೋ ಗಲದಾ!?
ಪುರಾಣಿ! ಶುಕಪಾಣೀ, ಮಧುಕರವೇಣೀ ! ಸದಾಶಿವುನಿಕಿ ರಾಣಿ!
|| ಸರೋಜದಳನೇತ್ರಿ||

||ಚ.1.|| ಕೋರಿವಚ್ಚಿನವಾರಿಕೆಲ್ಲನು ಕೋರ್ಕಲೊಸಗೇ ಬಿರುದುಗದಾ !? ಅತಿ
ಭಾರಮಾ ನನ್ನು ಬ್ರೋವ ತಲ್ಲಿ? ಕೃಪಾಲವಾಲ ತಾಳಾಜಾಲನೇ
|| ಸರೋಜದಳನೇತ್ರಿ||

||ಚ.2.|| ಇಂದುಮುಖಿ ಕರುಣಿಂಚುಮನಿ ನಿನ್ನು ಎಂತೋ ವೇಡು ಕೊಂಟಿನಿ !
ನಾ-ಯಂದು ಜಾಗೇಲನಮ್ಮಾ! ಮರಿಯಾದ ಗಾದು! ದಯಾವನಿ ನೀವು!
|| ಸರೋಜದಳನೇತ್ರಿ||

||ಚ.3.|| ಸಾಮಗಾನವಿನೋದಿನಿ, ಗುಣಧಾಮ, ಶ್ಯಾಮಕೃಷ್ಣನುತೇ! ಶುಕ
ಶ್ಯಾಮಳಾ ದೇವಿ ! ನೀವೇ ಗತಿ, ರತಿ ಕಾಮ ಕ್ಯಾಮದ ! ಕಾವವೇ
ನನ್ನು ! ||ಸರೋಜದಳನೇತ್ರಿ||

ವ್ಯಾಖ್ಯಾನ

ಬಹಳ ಜನಪ್ರಿಯವಾದ, ಪ್ರಿಸದ್ಧವಾದ ಕೃತಿ ಇದು. ಸಾಹಿತ್ಯ ಭಾವವನ್ನು ನೋಡೋಣ:

ಹೇ, ಸರೋಜದಳನೇತ್ರಿ ಈ ವಿಶೇಷಣ ಬಹುತೇಕ ಶಾಸ್ತ್ರಿಗಳ ಎಲ್ಲ ಕೃತಿಗಳಲ್ಲೂ ಬಳಸಿರುವಂಥದು. ಹಿಮಗಿರಿ ಪುತ್ರಿ (ಇದೂ ಸಹ ಬಹು ಪ್ರಯುಕ್ತ). ನಿನ್ನ ಪದಕಮಲಗಳನ್ನೇ ಸದಾ ನಂಬಿದ್ದೇನಮ್ಮಾ, ಶುಭವೀಯಮ್ಮಾ, ಮೀನಾಕ್ಷಮ್ಮಾ! ಪರಕುಮಾಡಬೇಡ (ಉಪೇಕ್ಷೆ ಮಾಡಬೇಡ, ತಡಮಾಡಬೇಡ) ಹೇ, ವರದಾಯಕಿ, ಲೋಕದಲ್ಲಿ ನಿನ್ನಂತೆ ಯಾರುಂಟು? ಪುರಾಣಿ, ಶುಕಪಾಣಿ ಮೀನಾಕ್ಷಮ್ಮಾ, ಸದಾಶಿವನ ರಾಣಿ, ದುಂಬಿಗಳ ಗುಂಪಿನಂತಿರುವ ಹೊಳೆಯುವ ಕೇಶವುಳ್ಳವಳೇ. ಇದಕ್ಕೂ 3 ಚರಣಗಳಿವೆ.

1. ಕೋರಿ ಬಂದವರಿಗೆ ಕೋರಿಕೆಗಳನ್ನು ಪೂರೈಸುವವಳೆಂಬ ಬಿರುದು ನಿನಗೇ ಅಲ್ಲವೇ. ಕೃಪಾಲವಾಲೆ (ಕೃಪೆ, ಶೇಖರಿಸಿ ನಿಲ್ಲುವ, ವೃಕ್ಷಕ್ಕಿರುವಂಥ ಪಾತ್ರ), ನನ್ನನ್ನು ಕಾಪಾಡಲಷ್ಟೇ ಅತಿಭಾರವಾಯಿತೆ ನಿನಗೆ? ತಾಳಲಾರೆನೆ ಈ ವಿಳಂಬ ತಾಯೆ!

2. ಹೇ, ಚಂದ್ರಮುಖಿ, ಕರುಣಿಸೆಂದು ನಿನ್ನನೆಷ್ಟೋ ಬೇಡಿಕೊಂಡೆ, ಆಲಸ್ಯವೇಕೆ ತಾಯಿ, ಸೂಕ್ತವಲ್ಲ, ನೀನು ದಯಾವತಿಯಲ್ಲವೇ ?

3. ಸಾಮಗಾನವಿನೋದಿನಿ, ಗುಣಧಾಮ (ಗುಣಗಳ ಆವಾಸಸ್ಥಾನ) ಹೇ, ಶ್ಯಾಮಕೃಷ್ಣನುತೇ, ಶುಕ ಶ್ಯಾಮಲೆಯಾದ ಮೀನಾಕ್ಷಮ್ಮಾ, ರತಿ ಮನ್ಮಥರಿಗೆ ಅನುಗ್ರಹಿಸಿದವಳು ನೀನೇ, ನೀನೇ ಗತಿ, ಕಾಯೆ ತಾಯೆ!

41. 'ನನ್ನುಬ್ರೋವರಾದಾ ವೇಗಮೆ ನೀವು' –

ರಾಗ : ಗೌಳೀಪಂತು ತಾಳ : ಮಿಶ್ರ ಛಾಪು

ಸಾಹಿತ್ಯದ ಮೂಲ ಪಾಠ

||ಪ.|| ನನ್ನುಬ್ರೋವರಾದ ವೇಗಮೆ ನೀವು? ||ನನ್ನು ಬ್ರೋವರಾದಾ||

||ಅ.ಪ.|| ವಿನು ನಾ ಮೊರಲನು ನೇ ನೀ ದಾಸುಡುಗಾದಾ ?
||ನನ್ನು ಬ್ರೋವರಾದಾ||

||ಚ.1.|| ಕೋರಿನ ವರಮಿಚ್ಚೇ ದೈವಮು ನೀವೇಗಾದಾ ? ಕಾರುಣ್ಯಮೂರ್ತಿ,
ಕೌಮಾರೀ ಗೌರೀ! ಶರಣಾಗತಜನ ರಕ್ಷಕೀ, ಶಂಕರೀ !
ಸರಸಮೃದುಬಾಷಿಣೀ ! ರಾಜರಾಜೇಶ್ವರಿ ||ನನ್ನು ಬ್ರೋವರಾದಾ||

||ಚ.2.|| ಅಭಯದಾನಮಿಚ್ಚೇ ದೈವಮು ನೀವೇಗಾದಾ !?
ಅಭಿರಾಮಗುಣಮಯೀ ಅಖಿಲಾಂಡೇಶ್ವರಿ !
ಆಶ್ರಿತ ತಾಪಹಾರಿಣೀ, ಪುರಾಣೀ, ಆನಂದರೂಪಿಣೀ, ಅಳಿಕುಲವೇಣೀ!
||ನನ್ನು ಬ್ರೋವರಾದಾ||

||ಚ.3.|| ಕಾಮಿತಫಲಮಿಚ್ಚೇ ದೈವಮು ನೀವೇಗಾದಾ!? ಪಾಮರ ಪಾಲಿನೀ,
ಭವಭಯ ಭಂಜನೀ !
ಸೋಮಶೇಖರ ಪ್ರಿಯಭಾಮಿನೀ ! ರಂಜನೀ !
ಶ್ಯಾಮಕೃಷ್ಣ ಸಹೋದರೀ, ಪಾರ್ವತೀ, ಭವಾನೀ !
||ನನ್ನು ಬ್ರೋವರಾದಾ||

ವ್ಯಾಖ್ಯಾನ

ಶಾಸ್ತ್ರಿಗಳ 'ತರುಣಮಿದಮ್ಮಾ' ತಮಿಳು ಕೃತಿಯ ಪ್ರಸಕ್ತಿಯಲ್ಲಿ ಗೌಳೀಪಂತು ರಾಗದ ಬಗೆಗೆ ಜಿಜ್ಞಾಸೆ ಮಾಡಲಾಗಿದೆ. ಗೌಳೀಪಂತು ರಾಗದಲ್ಲಿ ಲಭ್ಯವಿರುವ ಅವರ ಮೂರು ಕೃತಿಗಳಲ್ಲಿ ಇದೊಂದಾಗಿದೆ. ಸಾಹಿತ್ಯ ತೆಲುಗಿನದು, 3 ಚರಣಗಳುಳ್ಳದ್ದು, ಸಾಹಿತ್ಯ ಭಾವ ಹೀಗಿದೆ:

ನನ್ನನ್ನು ಬೇಗನೆ ಕಾಪಾಡಲಾಗದೆ ತಾಯಿ? ಆಲಿಸು ನನ್ನ ಮೊರೆಗಳನ್ನು, ನಾ ನಿನ್ನ ದಾಸನಲ್ಲವೆ?

1. ಕೋರಿದ ವರಗಳನ್ನು ಕೊಡುವ ದೈವ ನೀನೇ ಅಲ್ಲವೆ ಹೇ ಕಾರುಣ್ಯದ ಮೂರ್ತಿಯೇ! ಕೌಮಾರಿ, ಗೌರಿ! ಶರಣಾಗತ ಜನರ ರಕ್ಷಕಿ, ಶಂಕರಿ, ರಸಪೂರ್ಣವಾದ ಮೃದುಭಾಷಿಣಿ, ರಾಜರಾಜೇಶ್ವರಿ ! ಕಾಯೆಯಾ ?

2. ಅಭಯದಾನ ಕೊಡುವ ದೈವವೂ ನೀನೇ ಅಲ್ಲವೆ ಅಭಿರಾಮ ಗುಣಮಯೀ(ಅಂದರೆ, ಮನ ಮುಟ್ಟುವ ಗುಣಗಳ ರಾಣಿ ಎಂದರ್ಥ) ಹೇ, ಅಖಿಲಾಂಡೇಶ್ವರಿ, ಆಶ್ರಿತರ ತಾಪತ್ರಯವನ್ನು ಪರಿಹರಿಸುವವಳೇ, ಪುರಾಣಿ, ಆನಂದ ರೂಪಿಣಿ, ದುಂಬಿಗಳ ಕಾಂತಿಯ ಕೇಶದ ರಾಶಿಯವಳೇ.

3. ಕಾಮಿಸಿದ ವರಗಳನ್ನು ಕೊಡುವ ದೈವ ನೀನೇ ಅಲ್ಲವೆ? ಪಾಮರರನ್ನು ಪಾಲಿಸುವವಳು, ಸಂಸಾರವೆಂಬ ಭಯ ನೀಗುವವಳೂ ನೀನೇ ಅಲ್ಲವೆ? ಹೇ ಚಂದ್ರಶೇಖರ ಪ್ರಿಯೆ, ರಂಜನಿ, ಶ್ಯಾಮಕೃಷ್ಣ ಸೋದರಿ, ಪಾರ್ವತಿ, ಭವಾನಿ, ಕಾಯೆಯಾ ? ಎಷ್ಟೋ ಕೃತಿಗಳಲ್ಲಿನ ಅದೇ ಅದೇ ಪದಗಳ ಪುನರಾವೃತ್ತಿ ಗಮನಿಸಬಹುದು.

42. 'ಕಾಮಾಕ್ಷೀ ನಾತೋವಾದಾ?' –

ರಾಗ : ಬೇಗಡೆ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ಕಾಮಾಕ್ಷೀ! ನಾತೋವಾದಾ ? ದಯಲೇದಾ ? ಕಮಲಾಕ್ಷೀ ನನ್ನೊಕನಿ
ಬ್ರೋಚುಟ ಭಾರಮಾ ? ಬಂಗಾರು || ಕಾಮಾಕ್ಷೀ||

||ಅ.ಪ.|| ತಾಮಸಮುಚೇಸಿತೆ ನೇ ತಾಳನಮ್ಮಾ !
ನೀ ನಾಮಪಾರಾಯಣಮು ವಿನಿ ವೇಡಿತಿನಮ್ಮಾ ಮಾಯಮ್ಮಾ !
|| ಕಾಮಾಕ್ಷೀ||

||ಚ.1.|| ಶ್ಯಾಮಕೃಷ್ಣ ಸೋದರೀ, ತಲ್ಲಿ, ಅಂಬಾ !
ಶುಕಶ್ಯಾಮಳೇ, ನಿನ್ನೇ ಕೋರಿಯುನ್ನಾನಮ್ಮಾ!
ಮಾಯಮ್ಮಯನಿ ದಲಚಿ ದಲಚಿ, ಮಾಟಿಮಾಟಿಕಿ ಕನ್ನೀರು
ವಿಡವಲೇದಾ ಅಂಬಾ?
ನೀವು ಮಾಟಾಡಕುಂಡಿನ ನೇ ತಾಳಲೇನಮ್ಮಾ!

ನೀ ಬಿಡ್ಡನು ಲಾಲಿಂಚವೇ, ದೊಡ್ಡತಲ್ಲಿವೇ!
ಕಾಮಾತುಲ ಚಪಲ ಚಿತ್ತಪಾಮರುಡೈ ತಿರಿಗಿ ತಿರಿಗಿ ಇಲಲೋ
ಕಾಮಿತ ಕಥಲು ವಿನಿ ವಿನಿ ವೇಸಾರಿ ನೇನು ಏಮಾರಿಪೋತುನಾ ?
|| ಕಾಮಾಕ್ಷೀ||

ವ್ಯಾಖ್ಯಾನ

ಬೇಗಡೆ ರಾಗದಲ್ಲಿ ಶಾಸ್ತ್ರಿಗಳು 'ದಯಾನಿಧೇ'ವರ್ಣವಲ್ಲದೆ ಎರಡು ಕೃತಿಗಳಲ್ಲಿ ಇದು ಒಂದು ಕೃತಿ. ಹೇ ಬಂಗಾರು ಕಾಮಾಕ್ಷಿ, ನನ್ನೊಂದಿಗೆ ಚರ್ಚೆ ಅವಶ್ಯಕವೇ ? ಕಮಲಾಕ್ಷಿಯೇ, ನನ್ನೊಬ್ಬನನ್ನು ಕಾಪಾಡುವುದೇ ನಿನಗೆ ಭಾರವಾಯಿತೇ, ದಯಬಾರದೇ? ವಿಳಂಬ ಮಾಡಿದರೆ ನಾ ತಾಳೆನಮ್ಮಾ! ನಿನ್ನ ನಾಮವನ್ನೇ ನಾ ಪಾರಾಯಣ ಮಾಡುವುದನ್ನು ಕೇಳಲು ಬೇಡಿದೆನಮ್ಮಾ! ಈ ಕೃತಿಯ ಒಂದೇ ಚರಣದ ಭಾವ ಹೀಗಿದೆ:

ಶ್ಯಾಮಕೃಷ್ಣ ಸೋದರಿ, ತಾಯೆ, ಶುಕ ಶ್ಯಾಮಳೆ, ನಿನ್ನೇ ಕೋರಿಕೊಂಡಿದ್ದೇನಮ್ಮಾ! ನಮ್ಮಮ್ಮಾ ಎಂದು ನೆನೆದು ನೆನೆದು ಮಾತು ಮಾತಿಗೂ ಕಣ್ಣೀರ ಹರಿಸಲಿಲ್ಲವೇ? ಅಂಬೆ ನೀನು ಮಾತಾಡದಿದ್ದರೆ ನಾ ಸಹಿಸೆನಮ್ಮಾ! ನಿನ್ನ ಮಗು! ಲಾಲಿಸಮ್ಮ! ನೀ ದೊಡ್ಡ ಅಮ್ಮನಲ್ಲವೇ? ಕುತೂಹಲಕರವಾಗಿ, ತೆಲುಗರೇ ಬಹಳ ಅಪರೂಪವಾಗಿ ಬಳಸುವ, ಕನ್ನಡ ಭಾಷೆಯಲ್ಲೂ ಅದೇ ಅರ್ಥದೊಡನೆಯೇ ಇರುವ 'ದೊಡ್ಡ' ಎಂಬ ಪದವನ್ನು ತಮಿಳರಾದ ಶ್ಯಾಮಶಾಸ್ತ್ರಿಗಳು 'ದೊಡ್ಡತಲ್ಲಿವೇ' ಎಂಬ ಸಂಬೋಧನೆಯಲ್ಲಿ ಮಾತೆಗೆ ಬಳಸಿದ್ದಾರೆ.

ಕಾಮಾತುರನಾಗಿ (ಅಂದರೆ ಪ್ರಾಪಂಚಿಕ ಆಸೆಗಳನ್ನು ಬೆನ್ನಟ್ಟಿ ಹೋಗಿ), ಚಪಲಚಿತ್ತನಾಗಿ, ಲೋಕದಲ್ಲಿ ಸುತ್ತಿ, ಸುತ್ತಿ, ಪಾಮರನಾಗಿ ಸಾಮಾನ್ಯರ ಕಥೆಗಳನ್ನು ಕೇಳಿ ಕೇಳಿ ನಾ ಮೋಸ ಹೋಗುವೆನೆ ತಾಯೆ?

ಈ ಕೃತಿಯ ಚರಣದ ಸಾಹಿತ್ಯದ ಭಾವವನ್ನು ಗಮನಿಸಿದಾಗ, ಶ್ರೀ ಶಾಸ್ತ್ರಿಗಳು ಈ ಕೃತಿಯನ್ನು ರಚಿಸಿ, ಹಾಡಿಕೊಂಡಾಗ ವಿಶೇಷವಾದ ಸಾನ್ನಿಧ್ಯ ಆ ವೇಳೆಯಲ್ಲಿ ಅವರಿಗೆ ಭಾಸವಾಗಿದ್ದುದರ ಪ್ರತಿಬಿಂಬದಂತಿದೆ ಈ ಕೃತಿಯಲ್ಲಿನ ಅವರ ಭಾವನೆಗಳ ಅಭಿವ್ಯಕ್ತಿ.

43. 'ಸಾಮಿ ನಿನ್ನೇ ನಮ್ಮಿತಿರಾ ರಾರಾ ಮುದ್ದುಕುಮಾರಾ' –

ರಾಗ : ಬೇಗಡೆ **ತಾಳ : ಆದಿ**

||ಪ.|| ಸಾಮಿ, ನಿನ್ನೇ ನಮ್ಮಿತಿರಾ ! ರಾರಾ, ಮುದ್ದುಕುಮಾರಾ ! ||ಸಾಮಿ||

||ಅ.ಪ.|| ನಾ ಮೀದ ದಯಜೂಚಿ ನನ್ನು ರಕ್ಷಿಂಪರಾ ವೇಗಮೆ !
ತಾಮಸಮುಜೇಸಿತೆ ನಿಮಿಷಮಿಕ ತಾಳಜಾಲನಯ್ಯಾ, ಮುದ್ದಯ್ಯಾ !
||ಸಾಮಿ||

||ಚ.1.|| ನೀ ಮಹಿಮಲನು ಬ್ರಹ್ಮಾದುಲನಿಂಚಿ ನಿರ್ಣಯಿಂಪ ತರಮೌನಾ !?
ಪಾಮರು ನೇನು ಪೊಗಡತರಮಾ, ಪತಿತಿಪಾವನ, ಷಡಾನನಾ!?
ನಾ ಮನವಿ ವಿನರಾ! ಅನಯಮು ನೀ ನಾಮಮೇ ಜಪಮುರಾ
ಗಂಭೀರಾ! ಭೂಮಿಲೋ ನೀ ಸಾಟಿ ದೈವಮೆವಡು? ನೀವೇ,
ಮಹಾನುಭಾವಾ, ನನ್ನುಬ್ರೋವ ||ಸಾಮಿ||

||ಚ.2.|| ತಾಪಮುನೆಲ್ಲ ಇಕ ಬಾಪುದುವನಿ ಪ್ರಾಪು ಕೋರಿತಿರಾ ನೇನು
ನೀ ಪಾದಮುಲೇ ದಿಕ್ಕು ಲೋಕಮುಲನು ನಿಖಿಲ ಸಂತಾಪಹರಣ
ಪಾಪಹರಣ ಸಮ್ಮೋಹನ ಕಲಾವಿಧೃತ ಶ್ರೀಪತಿ ಪದವಿದಿತ ವೇದಾಂತ-
ರೂಪ ಕೋಟಿ ಮನ್ಮಥಾಂಗಜಜಿತ ಸರೋಜನೇತ್ರ ಧೀರ,
ರಣಧೀರ ||ಸಾಮಿ||

||ಚ.3.|| ಕೋರಿಯುಂಟಿ ನೀದು ಸನ್ನಿಧಿನಿ ಕೋರಿನವಾರಿಕೆಲ್ಲ ದಯತೋನು
ಕೋರಿಕಲ ನಿಚ್ಚೇದಿ ನೀ ಬಿರುದಗದಾ ಕುಟಿಲ ತಾರಕ ವಿದಾರಕ
ಸರಸಚರಿತ ನೀ ದಯರಾದಾ ಶ್ಯಾಮಕೃಷ್ಣನುತ ವೈದ್ಯೇಶು
ನೀಲಕಂಠವಾಹನ ದೀನಾವನ ಸುಹೃದಯವಾಸ ದರ ಹಾಸ||ಸಾಮಿ||

ವ್ಯಾಖ್ಯಾನ

ಸಂಗೀತ ತ್ರಿಮೂರ್ತಿಗಳಲ್ಲಿ ಶ್ರೀ ಶ್ಯಾಮಶಾಸ್ತ್ರಿಗಳು ಕುಟುಂಬದಲ್ಲಿನ ಪರಂಪರೆಯಿಂದಲೂ, ತಮ್ಮದೇ ಆದ ವೈಯಕ್ತಿಕ, ವಿಶೇಷವಾದ ಗಾಢ ಭಕ್ತಿಯ, ಮಾತೃ ಕಿಶೋರ ನೈಕಟ್ಯದ ಪರಾಕಾಷ್ಠ ಭಾವನೆಯ ಪರಿಣಾಮದಿಂದಾದ ಆಯ್ಕೆಯಿಂದಲೂ, ಕಂಚಿಯ ಬಂಗಾರು ಕಾಮಾಕ್ಷಿಯ ಮಡಿಲಲ್ಲೇ ಜೀವಿಸಿ

ಅದೇ ಕಾರಣವಾಗಿ ಆಕೆಯ ಸ್ತುತಿಗಳಲ್ಲೇ ನಿರತರಾದವರು. ಆದರೂ, ಸುಬ್ರಹ್ಮಣ್ಯಸ್ವಾಮಿಗೆ ಸ್ತುತಿಯಾಗಿ ಸಮರ್ಪಿಸಿರುವ ಬೇಗಡೆ ರಾಗದ ವಿಳಂಬ ಕಾಲದ ಆದಿತಾಳದ ಈ ಕೃತಿ ಲಭ್ಯವಿದ್ದು, ಅದರ ಸಾಹಿತ್ಯ ಭಾವ ಹೀಗಿದೆ:

ಸ್ವಾಮಿ, ನಿನ್ನನೇ ನಂಬಿದೆನಯ್ಯ, ಬಾರಯ್ಯ ಮುದ್ದುಕುಮಾರ ಸ್ವಾಮಿಯೇ! ನನ್ನ ಮೇಲೆ ದಯೆತೋರಿ ನನ್ನನ್ನು ಬೇಗನೆ ರಕ್ಷಿಸಯ್ಯ! ತಾಮಸ ಮಾಡಿದರೆ ಒದು ನಿಮಿಷವಾದರೂ ತಾಳೆನಯ್ಯಾ, ಮುದ್ದಯ್ಯ! ಮುದ್ದಿನಿಂದ ಮುದ್ದುಕುಮಾರ ಸ್ವಾಮಿಯನ್ನು ಮನೆಯ ಅಡ್ಡ ಹೆಸರಿನಂತೆ 'ಮುದ್ದಯ್ಯ' ಎಂದೇ ಶಾಸ್ತ್ರಿಗಳು ಸಂಬೋಧಿಸುವುದು ಇಲ್ಲಿ ವಿಶೇಷ! 3 ಚರಣಗಳಲ್ಲಿ ಸಾಹಿತ್ಯ ಮುಂದುವರಿಯುವುದು ಹೀಗೆ:

1. ನಿನ್ನ ಮಹಿಮೆಗಳು ಬ್ರಹ್ಮಾದಿಗಳಿಂದಲೂ ನಿರ್ಣಯಿಸಲು ಸಾಧ್ಯವಾದೀತೇ!? ಸಾಮಾನ್ಯನಾದ ನಾನು ಶ್ಲಾಘಿಸಲು ನಿಲುಕುವುದೇ ಹೇ ಪತಿತಪಾವನ ಷಣ್ಮುಖನೇ? ನನ್ನ ಮನವಿಯನ್ನಾಲಿಸಯ್ಯ ಗಂಭೀರನೇ, ಎಂದೆಂದಿಗೂ ನಿನ್ನ ನಾಮವೇ ನನ್ನ ಜಪವಸ್ತು. ಭುವಿಯಲ್ಲಿ ನಿನ್ನಂಥ ದೈವ ಯಾರುಂಟು? ಮಹಾನುಭಾವ, ನೀನೇ ನನ್ನನ್ನು ಕಾಪಾಡಯ್ಯಾ!

2. ತಾಪಗಳನೆಲ್ಲ ಇನ್ನು ನಿವಾರಿಸುವೆ ನೀನೆಂದು ನಾ ನಿನ್ನ ಆಶ್ರಯ ಕೋರಿದೆ. ಲೋಕದಲ್ಲಿ ನಿನ್ನ ಪಾದಗಳೇ ಗತಿ. ಸಕಲ ಸಂತಾಪಹರಣ, ಎದುರಿನವರನ್ನು ಸಮ್ಮೋಹನಗೊಳಿಸುವ ಕಲಾ ನಿಪುಣನೇ, ಹರಿಪದವೆಂಬುದರ ಮಹಿಮೆಯನ್ನರಿತವನೇ, ವೇದಾಂತ ವಿಗ್ರಹನೇ, ಕೋಟಿ ಮನ್ಮಥರ ರೂಪಕ್ಕೆ ಮಿಗಿಲಾದ ಸುಂದರನೇ, ಸರೋಜಾಕ್ಷ, ಧೀರ, ರಣವೀರ, ಹೇ ಮುದ್ದು ಕುಮಾರ ಬಾರಯ್ಯ! ಈ ಚರಣದಲ್ಲಿನ ಪಕಾರ ದ್ವಿತೀಯಾಕ್ಷರ ಪ್ರಾಸ ಮತ್ತು ಶಬ್ದಾಲಂಕಾರ ಚೇತೋಹಾರಿಯಾದುದು:

   "ತಾಪಮುನೆಲ್ಲ ಇಕ ಬಾಪುದುವನಿ ಪ್ರಾಪುಕೋರಿತಿರಾನೇನು ? ನೀ ಪಾದಮುಲೇ ದಿಕ್ಕುಲೋಕಮುನನು ನಿಖಿಲ ಸಂತಾಪಹರಣ! ಪಾಪಹರಣ ಸಮ್ಮೋಹನ ಕಲಾವಿಧೃತ ಶ್ರೀಪತಿ ಪದ ವಿದಿತ ವೇದಾಂತ ರೂಪ. ಕೋಟಿ ಮನ್ಮಥಾಂಗಜಿತ ಸರೋಜನೇತ್ರ ಧೀರ ರಣವೀರ."

3. ನಿನ್ನ ಸನ್ನಿಧಿಯನ್ನು ಕೋರಿದೆ. ಕೋರಿದವರಿಗೆಲ್ಲ ಇಷ್ಟಾರ್ಥಗಳನ್ನು ದಯೆಯಿಂದ ಕೊಡುವವನೆಂದೇ ಬಿರುದಲ್ಲವೇ ನಿನ್ನದು? ಕುಟಿಲಮಾರ್ಗಿ ತಾರಕಾಸುರನ್ನ ಅಂತಗೊಳಿಸಿದವ ನೀನು ರಸಮಯವಾದುದು ನಿನ್ನ ಚರಿತೆ. ಹೇ ಶ್ಯಾಮಕೃಷ್ಣನುತ, ವೈದ್ಯೇಶ್ವರನ ಸುತ, ಮಯೂರ ವಾಹನ, ದೀನಜನ ರಕ್ಷಕ ಸಜ್ಜನರ ಹೃದಯವಾಸಿಯೇ, ಮುಗುಳನಗೆಯವನೆ, ಹೇ ಮುದ್ದುಕುಮಾರ ಸ್ವಾಮಿಯೇ, ಬಾರಯ್ಯ ಬೇಗನೆ ರಕ್ಷಿಸಯ್ಯ!

44. 'ಆ ದಿನಮುನಿಂಚಿ ಪೊಗಡಿ ಪೊಗಡಿ' –

ರಾಗ : ಆನಂದಭೈರವಿ **ತಾಳ : ತ್ರಿ ತ್ರಿಪುಟ**

ಸಾಹಿತ್ಯದ ಮೂಲ ಪಾಠ

||ಪ.|| ಆ ದಿನಮುನಿಂಚಿ ಪೊಗಡಿ ಪೊಗಡಿ ಆಶ್ರಯಿಂಚಿ ನೀ ಮಹಿಮಲನು
ಪಾಡಲೇದಾ? || ಆದಿನಮುನಿಂಚಿ||

||ಅ.ಪ.|| ಆದಿಶಕ್ತಿ ನೀವನಿ ನಮ್ಮಿನ ನನ್ನು ಆದರಿಂಚಲೇವಾ? ದಯಲೇದಾ?
|| ಆದಿನಮುನಿಂಚಿ||

||ಚ.|| ಅಹಿಭೂಷಣುನಿರಾಣಿ, ಪುರಾಣಿ ! ಭವಾನಿ!
ಅಳಿಕುಲವೇಣಿ ಆಶ್ರಿತ ಶ್ರೇಣಿ, ಅಂಬುಜಲೋಚನಿ !
ಶ್ಯಾಮಕೃಷ್ಣ ಪಾಲಿತ ಜನನೀ, ಅಖಿಲ ಲೋಕ ಭವಾನೀ
ಶ್ಯಾಮಳಾಂಬಿಕೇ, ವರದೇ!
ಅಭಯವರದಾನ ಮೀಯವೇ ! || ಆದಿನಮುನಿಂಚಿ||

ವ್ಯಾಖ್ಯಾನ

ಆನಂದಭೈರವಿ ರಾಗದಲ್ಲಿನ ಶ್ರೀ ಶಾಸ್ತ್ರಿಗಳ ಆರು ಕೃತಿಗಳಲ್ಲಿ ಇದೊಂದಾಗಿದೆ. ಸಾಹಿತ್ಯ ಭಾವ ಹೀಗಿದೆ:

ಅಂದಿನಿಂದಲೂ ನಿನ್ನ ಮಹಿಮೆಗಳನ್ನು, ಹೊಗಳಿ, ಹೊಗಳಿ, ಆಶ್ರಯಿಸಿ, ಹಾಡಲಿಲ್ಲವೆ ತಾಯಿ?

ಆದಿಶಕ್ತಿ ನೀನೆಂದು ನಂಬಿದ ನನ್ನನ್ನು ಆದರಿಸಸಲೊಲ್ಲೆಯಾ ? ದಯೆ ಇಲ್ಲವೇ?

ನಾಗಭೂಷಣ ಶಿವನರಾಣಿ, ಪುರಾಣಿ, ಭವಾನಿ, ದುಂಬಿಗಳ ಸಮೂಹದಂತಿರುವ ಕೂದಲಿನವಳೇ ಅಂಬುಜಾಕ್ಷಿ, ಶ್ಯಾಮಲಕೃಷ್ಣನನ್ನು ಪಾಲಿಸಿದ ಜನನಿ, ಸಮಸ್ತ ಲೋಕಗಳ ಪಾವನಿ, ಶ್ಯಾಮಾಲಾಂಬೆ, ವರದೇ, ಅಭಯವೆಂಬ ವರವ ದಾನ ಕೊಡಮ್ಮಾ !

ಹೀಗೆ ಒಂದೇ ಚರಣವುಳ್ಳ ಕೃತಿ ಇದು.

45. 'ದೇವಿ ನನ್ನು ಬ್ರೋವವಮ್ಮಾ!' –

ರಾಗ : ಕಲ್ಯಾಣಿ **ತಾಳ : ಮಿಶ್ರ ಝಂಪೆ**

ಸಾಹಿತ್ಯ ಮೂಲ ಪಾಠ

||ಪ.|| ದೇವಿ ! ನನ್ನು ಬ್ರೋವವಮ್ಮಾ, ಇಪುಡೇ ಮಂಚಿ ಸಮಯಮಮ್ಮಾ! ||ದೇವಿ||

||ಅ.ಪ.||ಸೇವಿಂಚಿ ನಿನ್ನೇ ಸದಾ ನಮ್ಮಿತಿನಿ ನಿರತಮುಗ ನಮ್ಮಿತಿನಿ ||ದೇವಿ||

||ಚ.1.|| ಅನಾಥ ರಕ್ಷಕಿ ಬಿರಾನಬ್ರೋವುಮು, ತಲ್ಲಿ, ಆಶ್ರಿತಜನ ಪಾಲಿನಿ
ಭವಾನಿ, ದೇವಿ, ಲೋಕಜನನೀ, ||ದೇವಿ||

||ಚ.2.|| ಪರಾಕುಸೇಯಕ ವರಾಲೋಸಗುಮು, ತಲ್ಲಿ, ಪಾಮರಜನಪಾಲಿನಿ,
ಮೃಡಾನಿ, ದೇವಿ, ತ್ರಿಲೋಕ ಪಾಲಿನಿ ||ದೇವಿ||

||ಚ.3.|| ಕುಮಾರ ಜನನಿ ಕಟಾಕ್ಷ ಸೇಯುಮು, ತಲ್ಲಿ ಶ್ಯಾಮಕೃಷ್ಣ ಪಾಲಿನಿ,
ಪುರಾಣಿ ದೇವಿ, ಬೃಹದಂಬಾ ! ||ದೇವಿ||

ವ್ಯಾಖ್ಯಾನ

ಶಾಸ್ತ್ರಿಗಳ, ಕಲ್ಯಾಣಿ ರಾಗದಲ್ಲಿನ 8 ಕೃತಿಗಳಲ್ಲಿ ಇದೂ ಒಂದು, 3 ಚರಗಣಗಳುಳ್ಳದ್ದು ಭಾವ ಹೀಗಿದೆ:

ದೇವಿ, ಈಗಲೇ ನನ್ನನ್ನು ಕಾಪಾಡಮ್ಮಾ ಏಕೆಂದರೆ, ಇದೇ ಅವಶ್ಯಕವಾದ ಸಮಯವಮ್ಮಾ! ನಿನ್ನ ಸೇವೆಯ ಮಾಡಿ ಸದಾ ನಿನ್ನನ್ನು ನಂಬಿದೆ, ನಿರಂತರವಾಗಿ ನಿನ್ನನ್ನೇ ನಂಬಿದೆ.

1. ಹೇ ಅನಾಥ ರಕ್ಷಕಿ, ದೇವಿ ಭವಾನಿ, ಲೋಕಪಾಲಿನಿ, ಆಶ್ರಿತ ಜನಪಾಲಿನಿ, ಬೇಗ ಕಾಪಾಡು ತಾಯಿ !

2. ಉಪೇಕ್ಷೆ ಮಾಡದೆ ವರಗಳ ನೀಡು ತಾಯೆ, ಪಾಮರ ಜನಪಾಲಿನಿ, ದೇವಿ, ಮೃಡಾನಿ, ಲೋಕಪಾಲಿನಿ!

3. ಕುಮಾರ ಜನನಿ, ಕಟಾಕ್ಷಬೀರುವ ತಾಯೆ, ಶ್ಯಾಮಕೃಷ್ಣಪಾಲಿನಿ, ಬೃಹದಂಬಾ ದೇವಿಯೆ ! ಪಾಲಿಸು ತಾಯೇ!

46 'ನಿನ್ನೇ ನಮ್ಮಿತಿ ನಿಜಮುಗ' –

ರಾಗ : ಕೇದಾರ ಗೌಳ **ತಾಳ : ಆದಿ**

||ಪ.|| ನಿನ್ನೇ ನಮ್ಮಿತಿ ನಿಜಮುಗ ಗತಿ ಲೋಕಮುಲೋ|| ನಿನ್ನೇ ನಮ್ಮಿತಿ||

||ಅ.ಪ.||ನನ್ನಡ ಸಲುಪಕ ನಾ ವಿಚಾರಮುದೀರ್ಚಿ ಅಂಭೋರುಹಾನನಾ !
ದಿವ್ಯತರ ಜೂಚಿ ಪ್ರಸನ್ನ ಮುಖಮು || ನಿನ್ನೇ ನಮ್ಮಿತಿ ||

||ಚ.|| ನೀ ಮಹಾತ್ಮ್ಯಮು ಎವರೇ ನಿದಾನಿಂಪ ಶಕ್ಯಮುಗಾದುಗದಾ ?
ಶ್ರೀಮಾತವೇ ನೀ ಛಾಯೇತುಲನೊಕನಿ ಗಾಂಚಗಲನೇ !
ಏಮನಿ ಚೆಪ್ಪುದು ದೇವೀ ನುತಿಂಪ ನಾ ವಶಮಾ?
ಈ ಮಹಿಲೋ ನೀ ದಯಗಲ್ಗಿ ನಾ ಭಯಂಬು ತೊಲಗೆನೋ !
||ನಿನ್ನೇ ನಮ್ಮಿತಿ||

ವ್ಯಾಖ್ಯಾನ

ಕೇದಾರಗೌಳ ರಾಗದಲ್ಲಿನ ಶ್ಯಾಮಶಾಸ್ತ್ರಿಗಳ ಎರಡು ಕೃತಿಗಳಲ್ಲಿ ಇದು ಒಂದು, ಒಂದೇ ಚರಣವುಳ್ಳ ಕೃತಿ. ನಾ ನಿನ್ನೊಂದಿಗೆ ನಿವೇದಿಸಿಕೊಳ್ಳುತ್ತಿರಲು (ನನ್ನಡಸಲುಪಗ) ನನ್ನ ವಿಚಾರದಲ್ಲಿ ಪರಿಹಾರ ನೀಡಿದ (ನಾ ವಿಚಾರಮುದೀರ್ಚಿನ) ದಿವ್ಯತರವಾದ ಆ ನಿನ್ನ ಪ್ರಸನ್ನ ಮುಖ ಕಮಲವನ್ನು ನೋಡಿ ನಿವೇದಿಸಿಕೊಳ್ಳುತ್ತಿರಲು ನಿನ್ನನೇ ನಂಬಿದೆ, ನಿಜವಾಗಿಯೂ ನಂಬಿದೆ ತಾಯೆ!

ನಿನ್ನ ಮಹಾತ್ಮೆಯನ್ನು ವಿಚಾರ ಮಾಡಲು ಯಾರಿಗೂ

ಸಾಧ್ಯವಿಲ್ಲವಲ್ಲವೇ!? ನೀನು ಶ್ರೀಮಾತೆ, ನಿನ್ನ ನೆರಳಿಗೂ ಸಮಾನರಾದ ಒಬ್ಬರನ್ನೂ ನಾ ಕಾಣೆನಮ್ಮಾ, ಹೀಗಿರಲು, ನಿನ್ನನ್ನು ನುತಿಸಲು ಇನ್ನು ನನಗೆ ಸಾಧ್ಯವೇ, ಏನು ಹೇಳಲಿ ತಾಯಿ? ಈ ಮಹಿಯಲ್ಲಿ ನಿನ್ನ ಕಟಾಕ್ಷದವಿನಾ, ದಯೆಯ ವಿನಾ ನಮ್ಮ ಭಯಗಳೆಲ್ಲ ತೊಲಗುವುವೇ ತಾಯಿ?

47. 'ಶ್ರೀಪತಿ ಮುಖ ವಿರಚಿತ ಪೂಜ್ಯೇ !' –

ರಾಗ : ಸಾವೇರಿ **ತಾಳ : ಆದಿ**

||ಪ.|| ಶ್ರೀಪತಿಮುಖ ವಿರಚಿತ ಪೂಜ್ಯೇ ಶ್ರೀ ಪಾರ್ವತೀ ಮಾಂ ಪಾಹಿ ದೇವಿ
||ಶ್ರೀಪತಿಮುಖ||

||ಅ.ಪ.|| ನೀಪವನ ನಿಲಯೇ ನಿರಾಮಯೇ ನಿಟಿಲನಯನಜಾಯೇ ಮಮ
ಹೃದಯ -ತಾಪಹಾರಿಣಿ ನವರತ್ನಾಲಯೇ ತಾಪಸವರನಾರದಮುದಿತೇ
ದೇವಿ! ||ಶ್ರೀಪತಿಮುಖ||

||ಚ.1.|| ತರುಣಿ ಲತಾಪಲ್ಲವ ಮೃದುಚರಣೇ ತಪನವಿಧು ವಿಲೋಚನೇ !
ಅರುಣಕೋಟಿ ಸಮಕಾಂತಿಯುತ ಶರೀರೇ ಕಲಧೃತ ಕಲಾಪೇ !
ಸುರುಚಿರ ಮಣಿಕಂಠಲಸನ್ಮಣಿಹಾರೇ, ಸುಗುಣಶೀಲೇ ಸತತಂ
ಸಮುದಂ ಕರುಣಯಾ ಅವ ದೀನಂ ಪರದೇವತೇ ಕಾಮ ಕೋಟಿ
ಪೀಠಗತೇ ಲಲಿತೇ ! ||ಶ್ರೀಪತಿಮುಖ||

||ಚ.2.|| ಕರಿಮುಖ ಕಾರ್ತಿಕೇಯ ಜನನಿ ಸ್ವರಪಾಲಿನಿ ಪಾವನಿ ಹರಿಸಹೋದರಿ!
ವಿದಳಿತ ದೈತ್ಯಾರಿಗಣೇ ಸದಾಪೂರ್ಣೇ !
ಪರಮೇಶವಿನುತೇ, ಶ್ರಿತಜನಪಾಲಿತೇ, ಪ್ರೀತಿರಿಹ ವಸುತು ವಿಮಲೇ!
ಪುರಹರ ಪ್ರಿಯೇ ಶಶಿನಿಭಾನನೇ ಪೂರ್ಣಕಾಮೇ ಸಾಮಗಾನ ಲೋಲೇ!
||ಶ್ರೀಪತಿಮುಖ||

||ಚ.3.|| ಶ್ಯಾಮಳಾಂಗಿ ಮಂಜುಳವಾಣಿ ಸಕಲ ಭಯನಿವಾರಿಣಿ
ಹೇ ಮಹೇಶ್ವರಿ ! ಮಧುಪಸದೃಶವೇಣಿ, ಕಾಮೇಶ್ವರಿ, ಗೌರಿ!
ಶ್ಯಾಮಕೃಷ್ಣ ಸೋದರಿ, ಭುವನೇಶ್ವರಿ, ಶಾಂಭವಿ, ಮಹಾತ್ರಿಪುರಸುಂದರಿ
ಹಿಮಗಿರಿ ಕುಮಾರಿ, ಕವಿಕುಲ ಕಾಮದೇ, ಕಾಂಕ್ಷಿತ ಫಲದಾಯಿಕೇ !
||ಶ್ರೀಪತಿಮುಖ||

ವ್ಯಾಖ್ಯಾನ

ಶಾಮಶಾಸ್ತ್ರಿಗಳ, ಸಾವೇರಿ ರಾಗದಲ್ಲಿನ ಒಂದು ಗೀತವೂ ಸೇರಿದಂತೆ, 5 ರಚನೆಗಳಲ್ಲಿ ಇದೂ ಒಂದು ಕೃತಿ. ಸಂಸ್ಕೃತ ಭಾಷೆಯಲ್ಲಿ ರಚಿತವಾದ ಕೃತಿ, ಎಂದಿನಂತೆ 3 ಚರಣಗಳನ್ನುಳ್ಳದ್ದು.

ಹೇ ಪಾರ್ವತಿದೇವಿ ನನ್ನನು ಕಾಪಾಡು, 'ಶ್ರೀಪತಿ ಮುಖ ವಿರಚಿತ ಪೂಜ್ಯೇ' ಎಂಬ ವಿರಳವಾಗಿ ಉಪಯೋಗಿಸಲ್ಪಟ್ಟ ಮಾತನ್ನು ಬಳಸಿ ಕೃತಿಯನ್ನು ಆರಂಭಿಸಿದ್ದಾರೆ. ಶ್ರೀ ಶಾಸ್ತ್ರಿಗಳು, ಶ್ರೀಪತಿ ಮುಖ-ಎಂದರೆ ಹರಿಯಬಾಯಿ. ಈ ಸಂದರ್ಭದಲ್ಲಿ 'ವಿರಚಿತ' ಎಂದರೆ ಮೇಲ್ನೋಟಕ್ಕೇ ಕೊಂಡಾಡಲ್ಪಟ್ಟ ಪೂಜ್ಯಳೇ ಹೇ ದೇವಿ ಎಂದೇ ಅರ್ಥ ಹೊರಹೊಮ್ಮುತ್ತದೆ. ನಿಘಂಟುಗಳು 'ವಿರಚಿತ' ಎಂಬ ಪದಕ್ಕೆ, ಏರ್ಪಡಿಸಿದ, ರಚಿಸಲ್ಪಟ್ಟ, ವಿಶೇಷವಾಗಿ ರಚಿಸಲ್ಪಟ್ಟ – ಮುಂತಾದ ಅರ್ಥಗಳನ್ನು ಕೊಡುತ್ತವೆ. ಹರಿಯ ಭಗಿನಿಯಾದ ಪಾರ್ವತಿಯನ್ನು ಅದೇ ರೂಪದಲ್ಲೂ, ಎಲ್ಲ ರೂಪಗಳಲ್ಲಿಯೂ, ಪರಬ್ರಹ್ಮ ಸ್ವರೂಪಣಿಯಾಗಿ ಆದಿಶಕ್ತಿಯ ರೂಪದಲ್ಲೂ ಕೊಂಡಾಡಿರುವುದೂ, ಸ್ತುತಿಸಿರುವುದೂ ಎಲ್ಲ ಭಕ್ತರಿಗೂ, ಕವಿಗಳಿಗೂ, ವಾಗ್ಗೇಯಕಾರರಿಗೂ ಸಾಮಾನ್ಯ ವಿಷಯವೇ ಆದರೂ 'ಶ್ರೀಪತಿ ಮುಖ ವಿರಚಿತ' ಎಂಬ ಮಾತು ಶ್ರೀ ಶ್ಯಾಮಶಾಸ್ತ್ರಿಗಳೊಬ್ಬರೆ ಬಳಸಿರುವುದು ನನ್ನ ವೀಕ್ಷಣೆಯಲ್ಲಿ. ಅನುಪಲ್ಲವಿ ಹಾಡುತ್ತದೆ:

ಕದಂಬವನವಾಸಿನಿ (ನೀಪವನ ನಿಲಯೇ) ದೇವಿಗೆ ಇಷ್ಟವಾದ, ದೇವಿಯ ವಿಹಾರ ಸ್ಥಳವಿದು. ನಿರಾಮಯಳೇ (ರೋಗ ಅಂಟದವಳು), ಫಾಲಾಕ್ಷ ಶಿವನ ಮಡದಿಯೇ, ನನ್ನ ಹೃದಯದ ಬಿಸಿಯನ್ನು-ತಾಪವನ್ನು ಕಷ್ಟವನ್ನು - ನೀಗಿಸುವವಳೇ, ನವರತ್ನಾಲಯೇ, ತಾಪಸಿ ದೇವರ್ಷಿ ನಾರದರಿಂದ ಸಂತೋಷಪಡಿಸಲ್ಪಟ್ಟವಳೇ ಹೇ ದೇವಿ, ಪಾಹಿ ಮಾಂ.

1. ತರುಣಿ -ದೇವಿ ಎಂದೂ ನವಯೌವನವಿರುವವಳು, ಲತೆಯ ಹೊಸ ಚಿಗುರಿನ ಮೃದುತ್ವವುಳ್ಳಪಾದಗಳುಳ್ಳವಳು, ತಪನ-ವಿಧು ವಿಲೋಚನೇ- ಸೂರ್ಯಚಂದ್ರರನ್ನೇ ನಿನ್ನ ಕಣ್ಣುಗಳಾಗಿ ಹೊಂದಿದವಳೇ, ಪ್ರತಿದಿನವೂ ಸೂರ್ಯನ ಸಾರಥಿ ಅರುಣನು ಸೂರ್ಯನಿಗೆ ಮೊದಲು ತಾನೇ

ಕಾಣಿಸಿಕೊಳ್ಳುವಾಗ ಇರುವ ಆ ಪ್ರಕಾಶನದ ಕೋಟಿಯಷ್ಟರ ಕಾಂತಿಯುತ ಒಡಲುಳ್ಳವಳೇ, ಕಲಧೃತ ಕಲಾಪೇ, ಸದಭಿರುಚಿಯನ್ನು ಪ್ರಕಟಿಸುವ ಆಭರಣಗಳನ್ನು ಧರಿಸಿದವಳೇ, ಸುಗುಣಶೀಲೇ, ಪರದೇವತೇ, ಕಾಮಕೋಟಿ ಪೀಠಸ್ಥಿತೇ, ಲಲಿತೇ, ಹೇ ಮಾತೆ, ಕೃಪೆ ಮಾಡಿ ದೀನನಾದ ನನ್ನನ್ನು ಕಾಪಾಡಮ್ಮಾ.

2. ಗಣೇಶ, ಗುಹರ ಜನನಿ, ಸ್ವರಪಾಲಿನಿ, ಪಾವನಿ, ಹರಿಸೋದರಿ, ದೈತ್ಯರೇ ಮೊದಲಾದ ಶತ್ರುಗಳ ಸಂಹಾರಿಣಿಯೇ, ಸದಾ ಪೂರ್ಣತೆಯ ಸ್ವರೂಪಳೇ, ಪರಮೇಶ ವಿನುತೇ, ಆಶ್ರಿತರ ಪಾಲಿನಿಯೇ, ವಿಮಲೇ, ಶಿವನ ಪ್ರಿಯೇ, ಚಂದ್ರಕಾಂತಿಯ ವದನೇ, ಪೂರ್ಣ ಕಾಮಳೇ (ಎಂದರೆ, ಇದುಬೇಕು ಎನ್ನುವುದಕ್ಕೆ ಏನೂ ಉಳಿಯದಷ್ಟು ತುಂಬಿದ ಸಮೃದ್ಧಿಯ ಸಂಕೇತ ಮಾತೆ ಎಂದರ್ಥ) ಸಾಮಗಾನ ಲೋಲೆ, ಎಂದೆಲ್ಲ ಸ್ತುತಿಸಿ, 'ಪ್ರೀತಿರಿಹ ವಸತು' ಎಂದರೆ, ಪ್ರೀತಿ ಇರಲಿ ನನ್ನ ಮೇಲೆ ತಾಯೆ' ಎಂದು ಬೇಡುತ್ತಾರೆ.

3. ಶ್ಯಾಮಲಾಂಗಿ, ಮಂಜುಳವಾಣಿ, ಸಕಲಭಯ ನಿವಾರಿಣಿ, ಹೇ ಮಹೇಶ್ವರಿ, ದುಂಬಿಗಳ ಗುಂಪಿನಂಥ ವೇಣಿ, ಕಾಮೇಶ್ವರಿ, ಗೌರಿ, ಶ್ಯಾಮಕೃಷ್ಣ ಸೋದರಿ, ಹಿಮಗಿರಿ ಕುಮಾರಿ ಕವಿಕುಲ ಕಾಮದಾಯಿನಿ, ಆಕಾಂಕ್ಷೆಪಟ್ಟ ಫಲಗಳನ್ನು ಕೊಡುವವಳೇ ಹೇ ಮಾತೆ, ಮಾಂ ಪಾಹಿ!

48. 'ಪುರಹರ ಜಾಯೇ ಪಾಲಯಮಾಂ' –

ರಾಗ : ಗೌಳೀಪಂತು **ತಾಳ: ಮಿಶ್ರಛಾಪು**

ಸಾಹಿತ್ಯದ ಮೂಲ ಪಾಠ

||ಪ.|| ಪುರಹರಜಾಯೇ ! ಪಾಲಯ ಮಾಂ || ಪುರಹರಜಾಯೇ||

||ಅ.ಪ.|| ಚರಣಾಂಬುಜ ಭಕ್ತಿಂ ದೇಹಿ ಮೇ ಕರುಣಾನಿಧೇ, ಮಾಯೇ |
|| ಪುರಹರಜಾಯೇ||

||ಚ.1.|| ಅಳಿಕುಲವೇಣೀ, ಭವಾನಿ, ಪಾವನಿ ! ಕಲರವ ಮೃದುತರವಾಣೀ-
ಶರ್ವಾಣೀ! ಕಲಿಮೋಚನಿ, ಬಾಲೇ!ಕಮನೀಯ ಗುಣಶೀಲೇ!
ತಿಲಕಾಂಚಿತಫಾಲೇ, ಧೃತಮಣಿಮಾಲೇ || ಪುರಹರಜಾಯೇ||

||ಚ.2.|| ಭಾನುಕೋಟಿಸಮಾನ ಶರೀರೇ! ಪಾಲಿತ ಮುನಿಜನ ನಿಕರೇ ! ಗಂಭೀರೇ!
ದೀನಜನ ಪೋಷಿಣಿ ನತಸುತ ತೋಷಿಣಿ !ಸುಲಭೇ, ಮಂಜುಭಾಷಿಣಿ!
|| ಪುರಹರಜಾಯೇ||

||ಚ.3.|| ಕಾಮಪೀಠಗತೇ, ಕಲ್ಯಾಣೀ, ಕಾಮಾಕ್ಷೀ ! ಕಾಮಿತಫಲದೇ, ಶ್ರೀ
ಲಲಿತೇ! ಸೋಮಮುಖಿ! ಪುರಾಣೀ, ಸುಂದರಿ, ಕೌಮಾರೀ !
ಶ್ಯಾಮಕೃಷ್ಣ ಸೋದರಿ, ಶೈಲರಾಜ ಕುಮಾರೀ! || ಪುರಹರಜಾಯೇ||

ವ್ಯಾಖ್ಯಾನ

ಗೌಳೀ ಪಂತು ರಾಗದಲ್ಲಿ ಶ್ಯಾಮಶಾಸ್ತ್ರಿಗಳ ಮೂರು ಕೃತಿಗಳಲ್ಲಿ 'ನನ್ನು ಬ್ರೋವರಾದಾ' ಕೃತಿಯನ್ನು ತೆಲುಗಿನಲ್ಲೂ, 'ತರುಣಮಿದಮ್ಮಾ' ಕೃತಿಯನ್ನು ತಮಿಳಿನಲ್ಲೂ, ಈಗ ಪ್ರಕೃತವಾದ 'ಪುರಹರಜಾಯೇ' ಕೃತಿಯನ್ನು ಸಂಸ್ಕೃತದಲ್ಲೂ ರಚಿಸಿರುವುದು ಗಮನಾರ್ಹ. ಈ ಕೃತಿಯ ಬಂಧವನ್ನು 'ವಿಲೋಮ ಮಿಶ್ರ ಛಾಪು' ಹಂದರದಲ್ಲಿ ರಚಿಸಿದ್ದಾರೆ. ಗೌಳೀಪಂತು ರಾಗವನ್ನು ಕುರಿತು ಈ ಹಿಂದೆ ಹೇಳಿದ್ದಾಗಿದೆ. 3 ಚರಣಗಳುಳ್ಳ ಈ ಕೃತಿಯ ಸಾಹಿತ್ಯ ಭಾವ ಹೀಗಿದೆ:

ಪುರಹರನಾದ ಶಿವನ ಪತ್ನಿ, ದೇವಿ, ಕಾಪಾಡು ನನ್ನನ್ನು, ನಿರಾಮಯಳಾದ (ರೋಗ ವಂಟದ), ಕರುಣಾನಿಧಿಯೇ, ಮಾಯೇ, ನಿನ್ನ ಪದಕಮಲಗಳಲ್ಲಿ ನನಗೆ ಭಕ್ತಿಯನ್ನು ಕರುಣಿಸು.

1. ಭೃಂಗವೇಣಿ (ಅಳಿಕುಲವೇಣಿ), ಭವಾನಿ, ಪಾವನಿ, ಮೃದುವಾದ ವಾಣಿ-ಶರ್ವಾಣಿ, ತಿಲಕವಿಟ್ಟ ಹಣೆಯುಳ್ಳವಳೇ, ಮಣಿಮಾಲೆ ಧರಿಸಿದವಳೇ-ನನ್ನನ್ನು ಪಾಲಿಸು.

   ಸಂಸ್ಕೃತದ ವಿಶೇಷಣಗಳು, ಬಹುತೇಕ ಸಮಾಸವಾದ ಪದಗಳಾಗಿದ್ದು, ಅವುಗಳನ್ನು ತರ್ಜುಮೆ ಮಾಡಲು ಕನ್ನಡೀಕರಿಸಿ ಒಡೆದು ಹೇಳಿದಾಗ ಮೂಲ ಸೌಂದರ್ಯವನ್ನು ಕಳೆದುಕೊಳ್ಳುತ್ತವೆ ಎಂಬುದು ಒಮ್ಮೊಮ್ಮೆ ಎದುರಾಗುವ ಅನಿವಾರ್ಯ ಸಂಗತಿ. ಉದಾ: ತಿಲಕಾಂಚಿತ ಫಾಲೇ, ಧೃತಮಣಿ ಮಾಲೇ.

2. ಕೋಟಿ ಸೂರ್ಯ ಪ್ರಕಾಶವಾದ ಒಡಲಿನವಳೇ, ಮುನಿಬೃಂದವನ್ನು ಪಾಲಿಸಿದವಳೇ, ಗಂಭೀರಳೇ, ದೀನಜನ ಪೋಷಿಣಿ (ನನ್ನಂಥ) ನಿನ್ನ ಪುತ್ರರಿಂದ ಸಂತೋಷಪಡಿಸಲ್ಪಟ್ಟವಳೇ, ದೈತ್ಯಕುಲವನ್ನು ಶಕ್ತಿಹೀನವಾಗಿಸಿದವಳೇ (ದೈತ್ಯಕುಲಶೋಷಿಣಿ). ಸುಲಭಳೇ, ಆಸ್ವಾದ್ಯವಾದ ಮಾತಿನವಳೇ.

3. ಕಾಮಕೋಟಿ ಪೀಠವಾಸಿನಿ (ಇದನ್ನು ಎಂದಿನಂತೆ ಹಾಗೇ ಹೇಳದೆ 'ಕಾಮಪೀಠಗತೇ' ಎನ್ನುತ್ತಾರೆ) ಕಲ್ಯಾಣಿ, ಕಾಮಾಕ್ಷಿ, ಆಸೆಗಳನ್ನೀಡೇರಿಸುವವಳೇ, ಶ್ರೀಲಲಿತೇ, ಚಂದ್ರಮುಖಿ, ಪುರಾಣಿ, ಸುಂದರಿ, ಕೌಮಾರಿ, ಶ್ಯಾಮಕೃಷ್ಣ ಸೋದರಿ, ಶೈಲರಾಜ ಕುಮಾರಿ, ದೇವಿ, ಮಾಂ ಪಾಲಯ!

49. 'ಏಮನಿ ಮಿಗುಲ ವರ್ಣಿಂತು' –

ರಾಗ : ತೋಡಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ಏಮನಿ ಮಿಗುಲ ವರ್ಣಿಂತು ಈ ಮಹಿನಿ ನೇ ನೀ ಮಹಿಮಲ
||ಏಮನಿ||

||ಅ.ಪ.|| ಸಾಮಜಗಮನಾ, ಧರ್ಮಸಂವರ್ಧನೀ, ಅಂಬಾ! ಸುರುಲಕು
ನೀಮಾಯ ತೆಲಿಯಲೇರು ಶಾಂಭವೀ, ನೀ ಮಹಾತ್ಮ್ಯಮತಿಶಯಮು
|| ಏಮನಿ ||

||ಚ.1.|| ನೀರಜಲೋಚನಾ, ಲೋಕಮುಲೋ, ನಿನ್ನು ಹೃದಯಮುಲೋ
ನಿಲುಪನಿ ಲೋಕುಲು ಧನ್ಯುಲೈರಿಗಾ ನಲುಗುರಿಲೋ
ಸಾರಮತಿ ನನ್ನು ದಯತೋ ಗಾಂಚಿ ಕರುಣಿಂಚುಮು ತಲ್ಲಿ ನೆರನಮ್ಮಿತಿ
ಚಾಲಾ ಮಹಾಲೀಲಗಲಿಗಿನ ಶಕ್ತಿ ಸಂತತಮು ನೀವೇ ಸಂತೋಷವತಿ
||ಏಮನಿ||

||ಚ.2.|| ಓ ಜನನೀ, ಕರುಣೇ, ಭವಪ್ರಿಯಾ ! ವಿನುಮವನಿ, ಓಂ ಅನಿ-
ನ ಜನ್ಮಸಾಫಲ್ಯಮಾಯೆ, ನೀದು ಕಥಲನು ವಿನಿ

ಓ ಮೋಹಾವೃತಲೈಯುನ್ನ ಜನುಲನು ತಲ್ಲಿ ಇಪುಡು ಬ್ರೋವುಮು
ಓ ರಾಜಾಧಿರಾಜೇಂದ್ರ ಮಣಿ ಮಕುಟ ಪಟಲ ಮಣಿ ವಿರಚಿತ ಪದಾ
||ಏಮನಿ||

||ಚ.3.|| ಕಂಜನದಾಂತುನಿ ಕಾಮಿತಾ ! ಶುಭಚರಿತಾ ! ಪ್ರಸನ್ನವದನಾ!
ಘನಕೃಪಾಸಹಿತಾ ಶ್ಯಾಮಕೃಷ್ಣ ಚಿಂತಾ ಗಿರಿತನಯಾ !
ಪಂಚನದ ಕಾವೇರೀ ತೀರಮುನ ನಿವಸಿಂಚೇ ಉಮಾ!
ಪಂಚಾಪಕೇಶ ಮುನಿನುತಾ ಹೈಮವತೀ ಪರಾಶಕ್ತೀ ! ||ಏಮನಿ||

ವ್ಯಾಖ್ಯಾನ

ಅದ್ಭುತ ಸುಂದರವಾದ 'ರಾವೇ ಹಿಮಮಗಿರಿ ಕುಮಾರಿ' ಸ್ವರಜತಿಯೂ ಸೇರಿದಂತೆ ತೋಡಿ ರಾಗದಲ್ಲಿನ ಶಾಸ್ತ್ರಿಗಳ 4 ರಚನೆಗಳಲ್ಲೊಂದಿದು. ಎಂದಿನಂತೆ, 3 ಚರಣಗಳುಳ್ಳ ತೆಲುಗಿನ ಕೃತಿ. ತಾಯಿ! ಈ ಧರೆಯಲ್ಲಿ ನಿನ್ನ ಮಹಿಮೆಯನ್ನು ತೃಪ್ತಿಯಾಗುವಷ್ಟು ಏನೆಂದು ವರ್ಣಿಸಲಿ? ಗಜಗಮನೆ, ಶಾಂಭವಿ, ಅತಿಶಯವಾದ ನಿನ್ನ ಮಾಹಾತ್ಮ್ಯವನ್ನೂ, ನಿನ್ನ ಮಾಯೆನ್ನೂ ಅರಿಯಲಾರರು ತಾಯಿ !

1. ಹೇ, ನೀರಜಾಕ್ಷಿ! ಲೋಕಗಳಲ್ಲಿ, ನಿನ್ನನ್ನು ಹೃದಯಲ್ಲಿ ಸ್ಥಾಪಿಸಿಕೊಂಡವರು ನಾಲ್ಕು ಮಂದಿಯಲ್ಲಿ ಧನ್ಯರಾದರಲ್ಲವೆ ತಾಯಿ ! ನೀನು ಸಾರಸರ್ವಸ್ವ, ನೀನೇ ಆನಂದ ಸ್ವರೂಪಳು ಎಂದೆಂದಿಗೂ, ಬಹಳ ದೊಡ್ಡ ನಿನ್ನ ಶಕ್ತಿಗೆ ಅದೊಂದು ಲೀಲೆ! ನನ್ನನ್ನು ದಯೆಯಿಂದ ನೋಡಿ ಕಟಾಕ್ಷ ಕರುಣಿಸಮ್ಮಾ!

2. ಓ ಜನನೀ, ಕರುಣವೇ ಆದವಳೇ, ಭವನಿಗೆ ಪ್ರಿಯಳೇ, ಪಾಲಿನಿಯೇ ಕೇಳು (ವಿನುಮು-ಅವನಿ) ಓಂ ಎಂದುಚ್ಚರಿಸಿದಾಗಲೇ ಜನ್ಮಸಾಫಲ್ಯ ದೊರಕಿತು ನಿನ್ನ ಕಥೆಗಳನ್ನು ಕೇಳಿ, ಓ ಮಾತೆ, ಮೋಹಾವೃತರಾದ ಜನರನ್ನು ಈಗಲೇ ಕಾಪಾಡು ಓ ದೇವಿ, ಲೆಕ್ಕವಿಲ್ಲದಷ್ಟು ರಾಜಾಧಿರಾಜರು ನಿನಗೆರಗಿದಾಗ ಉದುರಿದ ಅವರ ಕಿರೀಟದ ಮುಖ ಮಣಿಗಳಿಂದಲೇ ಆಕಾರ ಪಡೆದುವೇನೋ ಎಂಬಂತೆ ಇದ್ದು ಸುಂದರವಾದ ಪಾದವುಳ್ಳವಳೇ! ದೇವಿ ಕರುಣಿಸಮ್ಮಾ !

3. ಓ ಕಾಮಹರನ ಪ್ರಿಯಳೇ (ಇದನ್ನು 'ಕಂಜನದಾಂತುನಿ ಕಾಮಿತಾ' ಎಂದು

ವರ್ಣಿಸುತ್ತಾರೆ ಶಾಸ್ತ್ರಿಗಳು). ಶುಭಚರಿತೆ, ಪ್ರಸನ್ನವದನೇ, ಕರ್ಪೂರದಷ್ಟು ಶುದ್ಧವಾದ ಕೃಪೆಯಲ್ಲವೆ ನಿನ್ನದು, ಶ್ಯಾಮಕೃಷ್ಣನ ಬಗ್ಗೆ ಚಿಂತಿಸುವವಳೇ, ಗಿರಿರಾಜಪುತ್ರಿ, ಪಂಚನದ ಕ್ಷೇತ್ರವೆಂದು ಖ್ಯಾತವಾದ ಕಾವೇರೀ ತೀರದ ಈ ಕ್ಷೇತ್ರವಾಸಿನಿ ಉಮೇ, ಹಿಮವಂತನ ಪುತ್ರಿ, ಪರಾಶಕ್ತಿ, ಪಂಚಾಪಕೇಶ ಮುನಿಸ್ತುತಳೇ ಓ ದೇವಿ, ಕರುಣಿಸಮ್ಮಾ !

ಈ ಕೃತಿಯಲ್ಲಿನ ಸಾಹಿತ್ಯದ ಓಘ ಶ್ಯಾಮಶಾಸ್ತ್ರಿಗಳ ಸಾಹಿತ್ಯ ರಚನೆಯ ಮನೋಧರ್ಮವನ್ನು ಚೆನ್ನಾಗಿ ತಿಳಿಸುತ್ತದೆ.

50. 'ಬ್ರೋವವಮ್ಮಾ ತಾಮಸಮೇಲೆ?' –

ರಾಗ : ಮಾಂಜಿ **ತಾಳ : ಮಿಶ್ರಛಾಪು**

ಸಾಹಿತ್ಯದ ಮೂಲ ಪಾಠ

||ಪ.|| ಬ್ರೋವವಮ್ಮಾ, ತಾಮಸಮೇಲೆ ಅಂಬಾ !? ದೇವೀ, ತಾಳಲೇನೇ !
ಬಿರಾನ ||ಬ್ರೋವವಮ್ಮಾ||

||ಅ.ಪ.|| ನೀವೇ ಅನಾದರಣ ಜೇಸಿತೆ ಅಂಬ ! ನೀರ್ವಹಿಂಪ ವಶಮಾ, ಕಾಮಾಕ್ಷಿ|
|| ಬ್ರೋವವಮ್ಮಾ||

||ಚ.1.|| ಜಾಲಮೇಲ, ವಿನೋದಮಾ, ಶಿವಶಂಕರಿ? ಇದಿ ಸಮ್ಮತಮಾ?
ಶೂಲಿನೀ, ನೀವೇ ಭಕ್ತಪರಿಪಾಲಿನಿ ಗದಾ ? ಬಿರಾನ
|| ಬ್ರೋವವಮ್ಮಾ||

||ಚ.2.|| ದೀನರಕ್ಷಕಿ ನೀವೆಯನಿ ನೀ ದಿವ್ಯನಾಮಮೇ ಧ್ಯಾನಮು
ವೇರೆ ಮಂತ್ರ ಜಪಮುಲೆರುಗನೇ ! ಬಿರಾನ || ಬ್ರೋವವಮ್ಮಾ||

||ಚ.3.|| ಶ್ಯಾಮಕೃಷ್ಣ ಸಹೋದರೀ, ಶುಕಶ್ಯಾಮಳೇ, ತ್ರಿಪುರಸುದರೀ, ಅಂಬಾ!
ಈ ಮಹಿಲೋ ನೀ ಸಮಾನ ದೈವಮು ಎಂದುಗಾನಲೇನೇ ! ಬಿರಾನ
|| ಬ್ರೋವವಮ್ಮಾ||

ವ್ಯಾಖ್ಯಾನ

ಈ ಕೃತಿ ಶ್ರೀ ಶ್ಯಾಮಶಾಸ್ತ್ರಿಗಳ ಪ್ರಸಿದ್ಧವಾದ ಕೃತಿಗಳಲ್ಲೊಂದಾಗಿದೆ. 3

ಚರಣಗಳುಳ್ಳದ್ದು, ವಿರಳವಾಗಿ ಕೇಳ ಸಿಗುವ ಮಾಂಜಿ ರಾಗದಲ್ಲಿ ರಚಿತವಾಗಿರುವುದಂತೂ ನಿಜ. ರಾಗದ ಬಗೆಗೆ ಜಿಜ್ಞಾಸೆಯನ್ನು ನಂತರ ತೆಗೆದುಕೊಳ್ಳೋಣ. ಮೊದಲು ಸಾಹಿತ್ಯ ಭಾವವನ್ನು ಸವಿಯೋಣ:

ಶಾಸ್ತ್ರಿಗಳ ಬಹುತೇಕ ಕೃತಿಗಳಲ್ಲಿನ, ಅವರ ಅದೇ ಮಾತುಗಳ ಅಳಲೇ ಈ ಕೃತಿಯ ಸಾಹಿತ್ಯ ವಸ್ತುವೂ ಸಹ, ಪ್ರಾರಂಭಿಸುವುದೂ ಅಂತೇ !

ಹೇ ಕಾಮಾಕ್ಷಿ ದೇವಿ, ತ್ವರಿತವಾಗಿ ಕಾಪಾಡಮ್ಮಾ, ವಿಳಂಬವೇಕೆ ? ವಿಳಂಬ ತಾಳೆನೇ ಅಮ್ಮಾ! ನೀನೇ ಅನಾದರಣೆ ಮಾಡಿದರೆ (ಆದರಿಸದಿದ್ದರೆ) ಭರಿಸಲಾದೀತೆ ತಾಯಿ ? ಕಾಪಾಡಮ್ಮಾ !

1. ಕಪಟವೇಕಮ್ಮಾ (ಜಾಲಮೇಲ) ಅದು ನಿನಗೊಂದು ವಿನೋದದ ವಿಷಯವೇ ಶಿವಶಂಕರಿ, ಇದನ್ನು ನೀನೇ ಒಪ್ಪುವೆಯಾ ? ಶೂಲಿನಿ, ಭಕ್ತ ಪರಿಪಾಲಿನಿಯೆಂದರೆ ಅದು ನೀನೇ ಅಲ್ಲವೆ? ಬೇಗ ಕಾಪಾಡು.
2. ದೀನರಕ್ಷಕಿ ನೀನೇ ಎಂದು ನಿನ್ನ ನಾಮವೇ ನನ್ನ ಧ್ಯಾನವಸ್ತು, ಬೇರೆ ಮಂತ್ರಗಳನ್ನೂ ಜಪಗಳನ್ನೂ ನಾನರಿಯೆನೇ ಅಮ್ಮಾ ! ಬೇಗ ಕಾಪಾಡಮ್ಮಾ!
3. ಶ್ಯಾಮಕೃಷ್ಣ ಸೋದರಿ, ಶುಕಶ್ಯಾಮಳೇ, ತ್ರಿಪುರ ಸುಂದರಿ, ಈ ಭುವಿಯಲ್ಲಿ ನಿನಗೆ ಸಮಾನರಾದ ದೈವವನ್ನು ಎಲ್ಲೂ ಕಾಣೆನೇ, ಅಮ್ಮಾ, ಕಾಮಾಕ್ಷಿ ಬೇಗ ಕಾಪಾಡಮ್ಮಾ !

ಇನ್ನು ಮಾಂಜಿ ರಾಗದಬಗ್ಗೆ ಸ್ವಲ್ಪ ಜಿಜ್ಞಾಸೆ ಮಾಡೋಣ :

ಮಾನ್ಯ ಓದುಗರೇ, ತಮ್ಮಲ್ಲಿ ಅನೇಕರು ಅನುಭವಿ ವಿದ್ವಾಂಸ ವಿದುಷಿಯರಾದವರೇ ಇದ್ದೀರಿ. ಅಭ್ಯಾಸಿಗಳಿದ್ದೀರಿ, ಅನೇಕರು ಅನುಭವಿ ಶ್ರೋತೃಗಳು, ಚಿಂತಕರು ಇದ್ದೀರಿ. ಮಾಂಜಿ ರಾಗದ ಪ್ರಸಕ್ತಿ ಇಲ್ಲಿದೆ ಎಂದಾಗ ತಮ್ಮ ಗಮನ ಹೆಚ್ಚು ಸೂಕ್ಷ್ಮಗೊಂಡು, ನಮ್ಮ ಇಡೀ ಸಂಗೀತ ಶ್ರವಣಾನುಭವದಲ್ಲಿ ಮಾಂಜಿ ರಾಗ ಒಂದು ರೀತಿಯ ಒಗಟಾಗಿಯೇ ಉಳಿದುಕೊಂಡಿರುವುದು ಎಲ್ಲರ ಅನುಭವದಲ್ಲಿರುವ ಸಂಗತಿಯಾಗಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ತಮ್ಮ ಕುತೂಹಲ ಹೆಚ್ಚಬಹುದೇನೋ!

ಪೂಜ್ಯರಾದ ಶ್ರೀ ಶ್ಯಾಮಶಾಸ್ತ್ರಿಯವರೂ, ಶ್ರೀ ಮುದ್ದುಸ್ವಾಮಿ ದೀಕ್ಷಿತರೂ ರಚಿಸಿದ ತಮ್ಮ ಕೃತಿಗಳನ್ನು ತಾವೇ ಹಾಡಿ ಮಾಂಜಿ ರಾಗದ ಪ್ರತಿಪಾದನೆಯನ್ನೂ ಸ್ವರೂಪದರ್ಶನ ಮಾಡಿಸಿದುದನ್ನೂ ನಾವಾಗಲಿ, ನಮ್ಮ ಹಿಂದಿನ ಮತ್ತು ಅವರ ಹಿಂದಿನ ಪೀಳಿಗೆಯವರಾರೂ ಕೇಳಿಲ್ಲ. ಎಲ್ಲ ವೇದಿಕೆಗಳಿಂದಲೂ ಶ್ರೀ ಶಾಸ್ತ್ರಿಗಳ ಮಾಂಜಿ ರಾಗದ ಬ್ರೋವವಮ್ಮಾತಾಮಸ ಮೇಲೆ ಕೃತಿಯ ನಿರೂಪಣೆ ಕೇಳ ಸಿಗುವುದು ನೂರಕ್ಕೆ ನೂರರಷ್ಟು ಭೈರವಿಯಾಗಿಯೇ. ಮಾಂಜಿಯಲ್ಲಿಯೂ ಭೈರವಿಯಲ್ಲಿಯೂ ಪ್ರತ್ಯೇಕ ಕೃತಿಗಳನ್ನು ಸಂಗೀತ ತ್ರಿಮೂರ್ತಿಗಳು ರಚಿಸಿರುವುದುರಿಂದ, ಮಾಂಜಿ ಎಂಬುದು ಭೈರವಿ ರಾಗಕ್ಕೆ ಇನ್ನೊಂದು ಹೆಸರಲ್ಲ ಎಂಬುದು ಈ ಹಲವಾರು ತಲೆಮಾರುಗಳು ಸ್ವೀಕರಿಸಿರುವ ಅಂಶ.

ಅತ್ಯಂತ ಸಂಕೀರ್ಣತಮವಾದ ಪಂಚದಶ ಗಮಕಾನ್ವಯದ ದಿಕ್ಕಿನಲ್ಲಿ, ಕರ್ಣಾಟಕ ಸಂಗೀತದಲ್ಲಿ, ಎಲ್ಲ ಗಮಕಗಳನ್ನೂ, ಅತಿ ಹೆಚ್ಚಿನ ರಾಗ ಸೌಂದರ್ಯಕ್ಕಾಗಿ ಬಳಸುವ ಮತ್ತು ರಾಗದ ಎಲ್ಲ ಸ್ವರಗಳೂ ಗಮಕಗಳನ್ನು ತೆಗೆದುಕೊಳ್ಳುವ ರಾಗಗಳಲ್ಲಿ ಅಗ್ರಪಂಕ್ತಿಯಲ್ಲೇ ಎದ್ದು ನಿಲ್ಲುವಂಥದು ಭೈರವಿ ರಾಗ. ಸಾಗರ ವಿಸ್ತಾರ ಉಳ್ಳದ್ದು. ಭೈರವಿಯ ಆರೋಹರಣ-ಅವರೋಹಣ ಸ್ವರ ಸಂಚಾರಗಳನ್ನೇ ಹೊಂದಿದಾಗ ಭೈರವಿಯಂತೆಯೇ ಕೇಳಿಸಿ ಅದೇ ಭಾವನೆಯನ್ನು ಪ್ರೇರೇಪಿಸುವುದು ಸಹಜವೇ ತಾನೇ ?- ಎಂಬ ತರ್ಕ ಮಾಂಜಿಗೂ, ಆ ಸೂಕ್ಷ್ಮದ ಹಲವಾರು ರಾಗಗಳಿಗೂ ಅನ್ವಯಿಸುವುದೇ ಇಲ್ಲ, ಏಕೆಂದರೆ, ಗಮಕಾನ್ವಯದ ರೀತಿಗಳು, ಅಳತೆಗಳು, ಅವುಗಳಲ್ಲಿನ ಲಯ, ಸ್ವರ ಎಲ್ಲಿ ಆರಂಭಿಸುತ್ತದೆ ದಿಕ್ಕು ಯಾವುದು, ಅಕ್ಕಪಕ್ಕದ ಯಾವ ಸ್ವರದಲ್ಲಿ, ಎಷ್ಟು ಕಾಲ ಇದ್ದು ಸ್ವಸ್ಥಾನಕ್ಕೆ ಬರುತ್ತದೆ, ಗಮಕಾನ್ವಿತ ಸ್ವರ ಸ್ವಸ್ಥಾನದಲ್ಲಿ ಇಲ್ಲದೆಯೇ ಇರುವುದು, ಇತ್ಯಾದಿ ಹಲವು ಅಂಶಗಳನ್ನವಲಂಬಿಸಿ ಒಂದರಿಂದ ಮತ್ತೊಂದು ರಾಗದಲ್ಲಿ ವಿಭಿನ್ನವಾಗಿರುತ್ತವೆ ಸ್ವರ ಸಂದರ್ಭಗಳು.

ಎಲ್ಲ ಶೈಲಿಗಳ ಸಂಗಿತದಲ್ಲಿನ ಕಲ್ಪನೆಗೂ ಅದರ ಕೇಳ್ಮೆಯ ಅನುಭವಕ್ಕೂ ಸಾಮಾನ್ಯವಾಗಿಯೂ, ಕರ್ಣಾಟಕ ಸಂಗೀತಕ್ಕೆ ವಿಶೇಷವಾಗಿಯೂ, ಅನ್ವಯಿಸುವಂತೆ, ಪ್ರಯೋಗ ಸಿದ್ಧವಾದ ಕಲೆಯಾಗಿ ಸಾಟಿ ಇಲ್ಲದ ಈ ಸಂಗೀತವನ್ನೂ ಅದರ ಸೂಕ್ಷ್ಮಗಳನ್ನೂ, ಸೂಕ್ಷ್ಮ ಸ್ವರ ಮೌಲ್ಯಗಳನ್ನೂ

(microtonal values of swaras) ಪಡೆಯಲೂ, ಅರ್ಥಮಾಡಿಕೊಳ್ಳಲೂ, ಸ್ವರ ಲಿಪಿಯ ನೆರವು, ಇಲ್ಲವೆಂದಲ್ಲದಿದ್ದರೂ, ಅಲ್ಪವೇ. ನಮಗೆ ವೇದ ಸದೃಶವಾದ ಸಂಗೀತ ಸಂಪ್ರದಾಯ ಪ್ರದರ್ಶಿನಿಯಲ್ಲಿನ ಕೃತಿಗಳ ನಿರೂಪಣೆಯಯಲ್ಲಿ ಲಕ್ಷ್ಯ ಲಕ್ಷಣಗಳಲ್ಲಿ ಅಸಮಾನರಾಗಿದ್ದ ಬ್ರಹ್ಮಶ್ರೀ ಸುಬ್ಬರಾಮ ದೀಕ್ಷಿತರು ಗಮಕಗಳನ್ನು ವಿವರಿಸಿ, ಅವುಗಳಿಗೆ ಚಿನ್ಹೆಯ ಪದ್ಧತಿಯೊಂದನ್ನು ಸೃಷ್ಟಿಸಿ ಬಳಸಿ ಸ್ವರಲಿಪಿ ನೀಡಿದ್ದರೂ, ಅದೂ ಸಹ ಕೃತಿಗಳ ಗೇಯಗಳ ಓಟ-ಸೂಕ್ಷ್ಮಗಳನ್ನು ಪೂರ್ಣವಾಗಿ ಅರ್ಥಮಾಡಿಕೊಂಡು ನಿರೂಪಿಸಲು ನೆರವಾಗುವುದು ಪ್ರತಿಶತ ಐವತ್ತಕ್ಕೂ ಕಡಿಮೆಯೇ.

ಈ ಅನುಭವದ ಹಿನ್ನೆಲೆಯಲ್ಲೇ ತೈತ್ತಿರೀಯ ಉಪನಿಷತ್ತಿನ-

"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ" ಎಂಬ ಅದ್ಭುತಗಹನವಾದ ಮಾತು ನಮ್ಮ ಸಂಗೀತ ಪದ್ಧತಿಯ ರಾಗ ಸೂಕ್ಷ್ಮ, ಸ್ವರ ಸೂಕ್ಷ್ಮ, ಗಮಕ ಸೂಕ್ಷ್ಮಗಳಿಗೆ ನೂರಕ್ಕೆ ನೂರಷ್ಟು ಅನ್ವಯಿಸುತ್ತದೆ.

ಈ ಮಾತುಗಳಿಗೆ ಮತ್ತು ರಾಗಗಳ ಸೂಕ್ಷ್ಮಗಳಿಗೆ ಪ್ರಯೋಗದಲ್ಲಿನ ವ್ಯಾಖ್ಯಾನವೋ ಎಂಬಂತೆ, ಅನೇಕ ಕ್ಲಿಷ್ಟ, ಮತ್ತು ಸೂಕ್ಷ್ಮವಾದ ರಾಗಗಳ ಲಕ್ಷಣ ವಿವರಣೆಯ ಸಂದರ್ಭದಲ್ಲಿ "ಲಕ್ಷ್ಯ ಕೋವಿದುಲಚೇನೆರುಗವಲೆನು"- ಎಂದರೆ, 'ಲಕ್ಷ್ಯಕೋವಿದರ ಪ್ರಾಯೋಗಿಕ ನಿರೂಪಣೆಯಿಂದಲೇ, ಅಂಥ ಗಾಯನ ಪಟುಗಳ ಗಾಯನದ ಕೇಳ್ಮೆಯಿಂದಲೇ ಗ್ರಹಿಸಿ ಅರಿಯಬೇಕಾದ ರಾಗಗಳು' ಎನ್ನುತ್ತಾರೆ ಸುಬ್ಬರಾಮ ದೀಕ್ಷಿತರು.

ಮಾಂಜಿ ರಾಗದ್ದು ಭೈರವಿಯೊಂದಿಗೆ ಒಂದು ರೀತಿಯ ಅವಿನಾತ್ವ ಸಂಬಂಧವೆಂದೇ ಹೇಳಬಹುದಾದರೂ, ಈ ಹಿಂದೆ ಹೇಳಿದಂತೆ, ಭೈರವಿಯಲ್ಲಿ ಐಕ್ಯವಾಗಿಬಿಟ್ಟು ಅಸಿತ್ವವನ್ನೇ ಕಳೆದುಕೊಂಡುದು ಎಂದ ಹೇಳುವಂತೆಯೂ ಇಲ್ಲ. ಈ ಎರಡು ರಾಗಗಳ ಸಂಬಂಧ ಎಂಥದೆಂದರೆ, ಭೈರವಿಯು ನೂರಾರು ವರ್ಷಗಳಷ್ಟು ಹಳೆಯದಾದ, ಎತ್ತರವಾದ, ಅಗಲವಾಗಿ ವ್ಯಾಪಿಸಿ ಹರಡಿಕೊಂಡು ಬಿಳಲು ಬಿಟ್ಟ ಬೃಹತ್ ಆಲದ ಮರವಾದರೆ, ಅದರ ಬುಡದಲ್ಲಿ ನಂತರ ಎಂದೋ ಆಕಸ್ಮಿಕವಾಗಿ ಗಾಳಿ ಕೆಡವಿದ ಬೀಜವೊಂದು ಮೊಳೆತ ಬಳ್ಳಿಯೊಂದು ಈ ಆಲದ ಮರದ ಮೇಲೆ ಹತ್ತಿಕೊಂಡು, ತೊಗಟೆಯ ಬಣ್ಣ ಆಲದ ಮರದ ತೊಗಟೆಯ

ಬಣ್ಣದಿಂದ, ಸ್ವಲ್ಪ ವಿಭಿನ್ನವಾದುದರಿಂದ ಅಲ್ಲೊಂದು ಸಣ್ಣ ಬಳ್ಳಿ ಆಲದ ಮರದ ಮೇಲೆ ಹತ್ತಿಕೊಂಡಿದೆ ಎಂಬಷ್ಟು ಮಾತ್ರ ಕಾಣಿಸಿಕೊಳ್ಳುವ ಸ್ಥಾನ ಪಡೆದಿರುವಂಥದು.

ವೇಂಕಟಮಖಿಯ ಕಾಲದ ರಾಗ ಇದಲ್ಲ. ಆದ್ದರಿಂದ ವೇಂಕಟಮಖಿ ಇದನ್ನು ಹೇಳುವುದಿಲ್ಲ. ಆತನ ಕಿರಿಯ ಬಂಧು ಮುದ್ದುವೇಂಕಟಮಖಿ ತನ್ನ 'ರಾಗ ಲಕ್ಷಣಂ' ಪುಟ್ಟ ಗ್ರಂಥದಲ್ಲಿ 65ನೇ ಶ್ಲೋಕಾರ್ಧದಲ್ಲಿ 'ಮಾಂಜಿ ರಾಗಸ್ತು ಸಂಪೂರ್ಣಃ ಸಗ್ರಹೋ ಗೀಯತೇ ಸದಾ| ಎಂದು ಹೇಳಿದುದರಿಂದ ಮಾಂಜಿ ರಾಗದ ಸ್ವರೂಪ, ಪ್ರಯೋಗ, ವಿಧಾನ, ಅದರ ಸೌಂದರ್ಯಾನುಭೂತಿ ದೊರೆಯಬಹುದಾದುದೆಷ್ಟು ? ಔತ್ತರೇಯ ಸಂಗೀತ ಪದ್ಧತಿಯಿಂದ ಕರ್ಣಾಟಕ ಸಂಗೀತದ ತೆರೆದ ದಿಡ್ಡಿ ಬಾಗಿಲಿನೊಳಕ್ಕೆ ಪ್ರವೇಶಿಸಿದ 'ದೇಶ್ಯ ಅಥವಾ ದೇಶೀಯ' ಎಂಬ ವರ್ಗದ ರಾಗಗಳ ಪಟ್ಟಿಯಲ್ಲಿ ಮುದ್ದು ವೆಂಕಟಮಖಿ ಸೇರಿಸುವ ರಾಗವಿದು. ದರ್ಬಾರು, ನಾಯಕಿ, ಸುರಟಿ ಮೊದಲಾದ 'ದೇಶೀಯ' ಎಂಬ ವರ್ಗದಲ್ಲೇ ಇಳಿದು ಬಂದ ರಾಗಗಳಂತೆ, ನಂತರ ಕರ್ಣಾಟಕ ಸಂಗೀತದ ಮೂಲ, ಸಂಕೀರ್ಣತಮ, ಸ್ವಸ್ವಭಾವದ ಪ್ರತಿನಿಧಿ ರಾಗಗಳಂತೆ ಪರಿವರ್ತನೆಗೊಂಡ ರಾಗಗಳಲ್ಲಿ ಮಾಂಜಿ ರಾಗವೂ ಒಂದು.

ಭೈರವಿಯೊಂದಿಗೆ ಮಾಂಜಿಗೆ ಇರುವ ಅವಿನಾತ್ವ ಸಂಬಂಧದ ಹಿನ್ನೆಲೆಯಲ್ಲಿ (ಐಕ್ಯತೆ ಅಲ್ಲ!) ಅತ್ಯಂತ ಮುಖ್ಯವೂ ಅತ್ಯಧಿಕವಾಗಿ ಪ್ರಸಕ್ತವೂ ಆದ, ಪ್ರಯೋಗ ದೃಷ್ಟಿಯಿಂದ ವರ್ಣನಾತ್ಮಕವಾದ ಒಂದೆರಡು ಮಾತುಗಳಿಂದ ಸ್ವಲ್ಪ ಪ್ರಯೋಜನವಾಗಬಹುದೇನೋ !

ಭೈರವಿಯು ಸಾಗರದ ವಿಸ್ತಾರವಿರುವ ರಾಗ ಎಂದೆ, ರಾಗದ ಎಲ್ಲ ಸ್ವರಗಳೂ ಗಮಕಾನ್ವಯವನ್ನು ಸೂಕ್ಷ್ಮ ರೀತಿಯಲ್ಲಿ ಅಪ್ಪಿಕೊಂಡು ವಿರಾಜಿಸಿ ರಾಗತ್ವವನ್ನು ಪ್ರಕಾಶಿಸುತ್ತವೆ ಎಂದೆ. ಪಂಚದಶ ಗಮಕಗಳಿಗೆ ಎಲ್ಲಕ್ಕೂ ಈ ರಾಗದಲ್ಲಿ ಪ್ರಯೋಗದ ಅರ್ಹತೆ ಪ್ರಯೋಜನಗಳುಂಟು ಎಂದೆ. ಅತಿ ಹೆಚ್ಚಿನ ಅಂಶಸ್ವರ ಅಥವಾ ಜೀವ ಸ್ವರಗಳಿಂದ ಪ್ರಕಾಶಿಸುವ ರಾಗವಿದು. ಈ ಎಲ್ಲ, ಮತ್ತಿತರ, ಭಾವನಾತ್ಮಕ ಅಂಶಗಳ ಸಮೃದ್ಧಿಯಿಂದ, ಕಲೆಗಾರನ ಸಾಮರ್ಥ್ಯ-ಸಿದ್ಧಿಗಳನ್ನವಲಂಬಿಸಿ, ಭಾವ ಸಮೃದ್ಧಿಯಿಂದ, ವಿಸ್ತಾರವಾದ ಆಲಾಪನಕ್ಕೆ

ಆಸ್ವದವನ್ನೂ ಸ್ಫೂರ್ತಿಯನ್ನೂ ನೀಡುವಂಥ ರಾಗ. ಭೈರವಿಯ ಈ ವಿಶಾಲ ವ್ಯಾಪ್ತಿ, ಹಿರಿತನಗಳನ್ನು ಪೂಜ್ಯರಾದ ಸಂಗೀತ ತ್ರಿಮೂರ್ತಿಗಳೂ, ಅವರ ಹಿಂದಿನ ಮತ್ತು ನಂತರದ ವಾಗ್ಗೇಯಕಾರರು ರಚಿಸಿರುವ ಅಸಂಖ್ಯಾತ ರಚನೆಗಳು ಸಾಬೀತುಪಡಿಸುತ್ತವೆ. ಮುಖ್ಯತೆಯ ಆದ್ಯತೆಯ ಪ್ರಕಾರವಾಗಿ, ಇದರಲ್ಲಿನ ನಿಷಾದ ಗಾಂಧಾರಗಳು, ಧೈವತ, ಮಧ್ಯಮ, ರಿಷಭ, ಸ್ವರಗಳೂ, ಪ್ರಕೃತಿಸ್ವರಗಳಾದ ಷಡ್ಜ ಪಂಚಮಗಳೂ ವಿಶಿಷ್ಟ ಸ್ವರ ಸಂದರ್ಭಗಳಲ್ಲಿ, ಭೈರವಿಗೇ ವಿಶಿಷ್ಟವಾದ ರೀತಿಯಲ್ಲಿ, ಅಲಂಕರಣಗೊಂಡು ಭೈರವಿಯ ಸೌಂದರ್ಯ ವೈಭವವನ್ನು ಮೆರೆಯುತ್ತವೆ.

ಮಾಂಜಿಯಲ್ಲಿ ಇಷ್ಟು ವ್ಯಾಪ್ತಿ-ಸಾಧ್ಯತೆಗಳಿಲ್ಲ. ಆದ್ದರಿಂದಲೇ ಆಲಾಪನದ ಅರ್ಹತೆ ಇದಕ್ಕಿಲ್ಲ ಅಥವಾ ಅತ್ಯಲ್ಪ, ಆದ್ದರಿಂದಲೇ, ಒಂದು ಮಟ್ಟಿನ ಸ್ವಭಾವವಿರುವ ಅಲ್ಪ ಸಾಧ್ಯತೆಯ ರಾಗಗಳ ಗುಂಪಿಗೆ ಸೇರಿದುದೆಂಬುದನ್ನು ಈ ರಾಗದಲ್ಲಿರುವ ರಚನೆಗಳ ಬೆರಳೆಣಿಕೆಯ ಸಂಖ್ಯೆಯೇ ಸಾಬೀತುಪಡಿಸುತ್ತದೆ. ಇನ್ನು ನಿಷಾದ-ಗಾಂಧಾರ, ಧೈವತ, ಮಧ್ಯಮ ಸ್ವರಗಳಷ್ಟೂ ಮಿತವಾಗಿಯೂ ವಿಶಿಷ್ಟವಾಗಿಯೂ ಗಮಕಾನ್ವಯಕ್ಕೆ ಆಸ್ವದ ಕೊಡುವಂಥವು, ಅದು ಹೇಗೆ ? ವರ್ಣಿಸಲು ಹೊರಟ ಈ ಹಂತದಿಂದಲೇ ಮಾತು ಸೋತು ಹಿಂದಿರುಗುವುದು. ಪ್ರಯೋಗ ತನ್ನ ಮೇಲ್ಮೆಯನ್ನು ಸ್ಥಾಪಿಸಿಕೊಳ್ಳುವುದು ಇಲ್ಲೇ !

ಈ ಹಿನ್ನೆಲೆಯಲ್ಲಿ ಶ್ರೀ ಶಾಸ್ತ್ರಿಗಳ ಬ್ರೋವವಮ್ಮಾ ತಾಮಸಮೇಲೆ ಕೃತಿಗೆ ಶ್ರವಣ ಲಭ್ಯವಿರುವ ಗೇಯವೇ ಎಲ್ಲರ ಪರಿಚಯದಲ್ಲಿರುವುದು. ಈ ವಿಷಯದ ಈ ಸತ್ಯ ಸಂಗತಿ ಚಿಂತ್ಯವೆನಿಸುವುದಿಲ್ಲವೆ?

51. 'ಪಾಲಿಂಚು ಕಾಮಾಕ್ಷಿ, ಪಾವನಿ' –

ರಾಗ : ಮಧ್ಯಮಾವತಿ ತಾಳ : ಆದಿ

||ಪ.|| ಪಾಲಿಂಚು ಕಾಮಾಕ್ಷೀ, ಪಾವನೀ, ಪಾಪಶಮನೀ || ಪಾಲಿಂಚು||

||ಅ.ಪ.|| ಚಾಲಾ, ಬಹುವಿಧಮುಗಾ ನಿನ್ನು ವೇಡುಕೊನೇಡಿ ನಾಯಂದೇಲ
ಈಲಾಗು ಜೇಸೇವು ವೆತಹರಿಂಚವೇ, ವೇಗಮೇ ! ನನ್ನು
|| ಪಾಲಿಂಚು||

||ಚ.1.|| ಸ್ವಾಂತಂಬುಲೋನ ನಿನ್ನೇ ದಲಚೇ ಸುಜನುಲಕೆಲ್ಲನೇ ವೇಳ
ಸಂತೋಷಮುಲೋಸಗೇವನಿ ನೀವು ಮನೋರಥ ಫಲದಾಯಿನಿವನಿ
ಕಾಂತಮಗು ಪೇರು ಪೊಂದಿತಿವಿ ಕಾರುಣ್ಯಮೂರ್ತಿವ್ಯೈ, ಈಜಗಮು
ಕಾಪಾಡಿನ ತಲ್ಲಿಗದಾ ? ನೇನು ನೀದು ಬಿಡ್ಡನು ಲಾಲಿಂಚಿ
|| ಪಾಲಿಂಚು||

||ಚ.2.|| ಈ ಮೂರ್ತಿ ಇಂತ ತೇಜೋಮಯಮ್ಮೈ ಇಟುವಲೆ ಕೀರ್ತಿ ವಿಸ್ಫೂರ್ತಿ-
ನಿಟ್ಲನು, ಗುಣಮೂರ್ತಿ ತ್ರಿಲೋಕಮುಲೋ ಜೂಚಿನ ಎಂದ್ಯೆನ
ಗಲದಾ ? ಏಮೋ, ತೊಲಿನೋಮುನೋಚಿತಿನೋ! ನೀಪಾದ
ಪದ್ಮ ದರ್ಶನಮು ವೇಮಾರು ಲಭಿಂಚಿ ಕೃತಾರ್ಥುಡನ್ಯೆತಿ. ನಾ
ಮನವಿನಾಲಗಿಂಚಿ || ಪಾಲಿಂಚು||

||ಚ.3.|| ರಾಜಾಧಿರಾಜನ್ ಮಕುಟೀತಟ ಮಣಿರಾಜ ಪಾದಾ!
ನೇಜಾಲ ನಿಜಸನ್ನಿಧಿನಿ ಕೋರಿ ಸಮಸ್ತ ಜನುಲಕೆಲ್ಲ ವರದಾ !
ರಾಜಮುಖೀ ಶ್ಯಾಮಕೃಷ್ಣನುತಾ ಕಾಂಚೀಪುರೇಶ್ವರೀ ವಿಕಸ-
ರಾಜೀವದಳಾಕ್ಷೀ! ಜಗತ್ಸಾಕ್ಷೀ ಓ ಪ್ರಸನ್ನ ಪರಾಶಕ್ತೀ !
|| ಪಾಲಿಂಚು||

||ಸ್ವರ ಸಾಹಿತ್ಯ|| ಕನಕಗಿರಿಸದನ ಲಲಿತ, ನಿನ್ನು ಭಜನ ಸಂತತಮು ಸೇಯ
ನಿಜಮುಗನು ವಿನುಮು ನಿಖಿಲಭುವನ ಜನನಿವಿ ಇಪುಡು ಮಾ
ದುರಿತಮು ದೀರ್ಚಿ,ವರಾಲಿಚ್ಚಿ || ಪಾಲಿಂ ಚು||

ವ್ಯಾಖ್ಯಾನ

ಶ್ರೀ ಶ್ಯಾಮಶಾಸ್ತ್ರಿಗಳ ಕೃತಿಗಳಲ್ಲಿ ಅತಿ ಪ್ರಸಿದ್ಧವೂ ಹೆಚ್ಚು ಚಲಾವಣೆಯಲ್ಲಿರುವುದೂ ಆದ ಕೃತಿ ಇದು. ವಿಳಂಬ ಕಾಲದ ನಡೆಯ ಈ ಸುಂದರ ಕೃತಿ ಅತ್ಯುತ್ತಮ ರಕ್ತಿ ರಾಗಗಳಲ್ಲಿ ಒಂದಾದ ಮಧ್ಯಮಾವತಿಯ ಸ್ವರೂಪದ ಪ್ರತಿಪಾದನೆಯಲ್ಲಿ ಅತಿ ಯಶಸ್ವಿಯಾದುದು. ಈ ಕೃತಿಯೂ 3 ಚರಣಗಳನ್ನು ಹೊಂದಿದ್ದು, ಸ್ವರಸಾಹಿತ್ಯವನ್ನು ಹೊಂದಿದೆ. ಸಾಹಿತ್ಯದ ಭಾವ ಹೀಗಿದೆ:

ಹೇ ಕಾಮಾಕ್ಷಿ, ಪಾವನಿ, ಪಾಪಶಮನಿ, ಪಾಲಿಸು ತಾಯೆ ! ಬಹಳವಾಗಿ,

ಹಲವು ವಿಧಗಳಲ್ಲಿ ನಿನ್ನನ್ನು ಸದಾ ಬೇಡಿಕೊಳ್ಳುವ ನನ್ನೊಂದಿಗೆ ಹೀಗೆ ಮಾಡುವೆ ಏಕೆ ತಾಯೆ! ಬೇಗನೆ ನನ್ನ ವ್ಯಥೆಗಳನ್ನು ಪರಿಹರಿಸಿ ಕಾಯಮ್ಮಾ!

ಸ್ವರಸಾಹಿತ್ಯ : ಹೇ ಕನಕದುರ್ಗಮ್ಮಾ, ಲಲಿತೆ, ನಿನ್ನನ್ನು ಸತತವಾಗಿ ಭಜಿಸುವ ನಿನ್ನ ಸ್ವಂತದವನು ತಾಯೆ ! ಕೇಳಮ್ಮಾ ! ನೀನು ಇಡೀ ಬ್ರಹ್ಮಾಂಡದ ಜನನಿ, ಈಗ ನಮ್ಮ ಕಷ್ಟಗಳನ್ನು ಅಂತಗೊಳಿಸಿ ವರಗಳನ್ನಿತ್ತು ಪಾಲಿಸು ತಾಯೆ!

ಚ. 1. ಮನಸ್ಸಿನಲ್ಲೇ (ಸ್ವಾಂತಂಬುಲೋನೇ-'ಸ್ವಾಂತ' ಎಂದರೆ ' ಮನಸ್ಸು' ಎಂದರ್ಥ.) ನಿನ್ನನ್ನು ಧ್ಯಾನಿಸುವ ಸುಜನರಿಗೆಲ್ಲ ಯಾವಾಗಲೂ ಸಂತೋಷವನ್ನೇ ಕೊಡುತ್ತೀಯೆಂದೂ, ಮನೋರಥಗಳನ್ನು ಪೂರೈಸುತ್ತೀಯೆಂದೂ, ಎಲ್ಲಕ್ಕೂ ಅತ್ಯುಚ್ಚ ಒಡತಿ ಎಂದೂ ಬಿರುದಲ್ಲವೇ ನಿನಗೆ! ಕಾರುಣ್ಯದ ಮೂರ್ತಿಯೇ ನೀನಾಗಿ ಜಗತ್ತನ್ನು ಕಾಪಾಡಿದ ತಾಯಿ ನೀನಲ್ಲವೇ, ನಾನಂತೂ ನಿನ್ನ ಮಗುವೇ! - ಲಾಲಿಸಿ ಪಾಲಿಸು ತಾಯೆ !

ಚ. 2. ಈ ನಿನ್ನ ವಿಗ್ರಹ ಇಷ್ಟು ತೇಜೋವಂತವಾಗಿ ಹೀಗೆ ಕೀರ್ತಿ ಪ್ರಸಿದ್ಧಿಗಳನ್ನು ಹೊಂದಿ ವಿಶೇಷವಾಗಿ ಸ್ಫೂರ್ತಿಪ್ರದವಾಗಿರಲು ತ್ರಿಲೋಕಗಳಲ್ಲೇ ನೋಡಿದರೂ ಎಲ್ಲಾದರೂ ಕಾಣಲಾದೀತೇ ತಾಯೆ? ಏನೋ, ಯಾವ ಜನ್ಮದ ಯಾವ ವ್ರತ ನಾ ಮಾಡಿದ ಫಲವೋ ನಿನ್ನ ಅಡಿದಾವರೆಗಳ ದರ್ಶನ ಪದೇ ಪದೇ (ವೇಮಾರು ಎಂದರೆ ಪದೇ ಪದೇ, ಎಂದರ್ಥ) ಲಭಿಸಿ ಕೃತಾರ್ಥನಾದೆ. ಮೊರೆ ಆಲಿಸು, ಪಾಲಿಸು ತಾಯೆ!

ಚ. 3. ರಾಜಾಧಿರಾಜರೆಲ್ಲ ನಿನ್ನ ಪಾದಗಳಿಗೆರಗಿದಾಗ ಸಮರ್ಪಿಸಿದ ಅವರ ಕಿರೀಟಗಳ ಮಣಿಗಳಿಂದ ಥಳಥಳನೆ ಹೊಳೆಯುತ್ತಿರುವ ಪದಾಬ್ಜೆ, ಲೋಕದ ಸಮಸ್ತ ಜನರಿಗೂ ವರದಾಯಕಿ, ಚಂದ್ರಮುಖಿ, ಶ್ಯಾಮಕೃಷ್ಣನುತೇ, ಕಾಂಚೀಪುರೀಶ್ವರಿಯೇ, ಅರಳಿದ ಕಮಲದ ದಳದಾಕಾರದ ನೇತ್ರೇ, ಲೋಕಸಾಕ್ಷಿ, ಓ ಪ್ರಸನ್ನ ಪರಾಶಕ್ತಿ, ಕಾಮಾಕ್ಷಿದೇವಿ, ಪಾಲಿಸಮ್ಮಾ!

ಈ ಕೃತಿಯಲ್ಲಿನ 2 ಚರಣದ ಸಾಹಿತ್ಯವು, ನನ್ನ ವಿಶೇಷ ಗಮನವನ್ನು ಸೆಳೆದಿದೆ : ಇದರಲ್ಲಿ ಶ್ರೀ ಶಾಸ್ತ್ರಿಗಳು ಶ್ರೀಮಾತೆಯ ನೈಕಟ್ಯದ ಪರಾಕಾಷ್ಠದಲ್ಲಿದ್ದುಕ್ಕೂ, ಪದೇಪದೇ 'ನಾ ನಿನ್ನ ಮಗುವಲ್ಲವೇ' ಎಂದು ನಿವೇದಿಸಿಕೊಳ್ಳುವುದಕ್ಕೂ ಫಲ ಪ್ರಾಪ್ತವಾದ ಅನುಭವವನ್ನು ಇಲ್ಲಿ ದಾಖಲಿಸಿ 'ಏಮೋ, ತೊಲಿನೋಮುನೋಚಿತಿನೋ, ನೀ ಪಾದಪದ್ಮದರ್ಶನಮು ವೇಮಾರು ಲಭಿಂಚಿ ಕೃತಾರ್ಥುಡನ್ಯೆತಿ' ಎಂದು, ಪದೇ ಪದೇ ದೇವಿ ಕಾಮಾಕ್ಷಿಯ ಸಾಕ್ಷಾತ್ ದರ್ಶನವನ್ನು ಶ್ರೀ ಶಾಸ್ತ್ರಿಗಳು ಪಡೆದು ಧನ್ಯರಾಗಿದ್ದುದನ್ನು ಪ್ರಕಟಿಸುವ ಮಾತಿದು.

ಗಿರಿಪ್ಯೆನೆಲಕೊನ್ನರಾಮುನಿ ಗುರಿತಪ್ಪಕ ಕಂಟಿ, ಎಂದು ಶಹನ ರಾಗದ ಕೃತಿಯಲ್ಲೂ ದೇವ ಕ್ರಿಯಾ ರಾಗದ 'ನಾಟಿಮಾಟ ಮರಚಿತಿವೋ' ಕೃತಿಯಲ್ಲೂ, ಮನೋಹರಿ ರಾಗದ 'ಪರಿತಾಪಮುಗನಿಯಾಡಿನ ಪಲುಕುಲ ಮರಚಿತಿವೋ ರಾಮ' ಎಂಬ ಕೃತಿಯಲ್ಲೂ ಶ್ರೀ ತ್ಯಾಗರಾಜ ಸ್ವಾಮಿಗಳು ಶ್ರೀ ರಾಮಚಂದ್ರನ ಸಾಕ್ಷಾತ್ ದರ್ಶನವನ್ನು ಪಡೆದಿದ್ದುದನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿರುವ ಮುಖ್ಯವಾದ ಅಂಶವನ್ನು ಶ್ರೀ ಶಾಸ್ತ್ರಿಗಳ ಜೀವಿತದಲ್ಲೂ ನಡೆದಿದ್ದ ಈ ಗಹನವಾದ ಸಂಗತಿ ನೆನಪಿಸುತ್ತದೆ.

ಈ 'ಪಾಲಿಂಚು ಕಾಮಾಕ್ಷಿ' ಕೃತಿಯನ್ನು ಹಾಡುವವರು ಈ ಎರಡನೆಯ ಚರಣದ ಸಾಹಿತ್ಯ ವಸ್ತುವನ್ನೂ ಹಾಡಿದರೆ ಶ್ರೀ ಶ್ಯಾಮಶಾಸ್ತ್ರಿಗಳ ಸಾಕ್ಷಾತ್ಕಾರದ ಸಂಗತಿಯನ್ನು ಅವರೇ ದಾಖಲಿಸಿರುವುದರ ಪರಿಚಯವಾದ ಗಹನವಾದ ಅನುಭವ ಶ್ರೋತೃಗಳಿಗೆ ಆಗುತ್ತದೆ, ಅದು ಮುಖ್ಯ ಎನಿಸುತ್ತದೆ.

52. 'ಅಖಿಲಾಂಡೇಶ್ವರಿ' –

ರಾಗ : ಕರ್ಣಾಟಕ ಕಾಪಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ಅಖಿಲಾಂಡೇಶ್ವರಿ, ದುರುಸುಗ ಬ್ರೋವುಮು|| ಅಖಿಲಾಂಡೇಶ್ವರಿ ||

||ಅ.ಪ.||ನಿಖಿಲತಾಪಹಾರಿಣಿ, ಭುವಿಲೋನ ನಿನ್ನು
ಮಿಂಚಿನವಾರೆವರುನ್ನಾರಮ್ಮಾ !? || ಅಖಿಲಾಂಡೇಶ್ವರಿ ||

||ಚ.1.|| ಮಾಣಿಕ್ಯ ಮಯಮ್ಯೆಯುನ್ನ ಮಂದಿರ ಮಧ್ಯವಾಸಿನೀ ! ಅಲಿ-

ವೇಣೀ! ಶ್ರೀ ಶಂಭುನಾಥುನಿ ರಾಣೀ !
ವರಮಿಯ್ಯವೇ ಗೀರ್ವಾಣೀ ! ಮಾಯಾಮ್ಮಾ !|| ಅಖಿಲಾಂಡೇಶ್ವರಿ ||

||ಚ.2.|| ಅಂಭೋರುಹ ಸಂಭವ ಹರಿಹರ ಶಂಕರ ಅಖಿಲ ಮುನೀಂದ್ರ ಪೂಜಿತ!
ಅತಿ-ಗಂಭೀರಾ! ದೀನರಕ್ಷಣಿ ಗದಾ ?
ನಾ ಮೊರಲನು ವಿನಲೇದಾ? || ಅಖಿಲಾಂಡೇಶ್ವರಿ||

||ಚ.3.|| ಓ ಅಂಬಾ ! ನಿನ್ನು ನಮ್ಮಿನ ನಾಪೈ ಇಂತಪರಾಮುಖಮೇಲ, ವಿನು,
ಶ್ಯಾಮಕೃಷ್ಣನುತಾ ! ಚಿಂತ ದೀರ್ಚಿ ಸಾಮ್ರಾಜ್ಯಮೀಯವೇ ! ವೇಗಮೆ
|| ಅಖಿಲಾಂಡೇಶ್ವರಿ ||

ವ್ಯಾಖ್ಯಾನ

ಕರ್ಣಾಟಕ ಕಾಫಿ /ಕಾಪಿ, ಕೃತಿ ರಚನೆಗೆ ಬಹಳ ವಿರಳವಾಗಿ ಆಯ್ಕೆಯಾಗಿರುವ ರಾಗ.

ಇದರಲ್ಲೊಂದು ಸ್ವರಜತಿ ಇದೆ, ಈ ರಾಗದ ಸ್ವರೂಪ-ಸಂಚಾರಗಳಲ್ಲಿ ವಿವಿಧ ವಾಗ್ಗೇಯಕಾರರ ರಚನೆಗಳಲ್ಲಿ ಸ್ವಲ್ಪ ವಿಭಿನ್ನತೆ ಇದೆ. ಈಗ ಉಲ್ಲೇಖಿಸಿದ ಸ್ವರಜತಿಯಲ್ಲಿನ ಸ್ವರ -ಸಂಚಾರಗಳಿಂದ ಶ್ರೀ ಶಾಸ್ತ್ರಿಗಳ ಕೃತಿಯಲ್ಲಿನ ಸ್ವರ ಸಂಚಾರಗಳು ಬೇರೆಯಾಗಿದ್ದು ಹಳೆಯದೇ ಆದ ಸ್ವರಜತಿಯಲ್ಲಿ ಸರಿಗಮರಿಪಮಪದನಿಸೆ / ಸೆನಿಸೆದನಿಪಮಗಮರಿಸ ಎಂಬ ಆರೋಹಣ ಅವರೋಹಣದಲ್ಲಿ ಸ್ವರ ಸಂಚಾರ ಕಂಡರೆ ಶ್ರೀ ಶಾಸ್ತ್ರಿಗಳ ಈ ಕೃತಿಯಲ್ಲಿ 'ರಿಮಾ', 'ಮಾಸಾ', 'ಸೆನಿಪಮ', 'ರಿಮಗರಿ', 'ಸೆನಿದನಿಪಮ', 'ಪಮಗರಿಸಾ', ಮುಂತಾದ ಸಂಚಾರಗಳನ್ನೆಲ್ಲಾ ಬಳಸಲಾಗಿದೆ.

ಕೃತಿಯ ಸಾಹಿತ್ಯಭಾವ ನೋಡೋಣ:

ಹೇ, ಅಖಿಲಾಂಡೇಶ್ವರಿಯೇ, ಬೇಗನೆ ಕಾಪಾಡಮ್ಮಾ! ಸಕಲ ತಾಪಗಳ ಪರಿಹಾರಿಣಿ, ಭುವಿಯಲ್ಲಿ ನಿನ್ನ ಮೀರಿಸಿದವರು ಯಾರಿದ್ದಾರಮ್ಮಾ? ಎಂದಿನಂತೆ 3 ಚರಣಗಳಿವೆ :

1. ಮಾಣಿಕ್ಯಮಯವಾದ ಮಂದಿರದ ಮಧ್ಯದಲ್ಲಿ ವಾಸಿಸುವ ದೇವಿಯೇ !- 'ಚಿಂತಾಮಣಿ ಗೃಹಾಂತಸ್ಥಾ' ಎಂದು ಲಲಿತಾ ಸಹಸ್ರನಾಮದ 57ನೇ

ನಾಮದ ವರ್ಣನೆಯೇ ಇದು. ಅಲಿವೇಣಿ-ದುಂಬಿಗಳ ಗುಂಪಿನಂತೆ ಕಾಣುವ ಕೇಶರಾಶಿಯುಳ್ಳವಳು, ಶ್ರೀ ಶಂಭುನಾಥನ ರಾಣಿ, ಗೀರ್ವಾಣಿಯೇ ನಮ್ಮಮ್ಮಾ ವರಕೊಡಮ್ಮಾ!

2. ಬ್ರಹ್ಮ, ಹರಿ, ಹರರಿಂದಲೂ ಸಕಲಮುನಿಗಳಿಂದಲೂ ಪೂಜಿತಳೇ, ಅತಿಗಂಭೀರಳೆ, ದೀನರಕ್ಷಿಣಿಯಲ್ಲವೆ ನೀನು. ನನ್ನ ಮೊರೆಗಳನ್ನು ಆಲಿಸಲಿಲ್ಲವೆ ತಾಯಿ?

3. ಓ ಅಂಬೆ, ನಿನ್ನನೆ ನಂಬಿದ ನನ್ನ ಮೇಲೆ ಈ ಅಸಡ್ಡೆಯೇಕೆ ತಾಯಿ, ಕೇಳಮ್ಮಾ, ಶ್ಯಾಮಕೃಷ್ಣನುತೆ, ನನ್ನ ಚಿಂತೆಗಳನ್ನು ನಿವಾರಿಸಿ (ನಿನ್ನ) ಸಾಮ್ರಾಜ್ಯವ ಬೇಗ ಕೊಡು ತಾಯಿ !

53. 'ಜನನಿ, ನತಜನಪರಿಪಾಲಿನಿ' –

ರಾಗ : ಸಾವೇರಿ **ತಾಳ : ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ಜನನಿ, ನತಜನಪರಿಪಾಲಿನಿ, ಪಾಹಿ ಮಾಂ ಭವಾನಿ ! ತ್ರಿಲೋಕ
|| ಜನನಿ||

||ಅ.ಪ.|| ದನುಜವೈರಿನುತೇ, ಸಕಲ ಜನ ಪರಿತಾಪ ಪಾಪಹಾರಿಣಿ, ಜಯಶಾಲಿನಿ!
|| ಜನನಿ||

||ಚ.1.|| ಸತತ ವಿನುತ ಸುತ ಗಣಪತಿ ಸೇನಾನಿ ರಾಜರಾಜೇಶ್ವರಿ ವಿ-
ಶಾಲಾಕ್ಷಿ, ತರುಣಿ, ಅಖಿಲಜನ ಪಾವನಿ, ಶ್ರೀ ರಾಜರಾಜೇಶ್ವರಿ!
ಸತಿ ಶುಭಚರಿತೇ, ಸದಾ ಮಧುರ ಭಾಷಾ ವಿಗಳದಮೃತರಸಧ್ವನಿ
ಸುರನುತ ಪದಯುಗದರ್ಶಿತ, ಇಹ ಮಮ ಗಾತ್ರಮತಿ ಗಾತ್ರಮಜನಿ,
ಸುಜನಿ || ಜನನಿ||

||ಚ.2.|| ಕುವಲಯ ಲೋಚನಯುಗಳೇ, ಕಲ್ಯಾಣಿ, ನೀಲವೇಣಿ ವಿಕಚ,
ಕೋಕನದ ರಜಚ್ಚರಣೇ ಅತಿರಮಣಿ, ಘನ ನೀಲವೇಣಿ
ಭುವಿದಿವಿ ರಕ್ಷಣಿ, ಧೃತಾಮರಗಣೇ, ಭಾಗ್ಯವತಿ, ಶಕ್ತಿ ಸಂಪೂರ್ಣೇ
ಕವನ ನಿಪುಣಮತಿಂ ಅಯಿ ದಿಶ ! ಇಹ ತವ ಕಾಂತಿಂ ಉಪಯಾತುಂ
ಗಿರೀಶರಮಣಿ ||ಜನನಿ||

||ಚ.3.|| ಚರಣ ನಿಪತದಮರಸಮುದಯೇ, ಕಾಳಿ, ಸಾರಸಮುಖಿ, ಸು-
ಶೋಭಿತೋರುಯುಗಳೇ, ವರ ಕದಳೀ ನವಸಾರಮುಖಿ
ಸುರುಚಿರ ಮುರಳೀ ಮೃದಂಗ ಸ್ವರ ಸಂಶೋಭಿನಿ ರಸಕೃತಿ ಮಹೀತಲೇ
ಸರಸಿಜಕರಯುಗಳೇ, ಕಟಿಕಲಿತ ಮಣಿ ಕಾಂಜೀಭೃತೇ ಕಾಂಚೀಪುರ
ವಾಸಿನಿ || ಜನನಿ||

ವ್ಯಾಖ್ಯಾನ

ಒಂದು ಗೀತವೂ ಸೇರಿದಂತೆ ಸಾವೇರಿ ರಾಗದಲ್ಲಿ ಶ್ರೀ ಶ್ಯಾಮಶಾಸ್ತ್ರಿಗಳ 4 ರಚನೆಗಳಲ್ಲಿ ಇದು ಒಂದು. ಶ್ಯಾಮಶಾಸ್ತ್ರಿಗಳಂಥ ಮಹಾ ಭಾವುಕ ಅನುಭಾವಿಗಳ ಭಾವನಾಭಿವ್ಯಕ್ತಿಗೆ ಕರ್ಣಾಟಕ ಸಂಗೀತದ ಹಳೆಯ ರಾಗಗಳಲ್ಲೊಂದಾದ ಮಹಾರಕ್ತಿರಾಗ ಸಾವೇರಿ ಅದೆಷ್ಟು ಅವಕಾಶಮಾಡಿಕೊಟ್ಟಿರಬಹುದೆಂಬುದನ್ನು ಊಹಿಸಬಹುದು.

ಈ ಸಂಸ್ಕೃತ ಸಾಹಿತ್ಯದ ಭಾವ ಹೀಗಿದೆ:

ಹೇ ಭವಾನಿ, ತ್ರಿಲೋಕ ಜನನಿ, ನತಜನ ಪರಿಪಾಲಿನಿ (ಆಶ್ರಯಿಸಿದವರನ್ನು ಚೆನ್ನಾಗಿ ಪಾಲಿಸುವವಳೇ) ನನ್ನನ್ನು ಕಾಪಾಡು-ಮಾಂ ಪಾಹಿ. ದನುಜವೈರಿ ಎಂಬ ಖ್ಯಾತಿಯ ಶ್ರೀ ಮಹಾವಿಷ್ಣುವಿನಿಂದಲೇ ನುತಳಾದವಳು ನೀನು. ಸಕಲ ಜನರ ಪರಿತಾಪಗಳನ್ನೂ ಪಾಪಗಳನ್ನೂ ಕಳೆಯುವವಳು ಜಯಶಾಲಿನಿಯು - ಹೇ ಭವಾನಿ ಕಾಪಾಡಮ್ಮಾ!

ಈ ಕೃತಿಯಲ್ಲೂ 3 ಚರಣಗಳಿವೆ:

1. ಯಾವಾಗಲೂ ನಿನ್ನ ಪುತ್ರರಾದ ಗಣಪತಿ ಷಣ್ಮುಖರು ನಿನ್ನ ಸೇವೆಗೆಂದು ಸಿದ್ಧರು.

   ಹೇ ವಿಶಾಲಾಕ್ಷಿ ನಿತ್ಯ ತರುಣಿ, ಸಮಸ್ತ ಜನರನ್ನೂ ಪಾವನಗೊಳಿಸುವವಳು. ಸದಾ ಮಧುರವಾಗಿಯೇ ಮಾತಾಡುವವಳು. ಮಾತಾಡುವಾಗ ಅಮೃತ ರಸವೇ ಸೂಸುವುದೋ ಎಂಬ ಕಂಠವುಳ್ಳಳು, ಒಮ್ಮೆ 'ಸತಿ' ಎಂಬ ಅವತಾರದಲ್ಲಿ ಶಿವ ಪತ್ನಿಯಾಗಿದ್ದವಳು-ಅಂಥ ಶ್ರೀ ರಾಜರಾಜೇಶ್ವರಿಯೇ -ಮಾಂ ಪಾಹಿ.

2. ಕಮಲನೇತ್ರಿ, ಕಲ್ಯಾಣಿ, ದುಂಬಿ ನೀಲದ ಕೂದಲಿನವಳೇ, ಕೆಂಪು ಕಮಲದ (ಕೋಕನದದ) ಹೊಳಪಿನ ಚರಣದವಳೇ, ಅತಿ ಸಂತೋಷಪ್ರದಳು (ಅತಿ ರಮಣಿ), ಮೇಘ ನೀಲವೇಣಿ (ಕೂದಲನ್ನು ಎರಡು ಉಪಮೆಗಳಿಂದ ಪಕ್ಕಪಕ್ಕದಲ್ಲೇ ಒಂದೇ ಚರಣದಲ್ಲಿ ವರ್ಣಿಸಿರುವುದು ಗಮನಾರ್ಹ). ಭೂರ್ಭುವಸ್ಸುವರ್ಲೋಕಗಳ ರಕ್ಷಕಿಯೇ, ದೇವತೆಗಳ ಸಮೂಹವನ್ನು ಪೋಷಿಸುವವಳು (ಧೃತಾಮರಗಣೇ) ಭಾಗ್ಯವತಿ, ಶಕ್ತಿಪೂರ್ಣಳೇ, ಕವಿತಾ ಶಕ್ತಿ ಸ್ವರೂಪಳೇ (ಕವನ ನಿಪುಣಮತಿ) ಹೇ, ಗಿರೀಶ ಶಿವನ ಪತ್ನಿಯೇ, ನಿನ್ನ ಕಾಂತಿ ತೋರು.

3. ಸುರಸಮುದಾಯವೇ ನಿನ್ನ ಕಾಲ್ಗಳಿಗೆರಗಿದೆ ಹೇ ಕಾಳಿಕಾಂಬ ! ಸಾರಸಮುಖಿ, ಶೋಭಾಯಮಾನವಾದ ಊರುದ್ವಯವುಳ್ಳವಳೇ, ಸುಂದರ ಗಲ್ಲವುಳ್ಳವಳೇ, ಹೊಸದಾಗಿ ಅರಳಿದ ಕಮಲದಂಥ ಮುಖವುಳ್ಳವಳೇ, ಮುರಳೀ ಮೃದಂಗ ನಾದಗಳ ಸ್ವರಗಳ ರಸಿಕಳೇ, ಲೋಕವನ್ನು ಆನಂದಮಯವನ್ನಾಗಿ ಮಾಡಿದವಳೇ, ಕಮಲದ ಸೌಂದರ್ಯವನ್ನು ಗೆದ್ದ ಕರದ್ವಯಳೇ (ಅಭಯ ಮತ್ತು ವರದಗಳೆಂಬ, ಭಕ್ತರಿಗೆ ಮುಖ್ಯವಾದ, ಹಸ್ತಗಳು), ಮೇಖಲವನ್ನು(ಡಾಬನ್ನು) ಸೊಂಟಕ್ಕೆ ಆಭರಣವಾಗಿ ಧರಿಸಿದವಳೇ, ಕಾಂಚೀಪುರವಾಸಿನಿ ಹೇ ಕಾಮಾಕ್ಷಿ ! ಮಾಂ ಪಾಹಿ!

ಶ್ರೀ ಲಲಿತಾ ಸಹಸ್ರನಾಮದ ಮೊಲ ಸುಮಾರು 45-50 ನಾಮಗಳು ದೇವಿಯ ಸೌಂದರ್ಯ ವರ್ಣನೆಗೆ ಮೀಸಲಾದಂತೆ ಈ ಕೃತಿಯ ಸಾಹಿತ್ಯವನ್ನು ದೇವಿಯ ಸೌಂದರ್ಯದ ವರ್ಣನೆಗಾಗಿಯೇ ರಚಿಸಿದಂತೆ ಭಾಸವಾಗುತ್ತದೆ.

54. 'ದೇವಿ, ನೀಪದಸಾರಸಮುಲೆ ದಿಕ್ಕು' –

ರಾಗ : ಕಾಂಭೋಜಿ **ತಾಳ: ಆದಿ**

ಸಾಹಿತ್ಯದ ಮೂಲ ಪಾಠ

||ಪ.|| ದೇವಿ, ನೀಪದಸಾರಸಮುಲೆ ದಿಕ್ಕು, ವೇರೆಗತಿಯೆವರಮ್ಮಾ ? ನಾ ||ದೇವಿ||

||ಅ.ಪ.|| ಶ್ರೀವೆಲಯು ಮಧುರ ನೆಲಕೊನ್ನ ಚಿದ್ರೂಪಿಣೀ, ಮೀನಾಕ್ಷಮ್ಮಾ ! ||ದೇವಿ||

||ಚ.1.|| ಅನಾಥರಕ್ಷಕಿ ಅನೇಟಿ ಬಿರುದು ನೀಕನಾದಿಗಾ ? ಲೋ- ಕನಾಯಕಿ
ಧರಲೋ ಕೃಪಾನಿಧಿ ನೀಕನ್ನಾ ಎವರಮ್ಮಾ, ಮಾಯಮ್ಮಾ !?
ಕನ್ನಾಕುಲತಾಲವಿತ್ರೀ ನಾಪೈ ಕಟಾಕ್ಷಿಂಚವೇ ವೇಗಮೆ
ಚಿನ್ನಾವೆತಲು ನೀವು ದೀರ್ಚಿ ನನ್ನು ರಕ್ಷಿಂಚುಟಕಿದಿ ಮಂಚಿ
ಸಮಯಮಮ್ಮಾ ! ||ದೇವಿ||

||ಚ.2.|| ಕದಂಬಕಾನನ ಮಯೂರೀ, ನೀವೇ ಕದಂಬಾ ! ಶಂಕರೀ! ಚಂ-
ಡದಾನವಮದಖಂಡಿತಾ! ಮೃಡಾನೀ, ಶುಕಪಾಣೀ, ಕಲ್ಯಾಣಿ!
ಸದಾ ನೀ ಧ್ಯಾನಮು ಸೇಯುವಾರಿಕಿಗದಾ ಸಾಮ್ರಾಜ್ಯಮು?
ಚಿದಾನಂದರೂಪುಡೈಯುನ್ನಶ್ರೀ ಸದಾಶಿವುನಿ ರಾಣೀ, ಮಧುರವಾಣೀ!
||ದೇವಿ||

ವ್ಯಾಖ್ಯಾನ

ಕಾಂಭೋಜಿಯಂಥ ಮಹಾರಾಗದಲ್ಲಿ ಶ್ರೀ ಶಾಸ್ತ್ರಿಗಳ ಈ ಒಂದೇ ಕೃತಿ ಲಭ್ಯ, ಆದು ತೆಲುಗಿನಲ್ಲಿದೆ. ಕೃತಿಯ ಸಾಹಿತ್ಯ 3 ಚರಣಗಳುಳ್ಳದ್ದು. ಸಾಹಿತ್ಯ ಭಾವ ಹೀಗಿದೆ:

ಹೇ ದೇವಿ, ನಿನ್ನ ಪಾದ ಪದ್ಮಗಳೇ ನನಗೆ ದಿಕ್ಕು, ನನಗೆ ಮತ್ತ್ಯಾರಿದ್ದಾರಮ್ಮಾ?

ಶ್ರೀ ಲಕ್ಷ್ಮೀ ವಾಸಿಸುವ ಮಧುರೆಯಲ್ಲಿ ನೆಲೆಸಿದ್ದು, ಚಿದ್ರೂಪಿಣಿ (ಜ್ಞಾನರೂಪಿಣಿ)ಯಾದ ಹೇ ಮೀನಾಕ್ಷಮ್ಮ, ನನಗೆ ಮತ್ತ್ಯಾರಿದ್ದಾರಮ್ಮಾ?

1. ಅನಾದಿ ಕಾಲದಿಂದಲೂ, ಅನಾಥರಕ್ಷಕಿ ಎಂಬ ಬಿರುದು ನಿನಗೇ ಹೇಳಿರುವುದಲ್ಲವೇ? ಲೋಕ ನಾಯಕಿಯೇ, ಕೃಪಾನಿಧಿ ಎಂದರೆ, ಧರೆಯಲ್ಲಿ ನಿನಗಿಂತ ಯಾರಾದರುಂಟೆ ? ಅಮ್ಮಾ!

   ನಾ ಕಂಡ ಕಲ್ಪಲತೆಯೇ (ಕನ್ನಾಕುಲತಾಲವಿತ್ರಿ)ನನ್ನ ಮೇಲೆ ಬೇಗನೆ ಕಟಾಕ್ಷಿಸಮ್ಮಾ!

   ನನ್ನ ವ್ಯಥೆಗಳನ್ನು ನೀನು ಪರಿಹರಿಸಿ ನನ್ನನ್ನು ರಕ್ಷಿಸುವುದಕ್ಕೆ ಇದೇ ಸಮಯ ತಾಯಿ!

2. 'ಕದಂಬವನವಾಸಿನಿ' ಎಂದು ಲಲಿತಾ ಸಹಸ್ರನಾಮವೂ 'ಕದಂಬ ಕಾನನಾವಾಸಾ' ಎಂದು ಲಲಿತಾ ತ್ರಿಶತಿಯೂ ಬಣ್ಣಿಸುವ ಶ್ರೀಮಾತೆಯನ್ನು 'ಕದಂಬ ಕಾನನ ಮಯೂರೀ'ಎಂದು ಬಣ್ಣಿಸುವ ಶಾಸ್ತ್ರಿಗಳು ಅಂಥ ಕದಂಬವನದಲ್ಲಿ ವಿಹಾರಿಸುವ ನವಿಲು ನೀನೇ ಅಲ್ಲವೆ ಎನ್ನುತ್ತಾರೆ. ಶಂಕರೀ, ಚಂಡಾಸುರನ ವಧೆ ಮಾಡಿದೆ. ಹೇ ಮೃಡಾನಿ, ಶುಕಪಾಣಿ, ಕಲ್ಯಾಣಿ, ಚಿದಾನಂದ ಸ್ವರೂಪನೇ ಆದ ಸದಾಶಿವನ ರಾಣಿ, ಮಧುರವಾಣಿ, ನಿನ್ನ ಧ್ಯಾನವನ್ನು ಸದಾ ಮಾಡುವ ನಿನ್ನ ಭಕ್ತರಿಗಲ್ಲವೆ ನಿನ್ನ ಸಾಮ್ರಾಜ್ಯ ಲಭಿಸುವುದು ?

3. ಹೇ ಉಮೇ, ಲಕ್ಷ್ಮಿಯಿಂದಲೂ ಶ್ಯಾಮಕೃಷ್ಣರೂಪಿ ಹರಿಯಿಂದಲೂ, ನುತಳೇ, ಗಿರಿಜೇ, ಕೌಮಾರಿ, ನಿನಗೆ ಸಾಟಿಯಾರಮ್ಮಾ, ಕಾಪಾಡಲು ನಿನಗೆ ಭಾರವೇ ? ಜಗತ್‌ಸಾಕ್ಷಿ, ಮೀನಾಕ್ಷಿ, ವಿಳಂಬ ಮಾಡಲು ನಿನಗೆ ನ್ಯಾಯವೇ ತಾಯೆ, ಇಷ್ಟು ಅಸಡ್ಡೆಯೇಕೆ ಪದೇ ಪದೇ ನಿನ್ನ ಪಾದದರ್ಶನ ಲಭಿಸಿದ್ದರಿಂದ ನಿನ್ನ ಮಾತ ಕೇಳಿ ಬಂದೆನಮ್ಮಾ!

ಈ ಕೃತಿಯ ಕಡೆಯ ಚರಣದ ಕಡೆಯ ಪಾದದಲ್ಲೂ ಕಾಮಾಕ್ಷೀ ದೇವಿಯ ದಿವ್ಯದರ್ಶನ ಪದೇ ಪದೇ ಆಗಿತ್ತೆಂಬ ಗಹನವಾದ ಸಂಗತಿಯನ್ನು ಶ್ರೀ ಶ್ಯಾಮಶಾಸ್ತ್ರಿಗಳು ಹೀಗೆ ತಮ್ಮ ಕೃತಿಗಳಲ್ಲಿ ಎರಡು ಸಲ ದಾಖಲಿಸಿರುವುದು ಗಮನಾರ್ಹವಾದುದು.

55. 'ಬ್ರೋವವಮ್ಮಾ ಬಂಗಾರು ಬೊಮ್ಮಾ!' –

ರಾಗ : ನೀಲಾಂಬರಿ **ತಾಳ : ತ್ರಿತ್ರಿಪುಟ**

ಸಾಹಿತ್ಯದ ಮೂಲ ಪಾಠ

||ಪ.|| ಬ್ರೋವವಮ್ಮಾ ! ಬಂಗಾರು ಬೊಮ್ಮಾ ! ||ಬ್ರೋವವಮ್ಮಾ||

||ಅ.ಪ.|| ಬ್ರೋವವಮ್ಮಾ, ನಾತೋ ಮಾಟ್ಲಾಡವಮ್ಮಾ !
ಸಾರ್ವಭೌಮ ಬೊಮ್ಮಾ, ಕಾಮಾಕ್ಷಮ್ಮಾ ||ಬ್ರೋವವಮ್ಮಾ||

||ಚ.|| ಶ್ಯಾಮಕೃಷ್ಣ ಪೂಜಿತಾ ! ಸುಲಲಿತಾ ! ಶ್ಯಾಮಳಾಂಬಾ, ಏಕಾಮ್ರೇಶ್ವರ ಪ್ರಿಯಾ!

ತಾಮಸಮುಸೇಯಕನೇ, ಕಾಮಾಕ್ಷಮ್ಮಾ, ಮಾಯಮ್ಮಾ, ನಾ ಪರಿ-
ತಾಪಮುಲನು ಪರಿಹರಿಂಚಿ ನನ್ನು ||ಬ್ರೋವವಮ್ಮಾ||

ವ್ಯಾಖ್ಯಾನ

ನಮ್ಮ ಸಂಗೀತದಲ್ಲಿನ ಅತ್ಯಂತ ಹೃದಯ ಸ್ಪರ್ಶಿ ರಕ್ತಿರಾಗಗಳಲ್ಲಿ, ನೀಲಾಂಬರಿ ರಾಗವು ಅಗ್ರಪಂಕ್ತಿಯಲ್ಲಿ ಬರುವಂಥದು. ಅಂಥ ಈ ನೀಲಾಂಬರಿಯ ಸಾರವನ್ನು ತಮ್ಮ ಅತ್ಯಂತ ಭಾವುಕತೆಯನ್ನು ಪ್ರಕಟಿಸುವ ಈ ಕೃತಿಯ ಸಾಹಿತ್ಯದಲ್ಲಿ ನೀಡಿದ್ದಾರೆ ಶ್ರೀ ಶಾಸ್ತ್ರಿಗಳು. ಒಂದೇ ಚರಣವುಳ್ಳ ಈ ಕೃತಿಯ ಸಾಹಿತ್ಯ ಭಾವ ಹೀಗಿದೆ :

ಬಂಗಾರು ವಿಗ್ರಹವಾಗಿರುವ ನಮ್ಮಮ್ಮಾ ಕಾಮಾಕ್ಷಮ್ಮಾ ಕಾಪಾಡಮ್ಮಾ, ಸಾರ್ವಭೌಮಳೆ ನನ್ನೊಂದಿಗೆ ಮಾತನಾಡಮ್ಮಾ !

ಹೀಗೆಂದು ತಮ್ಮ ಅರ್ಚನಾ ಮೂರ್ತಿಯಾದ ಕಾಮಾಕ್ಷೀ ದೇವಿಯ ಬಂಗಾರದ ವಿಗ್ರಹದ ಮುಂದೆ ಭಕ್ತಿ ಭಾಷ್ಪಗಳೊಡನೆ ಕುಳಿತು ಶ್ರೀ ಶಾಸ್ತ್ರಿಗಳು ತಮ್ಮ ಬೇಡಿಕೆಯನ್ನು ಸಲ್ಲಿಸಿದ ಚಿತ್ರವೇ ಹೃದಯ ಸ್ಪರ್ಶಿಯಾಗಿ ನಮ್ಮ ಕಣ್ಣ ಮುಂದೆ ಬರುತ್ತದೆ.

ಹೇ, ಶ್ಯಾಮಕೃಷ್ಣ ಪೂಜಿತೆ, ಸುಲಲಿತೇ, ಶ್ಯಾಮಳಾಂಬಾ ಏಕಾಮ್ರೇಶ್ವರ ಪ್ರಿಯೇ, ಕಾಮಾಕ್ಷಮ್ಮಾ ನಮ್ಮಮ್ಮ, ನನ್ನ ಪರಿತಾಪಗಳನ್ನು ಪರಿಹಾರಿಸಿ ಕಾಪಾಡಮ್ಮಾ, ವಿಳಂಬ ಮಾಡಬೇಡ ತಾಯಿ! ಎಂದು ಮೊರೆ ಇಡುತ್ತಾರೆ.

56. 'ಬ್ರೋವ ಸಮಯಮಿದೇ' –

ರಾಗ : ಪುನ್ನಾಗವರಾಳಿ **ತಾಳ: ತ್ರಿಶ್ರ ತ್ರಿಪುಟ**

ಸಾಹಿತ್ಯದ ಮೂಲ ಪಾಠ

||ಪ.|| ಬ್ರೋವ ಸಮಯಮಿದೇ ದೇವೀ!ವಿನು, ದೇವರಾಜನುತಾ !
ಪರದೇವತಾ ! ಅಂಬಾ! ||ಬ್ರೋವ||

||ಅ.ಪ.||ಭಾವಜಾರಿ ರಾಣೀ! ಭಕ್ತ ಪಾಲಿನೀ, ಭವಾನೀ ! ಬೃಹದಂಬಾ !ನನು
|| ಬ್ರೋವ||

||ಚ.1.|| ಅಂಬುಜದಳನಯನಾ !ವಿಧುಬಿಂಬನಿಭಾನನಾ ! ಗಜಗಮನಾ !
ಅಂಬಿಕೇ ! ಪರಾಕುಸೇಯ ತಗುನಾ ? ಬಿಂಬಾಧರೀ, ಗೌರೀ,
ಕುಂದರದನಾ ! ||ಬ್ರೋವ||

||ಚ.2.|| ಅಂಬರಚರ ವಿನುತಾ ! ಕದಂಬವನ ಪ್ರಿಯಾ ! ಶ್ರೀ ಲಲಿತಾ!
ಕಂಬುಗಳ ! ವರದಾನ ನಿರತಾ! ತುಂಬುರುನಾರದನುತಾ ! ಸಂಗೀತರತಾ!
||ಬ್ರೋವ||

||ಚ.3.|| ಶ್ಯಾಮಗಿರಿತನಯಾ! ಗುಣಧಾಮ, ಕರಧೃತ ಮಣಿವಲಯಾ !
ಸೋಮಕಲಾಧರೀ ! ಶಿವಪ್ರಿಯಾ ! ಶ್ಯಾಮಕೃಷ್ಣ ಹೃದಯಾಂಬುಜ
ನಿಲಯಾ ! ||ಬ್ರೋವ||

ವ್ಯಾಖ್ಯಾನ

ಪುನ್ನಾಗವರಾಳಿ ಅದೆಂಥ ಅದ್ಭುತ ಸುಂದರವಾದ, ಹೃದಯ ಸ್ಪರ್ಶಿಯಾದ ರಕ್ತಿರಾಗವೆಂದು ಈ ಹಿಂದೆ ಹೇಳಿದೆ. ಅಂಥ ಪುನ್ನಾಗವರಾಳಿ ರಾಗದಲ್ಲಿನ ಮೂರು ಕೃತಿಗಳನ್ನೂ ಭಾಷೆಗೊಂದೊಂದಾಗಿ, ಸಂಸ್ಕೃತ, ತೆಲುಗು ಮತ್ತು ತಮಿಳ್ ಭಾಷೆಗಳಲ್ಲಿ ರಚಿಸಿದ್ದಾರೆ ಶ್ರೀ ಶಾಸ್ತ್ರಿಗಳು.

ಈ 'ಬ್ರೋವ ಸಮಯಮಿದೇ ದೇವಿ' 3 ಚರಣಗಳುಳ್ಳ ತೆಲುಗಿನ ಕೃತಿ.

ನನ್ನನ್ನು ಕಾಪಾಡಲು ಸಮಯವಿದೇ ತಾಯಿ. ಇಂದ್ರನುತೇ, ಪರದೇವತೇ! ಕೇಳಮ್ಮಾ! 'ಭಾವಜಾರಿ ರಾಣಿ' - ಇಲ್ಲಿ ಮನ್ಮಥನ ವೈರಿ ಶಿವ ಎಂಬುದಕ್ಕೆ ಭಾವಜ-ಅರಿ ಎನ್ನುತ್ತಾರೆ. ಭಕ್ತಪಾಲಿನಿ, ಭವಾನಿ, ಬೃಹದಂಬಾ!

1. ಕಮಲದಳನೇತ್ರೆ, ಚಂದ್ರಸಂಕಾಶದ ವದನೇ, ಗಜಗಮನೆ, ಅಂಬಿಕೇ, ಬಿಂಬಾಧರಿ, ಗೌರಿ, ಕುಂದರದನೆ, ಅಂಬಿಕೆಯೇ, ಉಪೇಕ್ಷೆ ಮಾಡಲು ನಿನಗೆ ತರವೇ ?

2. ದೇವತೆಗಳಿಂದ ಸ್ತುತಳೇ (ಇದನ್ನು ಆಕಾಶದಲ್ಲೇ ಚಲಿಸುವವರು ದೇವತೆಗಳಾದ್ದರಿಂದ ಅಂಬರ ಚರವಿನುತಾ ಎಂದು ಸಂಬೋಧಿಸುತ್ತಾರೆ). ಕಂದಂಬವನಪ್ರಿಯಾ (ವಿವರಿಸಲಾಗಿದೆ) ಶ್ರೀಲಲಿತೇ, ಶಂಖ ಸೌಂದರ್ಯದ

ಗ್ರೀವವುಳ್ಳವಳು (ಕಂಬುಗಳ) ವರದಾನದಲ್ಲೇ ನಿರತಳು, ತುಂಬುರು ನಾರದರಿಂದ ನುತಳು, ಸಂಗೀತದಲ್ಲೇ ಮಗ್ನಳಾಗುವವಳು.

3. ಶ್ಯಾಮಗಿರಿ ತನಯಾ (ಹಿಮಗಿರಿತನಯಾ ಎಂದೇ ಅರ್ಥ!) ಗುಣಗಳಿಗೆಲ್ಲ ತವರು. (ಗುಣಧಾಮ), ಕೈಯಲ್ಲಿ ಮಣಿಮಾಲೆಧರಿಸಿ ಸರಸ್ವತೀ ಸ್ವರೂಪಳು, ಚಂದ್ರಕಲಾಧರ ಶಿವನಿಗೆ ಪ್ರಿಯಳು. ಶ್ಯಾಮಕೃಷ್ಣ ಹೃದಯಾಂಬುಜದಲ್ಲೇ ವಾಸಿಸುವಳು.

ಅಂಥ ದೇವಿಯೇ, ಕಾಪಾಡಲು ಇದೇ ಸಮಯ ತಾಯೆ !

57. 'ಪರಾಙ್ಮುಖಮೇನಮ್ಮಾ ?' –

ರಾಗ : ಕಲ್ಯಾಣಿ **ತಾಳ : ತ್ರಿಶ್ರ ತ್ರಿಪುಟ**

ಸಾಹಿತ್ಯದ ಮೂಲ ಪಾಠ

||ಪ.|| ಪರಾಙ್ಮುಖಮೇನಮ್ಮಾ ಪಾರ್ವತಿಯಮ್ಮಾ ? ||ಪರಾಙ್ಮುಖಂ||

||ಅ.ಪ.|| ಪರಾತ್ಪರೀ, ಪರಮಪಾವನೀ, ಭವಾನೀ, ಅಂಬಾ!
ಪಾರಿಲ್ ನಾನ್ ಉನ್ನೈಯೇ ನಂಬಿನೇನ್ ||ಪರಾಙ್ಮುಖಂ||

||ಚ.1.|| ಅಖಿಲಮೆಂಗುಂ ನಿರೈನ್ದ ಜೋತಿಯೇ ಅಂಬಿಕೈಯೇ
ಅನ್ನೈಯೇ ! ಇನಿ ನಾನ್ ತಾಳೇನೆನಚ್ಚೊನ್ನೇನ್ ||ಪರಾಙ್ಮುಖಂ||

||ಚ.2.|| ಉನದ್ ಪಾದಮಿನ್ರಿ ತುಣೈಯುಂಟೋ?
ಉನ್ದನ್ ಮನಮಿರಂಗವುಮ್ ನಾನ್ ಶೊಲ್ಲವೋ !
||ಪರಾಙ್ಮುಖಂ||

||ಚ.3.|| ಶ್ಯಾಮಕೃಷ್ಣಸೋದರಿ ಕೃಪಾಕರಿ
ಶರಣಂ ಶರಣಮೆನ್ರ್ರ ಶೊನ್ನೇನ್ ತಾಯೇ ! ||ಪರಾಙ್ಮುಖಂ||

ವ್ಯಾಖ್ಯಾನ

ಶ್ರೀ ಶಾಸ್ತ್ರಿಗಳು ಅತ್ಯಧಿಕ ಸಂಖ್ಯೆ (8) ಕೃತಿಗಳನ್ನು ನೀಡಿರುವ ರಾಗ ಕಲ್ಯಾಣಿ. ತಮಿಳ್ ಭಾಷೆಯಲ್ಲಿ ರಚಿವಾದ 3 ಚರಣಗಳುಳ್ಳ ಕೃತಿ ಇದು. ಭಾವ ಹೀಗಿದೆ:

ಅಮ್ಮಾ, ಪಾರ್ವತಿ, ಮುಖಮರೆ ಮಾಡಿಕೊಳ್ಳುವುದೇಕೆ ತಾಯಿ?

ಪರಾಙ್ಮುಖಮೇನಮ್ಮಾ? ಪರಾತ್ಪರಿ, ಪರಮ ಪಾವನಿ, ಭವಾನಿ, ಅಂಬೆ, ಭುವಿಯಲ್ಲಿ ನಾ ನಿನ್ನನ್ನೇ ನಂಬಿದೆ.

1. ಸಮಸ್ತ ಲೋಕದಲ್ಲೂ ಹರಡಿದ, ಬೆಳಗುವ ಜ್ಯೋತಿಯೇ (ಅಖಿಲಮೆಂಗುಂ ನಿರೈಂದ ಜ್ಯೋತಿಯೇ!) ಅಂಬಿಕೆಯೇ, ಇನ್ನು ನಾ ತಾಳೆನೆಂದು ಹೇಳಿದೆ.

2. ನಿನ್ನ ಪಾದವಲ್ಲದೆ ನನಗೆ ಬೇರೊಂದು ಗತಿಯುಂಟೋ ? ನಿನ್ನ ಮನ ಕರುಣಿಸಲು ನಾ ಹೇಳಬೇಕೇ ? ಉನದ್ ಪಾದಮಿನ್ರಿ ವೇರು ತುಣ್ಯೆಯುಂಡೋ?

3. ಶ್ಯಾಮಕೃಷ್ಣ ಸೋದರಿ, ಕೃಪಾಕರಿ, ಶರಣು ಶರಣು ಎಂದು ಹೇಳಿದೆ ತಾಯೆ!

58. 'ಎನ್ನೇರಮುಮ್' –

ರಾಗ : ಪುನ್ನಾಗವರಳಿ **ತಾಳ : ತ್ರಿಶ್ರ ತ್ರಿಪುಟ**

ಸಾಹಿತ್ಯದ ಮೂಲ ಪಾಠ

||ಪ.|| ಎನ್ನೇರಮುಮ್ ಉನ್ ಪಾದಕಮಲಧ್ಯಾನಂ ಶೈದುಕೊಂಡುನ್ನೈ
ನಂಬಿನೇನ್, ನಂಬಿನೇನ್ ನಂಬಿನೇನ್ ! || ಎನ್ನೇರಮುಂ||

||ಅ.ಪ.|| ಎನ್ನೈ ರಕ್ಷಿಕ್ಕ ಚ್ಚೊನ್ನೇನ್ ಸೊಂತಮೈನ್ದನ್ ನಾನಲ್ಲವೋ ?
ಅನ್ನೈ ಪಿನ್ನೈಯುಂಡೋ ಎನಕ್ಕ್ ಅಖಿಲಾಂಡೇಶ್ವರಿ! ಶಿವಶಂಕರೀ!
|| ಎನ್ನೇರಮುಂ||

||ಚ.1.|| ಆದಿಶಕ್ತಿ ಉನ್ದನ್ ಮಹಿಮೈಯೈ ತುದಿಶೈಯ
ಲಾಗುಮೋ ಪರಮನ್ ಮುದಲಾನ ಪೇರುಕ್ಕು
ಆದಿಯೇ ! ಪರಂಜ್ಯೋತಿಯೇ ! ಪಂಕಯ ಕ್ಕಣ್ಣಿಯೇ !
ಏದಮ್ಮಾ! ಪರಾಮುಖಂ ಶೈಯ ಕ್ಕೂಡಾದಮ್ಮಾ !
ನೀ ಕರುಣೈಕ್ಕಡಲಲ್ಲವೋ ? || ಎನ್ನೇರಮುಂ||

||ಚ.2 || ತಾಮರೈ ಇಲೈಮೇಲ್ ತಣ್ಣೀರ್‌ಪೋಲ್ ತಯಂಗುಕಿರಾಯೇ!
ಎಂದನ್‌ಮೀದು ದಯವು ಶೈಯ ನಲ್ಲತರುಣಮಿದೇ ಶಿವಗಾಮಿಯೇ!
ಅನುದಿನಮು ಉನ್-ನಾಮಮೇ ಜಪಮಲ್ಲಾತ್ತೊನ್ರುಮ್
ನಾನರಿಯೇನೆನಚ್ಚೊನ್ನೇನ್, ಚೊನ್ನೇನ್, ತಾಯೇ|| ಎನ್ನೇರಮುಂ||

||ಚ.3.|| ನಿಲವಿನ್ ವರಲಾಲ್ ಅಲ್ಲಿಮಲರ್ ನಿಮಿರ್ನ್ದ್ ಮಲರವಿಲ್ಲೈಯೋ!?
ಎನ್ನೈ ನಿಲತ್ತಿಲ್ ವಾಳವೈತ್ತ ಅನ್ನೈಯೇ ! ಸನಾತನಿಯೇ !
ಪುಗಳ್‌ಕನಿಯೇ ! ಮಾನಿಯೇ! ತನಿಯೇನ್ ಎನಕ್ಕಡೈಕ್ಕಲಂ
ನೇಯಮೊದುತರುವುದ್ ಉನ್ ಕಡಮೈ ಅಲ್ಲವೋ
ತಾಯ್ ? || ಎನ್ನೇರಮುಂ||

||ಚ.4.|| ಶ್ಯಾಮಕೃಷ್ಣ ಸೋದರೀ ! ಉನ್ನೈ ತುದಿ ಶೈಯಾಮಲ್ ಇರುಪ್ಪೇನೋ?
ಉನ್ ಪಾದಂಗಳ್ಳೆ ಮರ | ವಾಮಲಿರುಕ್ಕವರನ್ತರುವಾಯೇ !
ಶುಕಶ್ಯಾಮಳೇ ! ನಿತ್ಯ ಕಲ್ಯಾಣೀ! ತಾಮದಮಿನಿ ಶೈಯ್ದಾಲ್ ನಾನಿಪ್ಪೋ
ತಾಂಗುವೇನೋ ತಾಯ್ ! ಅಖಿಲಾಂಡೇಶ್ವರಿ || ಎನ್ನೇರಮುಂ||

ವ್ಯಾಖ್ಯಾನ

4 ಚರಣಗಳುಳ್ಳ ತಮಿಳ್ ಭಾಷೆಯ ಕೃತಿ ಇದು.

ಓ ಶಿವಕಂಕರಿ, ನಾನೆಂದೂ ನಿನ್ನ ಪಾದ ಪದ್ಮಗಳ ಧ್ಯಾನದಲ್ಲೇ ನಿರತನಾಗಿ, ನಿನ್ನನ್ನೇ ನಂಬಿದೆ. ನಿನ್ನಲ್ಲಿ ಭರವಸೆ ಇಟ್ಟೆ, ನನ್ನನ್ನು ಕಾಪಾಡಲು ಕೋರಿದೆ, ಬೇಡಿದೆ. ನಾ ನಿನ್ನ ಮಗನಲ್ಲವೆ ತಾಯಿ? ಹೇ ಅಖಿಲಾಂಡೇಶ್ವರಿಯೇ, ತಾಯ್ಯೆಂಬ ಬೇರೊಬ್ಬರು ನನಗಿದ್ದಾರೆಯ?

1. ಹೇ ಆದಿಶಕ್ತಿ, ನಿನ್ನ ಮಹಿಮೆ ಸ್ತುತಿಸಲು ನಿಲುಕುವುದೇ? ನೀ ಕರುಣಾಸಾಗರಳಲ್ಲವೇ? ನೀನು ಪರಾತ್ ಪರಳಲ್ಲವೇ ? ಪರಂಜ್ಯೋತಿರೂಪಳೇ ! ಪಂಕಜ ನೇತ್ರೇ! ಹೀಗೆ ಮುಖಮುರೆ ಮಾಡಕೂಡದಮ್ಮಾ ! (ಪರಾಮುಖಂ ಶೈಯಕ್ಕೂಡಾದಮ್ಮಾ!)

2. ನನ್ನ ರಕ್ಷಣೆ ವಿಷಯದಲ್ಲಿ ತಾವರೆ ಎಲೆ ಮೇಲಿನ ನೀರಿನ ಬಿಂದುವಿನಂತೆ ಚಂಚಲ ನೆಲೆಯಾಗಿ ಹಿಂಜರಿಕೆಯೇ ? ನನ್ನ ಮೇಲೆ ದಯೆ ಮಾಡಲು ಸರಿಯಾದ ಸಮಯವಿದಮ್ಮಾ ಅಭಿರಾಮಿಯೇ ಅನುದಿನವೂ ನಿನ್ನ ನಾಮದ ಜಪವಲ್ಲದೆ ಮತ್ತೇನನ್ನೂ ನಾನರಿಯೆ ಎಂದು ಹೇಳಿದೆನಲ್ಲ ತಾಯಿ!

3. ಬೆಳದಿಂಗಳು ಬಂದರೆ ಕನ್ನೈದಿಲೆಯರಳದೇ, ಈ ಜಗತ್ತಿನಲ್ಲಿ ನನ್ನ ಜೀವಿತವಿತ್ತ ತಾಯಿ, ಪುರಾಣಿ, ಪದ್ಮಾಕ್ಷಿ, ಮಾನಿತಳೇ, ನನ್ನ ಪಾಲನೆ ಎಂಬುದು ನಿನ್ನ ಹೊಣೆಯೇ ಅಲ್ಲವೆ ತಾಯಿ ?

4. ಹೇ ಶ್ಯಾಮಕೃಷ್ಣ ಸಹೋದರಿ, ನಿನ್ನ ಸ್ತುತಿಮಾಡದೆ ಜೀವಿಸಯೇನೇ ತಾಯಿ? ನಿನ್ನ ಪಾದಸ್ಮರಣೆ ಮರೆಯದಿರುವ ವರ ಕೊಡು ತಾಯಿ! ಅಖಿಲಾಂಡೇಶ್ವರಿ, ನಿನ್ನನೇ ನಂಬಿದೆ.

59. 'ಬ್ರೋವು ಬ್ರೋವುಮನಿ ಎಂದೂ ವೇಡಿತೆ' –

ರಾಗ : ಕೀರವಾಣಿ **ತಾಳ :ಮಿಶ್ರ ಛಾಪು**

ಸಾಹಿತ್ಯದ ಮೂಲ ಪಾಠ

||ಪ.|| ಬ್ರೋವು ಬ್ರೋವುಮನಿ ಎಂದೂ ವೇಡಿತೆ ನೀವು || ಬ್ರೋವು ಬ್ರೋವು||
ವಿನ್ನ ನಾ ವಿನ್ನಪಮು ನಾ ತಲ್ಲಿ ಶ್ರೀ ಲಲಿತೇ

||ಅ.ಪ.||ದೇವಿ ಶ್ರೀ ಮೀನಲೋಚನಿ ಅಂಬಾ ಸುಂದರೇಶುರಾಣಿ ಶ್ರೀ ಮಧುರಾ
ಪುರವಾಸಿನಿ || ಬ್ರೋವು ಬ್ರೋವು ||

||ಚ.|| ಶ್ಯಾಮಕೃಷ್ಣ ಸಹೋದರಿ ಶ್ಯಾಮಲೇ ಶಾತೋದರಿ
ಕಾಮಿತಾರ್ಥಮೊಸಗವೇ ಕಲ್ಪವಲ್ಲಿ ತಾಮಸಮೇಲೆ ತನಯುನಿ
ಪಾಲಿಂಚುಟೇ ಸಾಮಗಾನ ಕಂಜಲೋಚನಿ ಕೀರವಾಣಿ
|| ಬ್ರೋವು ಬ್ರೋವು ||

|| ಸ್ವರ ಸಾಹಿತ್ಯ|| ನೀ ಸರಿ ಇದಿಗೋ ಆದಿ ನಾಕು ಎವರುನ್ನಾರಮ್ಮಾ ||
ಶ್ರೀ ಮಹಾತ್ರಿಪುರಸುಂದರಿ ಶಂಕರಿ ವೇಗಮೆ ವಚ್ಚಿ ನನ್ನು
|| ಬ್ರೋವು ಬ್ರೋವು ||

ವ್ಯಾಖ್ಯಾನ

ಕೀರವಾಣಿ ರಾಗದಲ್ಲಿನ ಶ್ರೀ ಶಾಸ್ತ್ರಿಗಳ ಏಕೈಕ ಕೃತಿ ಇದು. ರಾಗಗಳ ಲಕ್ಷ್ಯ-ಲಕ್ಷಣಗಳನ್ನು ತಮ್ಮ ಕೃತಿ ರಚನೆಯಲ್ಲಿ ವ್ಯವಹರಿಸಿರುವ ರೀತಿ ಶ್ರೀ ಶಾಸ್ತ್ರಿಗಳದೂ ಶ್ರೀ ತ್ಯಾಗರಾಜರದೂ ಬಹುತೇಕ ಒಂದೇ ಆಗಿದೆ ಎಂದ ಮಾತನ್ನು ಕೀರವಾಣಿ ರಾಗದ ಈ ಕೃತಿ ಸಮರ್ಥಿಸುತ್ತದೆ. ಲಭ್ಯವಿರುವಂತೆ ಒಂದೇ ಚರಣವುಳ್ಳ ಕೃತಿ ಇದು. ಈ ಕೃತಿಯ ಸಾಹಿತ್ಯ ಶೈಲಿಯೂ ವಸ್ತುವೂ ಶ್ರೀ ಶಾಸ್ತ್ರಿಗಳ ಛಾಪನ್ನು ಸ್ಪಷ್ಟವಾಗಿ ಪ್ರಕಟಿಸುತ್ತದೆ, ಹೀಗೆ:

ಕಾಪಾಡು, ಕಾಪಾಡು ಎಂದು ನಾನು ಸದಾ ಬೇಡಿದರೆ ನನ್ನ ಬಿನ್ನಹವನ್ನು ನೀ ಆಲಿಸೆಯಾ ನನ್ನ ತಾಯೆ, ಶ್ರೀ ಲಲತೇ ? ಪಲ್ಲವಿಯ ಈ ಸಾಹಿತ್ಯದ ಕ್ರಿಯಾಪದದ ಬಳಕೆಯ ವಿಷಯದಲ್ಲಿ ಸ್ವಲ್ಪ ಗೊಂದಲವಿರುವಂತೆ ಕಾಣುತ್ತದೆ. 'ಬ್ರೋವು ಬ್ರೋವುಮನಿ ಎಂದೂ ವೇಡಿತೆ ನೀವು ವಿನ್ನನಾ ವಿನ್ನಪಮು ನಾ ತಲ್ಲಿ ಶ್ರೀ ಲಲಿತೇ' ಎಂದು ಹಾಡುತ್ತಾರೆ. ಕ್ರಿಯಾಪದವಿಲ್ಲವಾಗುತ್ತದೆ. 'ವಿನವಾ ವಿನ್ನಪಮು' ಎಂದು ಓದಿಕೊಂಡಾಗ 'ನನ್ನ ಬಿನ್ನಹವನ್ನು ಆಲಿಸೆಯಾ?' ಎಂದು ಸಾಹಿತ್ಯಾಭಾವ ಪೂರ್ಣಗೊಳ್ಳುತ್ತದೆ. ಹಸ್ತಪ್ರತಿಯಲ್ಲಿ 'ನಾ' ಎಂಬುದು 'ವಾ' ಅಕ್ಷರದಂತಯೇ ಬರಹದ ಶೈಲಿಯ ಕಾರಣದಿಂದ ಕಾಣಲು ಸಾಧ್ಯವೆಂಬುದು ಈ ಗೊಂದಲಕ್ಕೆ ಕಾರಣವಾಗಿರಬಹುದೇನೋ ! ಅರ್ಥ ತಿಳಿದು ಹಾಡಲು ಪ್ರಯತ್ನಿಸಿದಾಗ ಗೊಂದಲ ಪರಿಹಾರವಾಗುವ ಸಾಧ್ಯತೆಯಿದೆ.

ದೇವಿ ಮೀನಾಕ್ಷಿ, ಅಂಬೆ, ಶ್ರೀ ಸುಂದರೇಶನ ರಾಣಿಯಾಗಿ ಮಧುರಾಪುರ ವಾಸಿನಿಯೇ, ಶ್ರೀ ಲಲಿತೇ, ಬಿನ್ನಹ ಆಲಿಸೆಯಾ?

ಶ್ಯಾಮಕೃಷ್ಣ ಸಹೋದರಿ, ಶ್ಯಾಮಲೇ, ಶಾತೋದರಿ (ಸಣ್ಣದಾದ ನಡು ಉಳ್ಳವಳು ಎಂದರ್ಥ.)

ಪದ್ಮನೇತ್ರೇ (ಕಂಜಲೋಚನಿ), ಕೀರವಾಣಿ (ಗಿಣಿಯಂತೆ ಮಧುರ ಧ್ವನಿಯೊಂದಿಗೆ ಮಾತನಾಡುವವಳೇ) ನನ್ನ ಕಲ್ಪಲತೆಯಾಗಿ ಬೇಡಿದುದನ್ನು ನೀಡುವವಳೇ, ನನ್ನ ಆಕಾಂಕ್ಷೆಗಳನ್ನೀಡೇರಿಸಮ್ಮಾ, ವಿಳಂಬವೇಕೆ ತಾಯೆ (ತಾಮಸವೇಲೆ)? ಮುಂದೆ, 'ತನಯುನಿ ಪಾಲಿಂಚುಟೇ ಸಾಮಗಾನ ಕಂಜಲೋಚನಿ ಕೀರವಾಣಿ' ಎಂಬ ಮಾತಿದೆ. 'ಸಾಮಗಾನ' ಎಂಬ ಪದವು ಶಾಸ್ತ್ರಿಗಳಿಂದಲೇ 'ಸಾಮಗಾನ ವಿನೋದಿನಿ', 'ಸಾಮಗಾನ ಪ್ರಿಯೇ' ಎಂದೆಲ್ಲ ಕಾಮಾಕ್ಷೀ ದೇವಿಗೆ ವಿಶೇಷಣವಾಗಿ, ಗುಣವಾಚಕವಾಗಿ ಬಳಸಲ್ಪಟ್ಟಿದೆ. ಈ ಕೃತಿಯಲ್ಲಿ ' ಸಾಮಗಾನ'ಶಬ್ದಕ್ಕೆ 'ಪ್ರಿಯೇ', 'ವಿನೋದಿನಿ', 'ಮೋದಿನಿ', 'ಲೋಲೆ' ಇತ್ಯಾದಿ ಶಬ್ದಗಳು ಸೇರಿಕೊಳ್ಳದೆ 'ತನಯುನಿ ಪಾಲಿಂಚುಟೇ ಸಾಮಗಾನ' ಎಂದೇ ಸಾಹಿತ್ಯದ ಪಾಠವಿರವುದರಿಂದ, ನಿನ್ನ ಮಗನನ್ನು ಪಾಲಿಸುವುದೇ ಸಾಮಗಾನ ನಿನಗೆ ಕೊಡುವಷ್ಟು ಸಂತೋಷವನ್ನು ಕೊಡುವಂಥದು' ಎಂದು ಅನ್ವಯ ಮಾಡಿ ಅರ್ಥೈಸಿದಾಗಲೇ ಪದಗಳು ಬೆರೆತುಕೊಳ್ಳುವುದು. ಅನ್ಯಥಾ, 'ಸಾಮಗಾನ' ಎಂಬ ಪದ ಹಿಂದೆ-ಮುಂದೆ ಬೆರೆಯುವುದಿಲ್ಲ.

ಇನ್ನು 'ಕೀರವಾಣಿ' ಪದ ಗುಣವಾಚಕವೂ ಹೌದು, ರಾಗಮುದ್ರೆಯೂ ಹೌದು. ಶ್ರೀ ಶಾಸ್ತ್ರಿಗಳ ಕೃತಿಗಳು, 2-3 ಕೃತಿಗಳನ್ನು ಬಿಟ್ಟರೆ, ಎಲ್ಲವೂ ಶ್ರೀ ಕಾಮಾಕ್ಷೀ ದೇವಿಯ -ಅರ್ಥಾತ್, ಶ್ರೀ ರಾಜರಾಜೇಶ್ವರಿ ಲಲಿತೆಯ -ಸ್ತುತಿಗಳೇ ಆಗಿ, ಕಲ್ಯಾಣಿ, ಭೈರವಿ, ಆನಂದಭೈರವಿ, ಕೀರವಾಣಿ ಮುಂತಾದ ರಾಗಗಳಲ್ಲಿನ ಅವರ ಕೃತಿಗಳಲ್ಲಿ ದೇವಿಗೆ ಗುಣವಾಚಕಗಳಾದ ಈ ಪದಗಳು ಸಹಜವಾಗಿ ಸ್ಫುರಿಸಿ ರಾಗಮುದ್ರೆಗಳಾಗಿಯೂ ಸೇರಿಕೊಂಡಿವೆಯಲ್ಲದೆ, ಶ್ರೀ ಮುದ್ದುಸ್ವಾಮಿದೀಕ್ಷಿತರ ಕೃತಿಗಳ ರಚನೆಯಲ್ಲಿ ಕಾಣುವಂತೆ, ರಾಗದ ಹೆಸರು ಸಾಹಿತ್ಯದ ಭಾಗವಾಗಿ ಸೇರಬಹುದೆಂಬುದು, ಮೇಲ್ನೋಟಕ್ಕೆ ಸಂಭಾವ್ಯವಲ್ಲದ ರಾಗ ನಾಮಗಳನ್ನೂ ರಾಗ ಮುದ್ರೆಗಳಾಗಿ ಜೋಡಿಸುವ ಪದ್ಧತಿಯಲ್ಲ ಎಂಬುದು ವಾಸ್ತವಾಂಶ. ಕೃತಿಯ ಕಡೆಯ ಭಾಗದಲ್ಲಿ 'ನೀ ಸರಿ' ಎಂದು ಸ್ವರಾಕ್ಷರದೊಂದಿಗೆ ಪ್ರಾರಂಭಿಸುವ ಸ್ವರ ಸಾಹಿತ್ಯದ ಭಾವ ಹೀಗಿದೆ: 'ನೀ ಸರಿ, ಇದಿಗೋ ! ಅದಿ ನಾಕು ಎವರುನ್ನಾರಮ್ಮಾ ಶ್ರೀ ಮಹಾ ತ್ರಿಪುರ ಸುಂದರಿ, ಶಂಕರಿ, ವೇಗಮೆ ವಚ್ಚಿನನ್ನು ಬ್ರೋವು ಬ್ರೋವುಮನಿ- ದೇವಿಯೊಂದಿಗೆ ಎದುರಿಗಿದ್ದು ಸಂಭಾಷಿಸುವ ಶೈಲಿಯಲ್ಲಿ ಕೇಳುತ್ತಾರೆ ಶ್ರೀ ಶಾಸ್ತ್ರಿಗಳು: "ನಿನಗೆ ಸಾಟಿಯಾದವರು, ತಾಯೆ, ಇದೋ ನೋಡು, ಅದು ನನಗೆ ಯಾರಿದ್ದಾರೆ, ಶ್ರೀ ಮಹಾತ್ರಿಪುರ ಸುಂದರಿ, ಶಂಕರಿ, ಬೇಗನೆ ಬಂದು ನನ್ನನ್ನು "ಬ್ರೋವು ಬ್ರೋವುಮನಿ ಎಂದೂ ವೇಡಿತೆ ನೀವು ವಿನವಾ ವಿನ್ನಪಮು ನಾ ತಲ್ಲಿ ಶ್ರೀಲಲಿತೇ ?"

❖ ❖ ❖ ❖

ಉಪಸಂಹಾರ

ಆತ್ಮೀಯ ಓದುಗರೇ, 'ಇದುಭಾಗ್ಯ, ಇದು ಭಾಗ್ಯ, ಇದು ಭಾಗ್ಯವಯ್ಯಾ, ಪದುಮನಾಭನ ಪಾದಭಜನೆ ಸುಖವಯ್ಯ' ಎಂದೂ, 'ಇಂದಿನ ದಿನವೇ ಶುಭದಿನವು, ಇಂದಿನ ವಾರ ಶುಭವಾರ, ಇಂದಿನ ತಾರೆ ಶುಭತಾರೆ' ಎಂದೂ ಶ್ರೀ ಪುರಂದರ ದಾಸರು ಶ್ರೀ ಹರಿಯ ಧ್ಯಾನ ಭಜನಗಳಿಗವಕಾಶವಾದುದೇ ಜೀವಿತದಲ್ಲಿ ದೊರೆತ ಅತಿದೊಡ್ಡ ಭಾಗ್ಯವೆಂದು ಸಾರಿದ ಗಹನವಾದ ಸಂದೇಶದಂತೆ, 'ಪೆದ್ದಲ ಸುದ್ದುಲು ವಿನಕ ಬುದ್ಧಿ ರಾದು ಬುದ್ಧಿರಾದು' ಎಂದು ಶ್ರೀ ತ್ಯಾಗರಾಜರು ಉಪದೇಶಿಸಿದಂತೆ, ಸಂಗೀತ ತ್ರಿಮೂರ್ತಿಗಳನ್ನು ಸ್ಮರಿಸಲವಕಾಶವಾಗುವುದೇ, ಅವರನ್ನು ಕೀರ್ತಿಸಲು ಅವಕಾಶ ಒದಗುವುದೇ ನಿಜವಾದ ಅರ್ಥದಲ್ಲಿ ಅಂಥ "ದೊಡ್ಡವರ" ಸುದ್ದಿಗಳನ್ನರಿತು "ಮತಿ ಶ್ರೀಮಂತ"ರಾಗುವುದೇ ಇದು ಭಾಗ್ಯ, ಇದು ಭಾಗ್ಯ, ಇಂದಿನ ದಿನವೇ ಶುಭದಿನವು, ಶುಭವಾರ, ಶುಭತಾರೆ. ತ್ರಿಮೂರ್ತಿಗಳಲ್ಲಿ ಜ್ಯೇಷ್ಠರಾದ ಪೂಜ್ಯ ಶ್ರೀ ಶ್ಯಾಮಶಾಸ್ತ್ರಿಗಳವರ ಜೀವಿತ, ಚಿಂತನ, ಭಾವನಾ, ಸಾಧನ, ಮೌಲ್ಯಗಳು ಇವುಗಳನ್ನು ಈ ಹಲವು ಪುಟಗಳಲ್ಲಿ ಓದಿ, ಸ್ಮರಿಸಿ, ಧನ್ಯರಾಗಿದ್ದೇವೆ.

ಇಂಥ ಮಹಾನುಭಾವರೂ, ಸಂಗೀತ ತ್ರಿಮೂರ್ತಿಗಳೆಲ್ಲರೂ, ನಮಗೆ ಮಾರ್ಗದರ್ಶಕರಾಗಿ ಜನ್ಮಿಸಿ, ಜೀವಿಸಿ, ವಾಗ್ಗೇಯಕಾರರಾದುದು ಸಂಗೀತ ಕ್ಷೇತ್ರದ, ಸಂಗೀತಾಭ್ಯಾಸಿಗಳಾದ ನಮ್ಮೆಲ್ಲರ ವಿಶೇಷ ಸೌಭಾಗ್ಯವೆನ್ನುವುದರಲ್ಲಿ ಎರಡನೇ ಮಾತಿರಲಾರದು. ಅವರೆಲ್ಲರ ಆಶೀರ್ವಾದಕ್ಕಾಗಿ ನಮ್ಮ ಅರ್ಹತೆಯನ್ನು ವರ್ಧಿಸಿಕೊಳ್ಳೋಣ.

ನಮೋ, ನಮೋ ಶ್ರೀ ಶ್ಯಾಮಶಾಸ್ತ್ರಿಣೇ.

❖ ❖ ❖ ❖

ಶ್ರೀ ಶ್ಯಾಮಕೃಷ್ಣ ವಾಗ್ಗೇಯ ವ್ಯಾಖ್ಯಾನ

ರಚನೆಗಳ ಅಕಾರಾದಿ ಪಟ್ಟಿಕಾ

ಶ್ರೀ ಶ್ಯಾಮಶಾಸ್ತ್ರಿಗಳು ರಚಿಸಿದ ಗೀತೆಗಳು

ಶ್ರೀ ಶ್ಯಾಮಶಾಸ್ತ್ರಿಗಳು ರಚಿಸಿದ ಸ್ವರಜತಿಗಳು

ಶ್ರೀ ಶ್ಯಾಮಶಾಸ್ತ್ರಿಗಳು ರಚಿಸಿದ ವರ್ಣಗಳು

ಶ್ರೀ ಶ್ಯಾಮಕೃಷ್ಣ ವಾಗ್ಗೇಯ ವ್ಯಾಖ್ಯಾನ
ಕೃತಿಗಳ ಅಕಾರಾದಿ ಪಟ್ಟಿಕಾ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಸಂಗೀತಾದಿ ಪ್ರದರ್ಶಕ ಕಲೆಗಳು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆಯ ಪ್ರಮುಖ ರಾಯಭಾರಿಗಳು. ಇವು ಮನುಕುಲದಷ್ಟೇ ಆರ್ಷೇಯ ಸ್ಥಾನ ಪಡೆದಿದ್ದು, ಆನಂದ ಮತ್ತು ಸೌಹಾರ್ದತೆಗಳನ್ನು ಜೀವಾಳವಾಗಿ ಉಳ್ಳವು. ಇವುಗಳ , ಸಾಹಚರ್ಯದಿಂದ ಮನುಕುಲವು ಸಮೃದ್ಧಿಯತ್ತ ಸಾಗಿ ಮುನ್ನಡೆದಿರುವುದು ಕಂಡುಬರುತ್ತದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಇವುಗಳ ಅಗತ್ಯತೆಯೂ ಹೆಚ್ಚಾಗಿದ್ದು, ಪ್ರಸ್ತುತವೂ ಆಗಿದೆ. ಇದನ್ನು ಮನಗಂಡು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕರ್ನಾಟಕ ಸರ್ಕಾರದಿಂದ 2008 ರಲ್ಲಿ ಸಂಗೀತ ವಿಶ್ವವಿದ್ಯಾಲಯ ಸ್ಥಾಪನೆಗೊಂಡು ಅನಂತರ 2009 ರಲ್ಲಿ 'ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ' ಎಂದು ಘೋಷಿತವಾಗಿದೆ. ಈ ವಿಶ್ವವಿದ್ಯಾಲಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಅಧ್ಯಯನ – ಅಧ್ಯಾಪನ – ಸಂಶೋಧನ – ಸಂಗೋಪನ ಮತ್ತು ಪ್ರಸಾರಣ ಕಾರ್ಯಗಳಲ್ಲಿ ತೊಡಗಿಸಿಕೊಂಡು, ಮೇಲ್ಕಂಡ ಕಲೆಗಳ ಉನ್ನತಿಗೆ ತನ್ನನ್ನು ಮುಡುಪಾಗಿಸಿಕೊಂಡಿದೆ.

ವಿಶ್ವವಿದ್ಯಾಲಯವು ಪ್ರದರ್ಶಕ ಕಲೆಗಳ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದರೊಂದಿಗೆ ಆಧುನಿಕ ತಂತ್ರಜ್ಞಾನವನ್ನು, ವೈಜ್ಞಾನಿಕ ನೆಲೆಗಟ್ಟುಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಒಂದು ಪೂರಕ ವಾತಾವರಣವನ್ನು ಸೃಜಿಸುವತ್ತ ಮುನ್ನಡೆದಿದೆ. ಅಲ್ಲದೆ, ಸರ್ಟಿಫಿಕೇಟ್, ಡಿಪ್ಲೊಮಾ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಂತಹ ಶೈಕ್ಷಣಿಕ ವಿದ್ಯಾಭ್ಯಾಸವನ್ನು ನೀಡುತ್ತಿದೆ.

ಮುಂದೆ, ವಿಶ್ವವಿದ್ಯಾಲಯವು ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದ ಧ್ವನಿದೃಶ್ಯ ಮುದ್ರಣ, ಹಸ್ತಪ್ರತಿ ಸಂಗ್ರಹ, ಸಂಗ್ರಹಾಲಯ, ಕಲಾ ದಿಗ್ಗಜರನ್ನು ಕುರಿತ ದಾಖಲೀಕರಣ, ಅಧ್ಯಯನ ಪೀಠಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ಪ್ರಸಾರಾಂಗದ ಮೂಲಕ ಗ್ರಂಥಪ್ರಕಟಣೆಯಂಥ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಇನ್ನೂ ಹೆಚ್ಚು ಗ್ರಂಥಮಾಲೆಗಳನ್ನು ರೂಪಿಸಿ ಅವುಗಳನ್ನು ಲೋಕಾರ್ಪಣೆ ಮಾಡುವ ಮೂಲಕ ಕಲಾವಿದರು, ಕಲಾರಸಿಕರು, ಸಂಶೋಧಕರು ಹಾಗೂ ಸಹೃದಯರನ್ನು ತಲುಪುವ ಅಭಿಲಾಷೆಯನ್ನು ಹೊಂದಿದೆ. ವಿಶ್ವವಿದ್ಯಾಲಯದ ಈ ಎಲ್ಲಾ ಕಾರ್ಯಗಳಿಗೆ ತಮ್ಮ ಸಲಹೆ ಮತ್ತು ಸಹಕಾರಗಳನ್ನು ಯಾಚಿಸುತ್ತೇನೆ.

– ಡಾ. ಸರ್ವಮಂಗಳಾ ಶಂಕರ್

ಕುಲಪತಿಗಳು